ಶೀ:- ಪುಣ್ಯಕ್ಷೇತ್ರ ಯಾತ್ರೆ

ಲೇ:- ಡಿ.ನ. ಕೃಷ್ಣರಾಯರು

೧೯೫೯

1959

ಸ್ಟ್ಯಾಂಡರ್ಡ್ ಬುಕ್ ಡಿಪೋ

ಬೆಂಗಳೂರು


ಪುಣ್ಯಪ್ರಭಾವ
ಅ.ನ.ಕೃ

ಪುಣ್ಯಪ್ರಭಾವ

ಅ. ನ. ಕೃ ಅವರ

‘ವಿಜಯನಗರ ಸಾಮ್ರಾಜ್ಯ’ ಕಾದಂಬರಿಮಾಲೆ.

* ೧. ವಿಜಯ ವಿದ್ಯಾರಣ್ಯ
* ೨. ತಪೋಬಲ
* ೩. ಪುಣ್ಯಪ್ರಭಾವ
೪. ಪ್ರೌಢಪ್ರತಾಪಿ
೫. ಸಂಕ್ರಾಂತಿ
೬. ಯಶೋದುಂದುಭಿ ಭಾಗ ೧
೭. ” ಭಾಗ ೨
೮. ತೇಜೋಭಂಗ
೯. ವೀರಸ್ವರ್ಗ ಭಾಗ ೧
೧೦. ,, ಭಾಗ ೨

---

* ಈ ಗುರುತಿನವು ಈಗಾಗಲೇ ಪ್ರಕಟವಾಗಿವೆ.

ಪುಣ್ಯಪ್ರಭಾವ

ಅ. ನ. ಕೃ.

ಸ್ಟ್ಯಾಂಡರ್ಡ್ ಬುಕ್ ಡಿಪೋ,
ಅವೆನ್ಯೂ ರೋಡ್ :: ಬೆಂಗಳೂರು-೨

ಪ್ರಥಮ ಮುದ್ರಣ: ಆಗಸ್ಟ್ ೧೯೫೯

ಬೆಲೆ: ರೂ. 1.75 ನ. ಪೈ.

ಮುದ್ರಕರು:
ದಿ ಈಸ್ಟರ್ನ್ ಪ್ರೆಸ್,
೧೧-ಎ, ಜಯಚಾಮರಾಜ ರಸ್ತೆ, ಬೆಂಗಳೂರು-೨

ಮುನ್ನುಡಿ

ಕಳೆದ ವರ್ಷ (೧೯೫೮) ಆಗಸ್ಟ್ ತಿಂಗಳಲ್ಲಿ ನಾನು ಆರಂಭಿಸಿದ '**ವಿಜಯನಗರ ಮಹಾಸಾಮ್ರಾಜ್ಯ ಕಾದಂಬರಿ ಮಾಲೆ**' ಯ ತೃತೀಯ ಕುಸುಮ '**ಪುಣ್ಯಪ್ರಭಾವ**' ಗ್ರಂಥವನ್ನು ಇದೀಗ ಓದುಗರ ಕೈಯಲ್ಲಿಡುತ್ತಿದ್ದೇನೆ. '**ವಿಜಯವಿದ್ಯಾರಣ್ಯ**' ದಲ್ಲಿ ಹರಿಹರನ ಆಳ್ವಿಕೆ '**ತಪೋಬಲ**' ದಲ್ಲಿ ಬುಕ್ಕರಾಯನ ಆಳ್ವಿಕೆ ನಿರೂಪಿತವಾದಂತೆ, '**ಪುಣ್ಯಪ್ರಭಾವ**' ದಲ್ಲಿ ಇಮ್ಮಡಿ ಹರಿಹರನ ಆಳ್ವಿಕೆ ನಿರೂಪಿತವಾಗಿದೆ. ಹರಿಹರನ ಆಳ್ವಿಕೆಯ ಮೊದಲಿನ ಹತ್ತು ವರ್ಷಗಳನ್ನು ನಾನು '**ತಪೋಬಲ**' ದಲ್ಲಿಯೂ ಉಳಿದ ಭಾಗವನ್ನು '**ಪುಣ್ಯಪ್ರಭಾವ**' ದಲ್ಲಿಯೂ ಚಿತ್ರಿಸಿದ್ದೇನೆ. ಇಮ್ಮಡಿ ಹರಿಹರ ನಾನಂತರ ಇಮ್ಮಡಿ ಬುಕ್ಕರಾಯ, ವಿರೂಪಾಕ್ಷ ಎರಡೇ ವರ್ಷಗಳು ಆಳಿದರು (೧೪೦೪-೧೪೦೬) ಅವರ ತರುವಾಯ ಪಟ್ಟಕ್ಕೆ ಬಂದ ದೇವರಾಯ ಹದಿನಾರು ವರ್ಷ (೧೪೦೬ - ೧೪೨೨) ರಾಜ್ಯವಾಳಿದ. ಇಲ್ಲಿಗೆ '**ಪುಣ್ಯಪ್ರಭಾವ**' ಪರಿಸಮಾಪ್ತಿಯಾಗುತ್ತದೆ. ಮುಂದಿನ ಭಾಗ '**ಪ್ರೌಢ ಪ್ರತಾಪಿ**' ಯಲ್ಲಿ ವೀರ ವಿಜಯರಾಯನ ಎರಡು ವರ್ಷಗಳ ಆಳ್ವಿಕೆಯೂ (೧೪೨೨-೧೪೨೪) ಇಮ್ಮಡಿ ದೇವರಾಯನ ಇಪ್ಪತ್ತೆರಡು ವರ್ಷಗಳ ಆಳ್ವಿಕೆಯೂ ನಿರೂಪಿಸಲ್ಪಡುತ್ತವೆ.

ಈ ಭಾಗದ ರಚನೆಗೆ ನನಗೆ ಒದಗಿದ ಐತಿಹಾಸಿಕ ಸಾಮಗ್ರಿ ತೀರಸ್ವಲ್ಪ. ಸಿಂಗಮಭಟ್ಟನ ಹೆಸರು ಎಲ್ಲೋ ಒಂದು ಕಡೆ ಬರುತ್ತದೆ. ಮುದಕಲ್ಲು ಪ್ರಕರಣವನ್ನು ಸವಿಸ್ತಾರವಾಗಿ ನಿರೂಪಿಸಿರುವ ಫೆರಿಷ್ಟಾ ಪ್ರಾಮಾಣಿಕನಲ್ಲ. ಅವನು ಬರೆದಿರುವ ವೃತ್ತಾಂತವೆಲ್ಲಾ ಮುಸ್ಲಿಮರ ಪರವಾಗಿದೆ. ಇಸ್ಲಾಮಿ ಪ್ರಭುತ್ವದ ಪೆರ್ಮೆ ಸಾರಲು ಫೆರಿಷ್ಟಾ ಐತಿಹಾಸಿಕ ಸಂಗತಿಗಳನ್ನು ವಿಪರ್ಯಾಸಗೊಳಿಸಲು ಸ್ವಲ್ಪವೂ ಅನುಮಾನಿಸಿಲ್ಲ. ಫೆರಿಷ್ಟ ಬರೆದಿರುವ ಮುದಕಲ್ಲು ಪ್ರಕರಣವನ್ನು ಇತಿಹಾಸಕಾರರು ಅಂಗೀಕರಿಸಿಲ್ಲ. ಈ ಕಾಲದ ಇತಿಹಾಸದ ನಿಷ್ಪಕ್ಷಪಾತ ಅಧ್ಯಯನದಿಂದ ನನಗೆ ಭಾಸವಾದ ಸತ್ಯದ ಬೆಳಕಿನಲ್ಲಿ ಮುದಕಲ್ಲು ಪ್ರಕರಣವನ್ನು ವಿವರಿಸಿದ್ದೇನೆ.

ಮುದಕಲ್ಲಿನ ಗ್ರಾಮಿಣಿಯ ಮಗಳ ಹೆಸರು ‘ ಪೆಟ್ರೋಳ್ ’ ಎಂದು ಫೆರಿಷ್ಟನೂ ‘ ನೇಹಾಲ್ ’ ಎಂದು ಬ್ರಿಗ್ಸನ್ನೂ ತಿಳಿಸಿದ್ದಾರೆ. ಮುದಕಲ್ಲು ಪ್ರಾಂತ್ಯದಲ್ಲಿ ಈ ಎರಡು ಹೆಸರುಗಳೂ ಬಳಕೆಯಲಿಲ್ಲ. ನಾನು ಅವಳನ್ನು ‘ ಛಾಯೆ ’ ಎಂದು ಕರೆದಿದ್ದೇನೆ.

‘ **ಪುಣ್ಯಪ್ರಭಾವ** ’ ದಲ್ಲಿ ಬರುವ ಮುದ್ದಪ್ಪ ದಂಡನಾಯಕ, ಇರುಗ ನಾಯಕ, ಗುಂಡನಾಯಕ, ಪಂಪಾಂಬಿಕೆ, ಮಲ್ಲಾಂಬಿಕೆ, ಸಿಂಗಮಭಟ್ಟ, ಖಾಜಿ ಸಿರಾಜುದ್ದೀನ್, ಲಕ್ಷ್ಮೀಧರ, ಅಹಮದ್ ಖಾನ್, ಖಾನ್ ಖಾನ್, ಮೀರ್ ಫಜಲುಲ್ಲಾ, ಮಲ್ಲಪ್ಪ ಒಡೆಯರು, ತಿಪ್ಪರಾಜ ಇವರು ಐತಿಹಾಸಿಕ ವ್ಯಕ್ತಿಗಳು. ರಾಮಭಟ್ಟ, ವಿಜಯಲಕ್ಷ್ಮಿ, ಬೀರಪ್ಪ, ದೇಜಣ್ಣ ಜೈನಲಾಬ ದ್ದೀನ್, ಖಾಜಾ ಕಮಲುದ್ದೀನ್, ರೇಜಾಖಾನ್, ವಜೀರ್ ಅಹಮದ್, ಮೋಹನಾಂಬೆ, ಬಂಗಾರು, ಘನಶಾಮಲಾಲ್ ಸಂಗಣ್ಣ, ಪಂಪಣ್ಣ, ಶಿವಶಂಕರ ಶಾಸ್ತ್ರಿ ಇವರು ಕಾಲ್ಪನಿಕ ವ್ಯಕ್ತಿಗಳು.

ಇತಿಹಾಸದ ನಿಷ್ಕೃಷ್ಟಾಂಶಗಳ ಜತೆಯಲ್ಲಿ ನಾನು ಸಮಕಾಲೀನ ವಾತಾವರಣವನ್ನು ಲಕ್ಷ್ಯಕ್ಕೆ ತೆಗೆದುಕೊಂಡಿದ್ದೇನೆ. ಅನೇಕ ವೇಳೆ ಇತಿಹಾಸ ಒದಗಿಸಲಾಗದ ಸಾಧನ ಸಂಪತ್ತನ್ನು ಸಮಕಾಲೀನ ಪರಿಸ್ಥಿತಿ, ಮನೋಧರ್ಮ ವಿವೇಚನೆಯಿಂದ ತುಂಬಿಕೊಳ್ಳಬೇಕಾಗುತ್ತದೆ. ಇತಿಹಾಸಕ್ಕೆ ಅಪಚಾರವಾಗ ದಂತೆ ಈ ವಸ್ತುವನ್ನು ನಿರ್ವಹಿಸಬೇಕೇಂಬುದೇ ನನ್ನ ಪರಮಾಕಾಂಕ್ಷೆ.

ಒಂಭತ್ತು ತಿಂಗಳಲ್ಲಿ (ಆಗಸ್ಟ್ ೧೯೫೮ – ಏಪ್ರಿಲ್ ೧೯೫೯) ಈ ಮಾಲೆಯ ಮೂರು ಕಾದಂಬರಿಗಳನ್ನು ಓದುಗರ ಕೈಯಲ್ಲಿಟ್ಟಿದ್ದೇನೆ. ಇನ್ನು ಹದಿನಾರು ತಿಂಗಳಲ್ಲಿ (ಏಪ್ರಿಲ್ ೧೯೫೯ – ಆಗಸ್ಟ್ ೧೯೬೦) ಮುಂದಿನ ಏಳು ಭಾಗಗಳಾದ – (೪) **ಪ್ರೌಢಪ್ರತಾಪಿ** (೫) **ಸಂಕ್ರಾಂತಿ** (೬) **ಯಶೋ ದುಂದುಭಿ – ಭಾಗ ೧.** (೭) **ಯಶೋದುಂದುಭಿ – ಭಾಗ ೨** (೮) **ತೇಜೋಭಂಗ** (೯) **ವೀರಸ್ವರ್ಗ – ಭಾಗ ೧.** (೧೦) **ವೀರಸ್ವರ್ಗ – ಭಾಗ ೨.** ಕಾದಂಬರಿಗಳನ್ನು ಓದುಗರ ಕೈಯಲ್ಲಿಡಲು ಸಂಕಲ್ಪಿಸಿದ್ದೇನೆ.

ವಿಜಯನಗರದ ಅಮರ ಇತಿಹಾಸವನ್ನು ಕಾದಂಬರಿಗಳ ರೂಪದಲ್ಲಿ ಚಿತ್ರಿಸುವ ಸಂಕಲ್ಪ ನನ್ನಲ್ಲಿ ಮೂಡಿದುದು ಶ್ರೀ ಭಗವತಿಯ ಪ್ರೇರಣೆಯಿಂದ. ನಮ್ಮ ನಾಡಿನ ಇನ್ನೂರುಮೂವತ್ತು ವರ್ಷದ ಮಹೋಜ್ಜ್ವಲ ಇತಿಹಾಸ, ಸಂಸ್ಕೃತಿಯ ಸರ್ವತೋಮುಖ ವಿಕಾಸ ಚಿತ್ರಿಸಲು ನನಗಿರುವ ಚೈತನ್ಯ-

ಅನುಕೂಲ, ವಾತಾವರಣ ಯಾವ ರೀತಿಯಲ್ಲಿಯೂ ಉತ್ತೇಜಕರವಾಗಿಲ್ಲ. ಯಾವ ಶಕ್ತಿ ಮೂರು ಭಾಗಗಳನ್ನು ನನ್ನಿಂದ ಪೂರೈಸಿತೋ ಅದೇ ಶಕ್ತಿ ಉಳಿದ ಏಳು ಭಾಗಗಳನ್ನೂ ಮುಗಿಸುತ್ತದೆ ಎನ್ನುವ ಧೈರ್ಯವೊಂದೇ ನನ್ನ ಆಸ್ತಿ.

ನಿತ್ಯಜೀವನ, ಹಾಗೂ ಸಾಹಿತ್ಯಜೀವನದಲ್ಲಿ ಹೆಜ್ಜೆಹೆಜ್ಜೆಗೂ ನಾನು ಎದುರಿಸುತ್ತಿರುವ ಪ್ರತಿರೋಧ ಅನುಭವಿಸುತ್ತಿರುವ ಅಸುಹೃದಯತೆ ಸಾಹಿತ್ಯ, ಕಲಾ ಸಂಪೋಷಣೆಗೆ ಸಾಧಕವಾಗಿವೆಯೆಂದು ಹೇಳಲು ಸಾಧ್ಯವಿಲ್ಲ. ನಿರ್ವಿಣ್ಣತೆಯ ಕಾರ್ಮೋಡಗಳು ಕವಿದು, ಮಾನವ್ಯದ ಬಗ್ಗೆ ನನಗಿರುವ ನಂಬಿಕೆ, ಪ್ರೇಮ, ಗೌರವದ ಅಸ್ತಿತ್ವವೇ ಅಲುಗಾಡಿದಾಗ ಯಾವದೋ ಅಗೋಚರ ಮಾತೃಹಸ್ತ ನನ್ನನ್ನು ಸಂತೈಸುತ್ತದೆ. ಪೂರ್ವಗ್ರಹ ಭಾದೆಯಿಂದ ದೂರವಿರುವ ಓದುಗರು, ಪ್ರಿಯವಚನಗಳನ್ನಾಡಿ ನನ್ನ ಬದುಕಿಗೆ ಅಮೃತಸೇಚನೆ ಮಾಡುತ್ತಾರೆ. – ಕನ್ನಡಕ್ಕಾಗಿ ತನ್ನ ಬಾಳನ್ನು ಮೀಸಲು ಮಾಡಿದ ಒಬ್ಬ ಸಾಹಿತಿಯ ಜೀವನರಥ ಇಂತು ಸಾಗಿದೆ.

ಈ ಕೃತಿಯನ್ನು ಪ್ರಕಟಿಸಿ ಉಪಕರಿಸಿರುವ ಸ್ಟ್ಯಾಂಡರ್ಡ್ ಬುಕ್ ಡಿಪೋ ಒಡೆಯರಾದ ಗೆಳೆಯ ಶ್ರೀ ಎಚ್. ಕಮಲಾನಾಥರವರಿಗೆ ನನ್ನ ನೆನಕೆ ಸಲ್ಲಿಸುತ್ತೇನೆ.

೬-೪-೧೯೫೯ ಅ. ನ. ಕೃ

ಪುಣ್ಯಪ್ರಭಾವ

ಪುಣ್ಯಪ್ರಭಾವ

೧

ಪ್ರಭುಗಳು ನಿರ್ವಿಣ್ಣರಾಗಿದ್ದರು.

ರಾಜ್ಯಕಾರ್ಯದಲ್ಲಿ ಅವರು ತೋರುತ್ತಿದ್ದ ಅನಾಸಕ್ತಿ ಮುದ್ದಪ್ಪದಂಡನಾಯಕರಿಗೆ ಚಿಂತೆಯನ್ನುಂಟುಮಾಡಿತ್ತು.

ಮುದ್ದಪ್ಪದಂಡನಾಯಕರೇ ಈ ವಿಷಯ ಪ್ರಸ್ತಾಪಿಸಲೆತ್ನಿಸಿ ವಿಫಲ ಮನೋರಥರಾಗಿದ್ದರು.

ಪ್ರಭುಗಳು ಗಂಭೀರವಾಗಿ – ದೃಢವಾಗಿ

" ಇನ್ನು ಕೆಲವು ದಿನ ನನಗೆ ರಾಜ್ಯಕಾರಣದ ಯೋಚನೆ ಮಾಡುವ ಮನಸ್ಸಿಲ್ಲ ದಣ್ಣಾಯಕರೇ "

ಎಂದು ಹೇಳಿಬಿಟ್ಟಿದ್ದರು.

ಪ್ರಭುಗಳು ' ಗಿರಿವನ ' ಸೇರಿಬಿಟ್ಟರಾಯಿತು – ಅಲ್ಲಿಂದ ಹೊರಡಲು ಅವರಿಗೆ ಮನಸ್ಸೇ ಆಗುತ್ತಿರಲಿಲ್ಲ.

ಗಳಿಗೆ ಗಳಿಗೆಗೊಮ್ಮೆ ಬೀರಪ್ಪ

' ಪೂಜೆಗೆ ವೇಳೆಯಾಯಿತು ಮಹಾಪ್ರಭೂ.

' ಆರೋಗಣೆಗೆ ಸಮಯವಾಯಿತು ಮಹಾಪ್ರಭೂ.

' ಅರಮನೆಯಲ್ಲಿ ಶ್ರೀಮನ್ಮಹಾರಾಣಿಯವರು ಪ್ರಭುಗಳ ಆಗಮನ ನಿರೀಕ್ಷಿಸುತ್ತಿದ್ದಾರೆ '

ಎಂದು ಎಚ್ಚರಿಸುತ್ತಿದ.

ತಮ್ಮ ಏಕಾಂತಚಿಂತನೆಗೆ ಬೀರಪ್ಪ ಭಂಗತರುತ್ತಿದ್ದಾನೆಂದು ಪ್ರಭುಗಳಿಗೆ ಭಾಸವಾಗುತ್ತಿದ್ದರೂ ಅವರು ಸಿಟ್ಟುಗೊಳ್ಳದೆ,

"ನೀನೂ ನನ್ನನ್ನು ಕಾಡುವೆಯಾ ಬೀರಪ್ಪ" ಎನ್ನುತ್ತಿದ್ದರು.

ಆಪಾದಮಸ್ತಕ ಕಂಪಿಸುತ್ತಿದ್ದ ಬೀರಪ್ಪ.

"ಮಹಾಪ್ರಭೂ, ನಾನು ಮುದುಕ. ಅರುಳು ಮರುಳು - ತಪ್ಪು ನುಡಿದಿದ್ದರೆ, ನಡೆದಿದ್ದರೆ ಕ್ಷಮಿಸಬೇಕು."

"ನೀನು ನಮ್ಮ ಕ್ಷಮೆಬೇಡಬೇಕೇ ಬೀರಪ್ಪ. ನಾವು ಸಣ್ಣವರಾಗಿದ್ದಾಗ ನಮ್ಮನ್ನು ಎತ್ತಿ ಆಡಿಸಿದವನು ನೀನು - ದೊಡ್ಡ ದೊರೆಗಳ ನೆಚ್ಚಿನ ಆಳು. ಎಲ್ಲಕ್ಕೂ ಹೆಚ್ಚಾಗಿ ಶ್ರೀಗುರು ವಿದ್ಯಾರಣ್ಯರ ಅತಿಸಮೀಪದಲ್ಲಿದ್ದುಕೊಂಡು, ಅವರ ಸೇವೆಯನ್ನು ತ್ರಿಕರಣಪೂರ್ವಕವಾಗಿಮಾಡಿದ ಪುಣ್ಯಶಾಲಿ ನೀನು."

ದೊಡ್ಡದೊರೆಗಳ, ಶ್ರೀಗುರುಗಳ ನೆನಪು ಬಂದೊಡನೆಯೇ ಬೀರಪ್ಪನ ಕಣ್ಣುಗಳು ಹನಿಗೂಡುತ್ತಿದ್ದವು.

ಎದುರಿಗೆ ಕುಳಿತು ಕೇಳುತ್ತಿದ್ದವರು ವಿಜಯನಗರದ ಸಮ್ರಾಟರಾದ ಮಹಾಮಂಡಲೇಶ್ವರ, ಪ್ರೌಢಪ್ರತಾಪಿ ಇಮ್ಮಡಿ ಹರಿಹರರಾಯರು ಎಂಬುದನ್ನೂ ಮರೆತು ಹಳೆಯ ಗೆಳೆಯನೊಂದಿಗೆ ಮನಸ್ಸು ತೋಡಿಕೊಳ್ಳುವಂತೆ ಎಲ್ಲವನ್ನೂ ವಿವರಿಸುತ್ತಿದ್ದ.

"ಸ್ವಾಮಿ ಮೂಡುವುದಕ್ಕೆ ಮುನ್ನವೇ ಶ್ರೀಗುರುಸ್ವಾಮಿ ಇಲ್ಲಿಗೆ ಬರುತ್ತಿದ್ದರು. ನೀಲಿ ಬಾನನ್ನು ಭೇದಿಸಿಕೊಂಡು ಹೊರಗೆ ಪ್ರಕಟವಾಗುತ್ತಿದ್ದ ಹೊಂಗಿರಣಗಳನ್ನು ನೋಡುತ್ತ ನೋಡುತ್ತ ಗುರುದೇವರು ಸಮಾಧಿಸ್ಥಿತಿಗೇರುತ್ತಿದ್ದರು. ಕಣ್ಣುಬಿಟ್ಟು ಆಗ ಅವರ ಮುಖನೋಡಲಾಗುತ್ತಿರಲಿಲ್ಲ ಪ್ರಭೂ - ಕೋಟಿಸೂರ್ಯ ತೇಜಸ್ಸು ಅವರ ಮುಖದಮೇಲೆ ಮೂಡುತ್ತಿತ್ತು ಹೀಗೆ ಎಷ್ಟುಹೊತ್ತು ಕಳೆಯುತ್ತಿತ್ತೋ ಕಾಣೆ. ಸ್ವಾಮಿ ನೆತ್ತಿಯಮೇಲೆ ಮೂಡಿದಾನಂತರ ಶ್ರೀಗುರುಗಳೆದ್ದು

'ದೊರೆಗಳಿಗೆ ಒಳ್ಳೆಯದಾಗಲಿ
ರಾಜ್ಯಕ್ಕೆ ಒಳ್ಳೆಯದಾಗಲಿ
ಪ್ರಜೆಗಳು ನಿತ್ಯಸುಖಿಗಳಾಗಿರಲಿ'

ಎಂದು ಹರಸುತ್ತಿದ್ದರು."

"ನಿಜ - ನಿಜ ಬೀರಣ್ಣ. ಅವರ ಹರಕೆಯೇ ನಮ್ಮ ರಕ್ಷೆ. ಶ್ರೀಗುರ

ದೇವರ ತಪೋಬಲವಿರದಿದ್ದರೆ ನಾವು ಈ ಮಹಾಸಾಮ್ರಾಜ್ಯ ಕಟ್ಟಲಾಗುತ್ತಿತ್ತೆ ?"

"ಎಲ್ಲಾ ಅವರ **ಪುಣ್ಯಪ್ರಭಾವ** ಮಹಾಪ್ರಭೂ."

ಎಂದು ಬೀರಪ್ಪ ಉದ್ಗಾರವೆಳೆಯುತ್ತಿದ್ದ.

ಒಂದು ದಿನ ಯಥಾಕ್ರಮದಂತೆ ಮಹಾಪ್ರಭುಗಳು 'ಗಿರಿವನ' ಸೇರಿ, ಅದರ ನಿರಭ್ರ ಚೆಲುವಿನಲ್ಲಿ ಮೈಮರೆತಿದ್ದಾರೆ.

ಎದುರಿಗೆ ಬಂದು ನಿಂತ ಧೀರಸನ್ಯಾಸಿಯನ್ನೂ ಪ್ರಭುಗಳು ಗಮನಿಸಲಿಲ್ಲ.

ಸ್ವಲ್ಪ ಹೊತ್ತು ಕಳೆದಿರಬಹುದು.

ಸನ್ಯಾಸಿ ಗಂಭೀರವಾಣಿಯಿಂದ

"ಮಹಾಪ್ರಭುಗಳಿಗೆ ಜಯವಾಗಲಿ" ಎಂದರು.

ಪ್ರಭುಗಳು ಕಣ್ಣುಬಿಟ್ಟುನೋಡಿ ಥಟ್ಟನೆದ್ದು, ಸನ್ಯಾಸಿಯ ಪಾದಗಳಿಗೆ ಮಣಿದು,

"ಪೂಜ್ಯರು ಪೀಠಾಸೀನರಾಗಬೇಕು" ಎಂದರು.

ಶಿಲಾಪೀಠದ ಮೇಲೆ ಪದ್ಮಾಸನಾಸೀನರಾಗಿ ಕುಳಿತ ಸಾಯಣಾಚಾರ್ಯರು,

"ದೊರೆಗಳು 'ಗಿರಿವನ'ದಲ್ಲಿ ಬಹಳ ಕಾಲ ಕಳೆಯುತ್ತಿರುವುದಾಗಿದೆ."

"ಹೌದು. ನನ್ನ ಮನಸ್ಸಿನ ಅಶಾಂತಸ್ಥಿತಿಗೆ ಗಿರಿವನವೊಂದಲ್ಲಿ ಸ್ವಲ್ಪ ಶಾಂತಿ ದೊರೆಯುತ್ತಿದೆ."

"ಇಷ್ಟು ಅಶಾಂತಿಗೇನು ಕಾರಣವೆಂದು ಕೇಳಬಹುದೇ ?"

"ತ್ರಿಕಾಲಜ್ಞಾನಿಗಳಾದ ತಮಗೆ ತಿಳಿಯದಿರುವುದು ಯಾವದು ? ಶ್ರೀಗುರು ವಿದ್ಯಾರಣ್ಯ ಮಹಾಮುನಿಗಳು ಕೈವಲ್ಯ ಪಡೆದಾನಂತರ ನಮ್ಮ ಮನಸ್ಸಿನ ಸ್ಥಿತಿಯೇ ಬದಲಾಗಿದೆ. ರಾಜ್ಯ ಕಟ್ಟುವುದಕ್ಕೆ – ಆ ರಾಜ್ಯವನ್ನು ಸಾಮ್ರಾಜ್ಯವನ್ನಾಗಿಸುವುದಕ್ಕೆ ತೊಳಲಾಡುತ್ತೇವೆ. ನಮ್ಮ ಆಶಾಖಡ್ಗಕ್ಕೆ ಸಹಸ್ರಾರು ನಿರಪರಾಧಿ ಸ್ತ್ರೀಪುರುಷರನ್ನು ಬಲಿಗೊಡುತ್ತೇವೆ. ಕೊನೆಗೇನು – ಉಳಿಯುವುದೇನು ? – ನಾವು ತೆಗೆದುಕೊಂಡು ಹೋಗುವುದು ಎಷ್ಟು ? ತ್ಯಾಗದ ಕಲ್ಪವೃಕ್ಷದಂತಿದ್ದ ಶ್ರೀಗುರುಗಳೂ ಸಾವನ್ನು ಗೆಲ್ಲಲಾಗಲಿಲ್ಲ."

"ಜೀವ ಸಾವಿನ ಮಹಾಸಮಸ್ಯೆ ಪ್ರಭುಗಳನ್ನು ಕಾಡುತ್ತಿರುವಂತಿದೆ."

"ಹೌದು."

"ಶ್ರೀಗುರು ವಿದ್ಯಾರಣ್ಯರು ಸಾವನ್ನು ಗೆಲ್ಲಲಿಲ್ಲವೆಂದು ಭಾವಿಸಿರುವಿರಾ ?"

"ಸತ್ಯ ಸ್ವತಃಸಿದ್ಧವಾಗಿದೆಯಲ್ಲವೇ ?"

"ಇಲ್ಲ. ದೃಶ್ಯ ಪ್ರಪಂಚಕ್ಕೆ ಕಾಣುವುದಷ್ಟೇ ಸತ್ಯವಲ್ಲ – ಬಿಸುಲಿನ ಝಳದಲ್ಲಿ ಕಾಣುವ ಮರೀಚಿಕೆ ಸತ್ಯವೇ ?"

"ಅಲ್ಲ – ಆದರದು ದೃಷ್ಟಿದೋಷ."

"ದೃಷ್ಟಿದೋಷವಲ್ಲ – ದೃಷ್ಟಿರಾಹಿತ್ಯ. ದೃಶ್ಯ ಪ್ರಪಂಚವಿರುವಂತೆ ಅ–ದೃಶ್ಯ ಪ್ರಪಂಚವೂ ಒಂದಿದೆ. ಪಂಚಭೂತಾತ್ಮಕವಾದದ್ದು ಇಂದ್ರಿಯಗಳಿಗೆ ಗೋಚರವಾಗುತ್ತದೆ. ಪಂಚಭೂತಗಳಿಗೆ ಅತೀತವಾದ ಒಂದು ಚೈತನ್ಯವಿರುವದಲ್ಲವೇ ? ಇಂದು ನಾವು ಚಕಮುಕಿ ಕಿಡಿ ಹಾರಿಸಿ ದೀಪ ಹೊತ್ತಿಸುತ್ತೇವೆ. ಕಿಡಿಯುಗುಳುವ ಬೆಣಚುಕಲ್ಲಿಗೆ ಆ ಶಕ್ತಿಯೆಲ್ಲಿಂದ ಬಂತು ? ಕಲ್ಲನ್ನು ನಾವು ಕೈಯಲ್ಲಿ ಹಿಡಿಯಬಲ್ಲೆವು – ಅದರ ಗರ್ಭದಲ್ಲಿ ಅಡಗಿರುವ ಅಗ್ನಿಯನ್ನು ಕೈಯಲ್ಲಿ ಹಿಡಿಯಲು ಸಾಧ್ಯವೇ ? ಕಣ್ಣು ಚರ್ಮ, ಮಾಂಸ, ರಕ್ತನಾಳಗಳಿಂದ ಮಾಡಲ್ಪಟ್ಟ ಒಂದು ವಸ್ತು – ಅದಕ್ಕೆ ಜೀವ ತುಂಬುವ ನೋಟ ಯಾವ ವಸ್ತುವಿನಿಂದ ಮಾಡಲ್ಪಟ್ಟದ್ದು ? ಚರ್ಮ, ಮಾಂಸ, ರಕ್ತನಾಳಗಳಿಂದ ನಾವು ಕಣ್ಣನ್ನೂ ಸೃಷ್ಟಿಮಾಡಬಹುದು. ಆದರೆ ಅದಕ್ಕೆ ನೋಟವನ್ನೇತಕ್ಕೆ ತುಂಬಲಾಗುವುದಿಲ್ಲ ? ಇಂದು ನಿಮ್ಮ ಕಣ್ಮರೆಯಾಗಿರುವುದು ಶ್ರೀಗುರು ವಿದ್ಯಾರಣ್ಯರ ದೃಶ್ಯ ಚೇತನ. ಅವರ ಅ–ದೃಶ್ಯ ಚೇತನ ಅಮರವೆನ್ನುವುದನ್ನು ಮರೆಯಬೇಡಿ."

"ದೃಶ್ಯಾದೃಶ್ಯಗಳ ಬಂಧನದಿಂದ ಮನುಷ್ಯನಿಗೆ ಮುಕ್ತಿಯಿಲ್ಲವೇ ?"

"ಇದೆ. ಅವನು ದೃಕ್ – ದೃಶ್ಯ – ದೃಷ್ಟಾರ – ಈ ತ್ರಿಪುಟಿಯನ್ನು ಭೇದಿಸಿದಾಗ ?"

"ಅವನು ತ್ರಿಪುಟಿಯನ್ನೂ ಭೇದಿಸುವುದು ಯಾವಾಗ ?"

"ತ್ರಿಪುಟಿಯ ನಿಜಸ್ವರೂಪವನ್ನು ಅರಿತಾಗ – ಅಂದರೆ ತನ್ನ ಕರ್ತವ್ಯವನ್ನು ನಿಶ್ಶೇಷವಾಗಿ ನಿರ್ವಹಿಸಿದಾನಂತರ ?"

"ಜ್ಞಾನಿಯೂ ಕರ್ಮಿಯಾಗಬೇಕೇ ?"

"ಜ್ಞಾನವೇ ಕರ್ಮವಾಗಬೇಕು – ಕರ್ಮವೇ ಜ್ಞಾನವಾಗಬೇಕು.

ಲೋಕಾಯುತನದಲ್ಲಿಯೇ ಲೋಕಾತೀತಾವಸ್ಥೆಯನ್ನೂ ಮನುಷ್ಯ ಸಾಧಿಸಬೇಕು."

"ನಾವು........"

"ಕರ್ತವ್ಯವಿಮುಖರಾಗುತ್ತಿದ್ದೀರಿ."

"..................."

"ವಿಜಯನಗರ ಸಾಮ್ರಾಜ್ಯವಿನ್ನೂ ಶತ್ರುಬಾಧೆಯಿಂದ ಪಾರಾಗಿಲ್ಲ. ಶ್ರೀಗುರು ವಿದ್ಯಾರಣ್ಯರು, ನಿಮ್ಮ ಹಿರಿಯರು ಶ್ರೀಹರಿಹರರಾಯರು, ಶ್ರೀ ಬುಕ್ಕರಾಯರು ಬುನಾದಿ ಸ್ಥಾಪಿಸಿದ್ದಾರೆ. ಮಹಾ ಸಾಮ್ರಾಜ್ಯದ ಕಟ್ಟಡವಿನ್ನೂ ಆಗಬೇಕಾಗಿದೆ - ಅದರ ಕಳಶ ಸ್ಥಾಪನೆಯಾಗಬೇಕಾಗಿದೆ. ರಾಜ್ಯದೊಡೆಯರೇ ನಿರ್ವಿಣ್ಣರಾಗಿ ಆಧ್ಯಾತ್ಮಿಕ ಸಾಮ್ರಾಜ್ಯ ಹುಡುಕುತ್ತ ಹೊರಟರೆ, ಶ್ರೀಗುರುಗಳು ಸ್ಥಾಪಿಸಿದ ಸಾಮ್ರಾಜ್ಯದ ರಕ್ಷಣೆ ಪೋಷಣೆಗಳನ್ನು ನಿರ್ವಹಿಸುವವರು ಯಾರು?"

"ನಮ್ಮ ಕರ್ತವ್ಯವೇನೆಂಬುದನ್ನು ಅಪ್ಪಣೆಕೊಡಿಸಬೇಕು."

"ಮೊದಲು ಮಂತ್ರಿಮಂಡಳದ ಸಭೆ ಸೇರಿಸಿ. ಮುದ್ದಪ್ಪ ದಂಡನಾಯಕರು, ಇರುಗ ನಾಯಕರು, ಗುಂಡ ನಾಯಕರು ತಮ್ಮ ಸಮಯ ನಿರೀಕ್ಷಿಸುತ್ತಿದ್ದಾರೆ."

"ಅಪ್ಪಣೆ. ನಾಳೆ ಸಂಜೆಗೆ ಸಭೆ ಕರೆಯುತ್ತೇವೆ. ತಾವೂ ದಯೆಮಾಡಿಸಬೇಕೆಂದು ನನ್ನ ಪ್ರಾರ್ಥನೆ."

"ನಿಮ್ಮ ಕೆಲಸ ನೀವು ನಿರ್ವಹಿಸಬೇಕಾದಂತೆ, ನನ್ನ ಕೆಲಸ ನಾನು ನಿರ್ವಹಿಸಬೇಡವೇ? ವೇದಭಾಷ್ಯಗಳ ಸಂಸ್ಕರಣ ಇನ್ನೂ ಉಳಿದಿದೆ. ಶ್ರೀಕಂಠನ ಶಿಕ್ಷಣಕ್ಕೆ ನಾವು ವೇಳೆಯನ್ನೇ ವಿನಿಯೋಗಿಸಲಾಗಿಲ್ಲ. ನಾಳಿನ ಸಭೆಗೆ ನಾನು ಬರುತ್ತೇನೆ. ಆದರೆ ನನ್ನ ಮೇಲೆ ಯಾವ ಹೊಣೆಯನ್ನು ಹೊರೆಸಬಾರದೆಂದು ಈಗಲೇ ಸೂಚಿಸುತ್ತಿದ್ದೇನೆ."

ಪ್ರಭುಗಳು ಉತ್ತರ ಕೊಡಲಿಲ್ಲ.

೧

ದಿಲ್ಲಿ ಸುಲ್ತಾನಶಾಹಿಯು ಭಗ್ನಾವಶೇಷದ ಮೇಲೆ ಹುಟ್ಟಿಕೊಂಡ ರಾಜ್ಯಗಳಲ್ಲಿ ದಕ್ಷಿಣದ ಬಹಮನಿ ರಾಜ್ಯ ಗಣನೀಯವಾಯಿತು. ಮಹಮದ್‌ಬಿನ್ ತುಘಲಕ್ ಜೀವಂತನಾಗಿದ್ದಾಗಲೇ ಜನ್ಮತಳೆದ ಬಹಮನಿ ರಾಜ್ಯ ಅವನ ದರ್ಪ ದಬ್ಬಾಳಿಕೆಯನ್ನು ನಿರ್ಭೀತಿಯಿಂದ ಎದುರಿಸಿತು. ತೊಘಲಕನ ಹುಚ್ಚು ಆಡಳಿತದಿಂದ ಬೇಸತ್ತಿದ್ದ ದಕ್ಷಿಣದ ಸರದಾರರು ದೌಲತಾಬಾದಿನ ಕೋಟೆಯನ್ನು ಕೈವಶಪಡಿಸಿಕೊಂಡು, ತಮ್ಮಲ್ಲಿ ಒಬ್ಬನಾದ ಇಸ್ಮಾಯಿಲ್ ಮುಖ್‌ನಿಗೆ ನಾಸಿರುದ್ದೀನ್ ಷಾ ಎಂಬ ಬಿರುದನ್ನಿತ್ತು ಅವನನ್ನೇ ದಕ್ಷಿಣದ ದೊರೆಯನ್ನಾಗಿ ನೇಮಿಸಿದರು. ಇಸ್ಮಾಯಿಲ್ ವಯೋವೃದ್ಧನೂ ಸುಖಾಭಿಲಾಷಿಯೂ ಆಗಿದ್ದುದರಿಂದ ಅವನು ಅಧಿಕಾರ ನಿರ್ವಹಿಸಲು ಅಸಮರ್ಥನಾದ. ಅವನೇ ಸ್ವಯಂ ಪ್ರೇರಣೆಯಿಂದ ರಾಜ್ಯವನ್ನು ೧೩೪೭ರಲ್ಲಿ ಹಸನ ಜಾಫರ್ ಖಾನನಿಗೆ ಬಿಟ್ಟುಕೊಟ್ಟ. ಜಾಫರ್ ಖಾನ, ಅಬುಲ್ ಮುಝಫರ್ ಅಲ್ಲಾವುದ್ದೀನ್ ಬಹಮನ್ ಷಾ ಎಂಬ ಹೆಸರು ಧರಿಸಿ ರಾಜ್ಯವಾಳಲಾರಂಭಿಸಿದ. ಪರ್ಶಿಯಾದ ಮಹಾವೀರ ಬಹಮನನ ವಂಶಸ್ಥನಾದ ಹಸನ ತನ್ನ ವಂಶಕ್ಕೆ ಬಹಮನಿವಂಶವೆಂದು ನಾಮಕರಣ ಮಾಡಿದ.

ರಾಜ್ಯಾಧಿಕಾರ ವಹಿಸಿಕೊಂಡ ಕೂಡಲೆ ಹಸನ ಕಲ್ಬುರ್ಗಿಯನ್ನು ತನ್ನ ರಾಜಧಾನಿ ಮಾಡಿಕೊಂಡು ಅದಕ್ಕೆ ಅಹಸಾನಾಬಾದ್ ಎಂದು ಹೆಸರಿಟ್ಟ. ಆವರೆ ದಕ್ಷಿಣದ ಹಿಂದೂ ಅರಸರು ಅವನ ಸ್ವಾಮ್ಯವನ್ನು ಧಿಃಕ್ಕರಿಸಿದರು. ಅಲ್ಲಾವುದ್ದೀನ್ ಹಸನ ರಾಜ್ಯವಿಸ್ತರಣೆಗೆ ಬದ್ಧಕಂಕಣನಾದ. ಅವನು ಸಾಯುವ ವೇಳೆಗೆ (೧೩೫೮) ಬಹಮನಿ ರಾಜ್ಯ ಉತ್ತರಕ್ಕೆ ವಾಯಿ ಗಂಗಾನದಿ, ದಕ್ಷಿಣಕ್ಕೆ ಕೃಷ್ಣಾನದಿ, ಪಶ್ಚಿಮಕ್ಕೆ ದೌಲತಾಬಾದ್, ಪೂರ್ವಕ್ಕೆ ಭೋಂಗೀರ್‌ವರೆಗೆ ವಿಸ್ತರಿಸಿತ್ತು. ಆಡಳಿತ ಸೌಕರ್ಯಕ್ಕಾಗಿ ರಾಜ್ಯವನ್ನು ಕಲ್ಬುರ್ಗಿ, ದೌಲತಾಬಾದ್, ಬೀರಾರ್, ಬಿದರೆ ನಾಲ್ಕು ಜಿಲ್ಲೆಗಳಾಗಿ ವಿಭಾಗಿಸಿ ಒಂದೊಂದು ಜಿಲ್ಲೆಗೊಬ್ಬೊಬ್ಬ ರಾಜ್ಯಪಾಲನನ್ನು ನೇಮಿಸಿದ. ರಾಜ್ಯದ ಸುಭದ್ರತೆ, ಪ್ರಜೆಗಳ ಸುಖಸಂತೋಷಗಳಿಗೆ ಜನ್ಮ ನಿವೇದಿಸಿದ್ದ

ಅಲ್ಲಾವುದ್ದೀನ್ ಹರ್ಷ ಎಲ್ಲರ ಪ್ರೀತಿಗೂ ಪಾತ್ರನಾಗಿದ್ದ.

ಅಲ್ಲಾವುದ್ದೀನ್ ಹಸನನಾನಂತರ ಅವನ ಹಿರಿಯಮಗ ಮೊದಲನೆಯ ಮಹಮದ್ ಷಹಾ ಪಟ್ಟವೇರಿದ್ದ. ಸರ್ಕಾರದ ವಿವಿಧಾಂಗಗಳು, ಸೈನ್ಯ, ಪ್ರಾಂತ್ಯಾಡಳಿತಗಳನ್ನು ಮಹಮದ್ ಷಹಾ ಸುವ್ಯವಸ್ಥೆಗೊಳಿಸಿದರೂ, ಓರಂಗಲ್ಲು ಮತ್ತು ವಿಜಯನಗರಗಳ ಮೇಲೆ ಸತತವಾಗಿ ಅವನು ಹೋರಾಡುತ್ತಿದ್ದುದರಿಂದ, ಹೆಚ್ಚಿನ ಯಶಗಳಿಸಲಾಗಲಿಲ್ಲ. ಮಹಮದ್ ಷಹಾ ಸುಖಲೋಲುಪನಾಗಿ, ಧರ್ಮದ ವಿಷಯದಲ್ಲಿ ಉಪೇಕ್ಷೆ ತಳೆದಿದ್ದುದರಿಂದ ರಾಜ್ಯದ ಪ್ರಬಲವ್ಯಕ್ತಿಗಳು ಅವನ ಬಗ್ಗೆ ಹೆಚ್ಚು ಆದರವುಳ್ಳವರಾಗಿರಲಿಲ್ಲ.

ಮಹಮದ್ ಷಾ ತರುವಾಯ ಅವನ ಮಗ ಮುಜಾಹಿದ್ ಷಾ ಪಟ್ಟಕ್ಕೆ ಬಂದ (೧೩೭೭). ವಿಜಯನಗರದ ಮೇಲೇರಿಹೋದ ಮುಜಾಹಿದ್ ಷಾ ಬಲವಾಗಿ ಪೆಟ್ಟು ತಿಂದು ವಿಜಯನಗರದರಸರ ಜತೆ ಸಂಧಿ ಮಾಡಿಕೊಂಡು ಊರಿಗೆ ಹಿಂತಿರುಗಿದ. ಅವನ ಸಮೀಪಬಂಧುವಾದ ದಾವೂದ್ ಖಾನ್ ಅವನನ್ನು ಪರಿಸಮಾಪ್ತಿಗೊಳಿಸಿ ರಾಜ್ಯವನ್ನು ಕೈವಶಪಡಿಸಿಕೊಂಡ. ಮುಜಾಹಿದನ ಸೋದರಿ ರೂಪರವಾರ್ ಆಗಾ ಬೇಗಂ ದಾವೂದನನ್ನು ಕೊಲ್ಲಿಸಿದಳು. ರಾಜ್ಯದ ಹಿರಿಯರು ಹಸನ್ ಅಲ್ಲಾವುದ್ದೀನನ ನಾಲ್ಕನೆಯ ಮಗನಾದ ಮಹಮದ್ ಖಾನನಿಗೆ ಪಟ್ಟಗಟ್ಟಿದರು.

ಇಮ್ಮಡಿ ಮಹಮದ್ ಷಾ ಶಾಂತಿಪ್ರೇಮಿಯೂ ವಿದ್ಯಾಭಿಮಾನಿಯೂ ಆಗಿದ್ದ. ಮಸೀದಿಗಳು, ಶಾಲೆಗಳು, ಅನಾಥಾಲಯಗಳನ್ನು ಕಟ್ಟಿಸಿ, ಏಷ್ಯಾದ ವಿವಿಧ ರಾಜಾಸ್ಥಾನಗಳಿಂದ ವಿದ್ವಾಂಸರನ್ನು ಬರಮಾಡಿಕೊಂಡು ಗೌರವಿಸುತ್ತಿದ್ದ. ಅವನಾನಂತರ ೧೩೯೭ ರಲ್ಲಿ ಅವನ ಇಬ್ಬರು ಮಕ್ಕಳು ಘಿಯಾಸುದ್ದೀನ್, ಷಂಶುದ್ದೀನರಿಗೆ ರಾಜ್ಯಕ್ಕಾಗಿ ಜಗಳ ಹುಟ್ಟಿತು. ಈ ಸಂಧಿ ಸಾಧಿಸಿ ಅಲ್ಲಾವುದ್ದೀನ್ ಹಸನ್ ಬಹಮನಿಯ ಇನ್ನೊಬ್ಬ ಮೊಮ್ಮಗ ಫಿರೋಜ್ ರಾಜ್ಯವನ್ನು ಕಬಳಿಸಿ, ತಾಜುದ್ದೀನ್ ಫಿರೋಜ್ ಷಾ ಎಂಬ ಹೆಸರಿನಲ್ಲಿ ಆಳಲಾರಂಭಿಸಿದ.

ಚಾಣಾಕ್ಷನಾಗಿದ್ದ ಫಿರೋಜ್ ಷಾ ವಿಜಯನಗರದ ಬಲಾಬಲಗಳನ್ನು ಚೆನ್ನಾಗಿ ಬಲ್ಲವನಾಗಿದ್ದ. ವಿಜಯನಗರ ಬೆಳೆಯಲು ಅವಕಾಶವಿತ್ತರೆ ಇಡಿಯ ದಕ್ಷಿಣಾಪಥದಲ್ಲಿ ಇಸ್ಲಾಮಿಗೆ ನೆಲೆಯಿಲ್ಲದಂತಾಗುತ್ತದೆ ಎಂದು ಫಿರೋಜ್ ಷಾ ಮನಗಂಡಿದ್ದ.

ಇಸ್ಲಾಮಿನ ಬಗ್ಗೆ ಸುಲ್ತಾನ್ ತಳೆದಿದ್ದ ಧೋರಣೆಯನ್ನು ದುರುಪ ಯೋಗಪಡಿಸಿಕೊಂಡು, ವಿಜಯನಗರದ ಮೇಲೆ 'ಜಿಹಾದ್' ಆರಂಭಿಸ ಬೇಕೆಂದು ರಾಜಧಾನಿಯ ಮೌಲ್ವಿ, ಮುಲ್ಲಾ, ಖಾಜಿಗಳು ಹವಣಿಸಿದರು. ಮುಖ್ಯ ವಜೀರನಾಗಿದ್ದ ಜೈನಲಾಬುದ್ದೀನ್ ಉಗ್ರಗಾಮಿಗಳನ್ನು ಪ್ರತ್ಯಕ್ಷ ವಾಗಿ ಪರೋಕ್ಷವಾಗಿ ಪ್ರೋತ್ಸಾಹಿಸುತ್ತಿದ್ದ.

ಆಸ್ಥಾನದ ಖಾಜಿ ಕಮಾಲುದ್ದೀನ್ ಸಮಯವರಿತು ಸುಲ್ತಾನರನ್ನು ಹುರಿದುಂಬಿಸುತ್ತಲೇ ಇದ್ದ. ರಂಜಾನ್ ತಿಂಗಳು ಮುಗಿದ ಕೂಡಲೆ, ವಿಜಯನಗರಕ್ಕೆ ಮುತ್ತಿಗೆ ಹಾಕಿ, ರಾಜಧಾನಿಯನ್ನು ಕೈವಶಪಡಿಸಿಕೊಳ್ಳ ಬೇಕೆಂದು ಕಮಾಲುದ್ದೀನ್ ಷಹನನ್ನು ಒತ್ತಾಯ ಮಾಡಲಾರಂಭಿಸಿದ.

ಒಂದು ದಿನ, ಷಹಾ 'ಚಾಂದನಿ ಬಾಗ್'ನಲ್ಲಿದ್ದುದನ್ನು ತಿಳಿದು, ಕಮಾಲುದ್ದೀನ್, ವಜೀರನ ಬಳಿಗೆ ಬಂದು,

"ಬನ್ನಿ ಜೈನಲಾಬುದ್ದೀನ್. ಹುಜೂರರವರನ್ನು ಕಂಡು, ವಿಜಯ ನಗರದ ಜಿಹಾದ್ ಬಗೆ ಇತ್ಯರ್ಥಮಾಡಿಬಿಡೋಣ" ಎಂದ.

"ಈಗ ಹುಜೂರ್‌ರವರು ಎಲ್ಲಿದ್ದಾರೆ?"

"ಚಾಂದನಿಬಾಗ್‌ನಲ್ಲಿದ್ದಾರೆ."

"ಅವರು ವಿಹಾರದಲ್ಲಿರುವಾಗ ನಾವು ಹೋಗಿ ಕಾಣುವುದು ಉಚಿತವಲ್ಲ."

"ವಿಜಯನಗರದ ಕಾಫಿರ್ ಸಾಮ್ರಾಜ್ಯ ಜೀವಂತವಾಗಿರುವವರೆಗೆ ಇಸ್ಲಾಮಿನ ನಿಜಭಕ್ತ ಯಾವನೂ ವಿಹರಿಸಲು ಅವಕಾಶವಿಲ್ಲ. ವಿಜಯ ನಗರದ ಝಂಡಾ ಬತೇರಿಯ ಮೇಲೆ ನಮ್ಮ ಅರ್ಧಚಂದ್ರ ಬಾವುಟ ಮೆರೆ ದಾಗಲೇ ನಮಗೆ ವಿಹಾರ - ವಿರಾಮ."

"ಹುಜೂರ್‌ರವರು ನಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿಲ್ಲ. ಅವರೂ ಯೋಗ್ಯ ಕಾಲ ನಿರೀಕ್ಷಿಸುತ್ತಿದ್ದಾರೆ."

"ಇದಕ್ಕಿಂತ ನಿಮಗಿನ್ನು ಯೋಗ್ಯಕಾಲ ಎಲ್ಲಿಂದ ಸಿಕ್ಕಬೇಕು ವಜೀರ್ ಸಾಹೇಬರೇ. ವಿಜಯನಗರದ ಈಗಿನ ಅರಸರು ಯುದ್ಧಪ್ರಿಯರಲ್ಲ. ಅವರ ಶಾಂತಿಧೋರಣೆಯಿಂದ ವಿಜಯನಗರದ ಜನರು ಯುದ್ಧದ ಚಿಂತೆಯನ್ನೇ ಬಿಟ್ಟುಬಿಟ್ಟಿದ್ದಾರೆ. ಶತ್ರುವಿಂತು ಮೈಮರೆತಿರುವಾಗ ನಮ್ಮ ಕೆಲಸ ಸಾಧಿಸಿ ಕೊಳ್ಳದಿದ್ದರೆ, ಇಂಥ ಅವಕಾಶ ನಮಗೆ ಮುಂದೆ ಸಿಕ್ಕುವುದೇ?"

"ಹುಜೂರ್‌ರವರಿಗೆ ಈ ವಿಷಯ ತಿಳಿದಿಲ್ಲ ಎಂದು ಭಾವಿಸಿರುವಿರಾ ?"

"ತಿಳಿದಿದ್ದರೆ ಅವರಿಂತು ಆಲಸಿಗರಾಗಿರುತ್ತಿದ್ದರೇ ?"

ಷಹರ ರೀತಿನೀತಿಗಳನ್ನು ಚರ್ಚಿಸಲು ಇಚ್ಛಿಸದ ಜೈನಲಾಬುದ್ದೀನ್ "ನಡೆಯಿರಿ – ಹೋಗೋಣ" ಎಂದ.

ವಿವಿಧ ದೇಶಗಳ ಸುಂದರಿಯರಿಂದ ಸುತ್ತುಗಟ್ಟಿ, ಪ್ರಮತ್ತವಿಲಾಸದಲ್ಲಿ ನೈಮರೆತಿದ್ದ ಸುಲ್ತಾನ್ ಫಿರೋಜ್ ಷಾ, ಖಾಜಿಯ ಹೆಸರು ಕೇಳಿದೊಡನೆಯೇ ದಿಗ್ಗನೆದ್ದು,

"ನೀವೆಲ್ಲರೂ ಹೋಗಿ – ಪಾನಪಾತ್ರೆಗಳನ್ನು ತೆಗೆದುಬಿಡಿ" ಎಂದು ಆಜ್ಞಾಪಿಸಿದ.

ಸುರಾಪಾತ್ರೆಗಳು ಹೋಗಿದ್ದರೂ ಸುರೆಯ ವಾಸನೆ ಹೋಗಿರಲಿಲ್ಲ. ಮೂಗು ಸೊಟ್ಟಮಾಡಿಕೊಂಡೇ ಪ್ರವೇಶಿಸಿದ ಖಾಜಿಯನ್ನು ಸುಲ್ತಾನ್ ಉಚಿತ ಗೌರವದಿಂದ ಸ್ವಾಗತಿಸಿ,

"ಖಾಜಿ ಸಾಹೆಬರು, ಇಷ್ಟು ದೂರ ಪಾದ ಬೆಳಸಬೇಕಾದರೆ, ಅತ್ಯವಸರದ ಕಾರಣವಿರಬೇಕು. ಏನೆಂದು ಕೇಳಬಹುದೇ ?"

"ಷಹನ್‌ಷಹಾ, ನೀವು ನಿತ್ಯ ಪವಿತ್ರ ಕುರಾನನ್ನು ಪಠಿಸುತ್ತಿರುವಿರಲ್ಲವೇ ?"

"ಅದರಲ್ಲಿ ಯಾವ ನ್ಯೂನತೆಯೂ ಇಲ್ಲ ಖಾಜಿ ಸಾಹೇಬ್."

"ಕುಡಿತದ ಬಗ್ಗೆ ಕುರಾನ್ ಏನು ಅಪ್ಪಣೆಕೊಡಿಸುತ್ತದೆ ಬಲ್ಲಿರಾ ?"

ಸುಲ್ತಾನ್ ತಪ್ಪಿತಸ್ಥನಂತೆ ಕತ್ತು ತಗ್ಗಿಸಿ ನಿಂತುಕೊಂಡ.

ತುಂಟ ಮಕ್ಕಳನ್ನು ದಂಡಿಸುವಂತೆ ಖಾಜಿ.

"ಕುಡಿತ ಶುದ್ಧ ಖರಾಬ್. ಕುಡಿಯುವವರನ್ನು ಅಲ್ಲಾ ಹತ್ತಿರ ಸೇರಿಸುವುದಿಲ್ಲ. ಕುಡುಕರು ಸಲ್ಲಿಸುವ ಪ್ರಾರ್ಥನೆ ಅಲ್ಲಾನ ಕಿವಿಗಳನ್ನೇ ಮುಟ್ಟುವುದಿಲ್ಲ ಎಂಬುದು ನಿಮಗೆ ಗೊತ್ತಿಲ್ಲವೇ ?"

"ಮಾಫ್ ಮಾಡಬೇಕು ಖಾಜಿ ಸಾಹೇಬ್."

"ನಿಮ್ಮ ತಪ್ಪಿಗೊಂದೇ ಪ್ರಾಯಶ್ಚಿತ್ತ."

"ಏನದು ?"

"ರಂಜಾನ್ ಕಳೆದೊಡನೆಯೇ ವಿಜಯನಗರಕ್ಕೆ ಮುತ್ತಿಗೆ ಹಾಕಿ, ಆ ಕಾಫಿರ್ ಸಾಮ್ರಾಜ್ಯವನ್ನು ನುಚ್ಚುನೂರಾಗಿಸಬೇಕು."

"ಮುತ್ತಿಗೆ ಹಾಕುವುದಾಗುತ್ತದೆ. ನುಚ್ಚುನೂರಾಗಿಸುವುದು ನನ್ನ ಕೈಯಲ್ಲಿಲ್ಲ ಖಾಜಿ ಸಾಹೇಬ್. ವಿಜಯನಗರದವರು ದುರ್ಬಲರಲ್ಲ."

"ಬಹಮನಿಯ ಸುಲ್ತಾನರ ಬಾಯಲ್ಲಿ ಈ ಮಾತೇ – ಇಸ್ಲಾಮಿನ ವೀರಕರವಾಳ ಹಿರಿಯುವ ಒಬ್ಬ ಸೇನಾನಿ ವಿಜಯನಗರದ ನೂರಾರು, ಸಾವಿರಾರು ವೀರರನ್ನು ಬಲಿ ತೆಗೆದುಕೊಳ್ಳಬಲ್ಲ ಎಂಬುದನ್ನು ಸುಲ್ತಾನರು ಮರೆತಂತಿದೆ.. ರಂಜಾನ್ ಮುಗಿದ ಕೂಡಲೆ ತಾವು ವಿಜಯನಗರದ ದಂಡ ಯಾತ್ರೆ ಆರಂಭಿಸದಿದ್ದರೆ ರಾಜಧಾನಿಯಲ್ಲಿ ಕ್ರಾಂತಿಯಾಗುತ್ತದೆ. ಈ ನೆನ ಗುದಿಗೆ ಸಿಕ್ಕಿ ಜನ ಬೇಸತ್ತಿದ್ದಾರೆ. ನಿಮ್ಮ ಮುಖ್ಯ ವಜೀರರನ್ನೇ ಕೇಳಿ ನೋಡಿ."

ಜೈನಲಾಬುದ್ದೀನ್ ಮುಂದುವರಿದು ಸುಲ್ತಾನರಿಗೆ ಮುಜರೆ ಮಾಡಿ,

"ಖಾಜಿ ಸಾಹೇಬರು ಹೇಳುತ್ತಿರೇವುದು ನಿಜ ಖಾವಿಂದ್. ಜನ ತಾಳ್ಮೆಗೆಡುತ್ತಿದ್ದಾರೆ."

ಕ್ಷಣಕಾಲ ಆಲೋಚಿಸಿನ ಸುಲ್ತಾನ,

"ಇನ್‌ಷಾ ಅಲ್ಲಾ – ಅಲ್ಲಾನ ಇಚ್ಛೆಯಿದ್ದಂತಾಗಲಿ" ಎಂದ.

ವಿಜಯೋತ್ಸಾಹದಿಂದ ಖಾಜಿ, ಜೈನಲಾಬುದ್ದೀನನ್ನು ಕರೆದುಕೊಂಡು ಹೊರಬಿದ್ದ.

೨

ಯಾವ ಕೆಲಸಕ್ಕೆ ಹೋಗಬೇಕಾದರೂ ಪ್ರಭುಗಳು ಮಾತೃಮಂದಿರಕ್ಕೆ ಬಂದು, ಶ್ರೀಗುರು ವಿದ್ಯಾರಣ್ಯರ ಮೂರ್ತಿಗೂ, ಮಾತೃಶ್ರೀಯವರಿಗೂ ನಮಿಸಿ, ತಾಯಿಯ ಅಪ್ಪಣೆಪಡೆಯುವುದು ಪದ್ಧತಿಯಾಗಿತ್ತು.

ಮಂತ್ರಿಮಂಡಳದ ಸಭೆಗೆ ಹೋಗಲು ಸಾಲಂಕೃತರಾದ ಹರಿಹರ ರಾಯರು, ಮಾತೃಮಂದಿರದ ಬಳಿ ಬಂದು ಚೇಟಿಗೆ

"ರಾಜಮಾತೆಯವರ ಸಮಯ ತಿಳಿದು ಬಾ" ಎಂದರು.

ಚೇಟಿಯ ಜತೆಯಲ್ಲಿಯೇ ಹೊರಬಂದ ಗೌರಾಂಬಿಕೆ, ಮಗನ ಕೈ ಹಿಡಿದು ಒಳಗೆ ಕರೆದೊಯ್ದು ಕುಳ್ಳಿರಿಸಿಕೊಂಡು,

"ನೀವೂ ಒಳಗೆ ಬರಲು ಅಪ್ಪಣೆ ಬೇಕೇ ಅಪ್ಪಾಜಿ?"

"ಊರಿನ ಹಲವು ಹೆಣ್ಣುಮಕ್ಕಳು ನಿಮ್ಮನ್ನು ಕಾಣಲು ಬರುತ್ತಾರೆ ಅಮ್ಮಾಜಿ. ಒಮ್ಮೆಲೇ ನಾನು ಬಂದರೆ ಅವರಿಗೆ ಬೇಸರವಾಗಬಹುದು."

"ಸಾಲಂಕೃತರಾಗಿದ್ದೀರಲ್ಲ – ಎಲ್ಲಿಗಾದರೂ ಪ್ರಯಾಣವೇ?"

"ಮಂತ್ರಿಮಂಡಳದ ಸಭೆ ಕರೆದಿಲ್ಲ ಎಂದು ಆರ್ಯ ಸಾಯಣರು ಆಕ್ಷೇಪಿಸಿದರು. ಇಂದು ಸಭೆ ಕರೆದಿದ್ದೇನೆ – ನಿಮ್ಮ ಅಪ್ಪಣೆ ಪಡೆದು ಹೋಗಲು ಬಂದೆ."

"ನೀವು ಸಭೆ ಕರೆದು ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಹೋಗುತ್ತಿರುವುದು ನನಗೆ ತುಂಬ ಸಂತೋಷವನ್ನುಂಟುಮಾಡಿದೆ. ರಾಜ್ಯದ ಒಡೆಯರಾದ ನೀವೇ ನಿರ್ವಿಣ್ಣರಾಗಿ ಕುಳಿತರೆ ರಾಜ್ಯದ ಪಾಡೇನು?"

"ನನಗೊಂದು ವಿಚಾರ ಬಂದಿದೆ ಅಮ್ಮಾಜಿ – ನಿಮ್ಮ ಅಭಿಪ್ರಾಯವೇನು?"

"ಹೇಳಿ."

"ನಾನಿನ್ನೂ ಯಾರನ್ನೂ ಮಹಾಮಂತ್ರಿ ಸ್ಥಾನಕ್ಕೆ ನಿಯಮಿಸಿಲ್ಲ. ನಮಗೂ ಯುದ್ಧಕ್ಕೂ ಶಾಶ್ವತ ಬೀಗತನವೇ ಗಂಟು ಬಿದ್ದಿದೆ. ನಾಳೆ ನಾನು ಯುದ್ಧರಂಗಕ್ಕೆ ಹೋಗಬೇಕಾಗಿ ಬಂದರೆ, ರಾಜಧಾನಿಯ ರಕ್ಷಣೆಯ ಭಾರ ವಹಿಸಿಕೊಂಡು, ದೈನಂದಿನ ಜೀವನಕ್ಕೆ ಯಾವ ಕೊರತೆಯೂ ಉಂಟಾಗದಂತೆ ನೋಡಿಕೊಂಡು ಹೋಗುವವರು ಮಹಾಮಂತ್ರಿಗಳಾದರೆ ಒಳ್ಳೆಯದು."

"ನಿಸ್ಸಂದೇಹವಾಗಿ – ನೀವು ಯಾರನ್ನು ನಿಯಮಿಸಲು ಯೋಚಿಸಿರುವಿರಿ ಅಪ್ಪಾಜಿ."

"ಆ ವಿಷಯದಲ್ಲಿ ನಿರ್ಧಾರಕ್ಕೆ ಬರಲಾಗದೆ ತೊಳಲಾಡುತ್ತಿದ್ದೇನೆ ಅಮ್ಮಾಜಿ. ಯೋಗ್ಯ ವ್ಯಕ್ತಿ ಯಾರು ಎಂಬುದನ್ನು ನೀವು ಸೂಚಿಸಬೇಕು."

"ವಯೋವೃದ್ಧರೂ, ಜ್ಞಾನವೃದ್ಧರೂ, ಸಾಮ್ರಾಜ್ಯದ ನಿಸ್ಸೀಮ ಭಕ್ತರೂ ಆದ ಮುದ್ದಪ್ಪ ದಂಡನಾಯಕರಿಗಿಂತ ಯೋಗ್ಯರು ಬೇಕೇ?"

"ನಾನೂ ಮೊದಲು ಅವರ ಹೆಸರನ್ನೇ ಯೋಚಿಸಿದೆ. ಇರುಗ ನಾಯಕರೂ, ಗುಂಡನಾಯಕರೂ ಅಸಮಾಧಾನಗೊಂಡಾರೆನೋ ಎನ್ನುವ

ಭೀತಿ ತಲೆದೋರಿತು. ಅಧಿಕಾರಾಕಾಂಕ್ಷೆಯಿಂದ ರಾಜ್ಯದಲ್ಲಿ ಸ್ವಯೂಥ ಕಲಹಗಳಾದರೆ ಬಹಮನಿಯವರಿಗೆ ನಾವೇ ಆಮಂತ್ರಣ ನೀಡಿದಂತಾಗುತ್ತದೆ."

"ಹೌದು. ಮುಖ್ಯವಾಗಿ ಯೋಚಿಸಬೇಕಾದ ವಿಷಯ ಅದು–ಇಂದಿನ ಮಂತ್ರಿಮಂಡಳದಲ್ಲಿ ಈ ವಿಷಯ ಬರುತ್ತದೆಯೇ ?"

"ಬಂದೇ ಬರುತ್ತದೆ."

ಅದೇ ವಿಷಯ ಕುರಿತು ವಿಚಾರ ಮಾಡುತ್ತಿದ್ದ ಗೌರಾಂಬಿಕೆ ಥಟ್ಟನೆ,

"ಅಪ್ಪಾಜಿ. ನನಗೊಂದು ಯೋಚನೆ ಹೊಳೆದಿದೆ. ಮಂತ್ರಿ ಮಂಡಳ ದಲ್ಲಿ ಬಿಕ್ಕಟ್ಟು ತಲೆದೋರದಂತೆ ಈ ವಿಷಯ ಪರಿಹರಿಸಬಹುದು."

"ಹೇಗೆ ?"

"ರಾಜ್ಯದ ಸಕಲಪ್ರಜರ ಗೌರವಾದರಗಳಿಗೆ ಪಾತ್ರರಾಗಿರುವ ಆರ್ಯ ಸಾಯಣಾಚಾರ್ಯರನ್ನು ನೇಮಿಸುವುದರಿಂದ !"

"ಅವರು ಒಪ್ಪಬೇಕಲ್ಲ."

"ವಿಜಯನಗರದ ಅಭ್ಯುದಯಕ್ಕಾಗಿ ಅವರು ಯಾವ ತ್ಯಾಗಮಾಡಲೂ ಸಿದ್ಧರಾಗಿದ್ದಾರೆಂಬುದನ್ನು ನಾನು ನಿಮಗೆ ಹೊಸದಾಗಿ ಹೇಳಬೇಕೇ ?"

ಸಂತೋಷಗೊಂಡ–ಪ್ರಭುಗಳು ತಾಯಿದೇವಿಗೆ ನಮಸ್ಕರಿಸಿ, ಶ್ರೀಗುರು ವಿದ್ಯಾರಣ್ಯರ ಮೂರ್ತಿಗೆ ಅಭಿವಂದಿಸಿ ಮಂತ್ರಾಲೋಚನ ಹಜಾರದತ್ತ ಬಿಜಯಮಾಡಿದರು.

ಮುದ್ದಪ್ಪ ದಂಡನಾಯಕರು, ಇರುಗ ನಾಯಕರು, ಗುಂಡನಾಯರು, ಚೆನ್ನಪ್ಪನಾಯಕರು, ಬೈಚಣ್ಣನಾಯಕರು ಎದ್ದುನಿಂತು ಪ್ರಭುಗಳನ್ನು ಸ್ವಾಗತಿಸಿದರು.

ಪ್ರಭುಗಳು, ಸಾಯಣಾಚಾರ್ಯರು ಕುಳಿತಿದ್ದಲ್ಲಿಗೆ ಬಂದು ನಮಸ್ಕರಿಸಿ ಸ್ವಸ್ಥಾನದಲ್ಲಿ ಕುಳಿತರು.

ಎಲ್ಲರೂ ಕುಳಿತಮೇಲೆ ಮುದ್ದಪ್ಪ ದಂಡನಾಯಕರೆದ್ದು

"ಮಹಾಪ್ರಭುಗಳು ಈ ದಿನದ ಸಭೆಗೆ ದಯೆಮಾಡಿಸಿರುವುದು ನಮಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ. ಶ್ರೀಗುರು ವಿದ್ಯಾರಣ್ಯರು, ಹಿರಿಯ ದೊರೆಗಳು ಆರಂಭಿಸಿರುವ ಅನೇಕ ಮಹತ್ತ್ವದ ಕೆಲಸಗಳು ಮುಂದುವರಿಯ ಬೇಕಾಗಿದೆ. ಮಹಾಪ್ರಭುಗಳನ್ನು ನಿರ್ವಿಣ್ಣತೆ ಕಬಳಿಸದಂತೆ ಕಾಪಾಡಲು ಶ್ರೀವಿರೂಪಾಕ್ಷ, ಶ್ರೀಪಂಪಾಂಬಿಕೆಯರನ್ನು ಪ್ರಾರ್ಥಿಸುತ್ತೇನೆ."

"ನಿಮ್ಮ ಶುಭಾಶಯಗಳನ್ನು ಸಂತೋಷದಿಂದ ಅಂಗೀಕರಿಸುತ್ತೇವೆ ದಣ್ಣಾಯಕರೇ. – ಬಹಮನಿ ರಾಜ್ಯದ ಸುದ್ದಿಯೇನು ?"

ಗುಂಡನಾಯಕರೆದ್ದು ನಿಂತು.

"ನಮ್ಮಲ್ಲಿ ಸ್ನೇಹ ಸೌಜನ್ಯ ಪ್ರಕಟಿಸಿದ ಸುಲ್ತಾನ್ ಫಿರೋಜ್ ಷಹಾ ಅವರ ಮನಸ್ಸು ಪರಿವರ್ತನವಾಗಿದೆಯೆಂದು ಸುದ್ದಿ ಬಂದಿದೆ. ವಜೀರ್ ಜೈನ ಲಾಬುದ್ದೀನ್, ಆಸ್ಥಾನದ ಖಾಜಿ ಕಮಾಲುದ್ದೀನ್, ವಿಜಯನಗರದ ಮೇಲೆ 'ಜಿಹಾದ್' ಆರಂಭಿಸಲು ಸುಲ್ತಾನರನ್ನು ಒತ್ತಾಯ ಪಡಿಸುತ್ತಿರುವರಂತೆ! ಕಲ್ಬುರ್ಗಿ, ಬಿದರೆ, ಬೀರಾರ್, ದೌಲತಾಬಾದುಗಳಲ್ಲಿ ಶಸ್ತ್ರಾಸ್ತ್ರಗಳ ಸಂಗ್ರಹಣ, ಸೈನಿಕರ ಶಿಕ್ಷಣ ಭರದಲ್ಲಿ ಸಾಗಿದೆಯಂತೆ!"

"ಜಿಹಾದ್ ಯಾವಾಗ ಆರಂಭಿಸುವರಂತೆ!"

"ರಂಜಾನ್ ಮುಗಿದ ಮೇಲೆ."

ಇರುಗನಾಯಕರೆದ್ದು ನಿಂತು,

"ಇದಕ್ಕೊಂದು ಪರಿಹಾರವಿದೆ ಮಹಾಪ್ರಭು. ಅಪ್ಪಣೆಕೊಟ್ಟರೆ ಅರಿಕೆ ಮಾಡಿಕೊಳ್ಳುತ್ತೇನೆ" ಎಂದರು.

"ಅಗತ್ಯವಾಗಿ ಹೇಳಿ."

"ಬಹಮನಿಯುವರಿಗೆ ಪೂರ್ವಸೂಚನೆ ಕೊಡದೆ, ನಾವೇ ಈಗ ಅವರ ಮೇಲೆ ಹೋಗಿಬಿದ್ದರೆ, ಬಹುಮನಿರಾಜ್ಯ ಗತಾವಶೇಷವಾಗುತ್ತದೆ."

"ಇದು ರಂಜಾನ್ ತಿಂಗಳಲ್ಲವೇ ಇರುಗನಾಯಕರೇ?"

"ಆದರೇನು? – ರಂಜಾನ್ ನಮ್ಮ ಹಬ್ಬವಲ್ಲವಲ್ಲ!"

"ಎದುರು ಪಕ್ಷದವರು ಪೂಜೆ, ಪ್ರಾರ್ಥನೆ, ಉಪವಾಸ ವ್ರತದಲ್ಲಿರುವಾಗ್ಗೆ ನಾವು ಅವರ ಮೇಲೇರಿ ಹೋಗುವುದು ವೀರೋಚಿತವಲ್ಲ. ಶತ್ರು ದುರ್ಬಲನಾಗಿರುವಾಗ ಅವನ ಮೇಲೆ ಸೆಣಸಿ ಜಯಗಳಿಸುವುದರಲ್ಲಿ ಏನು ಹೆಚ್ಚುಗಾರಿಕೆ! ತಾತ್ಕಾಲಿಕ ಜಯಕ್ಕಾಗಲಿ, ಶಾಶ್ವತ ಲಾಭಕ್ಕಾಗಲಿ ನಾವು ಅಧರ್ಮ ಪ್ರವರ್ತರಾಗಬಾರದು."

"ಧರ್ಮ, ನೀತಿಯನ್ನರಿತವರ ಸಂಗಡ ವ್ಯವಹರಿಸುವಾಗ ನಾವು ಧರ್ಮ, ನೀತಿಯನ್ನನುಸರಿಸಬೇಕಾದುದು ನ್ಯಾಯ. ಈ ರಾಕ್ಷಸರಿಗೆ ಧರ್ಮ, ನೀತಿ ಅರ್ಥವಾಗುವುದಿಲ್ಲ ಮಹಾಪ್ರಭೂ- ದಂಡನೀತಿ – ದಂಡ ಧರ್ಮಗಳಿಗೇ ಇವರು ತಲೆಬಾಗುವುದು."

" ಅವರು ಧರ್ಮ ಬಿಟ್ಟಿದ್ದಾರೆಂದು ನಾವೂ ಬಿಡೋಣವೇ ?"

" ತಾಮಸಶಕ್ತಿಯನ್ನು ಅತಿ ತಾಮಸಶಕ್ತಿಯಿಂದಲೇ ದಮನಿಸಬೇಕು."

" ಸತ್ತ್ವಕ್ಕೆ ಬೆಲೆಯೇ ಇಲ್ಲವೆಂದ ಹಾಗಾಯಿತು."

" ಸತ್ತ್ವ ರಕ್ಷಣೆಗಾಗಿಯೇ ತಮಸ್ಸಿನ ಮರೆ ಹೊಗಬೇಕಾಗುತ್ತದೆ."

" ಸತ್ತ್ವವನ್ನು ತಮಸ್ಸು ರಕ್ಷಿಸಬೇಕೇ ನಾಯಕರೇ – ನಿಮ್ಮ ವಾದ ನಮಗೆ ಅರ್ಥವಾಗುತ್ತಿಲ್ಲ. ಈ ವಿಷಯದಲ್ಲಿ ಅಧಿಕಾರವಾಣಿಯಿಂದ ಮಾತಾಡಬಲ್ಲ ಹಿರಿಯರು ಶ್ರೀ ಸಾಯಣಾಚಾರ್ಯರು ಇದ್ದಾರೆ. ಅವರೇ ನಮಗೆ ಮಾರ್ಗದರ್ಶನ ಮಾಡಿಸಲಿ."

ಸಾಯಣರು ಗಂಭೀರವಾಗಿ,

" ವೀರರೂ, ಸಾಹಸಧನರೂ, ಅತುಲ ಸ್ವಾಮಿಭಕ್ತರೂ ಆದ ಇರುಗನಾಯಕರು ಒಳಗುದಿಗೆ ಬೇಸತ್ತು ಹೇಗಾದರೂ ಇದನ್ನು ಪರಿಹರಿಸಬೇಕು, ತಮಸ್ಸಿಗೆ ತಲೆಬಾಗಿಯಾದರೂ ಮ್ಲೇಚ್ಛರ ಮಾರ್ಮಲೆತನವನ್ನು ಕೊನೆಗಾಣಿಸಬೇಕೆಂದು ಬಯಸುವುದು ಸ್ವಾಭಾವಿಕವಾಗಿದೆ. ಜಯಾಪಜಯಗಳು ಅಶಾಶ್ವತ. ಧರ್ಮವೊಂದೇ ಅನಂತವಾದುದು. ಅಲ್ಪಲಾಭಕ್ಕಾಗಿ ಅನಂತ ಸತ್ತ್ವವನ್ನು ಅಪಮಾನಗೊಳಿಸಬಾರದೆಂದು ಮಹಾಪ್ರಭುಗಳು ಅಪ್ಪಣೆ ಕೊಡಿಸಿದ್ದಾರೆ. ಈ ಸಮಸ್ಯೆ ನಮಗೆ ಹಿಂದೆಯೂ ತಲೆದೋರಿತು – ಮುಂದೆಯೂ ಹಲವು ಸಾರಿ ತಲೆದೋರಬಹುದು. ಈ ಬಗ್ಗೆ ನಮ್ಮ ಅಭಿಪ್ರಾಯ, ವಿಚಾರದೃಷ್ಟಿಗಳನ್ನು ಖಚಿತಪಡಿಸಿಗೊಳ್ಳುವುದು ಲೇಸು. ವಿಜಯನಗರಸ್ಥಾಪನೆಯಾದುದು ಒಬ್ಬ ವೀರಸನ್ಯಾಸಿಯ ತಪಃಪ್ರಭಾವದಿಂದ; ಈಗಿರುವ ಸ್ಥಿತಿ ಮುಟ್ಟ, ಇಡಿಯ ಆರ್ಯಾವರ್ತದ ಕಣ್ಮಣಿಯಾದುದು ಗತಿಸಿದ ಧರ್ಮಪ್ರಭುಗಳಾದ ಶ್ರೀ ಹರಿಹರರಾಯರು, ಶ್ರೀ ಬುಕ್ಕರಾಯರು ಇವರ ಪುಣ್ಯಪ್ರಭಾವದಿಂದ ! ಈ ಮಹಾಸಾಮ್ರಾಜ್ಯದ ಹುಟ್ಟು, ಬೆಳವಳಿಗೆಗೆ ಪಾಶವೀ ಶಕ್ತಿಗಿಂತಲೂ ತಪೋಶಕ್ತಿಯೇ ಕಾರಣವೆಂಬುದು ಸ್ವತಃಸ್ಸಿದ್ಧವಾಗಿದೆ. ಧರ್ಮದ ಅಡಿಗಲ್ಲಿನ ಮೇಲೆ ನಿಂತ ರಾಜ್ಯ, ಧರ್ಮಮಾರ್ಗದಲ್ಲಿ ನಡೆದರೇ ಶ್ರೇಯಸ್ಸು ; ಧರ್ಮಕ್ಕೆ ಗ್ಲಾನಿ ಬಂದರೆ ಯಾವ ಶಕ್ತಿಯೂ ವಿಜಯನಗರವನ್ನು ಉಳಿಸಲಾರದು.

ಬಹಮನಿ ರಾಜ್ಯದ ಮೇಲಾಗಲಿ, ಇತರ ಮುಸ್ಲಿಮ್ ರಾಜ್ಯಗಳ ಮೇಲಾಗಲಿ ನಮಗೆ ದ್ವೇಷವಿಲ್ಲ. ಅವರ ರಾಜ್ಯಗಳನ್ನು ಕಬಳಿಸಿ, ನಮ್ಮ

ಸಾಮ್ರಾಜ್ಯ ವಿಸ್ತರಿಸಬೇಕೆಂಬ ಆಕಾಂಕ್ಷೆಯೂ ಇಲ್ಲ. ನೆರೆಹೊರೆಯ ರಾಜ್ಯಗಳೊಂದಿಗೆ ಸ್ನೇಹ ಸೌಹಾರ್ದಗಳಿಂದ ನಡೆದುಕೊಳ್ಳುವುದೇ ನಮಗೆ ಶ್ರೇಯಸ್ಕರ. ರಾಜ್ಯದಲ್ಲಿ ನಾವು ನಿರ್ವಹಿಸಬೇಕಾದ ನೂರಾರು ಕೆಲಸಗಳಿವೆ. ಅನತಿದೂರದಲ್ಲಿ ತುಂಗಭದ್ರಾನದಿ ಹರಿಯುತ್ತಿದ್ದರೂ ವ್ಯವಸಾಯಕ್ಕೆ ನೀರು ಒದಗುತ್ತಿಲ್ಲ. ಬೇಸಿಗೆಯಲ್ಲಿ ಜನ ನೀರಿನ ಅಭಾವದಿಂದ ಪರಿತಪಿಸುವುದನ್ನು ನಾವೇ ಕಣ್ಣಾರೆ ಕಂಡಿದ್ದೇವೆ. ವೈದ್ಯಾಲಯಗಳು,, ಛತ್ರಗಳು, ವಿದ್ಯಾಮಂದಿರಗಳು, ಮಲ್ಲಶಾಲೆಗಳೂ ಬೆಳೆಯಬೇಕಾಗಿದೆ. ಕೆಲವು ವರ್ಷಗಳಾದರೂ ನಾವು ಯುದ್ಧದ ಯೋಚನೆ ಬಿಟ್ಟು ಜನತೆಯ ಜೀವನ ಸೌಕರ್ಯ ಹೆಚ್ಚಿಸುವುದರ ಕಡೆಗೆ ಲಕ್ಷ್ಯಕೊಡಬೇಕು."

ಗುಂಡನಾಯಕರೆದ್ದು,

"ಬಹುಮನಿಯವರು ಯುದ್ಧಸಿದ್ಧತೆ ಮಾಡಿಕೊಳ್ಳುವುದನ್ನು ತಿಳಿದೂ ನಾವು ಸುಮ್ಮನೆ ಕೂಡಬೇಕೇ ?"

"ನಾವು ಹೇಳಿದ್ದು ಶಾಂತಿನೀತಿಯೇ ವಿನಾ ದುರ್ಬಲ ನೀತಿಯಲ್ಲ ಗುಂಡನಾಯಕರೇ. ಬಹಮನಿಯವರು ಶಾಂತಿಯನ್ನಪೇಕ್ಷಿಸಿದರೆ ಅವರಿಗೆ ಶಾಂತಿಹಸ್ತ ನೀಡೋಣ; ಯುದ್ಧ ಬಯಸಿದರೆ ಕರವಾಳ ಕೈಗೆತ್ತಿಕೊಳ್ಳೋಣ. ಊರಿನಲ್ಲಿ ಯಾವದಾದರೂ ಉಪದ್ರವ ತಲೆದೋರಿದರೆ ಇಡಿಯ ಊರೇ ಸ್ತಬ್ಧವಾಗುವುದಿಲ್ಲ. ಹಾಗೇ ಈ ಯುದ್ಧವೂ ಒಂದು ಅನಿವಾರ್ಯ ಉಪದ್ರವ. ಯುದ್ಧ ಸಂಭವಿಸಲಿ, ಸಂಭವಿಸದಿರಲಿ. ರಾಷ್ಟ್ರದ ಶಾಶ್ವತ ಹಿತಕ್ಕಾಗಿ ಆಗಬೇಕಾದ ಕೆಲಸ ಕಾರ್ಯಗಳು ಅವ್ಯಾಹತವಾಗಿ ಸಾಗಬೇಕೆಂಬುದೇ ನನ್ನ ಅಭಿಮತ. ಮುದ್ದಪ್ಪನಾಯಕರು, ಇರುಗನಾಯಕರು, ಗುಂಡನಾಯಕರಂಥ ವೀರರತ್ನಗಳಿರುವಾಗ ದೇಶದ ರಕ್ಷಣೆಯ ಬಗ್ಗೆ ನಾವು ಯೋಚಿಸಬೇಕಾದದ್ದಿಲ್ಲ. ಯುದ್ಧ ಭೀತಿಯಿಂದ ರಾಷ್ಟ್ರಾಭ್ಯುದಯದ ಕೆಲಸಕಾರ್ಯಗಳು ನಿಲ್ಲಬಾರದು."

ವಿಚಾರಪರವಶರಾಗಿದ್ದ ಪ್ರಭುಗಳು,

"ನಾಯಕರೇ, ಶ್ರೀಶ್ರೀ ಸಾಯಣಾಚಾರ್ಯರು ಬಂದು ಮಹತ್ತ್ವದ ತತ್ತ್ವವನ್ನು ಪ್ರತಿಪಾದಿಸಿದ್ದಾರೆ. ಬಹಮನಿಯವರೊಂದಿಗೆ ಹಾಗೂ ಇತರ ಮುಸ್ಲಿಮ್ ರಾಜ್ಯಗಳೊಂದಿಗೆ ನಾವು ಶಾಶ್ವತ ಮೈತ್ರಿ ಬೆಳಸಲು ಸಾಧ್ಯ ಎಂಬ ನಂಬಿಕೆ ನಮಗಿಲ್ಲ. ಇಡಿಯ ಭಾರತಕ್ಕೆ ಇಸ್ಲಾಮ್ ದೀಕ್ಷೆ ಕೊಡಲು ಬದ್ಧ

ಕಂಕಣರಾಗಿರುವ ಆ ಜನ ನಿರ್ನಿಮಿತ್ತವಾಗಿ ನಮ್ಮನ್ನು ಕೆಣಕುತ್ತಲೇ ಇರುತ್ತಾರೆ. ಶ್ರೀಸಾಯಣಾಚಾರ್ಯರು ಅಪ್ಪಣೆಕೊಡಿಸಿದಂತೆ ಸದಾ ನಾವು ಯುದ್ಧದ ಚಿಂತನೆ ಮಾಡುತ್ತ ರಾಷ್ಟ್ರಾಭ್ಯುದಯವನ್ನು ಕಡೆಗಾಣಿಸುವುದು ತಪ್ಪಾಗುತ್ತದೆ. ರಾಜ್ಯರಕ್ಷಣೆಯ ಜವಾಬುದಾರಿಯನ್ನು ಮುದ್ದಪ್ಪ ದಂಡ ನಾಯಕರಿಗೆ ವಹಿಸಿದ್ದಾಗಿದೆ; ಹಾಗೇ, ನಿರ್ಮಾಣಕಾರ್ಯದ ಜವಾಬುದಾರಿ ಯನ್ನೂ ನಾವು ಒಬ್ಬರಿಗೆ ವಹಿಸಬೇಕಾಗುತ್ತದೆ."

ಇರುಗನಾಯಕರು,

"ಮಹಾಮಂತ್ರಿಗಳ ನಿಯಾಮಕವಿನ್ನೂ ಆಗಿಲ್ಲ. ಮಹಾಮಂತ್ರಿ ಗಳು ಈ ಕೆಲಸ ನಿರ್ವಹಿಸಬಹುದಲ್ಲವೇ ?"

"ಹೌದು ಹೌದು – ನಿಮ್ಮ ಸಲಹೆ ಸೂಕ್ತವಾಗಿದೆ."

ಮುದ್ದಪ್ಪನಾಯಕರೆದ್ದು ನಿಂತು,

"ಮಹಾಮಂತ್ರಿಗಳ ನಿಯಾಮಕ ಮಹಾಪ್ರಭುಗಳೇ ಮಾಡಬೇಕೆಂದು ನನ್ನ ಅರಿಕೆ."

"ಮಹಾಮಂತ್ರಿಗಳನ್ನು ಆಯುವುದು ನಿಮ್ಮ ಕೆಲಸ ಮುದ್ದಪ್ಪ ದಂಡ ನಾಯಕರೇ. ವಯಸ್ಸಿನಲ್ಲಿ ಅನುಭವದಲ್ಲಿ ಹಿರಿಯರಾದ ನೀವು ಯಾರ ಹೆಸರು ಸೂಚಿಸಿದರೂ ನಾವು ಸಂತೋಷವಾಗಿ ಒಪ್ಪಿಕೊಳ್ಳುತ್ತೇವೆ."

ಇಕ್ಕಟ್ಟಿಗೆ ಸಿಕ್ಕಿಬಿದ್ದ ಮುದ್ದಪ್ಪ ದಂಡನಾಯಕರು ನಸನಗುತ್ತಾ,

"ಮಹಾಪ್ರಭು, ತಾವು ತಿಳಿದಿರುವಷ್ಟು ನಾನು ದಕ್ಷನಲ್ಲ. ನಾನೊಬ್ಬ ಸಿಪಾಯಿ. ಯುದ್ಧ ಮಾಡು ಎಂದರೆ ಮಾಡಬಲ್ಲೆ ; ರಾಜಕಾರಣದ ಪೂರ್ವಾ ಪರಗಳನ್ನು ಯೋಚಿಸಿ, ರಾಷ್ಟ್ರಕ್ಕೆ ಯಾವದು ಹಿತವೆನ್ನುವುದನ್ನು ನಿಶ್ಚಯಿಸು ವಷ್ಟು ನಾನು ಸಮರ್ಥನಲ್ಲ. ದಯೆಮಾಡಿ ಈ ಜವಾಬುದಾರಿ ನನ್ನ ಮೇಲೆ ಹೊರಿಸಬೇಡಿ."

ಇರುಗನಾಯಕರೆದ್ದು ನಿಂತು,

"ಮಹಾಪ್ರಭು, ಮಹಾಮಂತ್ರಿಗಳನ್ನು ನೇಮಿಸುವ ಹೊಣೆಯನ್ನು ಪ್ರಜರೇ ನಿರ್ವಹಿಸಲಿ ಎಂದು ತಾವು ಅಪೇಕ್ಷಿಸುತ್ತಿದ್ದೀರಿ. ಹಿರಿಯರಾದ ಮುದ್ದಪ್ಪ ದಂಡನಾಯಕರು ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಹಿಂದೆಗೆಯು ತ್ತಿದ್ದಾರೆ. ಈ ಸಂದಿಗ್ಧ ಹೇಗಾದರೂ ಪರಿಹಾರವಾಗಬೇಕು. ತಾವೂ ಹಿರಿಯರಾದ ಮುದ್ದಪ್ಪ ದಂಡನಾಯಕರೂ ಅಪ್ಪಣೆ ಕೊಡುವುದಾದರೆ, ಮುಖ್ಯ

ಮಂತ್ರಿಗಳ ಹೆಸರನ್ನು ನಾನು ಸೂಚಿಸುತ್ತೇನೆ."

"ಬಹಳ ಸಂತೋಷ – ಸೂಚಿಸಿ"

ಎಂದು ಪ್ರಭುಗಳು ಅಪ್ಪಣೆಯಿತ್ತರು.

ಮುದ್ದಪ್ಪ ದಂಡನಾಯಕರೂ 'ಆಗಬಹುದು' ಎಂದರು.

"ಮುದ್ದಪ್ಪ ದಂಡನಾಯಕರು ಅಪ್ಪಣೆಕೊಡಿಸಿದಂತೆ, ಈ ಸಭೆಯಲ್ಲಿರುವ ನಾವೆಲ್ಲರೂ ರಣಪಂಡಿತರೇ ವಿನಾ ರಾಜ್ಯಪಂಡಿತರಲ್ಲ. ರಾಜ್ಯದಲ್ಲಿ ಶಾಂತಿ ಸ್ಥಾಪಿಸುವುದಕ್ಕೆ ನಾವು ನೆರವಾಗಬಹುದಲ್ಲವೇ ಶಾಂತಿ ಸ್ಥಾಪನಾ ನಂತರ ಆಗಬೇಕಾದ ಕೆಲಸಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಿಲ್ಲ. ರಾಷ್ಟ್ರದ ಹಿತದ ದೃಷ್ಟಿಯಿಂದ ರಚನಾತ್ಮಕ ಕಾರ್ಯಗಳನ್ನು ಉಪೇಕ್ಷಿಸ ಬಾರದು. ನನ್ನ ಅಭಿಪ್ರಾಯದಲ್ಲಿ ಮಹಾಮಂತ್ರಿ ಸ್ಥಾನದಲ್ಲಿ ನಿಂತು ದೇಶ ವನ್ನು ಪ್ರಾಗತಿಕಮಾರ್ಗದಲ್ಲಿ ಮುನ್ನಡೆಸಬಲ್ಲವರು ನಮ್ಮ ರಾಷ್ಟ್ರದ ಪುಣ್ಯ ಮೂರ್ತಿಗಳಾದ ಶ್ರೀಗುರು ವಿದ್ಯಾರಣ್ಯ ಮುನೀಶ್ವರರ ಸೋದರರಾದ ಶ್ರೀ ಸಾಯಣಾಚಾರ್ಯರು. ಅವರು ದೊಡ್ಡ ಮನಸ್ಸು ಮಾಡಿ ರಾಜ್ಯಸೂತ್ರಗಳನ್ನು ವಹಿಸಿಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ"

ಸಭಾಸದರು ಕರತಾಡನಮಾಡಿ ತಮ್ಮ ಒಪ್ಪಿಗೆ ಸೂಚಿಸಿದರು.

ಮಹಾಪ್ರಭುಗಳು ಅತ್ಯಾತುರದಿಂದ ಸಾಯಣರತ್ತ ತಿರುಗಿದರು.

"ಪೂಜ್ಯ ಹಿರಿಯರು ಶ್ರೀಶ್ರೀ ವಿದ್ಯಾರಣ್ಯರು ಒಮ್ಮೆ ವೇದಭಾಷ್ಯಗ್ರಂಥ ಗಳನ್ನು ಬದಿಗಿರಿಸಿ ನನ್ನನ್ನು ರಾಜಕಾರಣಕ್ಕೆ ಎಳೆದರು. ಎರಡನೆಯ ಬಾರಿ ಕಂಪಣ್ಣನಾಯಕರ ತೃಪ್ತ್ಯರ್ಥವಾಗಿ ನಾನು ಮಂತ್ರಿಪದವಿಯನ್ನು ನಿರ್ವಹಿಸ ಬೇಕಾಯಿತು. ಇನು ನನ್ನ ಮೂರನೆಯ ಪರೀಕ್ಷೆ. ಲೌಕಿಕ ಜೀವನವನ್ನರಿ ಯದ ನಾನು ಈ ಮಹಾಸಾಮ್ರಾಜ್ಯದ ಮಹಾಮಂತ್ರಿತ್ವ ನಿರ್ವಹಿಸಲು ಸಮರ್ಥನೇ ? ಮಹಾಪ್ರಭು, ತಾವೂ ನಮ್ಮ ನಾಯಕಮಣಿಗಳೂ ಅಭಿ ಮಾನಕ್ಕೆ ಕಟ್ಟುಬಿದ್ದು ಈ ಗೌರವವನ್ನು ನನಗೆ ಸಲ್ಲಿಸುತ್ತಿದ್ದೀರಿ. ಅಭಿಮಾನ ತೊರೆದು ವಿಚಾರಮಾಡಿ ನೋಡಿ. ವಿಜಯನಗರ ಸಾಮ್ರಾಜ್ಯದ ಅಭ್ಯುದಯ ವೊಂದನ್ನಲ್ಲದೆ ನಾವು ಬೇರೆ ಯಾವ ಯೋಚನೆಯನ್ನೂ ಮಾಡತಕ್ಕದಲ್ಲ – ಯಾರನ್ನೂ ಮೆಚ್ಚಿಸತಕ್ಕದ್ದಲ್ಲ."

ಮಹಾಪ್ರಭುಗಳು ಕೈಜೋಡಿಸಿ,

"ಗುರುದೇವಾ, ಮಂತ್ರಿಮಂಡಳದ ಸಭೆಗೆ ಬರುವ ಮುನ್ನ ನಾವು

ರಾಜಮಾತೆಯರ ಆಶೀರ್ವಾದ ಪಡೆಯಲು ರಾಣೀವಾಸಕ್ಕೆ ಹೋದೆವು. ಇಂದಿನ ಸಭೆಯ ಮುಂದಿರುವ ಕೆಲಸವನ್ನು ಸೂಕ್ಷ್ಮವಾಗಿ ಅಮ್ಮಾಜಿಯವರಿಗೆ ಬಿನ್ನವಿಸಿದೆವು. ಮಹಾ ಮಂತ್ರಿಗಳ ನಿಯಾಮಕದ ವಿಷಯ ಬಂದಾಗ ಅಮ್ಮಾಜಿಯವರೇ 'ಆರ್ಯ ಸಾಯಣಾಚಾರ್ಯರಿಗಿಂತ ಸಮರ್ಥರು ಬೇಕೇ ?' ಎಂದರು. 'ಆರ್ಯರು ಒಪ್ಪಬೇಕಲ್ಲ ಅಮ್ಮಾಜಿ' ಎಂದೆವು. ಅದಕ್ಕವರು 'ವಿಜಯನಗರದ ಅಭ್ಯುದಯಕ್ಕಾಗಿ ಅವರು ಯಾವ ತ್ಯಾಗಮಾಡಲೂ ಸಿದ್ಧರಾಗಿದ್ದಾರೆಂಬುದನ್ನು ನಾನು ನಿಮಗೆ ಹೊಸದಾಗಿ ಹೇಳಬೇಕೇ' ಎಂದರು. ಮಂತ್ರಿಮಂಡಳದಲ್ಲಿಯೂ ಇದೇ ಧ್ವನಿ ಮೂಡಿದೆ. ಸಾಮ್ರಾಜ್ಯದ ಸಕಲ ಪ್ರಜರ ಅಪೇಕ್ಷೆಯನ್ನು ತಾವು ನಿರಾಕರಿಸಬಾರದೆಂದು ವಿನಯದಿಂದ ಪ್ರಾರ್ಥಿಸುತ್ತೇವೆ."

ಸಾಯಣರು ಕ್ಷಣಕಾಲ ಮೌನತಳೆದು ಕುಳಿತರು.

ಪ್ರಭುಗಳು, ಮಂತ್ರಿಮಂಡಳ ಅವರನ್ನೇ ಎವೆಯಿಕ್ಕದೆ ನೋಡುತ್ತ ಕುಳಿತರು.

ಸಾಯಣರು ಕಣ್ತೆರೆದು,

"ಶ್ರೀಭುವನೇಶ್ವರಿಯ ಇಚ್ಛೆಯಿದ್ದಂತಾಗಲಿ" ಎಂದರು.

ಪ್ರಭುಗಳು, ಮಂತ್ರಿಗಳ ಸಂತೋಷಕ್ಕೆ ಪಾರವೇ ಇಲ್ಲವಾಯಿತು.

"ಮಂತ್ರಿ ಪದವಿಯನ್ನೇನೋ ಸ್ವೀಕರಿಸಿದ್ದಾಯಿತು. ಇನ್ನು ನಾನು ಕಾರ್ಯ ಆರಂಭಿಸಬಹುದಲ್ಲವೇ ?"

"ಅವಶ್ಯಕವಾಗಿ."

"ಪ್ರಭೂ, ಕೊಂಕಣ, ಗೋವೆ, ರಂಗಿನಿ ಕಾಳಗಗಳಲ್ಲಿ ಪ್ರತಾಪಮೆರೆಸಿ, ಆ ಮೂರು ಪ್ರಾಂತ್ಯಗಳನ್ನು ಸಾಮ್ರಾಜ್ಯಕ್ಕಾಗಿ ರಕ್ಷಿಸಿದ ವೀರ ಬೈಚಪ್ಪ ದಂಡನಾಯಕರಿಗೆ ಉಚಿತ ಸನ್ಮಾನವಾಗಬೇಕೆಂದು ಸೂಚಿಸುತ್ತೇನೆ."

"ಅವಶ್ಯಕವಾಗಿ ಆಗತಕ್ಕದ್ದು. ಬೈಚಪ್ಪ ದಣ್ಣಾಯಕರು ದಾವಾನಲದಂತೆ ತುರುಷ್ಕರನ್ನು ಮೆಟ್ಟಿ ದೇಶ, ಧರ್ಮವನ್ನು ಕಾಪಾಡಿದ್ದಾರೆ. ಈ ವೀರನನ್ನು ಸನ್ಮಾನಿಸುವುದೆಂದರೆ ಕನ್ನಡಿಗರ ಶೌರ್ಯ ಪ್ರತಾಪಗಳನ್ನು ಗೌರವಿಸಿದಂತೆ !"

"ಆಗಬಹುದು. ಮುದ್ದಪ್ಪನಾಯಕರೇ – ನೀವೂ ಶ್ರೀಸಾಯಣರೂ ಸಮಾಲೋಚನೆ ನಡೆಸಿ, ಸನ್ಮಾನ ಸಮಾರಂಭದ ವ್ಯವಸ್ಥೆ ಮಾಡಿ. ಇಂದಿಗೆ

ಮೂರು ದಿನಕ್ಕೆ ರಾಜಸಭೆ ಕರೆಯಲ್ಪಡಲಿ – ನಾವೇ ಸ್ವಹಸ್ತದಿಂದ ವೀರ ಬೈಚಪ್ಪನಾಯಕರನ್ನು ಸನ್ಮಾನಿಸುತ್ತೇವೆ." ಎಂದರು.

೪

ಮೂರುದಿನಗಳ ತರುವಾಯ ರಾಜಸಭೆ ವ್ಯವಸ್ಥಿತವಾಯಿತು.

ತಳಿರು ತೋರಣಗಳಿಂದಲಂಕೃತವಾಗಿದ್ದ ರಾಜವೀದಿಯಲ್ಲಿ ಬೈಚಪ್ಪ ನಾಯಕರ ಮನೆಯಿಂದ ಅವರನ್ನು ಸಕಲ ರಾಜಮರ್ಯಾದೆಯೊಂದಿಗೆ ಕರೆತರಲಾಯಿತು. ಊರಿಗೆಊರೇ ಮಹಾವೀರನಮೇಲೆ ಪುಷ್ಪಗಳನ್ನೆರಚಿದರು. ಸುವಾಸಿನಿಯರು ಆರತಿ ಬೆಳಗಿದರು.

ರಾಜಮಹಲಿನ ಮುಖದ್ವಾರದಲ್ಲಿ ಕಾದಿದ್ದ ಮುದ್ದಪ್ಪನಾಯಕರು, ಇರುಗನಾಯಕರು, ಗುಂಡನಾಯಕರು, ಚೆನ್ನಪ್ಪನಾಯಕರು, ಬೈಚಪ್ಪ ನಾಯಕರಿಗೆ ಹಸ್ತಲಾಘವವಿತ್ತು ಒಳಗೆ ಕರೆದೊಯ್ದರು.

ಪ್ರಭುಗಳಿಗೂ, ಮುಖ್ಯಮಂತ್ರಿಗಳಿಗೂ ನಮಸ್ಕರಿಸಿದ ಬೈಚಪ್ಪ, ತಮಗಾಗಿ ಏರ್ಪಡಿಸಿದ್ದ ಪೀಠದಲ್ಲಿ ಮಂಡಿಸಿದರು.

ಆಸ್ಥಾನದ ಗಾಯನಾಚಾರ್ಯ ಕಲ್ಲಿನಾಥ ಪಂಡಿತ ಹಾಡಿದಮೇಲೆ ಆಸ್ಥಾನದ ನೃತ್ಯಕಲಾಪ್ರವೀಣೆ ರಂಭಾ ತನ್ನ ಸಂಗಡಿಗರು, ಶಿಷ್ಯೆಯರೊಂದಿಗೆ ಮೇಳನರ್ತನ ಪ್ರದರ್ಶಿಸಿದಳು.

ನರ್ತಕಿಯರು ನಿಷ್ಕ್ರಮಿಸಿದಮೇಲೆ ಮುದ್ದಪ್ಪನಾಯಕರು ಪ್ರಭುಗಳ ರಾಯಸವನ್ನು ಓದಿದರು :

"ಮಹಾರಾಜಾಧಿರಾಜ, ರಾಜಪರಮೇಶ್ವರ, ಹಿಂದೂ ರಾಯ ಸುರತ್ರಾಣ, ವೈದಿಕಮಾರ್ಗ ಪ್ರವರ್ತಕ, ಭಾಷೆಗೆ ತಪ್ಪುವ ರಾಯರ ಗಂಡ, ಅರಿರಾಯವಿಭಾಡ, ವಿಜಯನಗರ ಮಹಾಸಾಮ್ರಾಜ್ಯಾಧಿಪತಿ ಶ್ರೀಶ್ರೀ ಹರಿಹರರಾಯರು ಸಮಸ್ತ ಪ್ರಜರ ತಿಳುವಳಿಕೆಗಾಗಿ ಹೊರಡಿಸಿದ ನಿರೂಪ.

ಕೊಂಕಣ, ಗೋವೆ, ರಂಗಿನಿ ಕಾಳೆಗಗಳಲ್ಲಿ ಅತುಲ ಪರಾಕ್ರಮ ಮೆರಸಿ, ಜೀವದ ಮೇಲಣ ಹಂಗುದೊರೆದು ಕಾದಿ, ಸಾಮ್ರಾಜ್ಯಕ್ಕೆ ಅಭೂತಪೂರ್ವ ಜಯಗಳಿಸಿ ಕೊಟ್ಟಿರುವ ಮಂತ್ರಿ ಶ್ರೀ ವಸಂತಮಾಧವ ರಾಯರ ಪುಣ್ಯಪುತ್ರರು ಶ್ರೀ ಬೈಚಪ್ಪನಾಯಕರ ಸಾಹಸ, ಪರಾಕ್ರಮ ರಾಜಭಕ್ತಿಯನ್ನು ನಾವು ಹೃತ್ಪೂರ್ವಕವಾಗಿ ಮೆಚ್ಚಿಕೊಂಡು, ಅವರಿಗೆ **'ಸಪ್ತ ಕೊಂಕಣ ಧೂಳೀ ಪಟ್ಟ' — 'ಗೋವಾ ಮಹಾಧೀಶ್ವರ' — 'ತುರುಕದಳ ವಿಭಾಡ' — 'ರಂಗಿನೀ ಪ್ರತಾಪ'** ಎಂಬ ಬಿರುದು ಗಳನ್ನು ದಯಪಾಲಿಸಿರುವುದಲ್ಲದೆ, ಗೋವೆ, ಬನವಾಸಿ ಪ್ರಾಂತ್ಯಗಳಿಗೆ ಅವರನ್ನೇ ರಾಜಪ್ರತಿನಿಧಿಗಳನ್ನಾಗಿ ನಿಯಾಮಕ ಮಾಡಿದ್ದೇವೆ. ಶ್ರೀ ಬೈಚಪ್ಪನಾಯಕರು ದೀರ್ಘಕಾಲ ತಮ್ಮ ಸೇವೆಯನ್ನು ಮುಂದುವರಿಸು ವಂತೆ ಶ್ರೀ ವಿರೂಪಾಕ್ಷನೂ ಶ್ರೀ ಭುವನೇಶ್ವರಿದೇವಿಯೂ ಅವರಿಗೆ ಆಯುರಾರೋಗ್ಯಭಾಗ್ಯಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ."

ಸಭೆ ಹರ್ಷೋದ್ಗಾರ ಸೂಚಿಸುತ್ತಿದ್ದಂತೆ ಅರಮನೆಯ ಅಧಿಕಾರಿಗಳು ಹೂವು, ಹಣ್ಣು, ಚೀನಾಂಬರ, ಕಂಠೀಹಾರ ತಂದೊಪ್ಪಿಸಿದರು.

ಕೊನೆಯಲ್ಲಿ ಮುದ್ದಪ್ಪನಾಯಕರು, ರತ್ನಖಚಿತವಾದ ಒಂದು ಕತ್ತಿ ಯನ್ನು ಪ್ರಭುಗಳಿಗೆ ಕೈಗೆಕೊಡಲು, ಅವರೆದ್ದು ನಿಂತು ಬೈಚಪ್ಪನಾಯಕರಿ ಗಿತ್ತರು.

ಬೈಚಪ್ಪನಾಯಕರು, ಕತ್ತಿಯನ್ನು ಒರೆಯಿಂದ ಹಿರಿದು ಪ್ರಭುಗಳ ಪಾದಗಳಮೇಲಿಟ್ಟು ನಮಸ್ಕರಿಸಿ, ಎದ್ದುನಿಂತು,

"ಮಹಾಪ್ರಭೂ, ಈ ಸಾಮ್ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ನಿರ್ವಹಿಸಿರುವ ಕರ್ತವ್ಯವನ್ನೇ ನಾನು ನಿರ್ವಹಿಸಿರುವುದು. ಪರಮೋದಾರಿ ಗಳಾದ ತಾವು ನನ್ನನ್ನು ಬಹುವಾಗಿ ಆದರಿಸಿ ಗೌರವಿಸಿದ್ದೀರಿ. ಗೋವೆ, ಕೊಂಕಣ, ರಂಗಿನಿಕಾಳೆಗಗಳಲ್ಲಿ ನನಗೆ ಭುಜಕ್ಕೆ ಭುಜಕೊಟ್ಟು ನಿಂತು, ತಮ್ಮ ರಕ್ತತರ್ಪಣದಿಂದ ವಿಜಯಗಳಿಸಿಕೊಟ್ಟ ಎಲ್ಲ ವೀರರ ಪ್ರತಿನಿಧಿಯಾಗಿ ನಾನು ಈ ಗೌರವ ಸ್ವೀಕರಿಸುತ್ತಿದ್ದೇನೆ. ನಮ್ಮ ಮಹಾಸಾಮ್ರಾಜ್ಯದ ಸೇವೆ ಮಾಡುವುದು - ಅದಕ್ಕಾಗಿ ಪ್ರಾಣ ಒಪ್ಪಿಸುವುದೂ ಪುಣ್ಯಪ್ರದ ವಾದುದು. ಸಾಮ್ರಾಜ್ಯಸೇವೆಯನ್ನು ನಿರ್ವಂಚನೆಯಿಂದ ಮುಂದುವರಿಸು

ತ್ತೇನೆ ಎಂದು ತಮ್ಮ ಸಮ್ಮುಖದಲ್ಲಿ ಪ್ರಮಾಣಮಾಡುತ್ತೇನೆ." ಎಂದರು.

ನಾಯಕರ ವೀರೋಚಿತ ನುಡಿಗಳಿಗೆ ಪ್ರಭುಗಳು ತಲೆದೂಗಿದರು. ಸಭಾಸದರು ದೀರ್ಘಕಾಲ ಕರತಾಡನಮಾಡಿ ತಮ್ಮ ಹರ್ಷವ್ಯಕ್ತಮಾಡಿದರು.

ಪುಷ್ಪ, ಫಲ, ತಾಂಬೂಲ ವಿನಿಯೋಗವಾದಮೇಲೆ ರಾಜಸಭೆ ಮುಕ್ತಾಯವಾಯಿತು.

ರಾಜಸಭೆಯಿಂದ ಹೊರಹೊರಟ ಗುಂಡನಾಯಕರನ್ನು ಇರುಗ ನಾಯಕರು ಕೂಡಿಕೊಂಡರು.

ಬೇಸಿಗೆಯ ಆ ಇರುಳು ಚೇತೋಹಾರಿಯಾಗಿತ್ತು.

ಹಗಲಿನ ತಾಪವನ್ನು ತುಂಗಭದ್ರಾನದಿಯ ಮೇಲೆ ಹಾದು ಬರುತ್ತಿದ್ದ ಸುಯ್ಯೆಲರು ಉಪಶಮನಗೊಳಿಸುತ್ತಿತ್ತು.

ಶುಕ್ಲಪಕ್ಷದ ಚಂದ್ರ ಅದೇ ಹಣಿಕಿಹಾಕಲಾರಂಭಿಸಿದ್ದ

"ಮನೆಗೆ ಬೇಗ ಹೋಗಬೇಕೇ ಗುಂಡನಾಯಕರೇ ?"

"ಏಕೆ ?"

"ವಾತಾವರಣ ಹಿತವಾಗಿದೆ. ನದಿಯ ದಂಡೆಯಲ್ಲಿ ಸ್ವಲ್ಪಕಾಲ ವಿಶ್ರಮಿಸಿಕೊಂಡು ಮನೆಗೆ ಹೋಗೋಣವೇ ?"

"ಆಗಬಹುದು."

ಇಬ್ಬರೂ ತುಂಗಭದ್ರಾ ತೀರಕ್ಕೆ ಬಂದು, ಶೀತಲಜಲದಲ್ಲಿ ಕಾಲುಗಳನ್ನು ಇಳಿಬಿಟ್ಟು ಕುಳಿತರು.

"ಇವತ್ತಿನ ಸನ್ಮಾನ ಸಮಾರಂಭ ಚೆನ್ನಾಯ್ತು."

ಎಂದರು ಗುಂಡನಾಯಕರು.

"ಹಿಂದೂಸ್ಥಾನದ ಎಲ್ಲ ಅರಸರೂ ಕೊಡುಗೈತನವನ್ನು ನಮ್ಮ ಪ್ರಭುಗಳಿಂದ ಕಲಿಯಬೇಕು ಗುಂಡನಾಯಕರೇ."

"ನಿಸ್ಸಂದೇಹವಾಗಿ. ಶ್ರೀಗುರು ವಿದ್ಯಾರಣ್ಯರು, ದೊಡ್ಡ ದೊರೆಗಳು ಶ್ರೀಹರಿಹರರಾಯರಿಗೆ ಬಂದು ಆದೇಶವಿತ್ತಿದ್ದರಂತೆ !"

"ಏನೆಂದು ?"

"ಎಂದಿನವರೆಗೆ ವಿಜಯನಗರದ ಔದಾರ್ಯದಲ್ಲಿ ಲೋಪವಿಲ್ಲವೋ ಅಂದಿನವರೆಗೆ ವಿಜಯನಗರದ ಬಳಿಗೆ ದಾರಿದ್ರ್ಯ ಸುಳಿಯುವುದಿಲ್ಲವೆಂದು !"

"ಅದೇ ವಿಚಾರ ನನ್ನ ತಲೆಯಲ್ಲಿಯೂ ಸುಳಿದಾಡುತ್ತಿದೆ ಗುಂಡ

ನಾಯಕರೇ. ಒಂದು ಮಹತ್ತ್ವದ ವಿಷಯದಲ್ಲಿ ನಿಮ್ಮ ಸಲಹೆ ಕೇಳಲು ಇತ್ತ ಕರೆದುಕೊಂಡು ಬಂದೆ."

"ಅಪ್ಪಣೆಯಾಗಲಿ."

"ಕಮಲಾಪುರದಲ್ಲಿ ಒಂದು ಪುರಾತನ ಬಸ್ತಿಯಿದೆ. ಜನರ ಉಪೇಕ್ಷೆಯಿಂದ ಅದು ಶಿಥಿಲವಾಗಿ ಈಗ ಹಾಳುಗುಡಿಯಾಗಿದೆ. ಬಸದಿಯ ಜೀರ್ಣೋದ್ಧಾರ ಮಾಡಿಸಿ, ತೀರ್ಥಂಕರರ ಪೂಜೆ ಸಾರೋದ್ಧಾರವಾಗಿ ನಡೆಯುವಂತೆ ವ್ಯವಸ್ಥೆಮಾಡಲು ನನಗೆ ಪ್ರೇರೇಪಣೆಯಾಗಿದೆ."

"ಸಂಕಲ್ಪ ಪವಿತ್ರವಾದುದು. ಅದನ್ನು ಕಾರ್ಯೋನ್ಮುಖ ಮಾಡಲೇಕೆ ವಿಳಂಬಮಾಡುತ್ತಿರುವಿರಿ ?"

"ಪ್ರಭುಗಳಿಗೆ ಒಂದು ಮಾತು ತಿಳಿಸುವುದು ಯೋಗ್ಯವಲ್ಲವೇ ?"

"ಏಕೆ ?"

"ಅವರು ಶೈವಧರ್ಮಪರಾಯಣರು. ನಾವು ಜೈನಧರ್ಮ ಬೆಳಸಲೆತ್ನಿಸುತ್ತಿದ್ದೇವೆಂದು ಅವರ ಮನಸ್ಸಿಗೆ ಬೇಸರವಾಗಬಾರದು."

ಗುಂಡನಾಯಕರು ನಸುನಕ್ಕು,

"ಮಹಾಪ್ರಭುಗಳ ತೀರ್ಥರೂಪರವರಾದ ಶ್ರೀಶ್ರೀ ಬುಕ್ಕರಾಯರ ಶಾಸನ ಮರೆತಿರಾ ಇರುಗನಾಯಕರೇ. ಜೈನ, ಶೈವ, ವೈಷ್ಣವ, ಶಾಕ್ತ ಧರ್ಮಗಳೆಲ್ಲವೂ ವರ್ಧಿಸಿ ಆಯಾ ಮತಸ್ಥರಿಗೆ ಶಾಂತಿ, ಕಾಂತಿಯನ್ನು ನೀಡಲೆಂಬುದೇ ಮಹಾಪ್ರಭುಗಳ ಆಶಯ. ಸಮದರ್ಶನವೇ ವಿಜಯನಗರದ ಬೆನ್ನೆಲುಬೆಂದರೂ ತಪ್ಪಾಗುವುದಿಲ್ಲ. ಪ್ರಭುಗಳಿಗೆ ಒಂದು ಮಾತು ತಾವು ಹೇಳುವುದರಲ್ಲಿ ತಪ್ಪಿಲ್ಲ. ನಿಮ್ಮ ಉದಾತ್ತ ವಿಚಾರ ಕೇಳಿ ಪ್ರಭುಗಳು ಸಂತೋಷಪಡುತ್ತಾರೆ. ಆದರೆ ಅವರ ಅನುಮತಿ ಪಡೆಯಬೇಕೇನೋ ಎಂಬ ಶಂಕೆಯನ್ನಿಟ್ಟುಕೊಳ್ಳಬೇಡಿ."

"ಈಗ ನನ್ನ ಮನಸ್ಸಿಗೆ ನೆಮ್ಮದಿಯಾಯಿತು ಗುಂಡನಾಯಕರೇ. ಜೀರ್ಣೋದ್ಧಾರದ ವಿಷಯ ಪ್ರಭುಗಳಿಗೆ ನಿವೇದಿಸಿ ಕೆಲಸ ಆರಂಭಿಸಿಬಿಡುತ್ತೇನೆ."

ಎಂದು ಇರುಗನಾಯಕರು ಹೇಳಿದರು.

೨೫

ಉಷಃಕಾಲಕ್ಕೆ ಮುನ್ನವೇ ಏಳುತ್ತಿದ್ದ ಶ್ರೀಸಾಯಣರು ಸ್ನಾನ ಆಹ್ನೀಕ ಗಳನ್ನು ತೀರಿಸಿಕೊಂಡು, ನಗರ ಪರ್ಯಟನ ಮಾಡಿಕೊಂಡು, ಕಾಲು ನಡಗೆ ಯಲ್ಲೇ 'ಮಂತ್ರಿಮಹಲು' ಸೇರುತ್ತಿದ್ದರು. ನಿತ್ಯ ವ್ಯವಹಾರ ಮುಗಿಸಿ ಕೊಂಡು ಮಧ್ಯಾಹ್ನಾನಂತರ 'ಪರ್ಣಕುಟಿ' ಸೇರುತ್ತಿದ್ದ ಸಾಯಣರು ಸ್ನಾನ, ಮಾಧ್ಯಾಹ್ನೀಕ ಮುಗಿಸಿಕೊಂಡು, ಅಲ್ಪಾಹಾರ ಸೇವಿಸಿ ಮತ್ತೆ, 'ಮಂತ್ರಿ ಮಹಲು' ಸೇರುತ್ತಿದ್ದರು. ಆ ತರುವಾಯ ಪ್ರೇಕ್ಷಕರಿಗೆ ಸಂದರ್ಶನವಿತ್ತು, ಅವರ ಕಷ್ಟಸುಖಗಳನ್ನು ವಿಚಾರಿಸಿಕೊಳ್ಳುವರು. ಸುಮಾರು ಏಳು ಗಂಟೆಗೆ ಪ್ರಭುಗಳನ್ನು ಕಂಡು ಅವರಿಗೆ ಅಂದಿನ ಕಾರ್ಯಕಲಾಪಗಳ ವರದಿ ಒಪ್ಪಿಸಿ 'ಪರ್ಣಕುಟಿಗೆ'ಗೆ ಮರಳುತ್ತಿದ್ದರು.

ಸಾಯಣರ ಪೂರ್ವಾಶ್ರಮದ ಸೋದರಿ ಸಿಂಗಲೆಯ ಏಕಮಾತ್ರ ಪುತ್ರ ಲಕ್ಷ್ಮೀಧರ ಅವರಿಗೆ ಸಹಾಯಕನಾಗಿದ್ದ.

ಮಹಾಮಂತ್ರಿ ಪದವಿಗನುಗುಣವಾದ ಅಂಗರಕ್ಷಕರು, ಊಳಿಗದವರು, ಗೌರವದಳ ಇಟ್ಟುಕೊಳ್ಳಲು ಸಾಯಣರು ನಿರಾಕರಿಸಿದ್ದರು.

ಪ್ರಭುಗಳೇ ಅವರೊಂದಿಗೆ ವಾದಮಾಡಿದ್ದರೂ ಸಾಯಣರು ಸಮ್ಮತಿ ಸೂಚಿಸಲಿಲ್ಲ.

"ನೀವು ಸಾಮ್ರಾಜ್ಯದ ಮಹಾಮಂತ್ರಿಗಳು. ಸಾಮ್ರಾಜ್ಯದ ಮಹಾ ಮಂತ್ರಿಗಳು ತೀರ ಸಾಧಾರಣ ವ್ಯಕ್ತಿಗಳಂತೆ ಇರಬಾರದು."

"ಸನ್ಯಾಸಿ ಮಹಾಮಂತ್ರಿಯಾಗಿದ್ದಾನೆಂಬುದು ಮಹಾಪ್ರಭುಗಳು ಗಮನಿಸಬೇಕು."

"ಲೋಕಾಚಾರಕ್ಕಾಗಿಯಾದರೂ ತಾವು ಅಂಗರಕ್ಷಕರನ್ನೂ, ಗೌರವ ದಳವನ್ನು ಸ್ವೀಕರಿಸಬೇಕು."

"ಲೋಕ ಮೆಚ್ಚಿಸಲು ನಡೆಯುವುದಕ್ಕಿಂತ ಆತ್ಮಮೆಚ್ಚಿಸಲು ನಡೆಯು ವುದು ಲೇಸಲ್ಲವೇ? ನಾವು ಉಪದೇಶಿಸುವ ಸಮಾನಧರ್ಮವನ್ನು ಆಚರಣೆ ಯಲ್ಲಿ ತರುವುದು ಒಳ್ಳೆಯದು. ಅಧಿಕಾರ ಕ್ಷೇತ್ರ ಸೇವಾಕ್ಷೇತ್ರವೇ ವಿನಾ

ಸ್ವಪ್ರೌಢಿಮೆಯ ಪ್ರಕಾಶನ ಕ್ಷೇತ್ರವಾಗಬಾರದು."

ಸಾಯಣರ ನಿಲುವನ್ನೇ ಮಹಾಪ್ರಭುಗಳು ಅಂಗೀಕರಿಸಿದರು.

ಪ್ರಭುಗಳ ತೃಪ್ತ್ಯರ್ಥವಾಗಿ ಸಾಯಣರು ದೇಜಣ್ಣನ ಕಾಪಿನಭಟತ್ತ್ವವನ್ನು ಒಪ್ಪಿಕೊಳ್ಳಬೇಕಾಯಿತು.

ಆಳಿದ ಮಹಾಪ್ರಭುಗಳಾದ ಶ್ರೀಬುಕ್ಕರಾಯರ ನೆಚ್ಚಿನ ಭಟನಾಗಿದ್ದ ದೇಜಣ್ಣ ಶ್ರೀಗುರು ವಿದ್ಯಾರಣ್ಯರು, ಶ್ರೀನಾಯಕರೆಂದರೆ ವಿಜಯನಗರದ ಸೂರ್ಯಚಂದ್ರರೆಂದು ಭಾವಿಸಿದ್ದ. ಅವನು ಊಳಿಗದ ಸಲುವಾಗಿ ಊಳಿಗ ಮಾಡದೆ, ಸಾಯಣರ ಸೇವೆಯಿಂದ ತನ್ನ ಜನ್ಮ ಸಾರ್ಥಕವಾಗುವುದೆಂದು ಭಾವಿಸಿದ್ದ.

ರಾಜಕೀಯ ವ್ಯವಹಾರದಲ್ಲಿ ಒಮ್ಮೊಮ್ಮೆ ಸಮಸ್ಯೆಗಳು ತಲೆದೋರಿದರೆ ಸಾಯಣರು, ನಿಸ್ಸಂಕೋಚದಿಂದ ದೇಜಣ್ಣನ ಸಲಹೆ ಕೇಳುತ್ತಿದ್ದರು.

" ಏನೂ ಅರಿಯದ ಮುಕ್ಕ ನಾನು – ಏನು ಹೇಳಲಿ ಬುದ್ಧಿ "

ಎಂದು ದೇಜಣ್ಣ ನುಡಿದರೆ ಸಾಯಣರು,

" ನಿನ್ನ ಮನಸ್ಸು ಮಗುವಿನಂತೆ ಸರಳ – ಯಾವ ಪೂರ್ವಗ್ರಹ ಬಾಧೆಯೂ ಇಲ್ಲದೆ ನೀನು ವಿಚಾರ ಮಾಡಬಲ್ಲೆ. ಸರಳವಾಗಿ ನೀನು ಕೊಡುವ ಉತ್ತರದಿಂದ ನನಗೆ ಬಹಳ ಪ್ರಯೋಜನವಾಗುತ್ತದೆ."

ಎಂದು ನುಡಿಯುತ್ತಿದ್ದರು.

ಒಂದು ಸಂಜೆ ಪ್ರೇಕ್ಷಕರಿಗೆ ದರ್ಶನವೀಯುತ್ತ ಸಾಯಣರು 'ಮಂತ್ರಿ ಮಹಲಿ'ನಲ್ಲಿ ಕುಳಿತಿದ್ದರು. ತಂಡೋಪತಂಡವಾಗಿ ಬಂದಿದ್ದ ಪ್ರೇಕ್ಷಕರು ತೆರಳಿದ ಮೇಲೆ ಒಳಕ್ಕೆ ಬಂದ ದೇಜಣ್ಣ

" ಬ್ರಾಹ್ಮಣರೊಬ್ಬರು ಬಹಳ ಹೊತ್ತಿನಿಂದ ತಮ್ಮ ದರ್ಶನಕ್ಕೆ ಕಾಯುತ್ತಿದ್ದಾರೆ ಬುದ್ಧಿ " ಎಂದ.

" ಅವರನ್ನೇಕೆ ಕಾಯಿಸಿದೆ ದೇಜಣ್ಣ – ಒಳಕ್ಕೆ ಬಿಡಬೇಕಾಗಿತ್ತು."

" ಹೋಗಿ ಎಂದೆ. ಅವರೇ ಒಪ್ಪಲಿಲ್ಲ. 'ಗಲಭೆ ಕಡಿಮೆಯಾಗಲಿ ಎಲ್ಲರೂ ಹೋದ ಮೇಲೆ ನಾನು ಮಹಾಮಂತ್ರಿಗಳ ದರ್ಶನ ಪಡೆಯುತ್ತೇನೆ-' ಎಂದು ಕುಳಿತಿದ್ದರು."

" ಅವರನ್ನು ಕಳುಹಿಸು."

ದೇಜಣ್ಣನ ಜತೆ ಬಂದ ಬ್ರಾಹ್ಮಣನನ್ನು ಆಪಾದಮಸ್ತಕ ನೋಡಿದ ಸಾಯಣರು,

"ಬನ್ನಿ. ಕುಳಿತುಕೊಳ್ಳಿ. ತಮ್ಮದು ಯಾವ ಊರು? – ತಮ್ಮ ಹೆಸರೇನು – ನನ್ನಿಂದ ಏನಾಗಬೇಕು?"

"ನನ್ನ ಹೆಸರು ಸಿಂಗಮಭಟ್ಟ. ಹೊಯ್ಸಳ ನಾಡಿನವನು. ವೃತ್ತಿಯಲ್ಲಿ ನಾನು ಜಲಯಂತ್ರ ವಿಶಾರದ.* ವಿಜಯನಗರ ಸಾಮ್ರಾಜ್ಯದ ಕೀರ್ತಿ ನನ್ನನ್ನಿಲ್ಲಿ ಆಕರ್ಷಿಸಿತು. ಮಹಾಪ್ರಭುಗಳಾದ ಶ್ರೀಹರಿಹರರಾಯರೂ, ತಾವೂ ಕೈಗೊಂಡಿರುವ ಮಹತ್ಕಾರ್ಯದಲ್ಲಿ ನನ್ನ ಅಳಿಲು ಸೇವೆ ಸಲ್ಲಿಸಬೇಕೆಂದು ಬಂದಿದ್ದೇನೆ."

ಪ್ರಸನ್ನವದನರಾದ ಸಾಯಣರು,

"ಸಿಂಗಮಭಟ್ಟರೆ, ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯ ಹೇಳಿದ್ದೂ ಹಾಲೂ ಅನ್ನವೆಂದ ಹಾಗಾಯಿತು. ನೀವು ಸಕಾಲಕ್ಕೆ ಬಂದಿರುವಿರಿ – ನಮಗೆ ಈಗ ಜಲಯಂತ್ರ ವಿಶಾರದರ ಅಗತ್ಯವಿದೆ – ರಾಜಧಾನಿಯ ದಿಗ್ದರ್ಶನ ಮಾಡಿರುವಿರಾ?"

ಸಿಂಗಮಭಟ್ಟ ಹೊದೆದಿದ್ದ ಶಾಲನ್ನು ಸರಿಸಿ, ಕಂಕುಳ ಕೆಳಗಿದ್ದ ಕಾಗದದ ಸುರುಳಿಯನ್ನು ಬಿಚ್ಚಿ ಸಾಯಣರ ಮುಂದೆ ಪಸರಿಸಿ,

"ಇದು ರಾಜಧಾನಿಯ ನಕ್ಷೆ. ಬಣ್ಣದಲ್ಲಿ ಕಾಣಿಸಿರುವುದು ತುಂಗಭದ್ರಾ ನದಿಯ ಸಂಚಾರ ಕ್ರಮ. ಊರಿನೊಳಗೆ ನೀರು ಹಾಯಿಸಿಕೊಳ್ಳಬಹುದಾದ ರೀತಿಯನ್ನು ನೀಲಿ ವರ್ಣದಲ್ಲಿ ಕಾಣಿಸಿದ್ದೇನೆ. ನಿತ್ಯೋಪಯೋಗಕ್ಕೆ ಅವಶ್ಯಕವಾದಷ್ಟು ನೀರನ್ನು ಶೇಖರಿಸಿಟ್ಟುಕೊಳ್ಳಬೇಕು."

"ಪೆನುಗೊಂಡೆಯಲ್ಲಿ ನೀರಿನ ಭಯಂಕರ ಕ್ಷಾಮ ತಲೆದೋರಿದೆ. ನಾವು ಕೂಡಲೆ ಪರಿಹಾರ ಕಾರ್ಯ ಕೈಗೊಳ್ಳದಿದ್ದರೆ ಸಾವಿರಾರು ಜನ ಮರಣಕ್ಕೀಡಾಗಬಹುದು."

"ನಾನು ಪೆನುಗೊಂಡೆಯ ಮಾರ್ಗವಾಗಿಯೇ ಇಲ್ಲಿಗೆ ಬಂದಿದ್ದೇನೆ ಅಮಾತ್ಯಶ್ರೇಷ್ಠರೇ. ಹೊನ್ನೇ ಹೊಳೆಯಿಂದ ಸುಲಭವಾಗಿ ನೀರು ಹಾಯಿಸಬಹುದು."

---

* Hydraulic Engineer

"ಕೆಲಸ ಕೂಡಲೆ ಕೈಗೊಳ್ಳುವಿರಾ ?"

"ಅಗತ್ಯವಾಗಿ."

"ಪೆನುಗೊಂಡೆಗೆ ಎಷ್ಟು ದಿನಗಳಲ್ಲಿ ನೀರು ಕೊಡಲು ಸಾಧ್ಯ ?"

"ನಾನು ಕೇಳಿದಷ್ಟು ಜನಬಲವನ್ನು ತಾವು ಒದಗಿಸಿದರೆ ಹದಿನೈದು ದಿನಗಳಲ್ಲಿ ನೀರಿನ ಸೌಕರ್ಯ ಕಲ್ಪಿಸಿಕೊಡಬಲ್ಲೆ."

"ಹದಿನೈದೇ ದಿನಗಳಲ್ಲಿ !"

"ಹೌದು – ಅಮಾತ್ಯರಿಗೆ ಆಶ್ಚರ್ಯವಾಗಿದೆಯೇ ?"

"ಆಗದೆ ಉಂಟೇ ?"

"ಅಭಿವ್ಯಕ್ತಿಗೆ ಅವಕಾಶವಿಲ್ಲದೆ ನನ್ನ ವಿದ್ಯೆಗೆ ತುಕ್ಕು ಹಿಡಿಯುತ್ತಿದೆ ಸಾಯಣ ಮಂತ್ರಿಗಳೇ. ಶ್ರಮಸಹಿಷ್ಣುಗಳೂ ನಂಬಿಗಸ್ಥರೂ ಆದ ಜನರನ್ನು ಕೊಡಿ – ಸಿಂಗಮಭಟ್ಟ ಏನು ಸಾಧಿಸಬಲ್ಲ ಎಂಬುದು ತಮಗೇ ಮನವರಿಕೆಯಾಗುತ್ತದೆ."

"ಇರುಗನಾಯಕರು, ಗುಂಡನಾಯಕರು ಇವರ ಆಜ್ಞೆಗೆ ಒಳಪಟ್ಟಿರುವ ಎರಡು ತುಕಡಿ ಸೈನ್ಯವನ್ನು ನಿಮ್ಮ ಸ್ವಾಧೀನಕ್ಕೆ ಕೊಡುತ್ತೇವೆ. ಈ ಕಾರ್ಯ ಸಾಧನೆಗೆ ಎಷ್ಟು ಹಣ ವ್ಯಯವಾದರೂ ಯೋಚಿಸಬೇಡಿ. ಯಾವ ಸಲಕರಣೆ ಬೇಕಾದರೂ ನೀವು ರಾಜಧಾನಿಯಿಂದ ತೆಗೆದುಕೊಂಡು ಹೋಗಬಹುದು. ಒಪ್ಪಿಗೆಯಷ್ಟೆ !"

"ಆಗಬಹುದು."

ಸಾಯಣರು ದೇಜಣ್ಣನನ್ನು ಕರೆದು

"ಕೂಡಲೆ ಮುದ್ದಪ್ಪ ದಣ್ಣಾಯಕರನ್ನು ಬರಮಾಡು." ಎಂದು ಸಿಂಗಮಭಟ್ಟನ ನಕ್ಷೆಯನ್ನು ಬಿಚ್ಚಿ ಎವೆಯಿಕ್ಕದೆ ನೋಡುತ್ತಾ,

"ರಾಜಧಾನಿಯ ಒಳಗೆ ಅಪಾರ ಜಲ ಸಂಗ್ರಹವಾಗಬೇಕು ಭಟ್ಟರೇ. ಸಾಮ್ರಾಜ್ಯಕ್ಕೆ ಇನ್ನೂ ಶತ್ರುಬಾಧೆ ತಪ್ಪಿಲ್ಲ. ನಾಳೆ ಶತ್ರುಗಳು ರಾಜಧಾನಿಯನ್ನು ಮುತ್ತಿದರೆ ನಾವು ತಿಂಗಳುಗಟ್ಟಳೆ ಹೊರಗಿನ ನೆರವು ಅಪೇಕ್ಷಿಸದೆ ತಡೆದುಕೊಳ್ಳಲು ಸಾಧ್ಯವಾಗಬೇಕು. ಪೆನುಗೊಂಡೆಯ ಕೆಲಸ ಮುಗಿದ ಕೂಡಲೆ ಈ ಕೆಲಸ ಆರಂಭಿಸಿ. ನೀವು ಅಪೇಕ್ಷಿಸುವಷ್ಟು ಸಂಭಾವನೆ ಕೊಡಲು ಸಿದ್ಧನಾಗಿರುವೆನು.

ಕ್ಷಣಕಾಲ ಮೌನತಳೆದ ಸಿಂಗಮಭಟ್ಟ,

"ಆರ್ಯ ಸಾಯಣರೇ, ಧನಸಂಪಾದನೆಯೇ ನನ್ನ ಜೀವಿತದ ಗುರಿಯಾಗಿದ್ದರೆ, ನಾಲ್ಕುವರ್ಷಗಳ ಕೆಳಗೇ ನಾನು ದಿಲ್ಲಿಯ ಸುಲ್ತಾನರ ಸೇವೆಗೆ ಹೋಗಬಹುದಾಗಿತ್ತು. ನನ್ನ ಭಾವಮೈದುನ ರಾಮಭಟ್ಟ, ದಿಲ್ಲಿಯ ಸುಲ್ತಾನರ ಆಶ್ರಯದಲ್ಲಿದ್ದಾನೆ. ನನ್ನ ಶೇಷಾಯುಷ್ಯವನ್ನು ಮ್ಲೇಚ್ಛರ ಪಾದಸೇವೆಯಲ್ಲಿ ಕಳೆಯಲು ಅಂತಃಕರಣ ಒಪ್ಪಲಿಲ್ಲ. ನಾನು ಏಕಾಂಗಿ – ನನಗೆ ಹೆಂಡತಿಯಿಲ್ಲ, ಮಕ್ಕಳಿಲ್ಲ. ವಾಸಕ್ಕೊಂದು ಮನೆ, ಉಣ್ಣಲಷ್ಟು ಅನ್ನ ಕೊಡಿ ಸಾಕು. ಸಾಮ್ರಾಜ್ಯ ಸೇವೆ ಮಾಡಿ ಧನ್ಯನಾಗುತ್ತೇನೆ."

ಒಳಗೆ ಪ್ರವೇಶಿಸಿದ ಮುದ್ದಪ್ಪನಾಯಕರನ್ನು ಸಾಯಣರು ಗೌರವದಿಂದ ಸ್ವಾಗತಿಸಿ, ಸಿಂಗಮಭಟ್ಟನ ಪರಿಚಯ ಮಾಡಿಕೊಟ್ಟು,

"ಒಂದೆರಡು ದಿನಗಳೊಳಗಾಗಿ ಗುಂಡನಾಯಕರ ಮತ್ತು ಇರುಗನಾಯಕರ ಸೈನ್ಯದ ತುಕಡಿಗಳು ಭಟ್ಟರ ಜತೆ ಪ್ರಯಾಣಮಾಡಲು ಸಿದ್ಧವಾಗಲಿ"

"ಅಪ್ಪಣೆ."

"ಸೈನ್ಯದ ಊಟೋಪಚಾರಗಳಿಗೆ ತಕ್ಕ ವ್ಯವಸ್ಥೆಯಾಗಲಿ–ಅರಮನೆಯ ಕಲಾವಿದರು ಸೈನ್ಯದ ಜತೆ ಹೋಗಲಿ. ದುಡಿದು ದಣಿಯುವ ಸೈನಿಕರನ್ನು ನಮ್ಮ ಗಾಯಕರು, ನರ್ತಕರು ಉಲ್ಲಾಸಗೊಳಿಸಲಿ – ಪೆನುಗೊಂಡೆಯ ಕೆಲಸ ಮುಗಿದ ಮೇಲೆ ಸೈನಿಕರಿಗೆಲ್ಲಾ ವಿಶೇಷ ಸಂಭಾವನೆ ಕೊಡಲು ವ್ಯವಸ್ಥೆಮಾಡಿ."

"ಚಿತ್ತ."

"ಸೈನ್ಯದ ಜತೆ ಯಾರು ಹೋಗುತ್ತಾರೆ."

"ವಿಚಾರಿಸುತ್ತೇನೆ. ಗುಂಡನಾಯಕರೋ, ಇರುಗನಾಯಕರೋ ಹೋಗುವುದಾದರೆ ಒಳ್ಳೆಯದು."

"ಎಲ್ಲರೂ ಸಿಂಗಮಭಟ್ಟರ ಅಧೀನದಲ್ಲಿದ್ದುಕೊಂಡು, ಅವರು ಹೇಳಿದುದನ್ನು ಮಾಡಬೇಕು. ಸ್ವಲ್ಪ ಒಡಕು ಶಬ್ದ ನನ್ನ ಕಿವಿಯಮೇಲೆ ಬಿದ್ದರೂ ನಾನು ಉಗ್ರದಂಡನೆ ವಿಧಿಸುತ್ತೇನೆ."

"ಇರುಗನಾಯಕರು, ಗುಂಡನಾಯಕರ ಸೈನಿಕರ ಶಿಸ್ತಿನಭಟರು ಗುರುದೇವಾ. ಅಶಿಸ್ತಿಗೆ ಅವಕಾಶವಿಲ್ಲದಂತೆ ನಾಯಕದ್ವಯರು ನೋಡಿಕೊಳ್ಳುತ್ತಾರೆ."

"ಸಿಂಗಮಭಟ್ಟರ ಆತಿಥ್ಯ ತಾವು ನೋಡಿಕೊಳ್ಳಬೇಕು. ಶ್ರೀ ಭುವನೇಶ್ವರಿಯೇ ಈ ಪುಣ್ಯಾತ್ಮನನ್ನು ಇಲ್ಲಿಗೆ ಬರಮಾಡಿದ್ದಾಳೆ. ಇವರ ಪಾಂಡಿತ್ಯದ ಪೂರ್ಣ ಪ್ರಯೋಜನವನ್ನು ನಾವು ಪಡೆದುಕೊಳ್ಳಬೇಕು." ಎಂದರು.

ಮುದ್ದಪ್ಪನಾಯಕರು ಸಿಂಗಮಭಟ್ಟರನ್ನು ಜತೆಯಲ್ಲಿ ಕರೆದುಕೊಂಡು ಹೋದಮೇಲೆ ಸಾಯಣರು ಮೇಲಕ್ಕೆದ್ದು

"ದೇಜಣ್ಣ – ಮಹಾಪ್ರಭುಗಳ ಸಮಯ ಹೇಗಿದೆಯೆಂದು ತಿಳಿದು ಬಾ" ಎಂದರು.

೬

ಬೇಗಂ ಮಹಲಿನ ದಿವಾನ್ ಖಾನೆ ಗಡಗಡ ನಡುಗಿತು.

ವಜೀರ ಜೈನಲಾಬುದ್ದೀನ್ ಒಪ್ಪಿಸಿದ ವರದಿ ಕೇಳಿದ ಸುಲ್ತಾನರು ಪೀಠದಿಂದ ಹೌಹಾರಿ,

"ಕಥೆ ಹೇಳುತ್ತ ಕುಳಿತುಕೊಳ್ಳಿ. ನಿಮ್ಮನ್ನು ನಂಬಿಕೊಂಡು ಇಸ್ಲಾಮ್ ರಾಜ್ಯ ಕಟ್ಟಲು ಹೊರಟಿರುವ ನನಗೆ ವಿವೇಕವಿಲ್ಲ."

ಸುಲ್ತಾನರ ಕೋಪ ಉಪಶಮನಗೊಳಿಸುವುದಕ್ಕೆ ಖಾಜಿಸಾಹೇಬರು,

"ಇದರಲ್ಲಿ ವಜೀರರ ತಪ್ಪೇನೂ ಇಲ್ಲ ಖಾವಿಂದ್. ವಿಜಯನಗರದ ನಸೀಬು* ಚೆನ್ನಾಗಿದೆ – ಅಷ್ಟೆ!"

"ಆ ನಸೀಬನ್ನು ಅಳಿಸಿಹಾಕುವುದು ವಜೀರರ ಕೆಲಸ."

ಖಾಜಿ ಸಾಹೇಬರು ವಕೀಲಿ ಮುಂದುವರಿಸಲಿಲ್ಲ.

ದಿವಾನ್ ಖಾನೆಯಲ್ಲಿ ಶತಪಥ ಸುತ್ತುತ್ತ, ಅಸ್ತವ್ಯಸ್ತವಾಗಿದ್ದ ಮನಸ್ಸನ್ನು ಹತೋಟಿಗೆ ತಂದುಕೊಳ್ಳಲೆತ್ನಿಸುತ್ತಿದ್ದ ಸುಲ್ತಾನರು

"ಸಿಂಗಮಭಟ್ಟ ಯಾವ ಊರಿನವನಂತೆ!"

"ಹೊಯಿಸಳ ನಾಡಿನವನಂತೆ!"

---

* ಅದೃಷ್ಟ

" ಪೆನುಗೊಂಡೆಯ ಕೆಲಸ ಹೇಗೆ ನಿರ್ವಹಿಸಿದ್ದಾನೆ."

" ಯಶಸ್ವಿಯಾಗಿ ನಿರ್ವಹಿಸಿದ್ದಾನೆ. ಇವನೇನು ಜಲಯಂತ್ರ ವಿಶಾರದನೋ ಮಾಂತ್ರಿಕನೋ ಎಂದು ಜನ ಆಶ್ಚರ್ಯ ಪಡುತ್ತಿದ್ದಾರೆ."

" ಸಿಂಗಮಭಟ್ಟನನ್ನು ವಿಜಯನಗರದಿಂದ ಹೊತ್ತು ಹಾಕಲು ಸಾಧ್ಯವಿಲ್ಲವೇ ?"

" ಸಾಧ್ಯವಿಲ್ಲ. ಅವನಿಗೆ ಬಲವಾದ ರಕ್ಷಣೆಯಿದೆ. ಅಪರಿಚಿತರು ಅವನನ್ನು ನೋಡಲೂ ಸಾಧ್ಯವಿಲ್ಲ."

" ಸಿಂಗಮಭಟ್ಟ ವಿಜಯನಗರದ ಬಂದಿಯೇ ?"

" ಬಂದಿ ಎಂದು ಹೇಳಲಿಕ್ಕಾಗುವುದಿಲ್ಲ."

" ನಮ್ಮವರು ಯಾರೂ ಅವನನ್ನು ಸಂಧಿಸಲಿಲ್ಲವೇ ?"

" ಪ್ರಯತ್ನಿಸಿಯಾಯಿತು ಸಫಲವಾಗಲಿಲ್ಲ."

ಸುಲ್ತಾನ್ ಮತ್ತಷ್ಟು ಉದ್ವೇಗಗೊಂಡು ಉಚ್ಚಕಂಠದಿಂದ,

" ಈಗೇನು ಮಾಡಬೇಕೆಂದಿರುವಿರಿ ?"

" ನಮ್ಮ ಪೈಗಸ್ತಿಗಳು ಕೆಲವು ಸ್ವಾರಸ್ಯವಾದ ವಿಷಯಗಳನ್ನು ತಿಳಿದು ಬಂದಿದ್ದಾರೆ."

" ಏನದು ?"

" ಸಿಂಗಮಭಟ್ಟನಿಗೆ ರಾಮಭಟ್ಟನೆಂಬ ಒಬ್ಬ ಭಾವ ಇದ್ದಾನಂತೆ. ರಾಮಭಟ್ಟನೂ ಜಲಯಂತ್ರ ವಿಶಾರದನಂತೆ ! ಭಾವ, ಭಾವ ಮೈದುನರಿಗೆ ಯಾವದೋ ಕಾರಣಕ್ಕೆ ವೈಮನಸ್ಯ ಬೆಳೆದು ರಾಮಭಟ್ಟ ಹೊಯಿಸಳ ನಾಡು ಬಿಟ್ಟು ದಿಲ್ಲಿಗೆ ಹೋಗಿ, ಸುಲ್ತಾನರಲ್ಲಿ ಊಳಿಗಕ್ಕೆ ಸೇರಿಕೊಂಡಿರುವನಂತೆ ! ರಾಮಭಟ್ಟನ ಮೂಲಕ ನಮ್ಮ ಕಾರ್ಯ ಸಾಧಿಸಬಹುದು."

" ಹೇಗೆ ?"

" ರಾಮಭಟ್ಟ ಆಶಾಬುರುಕನಂತೆ ಕಾಣುತ್ತಾನೆ. ಅವನಿಗೆ ಹೊನ್ನಿನಾಶೆ ತೋರಿಸಿ, ವಿಜಯನಗರಕ್ಕೆ ಕಳಿಸಿಕೊಟ್ಟು ಸಿಂಗಮಭಟ್ಟನ ಕೆಲಸವನ್ನು ಧ್ವಂಸ ಮಾಡುವಂತೆ ಪ್ರೇರೇಪಿಸಬೇಕು."

" ನಿಮ್ಮ ಮಾತು ರಾಮಭಟ್ಟ ಕೇಳುತ್ತಾನೆಯೇ ?"

"ನನ್ನ ಮಾತು ಕೇಳುವುದಿಲ್ಲ – ಚಿನ್ನದ ಮೊಹರುಗಳ ಮಾತು ಕೇಳುತ್ತಾನೆ."

"ದಿಲ್ಲಿಯಲ್ಲಿ ರಾಮುಭಟ್ಟನನ್ನು ಬಲ್ಲವರು ನಮ್ಮವರು ಯಾರಿದ್ದಾರೆ ?"

"ಗುಪ್ತದಳದ ಸುಬೇದಾರ್ ರೇಜಾಖಾ಼ ದಿಲ್ಲಿಯಲ್ಲೇ ಇದ್ದಾನೆ. ಅವನಿಗೂ ರಾಮುಭಟ್ಟನಿಗೂ ದೋಸ್ತಿ* ಚೆನ್ನಾಗಿದೆಯಂತೆ !"

"ರಾಮುಭಟ್ಟನನ್ನು ಇಲ್ಲಿಗೆ ಕರೆತರುವಂತೆ ರೇಜಾಖಾನನಿಗೆ ಬರೆದು ಕಳಿಸಿ."

"ರಾಮುಭಟ್ಟ ಇಲ್ಲಿಗೆ ಬರುವುದರಲ್ಲಿ ಅಪಾಯವಿದೆ ಹುಜೂರ್. ಅವನಿಗೂ ಸಿಂಗಮುಭಟ್ಟನಿಗೂ ಮೊದಲೇ ಆಗುವುದಿಲ್ಲ – ರಾಮುಭಟ್ಟ ನಮ್ಮ ರಾಜ್ಯ ಹೊಕ್ಕು ಬಂದಿದ್ದಾನೆಂದು ಸಿಂಗಮುಭಟ್ಟನಿಗೆ ಅನುಮಾನ ಬಂದರೆ ನಮ್ಮ ಕೆಲಸ ಕೆಟ್ಟುಹೋಗುತ್ತದೆ."

"ಹಾಗಾದರೆ ನೀವೇ ದಿಲ್ಲಿಗೆ ಹೋಗಿ ಬನ್ನಿ – ಇಷ್ಟು ಸೂಕ್ಷ್ಮಸಂಧಾನ ವನ್ನು ಒಬ್ಬ ಬೇವಕೂಫ್ ಸುಬೇದಾರನಿಗೆ ಬಿಡಬೇಡಿ."

"ರಾಮುಭಟ್ಟನ ಧನದಾಸೆ ಪೂರೈಸಿದಲ್ಲದೆ ನಮ್ಮ ಕೆಲಸ ಕೈಗೂಡುವುದಿಲ್ಲ."

"ಅವನುದ್ದಕ್ಕೂ ಹಣ ಸುರಿಯಿರಿ – ಬೇಡವೆನ್ನುವುದಿಲ್ಲ. ಹಣವನ್ನೂ ನುಂಗಿ ಭಟ್ಟ ನಮ್ಮಕ್‌ಹರಾಮ್ ಆದಾನು ಎಚ್ಚರವಾಗಿರಿ."

"ಅವನ ಕುತ್ತಿಗೆಯ ಮೇಲೆ ತಳವಾರ್ ಇಟ್ಟೇ, ಮೂಗಿಗೆ ಹಣದ ಗಂಟು ಕಟ್ಟುತ್ತೇನೆ ಹುಜೂರು."

"ನೀವು ಕಾಲಹರಣ ಮಾಡದೆ ಬೇಗನೆ ದಿಲ್ಲಿಗೆ ಪ್ರಯಾಣ ಬೆಳಸಿ."

"ಹುಕುಂ – ಸರ್ಕಾರ್"

ಎಂದು ಮುಜರೆ ಮಾಡಿ – ಖಾಜಿಯೊಂದಿಗೆ ನಿಷ್ಕ್ರಮಿಸಿದ.

---

* ಸ್ನೇಹ

೭

ಕಮಲಾಪುರದಲ್ಲಿ ಇರುಗನಾಯಕರು ಜೀರ್ಣೋದ್ಧಾರ ಮಾಡಿದ್ದ ಜೈನ ಬಸ್ತಿಯ ಉದ್ಘಾಟನಾ ಸಮಾರಂಭ ನೆರವೇರಿಸಲು ಸಮ್ರಾಟ್ ಶ್ರೀಶ್ರೀ ಹರಿಹರರಾಯರೇ ಒಪ್ಪಿಕೊಂಡರು.

ರಾಜಮಾತೆ, ರಾಣೀವಾಸ, ಯುವರಾಜ ಕುಮಾರರು, ಪರಿವಾರ ಸಮೇತ ಕಮಲಾಪುರಕ್ಕೆ ಬಂದ ಪ್ರಭುಗಳನ್ನು ಇರುಗನಾಯಕರೂ, ಜೈನಕುಲ ಬಾಂಧವರೂ ಸ್ವಾಗತಿಸಿದರು. ಇರುಗನಾಯಕರ ವಿಶೇಷ ಆಮಂತ್ರಣದ ಮೇರೆಗೆ ಸಿಂಗಮಭಟ್ಟರೂ ದಯೆಮಾಡಿಸಿದ್ದರು.

ಮಹಾಪ್ರಭುಗಳು ವಿಧ್ಯುಕ್ತ ಪೂಜಾಕ್ರಮಗಳನ್ನೆಲ್ಲಾ ಆಸ್ಥೆ, ಭಕ್ತಿಯಿಂದ ಅನುಲಕ್ಷಿಸಿ, ತಮ್ಮ ಸಂದೇಶ ಸಾರಿದರು :

"ವಿಜಯನಗರ ಸಾಮ್ರಾಜ್ಯದ ಆಧಾರ ಸ್ತಂಭಗಳಲ್ಲಿ ಒಬ್ಬರಾದ ಪ್ರೌಢಪ್ರತಾಪಿ ಶ್ರೀ ಇರುಗನಾಯಕರು, ಶಿಥಿಲವಾಗಿದ್ದ ಜೈನ ಬಸ್ತಿಯನ್ನು ಜೀರ್ಣೋದ್ಧಾರಮಾಡಿ, ಪೂಜೆ ಸಾಂಗವಾಗಿ ನಡೆಯಲು ತಕ್ಕ ವ್ಯವಸ್ಥೆ ಮಾಡಿರುವುದನ್ನು ಕಂಡು ನಮಗೆ ಅತ್ಯಾನಂದವಾಗಿದೆ.

ನಮ್ಮ ಪ್ರಜರಲ್ಲಿ ಶೈವರು, ವೈಷ್ಣವರು, ಜೈನರು, ಶಾಕ್ತರು, ಮುಸ್ಲಿಮರು ಇದ್ದಾರೆ. ಅವರೆಲ್ಲರೂ ತಮ್ಮ ಧರ್ಮತತ್ವಾನುಗುಣವಾಗಿ ಭಗವದಾರಾಧನೆ ಮಾಡಿ ಯಶಃಕಾಯರಾಗಬೇಕೆಂಬುದೇ ನಮ್ಮ ಅಪೇಕ್ಷೆ.

ಒಬ್ಬನೇ ಆದ ಭಗವಂತನನ್ನು ಹಲವರು ಹಲವು ಹೆಸರುಗಳಿಂದ ಕರೆಯುತ್ತಾರೆ. ಶಿವ, ವಿಷ್ಣು, ಬ್ರಹ್ಮ, ಬುದ್ಧ, ಅರ್ಹಂತ ಎಂದು ಕರೆಸಿಕೊಳ್ಳುವ ಶಕ್ತಿ ಒಂದೇ ಆಗಿದೆ. ವೈಯಕ್ತಿಕವಾಗಿ ನಾವಾಗಲಿ ನಮ್ಮ ಪ್ರಜರಾಗಲಿ ಯಾವ ಧರ್ಮವನ್ನು ಅನುಸರಿಸಿದರೂ ನಮ್ಮೆಲ್ಲರ ಧರ್ಮ ಈ ಮಹಾ ಸಾಮ್ರಾಜ್ಯದ ನಿರಂತರ ಪ್ರಗತಿ ಎಂಬುದನ್ನು ಮರೆಯಬಾರದು.

ನಮ್ಮ ಪೂಜ್ಯ ತೀರ್ಥರೂಪರವರಾದ ಶ್ರೀಶ್ರೀ ಬುಕ್ಕರಾಯರ ಶಾಸನ ವಿಜಯನಗರ ಸಾಮ್ರಾಜ್ಯದ ಧರ್ಮ ಪ್ರಣಾಳಿಕೆ. ಮತಕಲಹಗಳಿಂದ,

ಜಾತಿದ್ವೇಷದಿಂದ ಸಾಮ್ರಾಜ್ಯದ ವಿಮಲಕೀರ್ತಿಗೆ ಸ್ವಲ್ಪವೂ ಕುಂದು ಬಾರದಂತೆ ಸಮಸ್ತ ಪ್ರಜರೂ ಎಚ್ಚರರಾಗಿರತಕ್ಕದ್ದು."

ಇರುಗನಾಯಕರ ಸೇವೆಯನ್ನು ಪ್ರಶಂಸಿಸುವ ಶಾಸನ ಸ್ಥಾಪಿಸಲುಮಹಾಪ್ರಭುಗಳು ಅಪ್ಪಣೆ ಮಾಡಿದುದಲ್ಲದೆ, ಬಸ್ತಿಯ ಸಮೀಪದಲ್ಲಿದ್ದ ಭೂಪ್ರದೇಶವನ್ನು ಸ್ವಾಮಿ ಸೇವಾರ್ಥಕ್ಕೆ ದತ್ತಿಯಾಗಿತ್ತರು.

ಮಹೋತ್ಸವ ಮುಗಿಸಿಕೊಂಡು ಮನೆಗೆ ಹಿಂದಿರುಗಿದ ಸಿಂಗಮಭಟ್ಟ ತನ್ನ ಕಣ್ಣನ್ನು ತಾನೇ ನಂಬದಾದ.

ವಿಜಯಲಕ್ಷ್ಮಿ ಹೌಹಾರಿ ಬಂದು, ಅಣ್ಣನನ್ನಪ್ಪಿ, ಅವನ ಭುಜದ ಮೇಲೆ ಮುಖವಿಟ್ಟು ಆನಂದಭಾಷ್ಪ ಸುರಿಸಿದಳು.

ಪ್ರಥಮ ದರ್ಶನದ ಆವೇಗ ಕಡಿಮೆಯಾದ ಮೇಲೆ ಸಿಂಗಮಭಟ್ಟ,

"ಯಾವಾಗ ಬಂದೆ – ಹೇಗೆ ಬಂದೆ ವಿಜಯಾ" ಎಂದ.

"ಮಧ್ಯಾಹ್ನ ಬಂದೆ. ನೀನು ಚಕ್ರವರ್ತಿಗಳ ಜತೆ ಕಮಲಾಪುರಕ್ಕೆ ಹೋಗಿರುವುದು ತಿಳಿಯಿತು."

"ಎಲ್ಲಿಂದ ಬಂದೆ ?"

"ದಿಲ್ಲಿಯಿಂದ."

"ಭಾವ ಬಂದಿದ್ದಾನೆಯೇ ?"

"ಬಂದಿದ್ದಾರೆ"

"ಈಗವನೆಲ್ಲಿ ?"

"ಊರು ನೋಡಿಕೊಂಡು ಬರುತ್ತೇನೆಂದು ಹೋಗಿದ್ದಾರೆ."

"ಇದ್ದಕ್ಕಿದ್ದಂತೆ ಭಾವನಿಗೆ ನನ್ನ ನೆನಪು ಹೇಗೆ ಬಂತು ?"

"ನಿನ್ನ ಕೀರ್ತಿ ದಿಲ್ಲಿಯವರೆಗೂ ವ್ಯಾಪಿಸಿದೆ ಅಣ್ಣಯ್ಯಾ – ಇಲ್ಲಿಗೆ ಬಂದು ನಿನ್ನನ್ನು ಕಾಣಲು ನಾನು ಕಾತರಿಸುತ್ತಿದ್ದೆ. ನನ್ನ ಕಾಟ ತಡೆಯಲಾಗದೆ, ಅವರೂ ಹೊರಟು ನಿಂತರು. – ನಾವು ಬರಬಾರದಾಗಿತ್ತೇ ?"

"ಛೆ! ಎಂಥ ಪ್ರಶ್ನೆ! ಅಣ್ಣನ ಮನೆಗೆ ತಂಗಿ ಬರುವುದಕ್ಕೆ ಅಪ್ಪಣೆ ಅಗತ್ಯವೇ ? – ದಿಲ್ಲಿಯಲ್ಲಿ ಸುಖವಾಗಿದ್ದೀಯಾ ವಿಜಯಾ ?

ವಿಜಯಲಕ್ಷ್ಮಿ ಉತ್ತರಿಸಲಿಲ್ಲ.

ಅವಳ ಕಣ್ಣುಗಳಿಂದ ಪ್ರವಹಿಸಲಾರಂಭಿಸಿದ ಕಿರುಕಾಲುವೆ, ಕ್ರಮೇಣ ಸಾಗರ ಸ್ವರೂಪ ತಳೆದು ಭೋರ್ಗರೆಯಲಾರಂಭಿಸಿತು.

ತಂಗಿಯನ್ನು ಸಮಾಧಾನ ಪಡಿಸುತ್ತಾ ಸಿಂಗಮಭಟ್ಟ,

"ಏನಾಯಿತು ವಿಜಯ, ಅಳಬೇಡ – ಆದದ್ದೇನು ಹೇಳು"

ದುಃಖೋಪಶಮನ ಮಾಡಿಕೊಳ್ಳುತ್ತಾ ವಿಜಯಲಕ್ಷ್ಮಿ,

"ದಿಲ್ಲಿಯಲ್ಲಿ ನಾನಿರಲಾರೆ ಅಣ್ಣಯ್ಯ. ಅಲ್ಲಿಯ ವಾತಾವರಣ ನನಗೆ ಎಳ್ಳಷ್ಟೂ ಸರಿಬೀಳುವುದಿಲ್ಲ. ದಿಲ್ಲಿ ಬಿಡುವಂತೆ ಹೇಗಾದರೂ ಮಾಡಿ ನಿನ್ನ ಭಾವನವರನ್ನು ಒಪ್ಪಿಸು. ನಾನು ಮರಳಿ ದಿಲ್ಲಿಗೆ ಹೋಗಬೇಕಾದರೆ, ತುಂಗಭದ್ರಾನದಿಗೆ ಹಾರಿಕೊಂಡು ಪ್ರಾಣ ಒಪ್ಪಿಸಿಬಿಡುತ್ತೇನೆ."

"ಅಂಥ ಸಾಹಸ ಅಗತ್ಯವಿಲ್ಲ ವಿಜಯಾ. ಪರಿಸ್ಥಿತಿಯ ಪೂರ್ಣ ಪರಿಚಯವಾಗದೆ ನಾನೇನು ಮಾಡಲು ಸಾಧ್ಯ ?"

"ಗಂಡನ ಮೇಲೆ ಹೆಂಡತಿ ದೂರು ಹೇಳಬಾರದು. ಆದರೆ........"

"ನಾನು ಹೊರಗಿನವನವಲ್ಲ. ನಿನ್ನ ಗಂಡ ನನ್ನ ಭಾವ. ಅವನ ಕಷ್ಟಸುಖ ನನಗೂ ಸೇರಿದ್ದು. ನಾವು ನಾವು ಗೃಹಕೃತ್ಯದ ವಿಷಯ ಮಾತ ನಾಡಿಕೊಳ್ಳುವುದರಲ್ಲಿ ಏನು ತಪ್ಪು."

"ನಾನು ಹೇಳುವ ವಿಷಯಗಳನ್ನು ಅವರೆದುರಿಗೆ ಆಡಬೇಡ ಅಣ್ಣಯ್ಯಾ."

"ನಾನೇನು ಲೌಕಿಕಜ್ಞಾನವಿಲ್ಲದ ರೂಕ್ಷನೇ ವಿಜಯಾ ?"

"ನಿನ್ನೊಂದಿಗೆ ಜಗಳಕಾದು ಅವರು ಬೇಲನಾಡು ಬಿಟ್ಟರು. ಪತಿ ಯನ್ನನುಸರಿಸುವುದು ನನ್ನ ಕರ್ತವ್ಯವೆಂದು ನಾನು ಅವರ ಜತೆ ಹೊರಟೆ. ದಿಲ್ಲಿಯೊಂದಿಗೆ ಯಾವಾಗ, ಹೇಗೆ ಸಂಪರ್ಕ ಬೆಳಸಿಕೊಂಡಿದ್ದರೋ ಕಾಣೆ – ನಾವು ದಿಲ್ಲಿ ಮುಟ್ಟದೊಡನೆಯೇ ಸುಲ್ತಾನರ ಆಸ್ಥಾನಕ್ಕೆ ಪ್ರವೇಶ ದೊರಕಿತು. ಇವರನ್ನು ಸುಲ್ತಾನರು ಆಸ್ಥಾನದ ಜಲಯಂತ್ರ ವಿಶಾರದರನ್ನಾಗಿ ನೇಮಿಸಿ ಕೊಂಡರು. ಜೀವನಕ್ಕೆ ಯಾವ ಕೊರತೆಯೂ ಇರಲಿಲ್ಲ – ನೆಮ್ಮದಿಯಾಗೇ ಇದ್ದೆವು.

"ಇನ್ನೇನು ?"

"ಮುಂದೆ ಕೇಳು – ಸ್ವಲ್ಪ ಕಾಲಾನಂತರ ಇವರಿಗೆ ಒಬ್ಬ ಮುಸ್ಲಿಮ ಅಧಿಕಾರಿಯ ಸ್ನೇಹ ಗಂಟು ಬಿತ್ತು."

"ಅವನ ಹೆಸರೇನು ?"

"ರೇಜಾಖಾನ್."

" ರೇಜಾಖಾನ್ – ರೇಜಾಖಾನ್ – ಅವನೇನಾಗಿದ್ದ ?"

" ಬಹಮನಿ ಸುಲ್ತಾನರ ಪ್ರತಿನಿಧಿಯಂತೆ !

" ಈ ಸ್ನೇಹ ವಿಪರೀತಕಿಟ್ಟುಕೊಂಡಿತು. ಕಾಲಕ್ರಮೇಣ ನಿಮ್ಮ ಭಾವನವರಿಗೆ ಅಪೇಯಪಾನ, ಅಭಕ್ಷ್ಯಭೋಜನ, ಅಗಮ್ಯಾಗಮನ ಎಲ್ಲವೂ ಅಭ್ಯಾಸವಾಯಿತು. ಚಂಡಾಲ ರೇಜಾಖಾನನನ್ನೂ ಅವನ ಸ್ನೇಹಿತರನ್ನೂ ಮನೆಗೆ ಕರೆದುಕೊಂಡು ಬರುತ್ತಿದ್ದರು. ನಾನು ಬಗೆಬಗೆಯ ಭಕ್ಷ್ಯ, ಖಾದ್ಯ ಗಳನ್ನು ಮಾಡಿ ಇವರಿಗೆ ಬಡಿಸಬೇಕಾಗುತ್ತಿತ್ತು. ರೇಜಾಖಾನನ ಮುಂದೆ ಸುಳಿಯುವುದಕ್ಕೆ ನನಗೆ ಭಯ – ಈ ರಾಕ್ಷಸ ಕೊನೆಗಣ್ಣಿನಿಂದಲೇ ನನ್ನನ್ನು ನೋಡುತ್ತಾ ವಕ್ರಚೇಷ್ಟೆಗಳನ್ನು ಮಾಡುತ್ತಿದ್ದ. ಇವನ ಉಪಟಳ ಸಹಿಸ ಲಾಗದೆ ಒಂದು ದಿನ ನಾನು

' ನೋಡಿ – ಭಕ್ಷ್ಯ ಖಾದ್ಯಗಳನ್ನು ಮಾಡಲು ನನಗೆ ಬೇಸರವಿಲ್ಲ. ಎಷ್ಟು ಬೇಕಾದರೂ ಮಾಡಿಕೊಡುತ್ತೇನೆ. ಅವುಗಳನ್ನು ರೇಜಾಖಾನನ ಮನೆಗೇ ಕಳಿಸಿಕೊಡಿ. ದಯೆಯಿಟ್ಟು ಅವನನ್ನು ಮಾತ್ರ ಇಲ್ಲಿಗೆ ಕರೆದು ಕೊಂಡು ಬರಬೇಡಿ ' ಎಂದೆ.

ಅವರಿಗೆ ವಿಪರೀತ ಕೋಪ ಬಂದಿತು.

' ಈ ಮನೆಯ ಯಜಮಾನ ಯಾರು ? ನಾನೋ ನೀನೋ ?'

' ನೀವೇ.'

' ನಾನು ಯಜಮಾನನಾದರೆ, ಹೇಳಿದಂತೆ ಕೇಳಿಕೊಂಡು ಬಿದ್ದಿರು.'

' ಕೈಹಿಡಿದ ಹೆಂಡತಿಗೆ ಅಪಮಾನವಾಗುವುದನ್ನು ನೋಡುತ್ತ ಸುಮ್ಮ ನಿರುವಿರಾ ?'

' ಅಪಮಾನ - ಯಾರಿಂದ ?'

' ರೇಜಾಖಾನನಿಂದ.'

' ನೀನು ತಪ್ಪು ತಿಳಿದುಕೊಂಡಿದ್ದೀ - ರೇಜಾಖಾನ್ ಸದ್ಗೃಹಸ್ಥ - ಸಂಭಾವಿತ. ನಿನ್ನ ಬಗ್ಗೆ ಸೋದರ ವಾತ್ಸಲ್ಯ ಇಟ್ಟುಕೊಂಡಿದ್ದಾನೆ. ಅವನ ಬಗ್ಗೆ ಚಕಾರ ಶಬ್ದವೆತ್ತಿದರೆ ನಾನು ಸುಮ್ಮನಿರುವುದಿಲ್ಲ - ಅಲ್ಲದೆ - ರೇಜಾಖಾನ ನಿಂದ ನನಗೆ ಬಹಳ ಕೆಲಸವಾಗಬೇಕಾಗಿದೆ. ಯಾವ ಕಾರ್ಯಕ್ಕೂ ಅವನೊಂದಿಗೆ ವೈಮನಸ್ಯ ಬೆಳಸಲು ನಾನು ಸಿದ್ಧವಾಗಿಲ್ಲ.'

'ಹೆಂಡತಿಯ ಮಾತಿಗಿಂತ ನಿಮಗೆ ರೇಜಾಖಾನನ ಮಾತು ಪ್ರಧಾನವೇ?'

'ಹೆಂಗಸರು - ನಿಮಗೆ ಪೂರ್ವಾಪರಜ್ಞಾನವಿಲ್ಲ. ಎತ್ತು ಈತು, ಎಂದರೆ ಕೊಟ್ಟಿಗೆಗೆ ಹಾಕು ಎನ್ನುವ ಸ್ವಭಾವ ನಿಮ್ಮದು.'

'ನನಗಿಂತಲೂ ನಿಮಗೆ ರೇಜಾಖಾನ್ ಮುಖ್ಯವಾದರೆ ನನ್ನನ್ನು ಅಣ್ಣನ ಬಳಿಗಾದರೂ ಕಳಿಸಿಬಿಡಿ.'

'ನಿಮ್ಮಣ್ಣ ಮಹಾಯೋಗ್ಯ - ಅವನ ತಂಗಿ ನೀನೊಬ್ಬಳು..........'

ಎಂದು ಹೊಲಸುಮಾತುಗಳನ್ನಾಡಿ ಮನೆಬಿಟ್ಟು ಹೊರಟುಹೋದರು.

ಆಗಾಗ್ಗೆ ಈ ಬಗ್ಗೆ ಸಣ್ಣಪುಟ್ಟ ಕದನಗಳಾಗುತ್ತಲೇ ಇದ್ದವು. ನನ್ನ ಮಾತಿಗೆ ಅವರು ಲಕ್ಷ್ಯ ಕೊಡಲೇ ಇಲ್ಲ - ಯಥಾ ಪ್ರಕಾರ ರೇಜಾಖಾನ್ ಬಂದು ಹೋಗುತ್ತಿದ್ದ."

ವಿಜಯಲಕ್ಷ್ಮಿಯ ನಿರೂಪಣೆ ಸಿಂಗಮಭಟ್ಟನ ವಿಚಾರಶಕ್ತಿಯನ್ನು ಹೊಡೆದೆಬ್ಬಿಸಿತ್ತು. ಅವನ ಮನಸ್ಸಿಗೆ ಅತೀವ ವೇದನೆ, ದುಗುಡವಾಗಿದ್ದುದು ಮುಖದ ಮೇಲೆ ಸ್ಪಷ್ಟವಾಗಿ ಮೂಡಿತ್ತು.

"ಸ್ವಲ್ಪ ತಡೀ ವಿಜಯಾ"

ಎಂದವನು ಅವಳು ಹೇಳಿದುದನ್ನೆಲ್ಲಾ ಪುನರಾಲೋಚಿಸಿ.

"ರಾಮಭಟ್ಟ ನನ್ನ ಬಗ್ಗೆ ದುರ್ಭಾಷೆಯಾಡಿದನೇ?"

"..................."

"ಹೃದಯದಲ್ಲಿ ಇಷ್ಟು ದ್ವೇಷ ತುಂಬಿಟ್ಟುಕೊಂಡು, ಇಲ್ಲಿಗೆ ಬರಲು ಹೇಗೆ ಸಮ್ಮತಿಸಿದ"

"ನನ್ನ ಒತ್ತಾಯ ತಡೆಯಲಾಗದೆ !!!"

"ನೀನು ತಿಳಿದಿರುವಷ್ಟು ಈ ವಿಷಯ ಸರಳವಲ್ಲ ವಿಜಯಾ? ರೇಜಾಖಾನ್ ಯಾವ ಊರಿನವನೆಂದೆ?"

"ಕಲ್ಬುರ್ಗಿಯವನಂತೆ! ಏಕೆ?"

"ಇರಲಿ – ಆ ವಿಷಯ ಮುಂದೆ ಮಾತನಾಡೋಣ. – ವಿಜಯಾ, ನಮ್ಮ ಊರು ನೀನು ನೋಡಿಯೇ ಇಲ್ಲ – ಅಲ್ಲವೇ?"

"ಇಲ್ಲ – ಅಣ್ಣಾ."

"ಬಾ – ಹೋಗಿ ಬರೋಣ."

" ಅವರು ಮನೆಗೆ ಬರುತ್ತಾರೋ ಏನೋ ?"

" ಬರಲಿ – ನಾವೂ ಬೇಗ ಬಂದರಾಯಿತು."

ವಿಜಯಲಕ್ಷ್ಮಿ ಹೊಸ ದುಕೂಲ ಆಭರಣಗಳನ್ನು ಧರಿಸಿ ಅಣ್ಣನೊಂದಿಗೆ ಹೊರಡಲನುವಾದಳು.

ತಾನು ಕೈಗೊಂಡಿದ್ದ ನೀರಾವರಿ ಯೋಜನೆಯನ್ನು ತಂಗಿಗೆ ತೋರಿಸುತ್ತಾ

" ವಿಜಯನಗರ ಸಾಮ್ರಾಜ್ಯದ ಭವಿಷ್ಯ, ಜಲಸಂಗ್ರಹವನ್ನವಲಂಬಿಸಿದೆ ವಿಜಯಾ. ಶತ್ರುಗಳು ರಾಜಧಾನಿಯನ್ನು ಮುತ್ತಿದರೂ ಪ್ರಜರಿಗೆ ಸ್ವಲ್ಪವೂ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗುತ್ತಿದೆ."

ಎಂದು ಬಾವುಟದ ಬತೇರಿಗೆ ತಂಗಿಯನ್ನು ಕರೆದೊಯ್ದು, ನಗರದ ವಿಹಂಗಮ ನೋಟ ತೋರಿಸುತ್ತಾ

" ನೋಡು–ಅಲ್ಲಿ ಕಾಣುತ್ತಿರುವ ಗೋಪುರವೇ ಶ್ರೀವಿರೂಪಾಕ್ಷಸ್ವಾಮಿ, ಶ್ರೀಭುವನೇಶ್ವರಿಯ ದೇವಾಲಯ – ಅದೇ ಹೇಮಕೂಟ –"

" ದೂರದಲ್ಲಿ ಕಾಣುತ್ತಿರುವ ಬೆಟ್ಟ ಯಾವುದು ?"

" ಅದೇ ಮತಂಗ ಪರ್ವತ. – ಈ ಬದಿಗಿರುವುದೇ ಅಶ್ವಶಾಲೆ, ಗಜ ಶಾಲೆ, ಶಸ್ತ್ರಾಗಾರ, ದಣ್ಣಾಯಕರ ಮಹಲುಗಳು."

ರಾಜಧಾನಿಯ ಭವ್ಯನೋಟ ನೋಡುತ್ತ ಸ್ಫೂರ್ತಿಗೊಂಡ ವಿಜಯ ಲಕ್ಷ್ಮಿ

" ಎಂಥಾ ಪವಿತ್ರ ಕ್ಷೇತ್ರವಿದು ಅಣ್ಣಾ–ರಾಮಾಯಣ, ಮಹಾಭಾರತದ ಮಹಾಪುರುಷರೆಲ್ಲಾ ಈ ಕ್ಷೇತ್ರದಲ್ಲಿ ವಾಸಮಾಡಿದ್ದಾರೆ – ಪಂಪಾಪತಿ, ಭುವನೇಶ್ವರಿ ಕ್ಷೇತ್ರದ ಮಾತಾಪಿತೃಗಳಾಗಿದ್ದಾರೆ –"

" ಅಷ್ಟೇ ಅಲ್ಲ ತಾಯಿ – ಮಹಾತಪಸ್ವಿ ಶ್ರೀಗುರು ವಿದ್ಯಾರಣ್ಯರು ತಮ್ಮ ತಪಃಶಕ್ತಿಯನ್ನೆಲ್ಲಾ ಈ ಮಾಹಾ ಸಾಮ್ರಾಜ್ಯದ ಉಚ್ಛ್ರಾಯಕ್ಕಾಗಿ ಧಾರೆಯೆರೆದಿದ್ದಾರೆ."

" ಶ್ರೀಗುರುಗಳು ಸಮಾಧಿಸ್ಥರಾಗಿರುವುದೆಲ್ಲಿ."

" ಇಲ್ಲೇ – ಪಂಪಾನಾಥನ ಚರಣ ಸನ್ನಿಧಿಯಲ್ಲಿ."

" ಅಣ್ಣಾ – ಅಲ್ಲಿಗೆ ಹೋಗೋಣವೇ ?"

" ಬಾ – ತಾಯಿ. ವಿರೂಪಾಕ್ಷ, ಭುವನೇಶ್ವರಿಯರ ದರ್ಶನ ತೆಗೆದು

ಕೊಂಡು ಮನೆಗೆ ಹೋಗೋಣ."

ಶ್ರೀ ವಿದ್ಯಾರಣ್ಯರ ಸಮಾಧಿಯ ಮುಂದೆ ಉದ್ದಂಡ ಪ್ರಣಾಮ ಮಾಡಿ ಮೇಲಕ್ಕೆದ್ದ ವಿಜಯಲಕ್ಷ್ಮಿ ಅಣ್ಣನತ್ತ ತಿರುಗಿ,

" ಈ ಸನ್ಯಾಸಿ ಬಂದು ಮಹಾಸಾಮ್ರಾಜ್ಯ ಕಟ್ಟಿದರೆನ್ನುವುದು ಕಟ್ಟು ಕಥೆಯಂತೆ ಕಂಡುಬರುತ್ತದೆ."

" ಹೌದು ತಾಯಿ – ಅದು ಈ ಯುಗದ ಪವಾಡ."

ಇಬ್ಬರೂ ವಿರುಪಾಕ್ಷಸ್ವಾಮಿಯ ದೇವಾಲಯ ಸಮೀಪಿಸುತ್ತಿರಲು ಕಾಪಿನ ಭಟರು ತಡೆದರು.

" ಸ್ವಾಮಿಯ ದರ್ಶನಕ್ಕೆ ಹೊರಟಿದ್ದೇವೆ ನಾಯಕರೇ ?"

" ಸ್ವಲ್ಪ ನಿಲ್ಲಬೇಕು ಬುದ್ಧಿ. ರಾಜಮಾತೆಯವರು, ರಾಣೀವಾಸದವರು, ಯುವರಾಜ ಕುಮಾರರು ಒಳಗೆ ದಯಮಾಡಿಸಿದ್ದಾರೆ."

" ಒಳ್ಳೇದು – ನಾವು ಸ್ವಲ್ಪ ಹೊತ್ತು ಕಾಯುತ್ತೇವೆ."

ಎಂದು ಮಹಾದ್ವಾರದಲ್ಲಿ ಸಿಂಗಮಭಟ್ಟ ತಂಗಿಯೊಂದಿಗೆ ನಿಂತ.

ರಾಜಮಾತೆ, ರಾಣೀವಾಸದವರು, ಯುವರಾಜಕುಮಾರರನ್ನು ನೋಡುವ ಅನಿರೀಕ್ಷಿತ ಅವಕಾಶ ಒದಗಿದುದಕ್ಕೆ ಹಿಗ್ಗಿದ ವಿಜಯಲಕ್ಷ್ಮಿ,

" ಅವರು ಹೊರಗೆ ಬರುತ್ತಲೇ ರಾಜಮಾತೆಯರು, ರಾಣಿಯರು ಯಾರು ಎಂದು ನನಗೆ ತಿಳಿಸಣ್ಣ " ಎಂದಳು.

ದೇವಾಲಯದೊಳಗೆ ಮಹಾಮಂಗಳಾರತಿಯ ಘಂಟೆಗಳು ನಿನದಿಸಿದವು.

ಮಹಾದ್ವಾರದ ಇಬ್ಭಾಗಗಳಲ್ಲಿ ನಿಂತಿದ್ದ ಜನರ ತಂಡ, ಪಕ್ಕಕ್ಕೆ ಸರಿದು ನಿಂತರು.

ಪರಿವಾರದವರು ಮುಂದೆ ಬರಲು ರಾಜಮಾತೆ, ರಾಣಿಯರು, ಅವರ ಹಿಂದೆ ಯುವರಾಜ ಕುಮಾರರು ಬಂದರು.

ಒಂದು ಬದಿಯಲ್ಲಿ ನಿಂತಿದ್ದ ಸಿಂಗಮಭಟ್ಟ ತಂಗಿಗೆ ಎಲ್ಲರ ಗುರುತು ತಿಳಿಸಿ, ಶಿರಬಾಗಿ ನಮಿಸಿದ.

" ಇದೇಕೆ ಇಲ್ಲಿ ನಿಂತಿರಿ ಭಟ್ಟರೇ " ಎಂದರು.

ರಾಜಮಾತೆಯವರ ಸಮೀಪಕ್ಕೆ ಸಾರಿದ ಸಿಂಗಮಭಟ್ಟ ಕೈಜೋಡಿಸಿ,

" ಮಹಾಮಾತೃಶ್ರೀಯವರು ಒಳಗೆ ಪೂಜೆಗೆ ಹೋಗಿರುವುದು ಗೊತ್ತಾಯಿತು. ಪೂಜೆ ಮುಗಿಯಲಿ ಎಂದು ಇಲ್ಲಿಯೇ ನಿಂತೆ."

ಭಟ್ಟನ ಬಳಿ ಕೈಜೋಡಿಸಿ ನಿಂತಿದ್ದ ವಿಜಯಲಕ್ಷ್ಮಿಯನ್ನು ನೋಡಿ ರಾಜಮಾತೆ,

"ಈ ಹೆಣ್ಣು ಮಗಳು ಯಾರು ?" ಎಂದರು.

"ನನ್ನ ತಂಗಿ ವಿಜಯಲಕ್ಷ್ಮಿ ಮಹಾತಾಯಿ."

"ಈಕೆಯನ್ನು ನಾವಿಂದೇ ನೋಡುತ್ತಿರುವುದು."

"ಹೌದು. ಇಷ್ಟು ದಿನ ವಿಜಯಲಕ್ಷ್ಮಿ ದಿಲ್ಲಿಯಲ್ಲಿದ್ದಳು ಇಂದೇ ವಿಜಯನಗರಕ್ಕೆ ಬಂದಳು."

"ನಿಮ್ಮ ತಂಗಿಯನ್ನು ಅರಮನೆಗೆ ಕರೆದುಕೊಂಡು ಬನ್ನಿ"

ಎಂದು, ವಿಜಯಲಕ್ಷ್ಮಿಯ ತಲೆ ನೇವರಿಸಿ,

"ಬಾ ತಾಯಿ – ಭಟ್ಟರ ತಂಗಿ ನಮ್ಮ ಮಗಳ ಸಮಾನ. ಭಟ್ಟರು ನಮ್ಮನ್ನು ಅಪಾರ ಋಣಿಗಳನ್ನಾಗಿ ಮಾಡಿದ್ದಾರೆ."

ಎಂದು ಮುಂದಡಿಯಿಟ್ಟರು.

ರಾಜಮಾತೆಯ ಸೌಹಾರ್ದ ಕಂಡು ಅವಾಕ್ಕಾಗಿದ್ದ ವಿಜಯಲಕ್ಷ್ಮಿಯ ಕಣ್ಣುಗಳಿಂದ ಓತಪ್ರೋತವಾಗಿ ಆನಂದಾಶ್ರುಗಳು ಧುಮ್ಮಿಕ್ಕುತ್ತಿದ್ದವು.

ತಂಗಿಯನ್ನು ಒಳಗೆ ಕರೆದೊಯ್ದು ಸಿಂಗಮುಭಟ್ಟ ವಿರೂಪಾಕ್ಷಸ್ವಾಮಿಗೆ ಹಣ್ಣುಕಾಯಿ ನಿವೇದಿಸಿ, ಭುವನೇಶ್ವರಿಗೆ ಕುಂಕುಮಾರ್ಚನೆ ಮಾಡಿಸಿದ.

ಪ್ರಸಾದ ಕೈಯಲ್ಲಿ ಹಿಡಿದ ವಿಜಯಲಕ್ಷ್ಮಿ ಅಣ್ಣನೊಂದಿಗೆ ಹೊರ ಬಿದ್ದಳು.

ಜನಸಾಂದ್ರತೆಯಿಲ್ಲದ ರಸ್ತೆಗಳಲ್ಲಿ ತಂಗಿಯನ್ನು ಕರೆದುಕೊಂಡು ಹೋಗುತ್ತಾ ಸಿಂಗಮುಭಟ್ಟ,

"ತಂಗಿ, ಇದೇ ನಮ್ಮ ವಿಜಯನಗರ."

"ಈ ರಾಜ್ಯ – ಇದರ ದೊರೆಯ ಸೇವೆ ಮಾಡುತ್ತಿರುವ ನೀನು ಧನ್ಯ ಅಣ್ಣಯ್ಯ."

"ನನ್ನನ್ನು ಧನ್ಯನನ್ನಾಗಿಸುವುದು ನಿನ್ನ ಕೈಯಲ್ಲಿದೆ."

"ನಾನೇನು ಮಾಡಬಲ್ಲೆ ?"

"ಹೇಳಲೇ ?"

"ಹೇಳು."

"ಭುವನೇಶ್ವರಿಯ ಕುಂಕುಮ ಪ್ರಸಾದವನ್ನು ಕೈಯಲ್ಲಿ ಹಿಡಿ."

ವಿಜಯಲಕ್ಷ್ಮಿ ಕುಂಕುಮ ಪ್ರಸಾದವನ್ನು ಕೈಯಲ್ಲಿ ಹಿಡಿಯಲು,

“ಭುವನೇಶ್ವರಿಯು ಸಾಕ್ಷಿಯಾಗಿ ನನಗೊಂದು ಮಾತು ಕೊಡು ವಿಜಯಾ ?”

“ಏನದು ಹೇಳು ?”

“ವಿಜಯನಗರಕ್ಕೆ ಯಾರು ದ್ರೋಹವನ್ನೆಸಗಿದರೂ, ಅವರನ್ನು ನಿರ್ನಾಮಗೊಳಿಸುತ್ತೇನೆಂದು ಪ್ರಮಾಣ ಮಾಡು.”

“ವಿಜಯನಗರಕ್ಕೆ...............”

“ತಡೆತಡೆ ವಿಜಯಾ. ಸ್ವಲ್ಪ ಯೋಚನೆಮಾಡು.”

“ಯೋಚನೆಮಾಡುವುದಕ್ಕೇನಿದೆ.”

“ಇದೆ. ನಾಳೆ ನಾನು ವಿದ್ರೋಹಿಯಾಗಬಹುದು - ಬೇರೆ ಯಾರಾದರೂ ವಿದ್ರೋಹಿಗಳಾಗಬಹುದು.”

“ಯಾರು ವಿದ್ರೋಹಿಗಳಾದರೂ ನಾನು ಕ್ಷಮಿಸುವುದಿಲ್ಲ ಅಣ್ಣಯ್ಯ - ಇದೋ - ಭುವನೇಶ್ವರಿಯು ಸಾಕ್ಷಿಯಾಗಿ ಪ್ರಮಾಣಮಾಡುತ್ತೇನೆ.”

ಎಂದು ಹಣೆಗೆ ಕುಂಕುಮವಿಟ್ಟುಕೊಂಡು, ಕಣ್ಣಿಗೊತ್ತಿಕೊಂಡು ಸ್ವಲ್ಪ ಕುಂಕುಮ ಬಾಯಿಗೆ ಹಾಕಿಕೊಂಡಳು.

೮

ರಾಮಭಟ್ಟ ಪಶ್ಚಾತ್ತಾಪದಗ್ಧನಾಗಿದ್ದ.

ವಿಜಯನಗರ ಸಂದರ್ಶನ, ಅದರಲ್ಲಿ ಆಗುತ್ತಿದ್ದ ಮಹತ್ವದ ಕೆಲಸಗಳ ಪರಿಚಯ, ಇಡಿಯ ಪ್ರಜಾವರ್ಗವನ್ನು ಸಚೇತನಗೊಳಿಸಿದ್ದ ಉಜ್ಜ್ವಲ ರಾಷ್ಟ್ರಪ್ರೇಮ ಅವನ ದೃಷ್ಟಿಪಥವನ್ನೇ ಬದಲಿಸಿದ್ದವು.

ಒಂದು ರಾತ್ರಿ ಊಟ ಮುಗಿಸಿ ಭಾವ, ಮೈದುನ ಹರಟೆ ಹೊಡೆಯುತ್ತ ಕುಳಿತರು.

ಭಾವನಾತರಂಗಗಳಿಗೆ ಸಿಕ್ಕುಬಿದಿದ್ದ ರಾಮಭಟ್ಟ, ನಿಡುಸುಯ್ದು,

“ನನ್ನ ಬಾಳು ಒಂದು ಬಾಳೇ ಭಾವ” ಎಂದ.

"ಏಕೆ ರಾಮಭಟ್ಟ."

"ಸ್ವರ್ಣಮರೀಚಿಕೆಯ ಬೆನ್ನು ಹತ್ತಿ ನಾನು ಆಡಬಾರದದುನ್ನಾಡಿದೆ ಮಾಡಬಾರದುದನ್ನು ಮಾಡಿದೆ."

"............................"

"ಮ್ಲೇಚ್ಛರ ಸಖ್ಯ ಬೆಳಸಿ ತಿನ್ನಬಾರದುದನ್ನು ತಿಂದೆ - ಕುಡಿಯ ಬಾರದುದನ್ನು ಕುಡಿದೆ."

"ಹೋಗಲಿ ಬಿಡು. ಆ ಜನ್ಮ ಕಳೆಯಿತಲ್ಲ!"

"ಆ ಜನ್ಮದ ಸ್ಮೃತಿಯನ್ನು ತಂದುಕೊಳ್ಳಬಾರದೆಂದು ಪ್ರಯತ್ನಿಸ ತ್ತಿದ್ದೇನೆ. ಆದರೆ ನನ್ನ ದುಷ್ಕರ್ಮ ಪರಿಪಾಕ ಮೂರ್ತಿವತ್ತಾಗಿ ಎದುರ ನಿಂತು ನಡೆಸುತ್ತಿದೆ. ದೈವದ್ರೋಹಿ - ಧರ್ಮದ್ರೋಹಿ - ದೇಶದ್ರೋಹಿ ಎಂದು ನನ್ನನ್ನು ಹೀಗಳೆಯುತ್ತಿದೆ. ಈ ಕೋಟಲೆಯಿಂದ ಪಾರಾಗು ಬಗೆಯೇ ನನಗೆ ಹೊಳೆಯುತ್ತಿಲ್ಲ."

"ಇದೇ ನೀನು ಬಂದಿರುವೆ. ನಾಲ್ಕು ದಿನ ಎಲ್ಲವನ್ನೂ ಮರೆತು ಸುಖವಾಗಿರು. ಮುಂದೇನು ಮಾಡಬೇಕೆನ್ನುವುದನ್ನು ಸಾವಕಾಶವಾ ಯೋಚಿಸಿದರಾಯಿತು – ಪುನಃ ದಿಲ್ಲಿಗೆ ಹೋಗುವ ಅವಶ್ಯಕವಿಲ್ಲವಷ್ಟೆ!"

"ದಿಲ್ಲಿ! ದಿಲ್ಲಿಯಿರುವ ದಿಕ್ಕಿನ ಕಡೆಗೂ ಮುಖ ತಿರುಗಿಸಲು ಮ ಸ್ಸಾಗುವುದಿಲ್ಲ. ದಿಲ್ಲಿಯೊಂದು ಪಟ್ಟಣವಲ್ಲ - ಅದು ಪಾಪಪೂರಿ ಗೊಂಡಾರಣ್ಯ. ಅಲ್ಲಿರುವವರು ಮನುಷ್ಯರೂಪಿನ ಹುಲಿ, ಚಿರತೆಗಳು."

"ನಿನ್ನ ಸಂಸರ್ಗದೋಷಕ್ಕೆ ಇಡಿಯ ದಿಲ್ಲಿಯನ್ನು ಆಕ್ಷೇಪಿಸಿದರೆ ಏನ ಸಾರ್ಥಕ ಭಾವ."

"ಸಿಂಗಮಾ. ನಿರುದ್ಯೋಗಿಯಾಗಿ ನಾನು ಹೇಗೆ ಕೂಡಲಿ. ನಿರ ದ್ಯೋಗಿಯ ಮನಸ್ಸು ಪಿಶಾಚಿಯ ತೌರುಮನೆಯಂತೆ! ಕೈ ತುಂಬ ಕೆಲ ವಿದ್ದಿದ್ದರೆ ನೆಟ್ಟಗಾಗುತ್ತಿತ್ತು."

"ಕೆಲಸವಿದ್ದೇ ಇದೆ. ನಿನ್ನಂಥ ತಂತ್ರಪ್ರವೀಣ ನಿರುದ್ಯೋಗಿಯಾ ಕೂಡುವ ಅವಶ್ಯಕವಿಲ್ಲ. ಇನ್ನು ನೂರು ಜನ ತಂತ್ರಜ್ಞರು ಬಂದರ ವಿಜಯನಗರ ಅವರಿಗೆ ಕೆಲಸ ಒದಗಿಸಲು ಸಿದ್ಧವಾಗಿದೆ."

"ಮಹಾಪ್ರಭುಗಳ ಹತ್ತಿರ ನನ್ನ ವಿಷಯ ಪ್ರಸ್ತಾಪಿಸುವೆಯಾ?"

ಸಿಂಗಮಭಟ್ಟ ಯೋಚಿಸುತ್ತಾ

"ಭಾವ, ಈ ಬಗ್ಗೆ ನಾನು ಒಂದೆರಡು ಸ್ಪಷ್ಟ ಮಾತುಗಳನ್ನಾಡಬೇಕಾಗಿದೆ. ನಿನ್ನ ನನ್ನ ವೈಮನಸ್ಯ ಹರಿದು, ವಿಶ್ವಾಸ ಬೆಳೆಯುವ ಸಮಯದಲ್ಲಿ ಒಡಕುನುಡಿ ಆಡುತ್ತಿದ್ದೇನೆಂದು ಬೇಸರ ಪಟ್ಟುಕೊಳ್ಳಬೇಡ. ಸತ್ಯ ಅಪ್ರಿಯವಾದುದಾದರೂ ಅದನ್ನು ಎದರಿಸುವುದು ಒಳ್ಳೆಯದಲ್ಲವೇ ?"

"ಸ್ಪಷ್ಟವಾಗಿಯೇ ಹೇಳು. ನಾನೇನೂ ಅಪಾರ್ಥಮಾಡಿಕೊಳ್ಳುವುದಿಲ್ಲ."

"ನೀನು ದಿಲ್ಲಿ ಸುಲ್ತಾನರ ಸೇವೆಯಲ್ಲಿದ್ದು ಇಲ್ಲಿಗೆ ಬಂದಿರುವೆ. ಅವರ ಸೇವೆಗೆ ನೀನು ಏಕೆ ಹೋದೆ – ಆ ಸೇವೆಯನ್ನು ಏಕೆ ಬಿಟ್ಟು ಬಂದೆ ಎಂಬುದಿನ್ನೂ ಸ್ಪಷ್ಟವಾಗಿಲ್ಲ. ದಿಲ್ಲಿಯ ವಾತಾವರಣ – ಅಲ್ಲಿನ ಧರ್ಮಾಂಧತೆ – ಸುಲ್ತಾನರ ಕಡೆಯವರ ಅಮಾನುಷ ವರ್ತನೆ ನಿನಗೆ ಅಸಹನೀಯವಾಗಿ ಮಾನಸಿಕ ಪರಿವರ್ತನೆಗೆ ಕಾರಣವಾಯಿತು ಎಂದು ಹೇಳುತ್ತಿರುವೆ – ನಾನು ನಿನ್ನ ಭಾವ. ನಿನ್ನ ಮಾತನ್ನು ನಾನು ನಂಬುತ್ತೇನೆ. ಆದರೆ ಈ ವಿವರಣೆಯನ್ನು ಸಾಮ್ರಾಟರು, ಮಂತ್ರಿಗಳು, ಪ್ರಜರು ಒಪ್ಪಿಕೊಳ್ಳುವರೇ ? ಪ್ರಭುಗಳ ಹತ್ತಿರ ನಿನ್ನ ವಿಷಯ ಇಂದೇ ಪ್ರಸ್ತಾಪಿಸಬಲ್ಲೆ – ರಾಮುಭಟ್ಟರ ಮಾನಸಿಕ ಪರಿವರ್ತನೆಯಾಗಿರುವುದಕ್ಕೆ ಆಧಾರವೇನು ? – ಎಂದು ಅವರು ಕೇಳಿದರೆ ನಾನೇನು ಉತ್ತರ ಹೇಳಲಿ. ಸ್ವಲ್ಪ ಕಾಲ ಯಾವ ಹವ್ಯಾಸಕ್ಕೂ ಹೋಗದೆ ತೆಪ್ಪಗಿರುವುದೇ ಲೇಸೆಂದು ನನ್ನ ಅಭಿಪ್ರಾಯ."

"ನಿಜ ನಿಜ. ವಿನಾಕಾರಣ ನಿನ್ನನ್ನು ಇಕ್ಕಟ್ಟಿಗೆ ಏಕೆ ಸಿಕ್ಕಿಸಲಿ. ನೀನು ಸೂಚಿಸಿದಂತೆ ಕೆಲಕಾಲ ಭಗವದ್ಧ್ಯಾನದಲ್ಲಿ ಹೊತ್ತುದೂಡುತ್ತೇನೆ. ವಿರೂಪಾಕ್ಷಸ್ವಾಮಿ, ಭುವನೇಶ್ವರಿ ದೇವಿಯರಾದರೂ ನನ್ನ ಮೇಲೆ ಕರುಣೆಯಿಟ್ಟು ಈ ಕರ್ಮ ಕತ್ತರಿಯಿಂದ ನನ್ನನ್ನು ಪಾರುಮಾಡಲಿ – ನನ್ನ ಪೂಜೆ, ಪಾರಾಯಣಗಳಿಗೆ ನೆರವು ನೀಡಲು ಒಬ್ಬ ಪಂಡಿತನನ್ನು ಗೊತ್ತುಮಾಡಿಕೊಡುವೆಯಾ ?"

"ಅವಶ್ಯಕವಾಗಿ ಆಗಲಿ ಶ್ರೀ ಗರು ವಿದ್ಯಾರಣ್ಯರ ಶಿಷ್ಯರಾಗಿದ್ದ ಶ್ರೀಕಂಠಶರ್ಮರು ಇಲ್ಲಿನ 'ಗಿರ್ವಾಣ ವಿದ್ಯಾಪೀಠ'ದ ವೇದಾಂತಾಚಾರ್ಯರಾಗಿದ್ದಾರೆ. ಅವರನ್ನೇ ಪ್ರಾರ್ಥಿಸಿಕೊಳ್ಳುತ್ತೇನೆ."

"ಬಹಳ ಸಂತೋಷ."

ಎಂದು ರಾಮುಭಟ್ಟ ಉತ್ತರಿಸಿದ.

ಒಳಗೆ ಬಂದ ಸಿಂಗಮಭಟ್ಟ ತಂಗಿಯನ್ನು ಕಂಡು,

"ಕೇಳಿದೆಯಾ ವಿಜಯಾ ?" ಎಂದ.

"ಕೇಳಿದೆ."

"ಭಾವನ ಮನಸ್ಸು ಪರಿವರ್ತನೆಗೊಂಡಿರುವುದು ನಿಜವೇ ?"

"ನಾನು ಸಂದಿಗ್ಧಕ್ಕೆ ಸಿಲುಕಿದ್ದೇನೆ ಅಣ್ಣಯ್ಯಾ. ನಿಜವೆಂದು ಧೈರ್ಯವಾಗಿ ಹೇಳಲಾರೆ - ನಿಜವಲ್ಲ ಎಂದು ಹೇಳಲೂ ಆರೆ."

"ಭಾವ ಹೇಳಿದಂತೆ ಅವನಿಗೆ ಕೈತುಂಬ ಕೆಲಸವಿದ್ದರೆ ಒಳ್ಳೆಯದೇನೋ ಎನಿಸುತ್ತದೆ."

"..........................."

"ಏಕೆ ವಿಜಯ – ಸುಮ್ಮನಾದೆ."

"ನೀನು ಅವರಿಗೆ ಹೇಳಿದ ಮಾತು ನ್ಯಾಯವಾಗಿದೆ. ನಾಲ್ಕುದಿನ ತಡೆದು ತರುವಾಯ ಕೆಲಸದ ವಿಷಯ ಯೋಚಿಸುವುದು ಒಳ್ಳೆಯದು. ನಾಳೆ ಏನಾದರೂ ಹೆಚ್ಚು ಕಡಿಮೆಯಾದರೆ ಎಲ್ಲರೂ ದೋಷಭಾಗಿಗಳಾಗುತ್ತೇವೆ."

"ವಿಜಯಾ – ನೀನು ನನ್ನಲ್ಲಿ ಏನನ್ನೂ ಮರೆಮಾಚುತ್ತಿಲ್ಲವೇ ?"

"ಏನಣ್ಣಾ – ನಿನ್ನಲ್ಲಿ ನಾನು ಮರೆಮಾಚಬೇಕಾದದ್ದೇನಿದೆ. ಇದ ಸಂಗತಿ ನಾನು ನಿನಗೆ ಹೇಳಿಯೇ ಇದ್ದೇನಲ್ಲ."

"ಆಗಲಿ."

ಎಂದು ಸಿಂಗಮಭಟ್ಟ ಸುಮ್ಮನಾದರೂ ಅವನ ಮನಸ್ಸಿನ ಕಳವಳವು ತಪ್ಪಲಿಲ್ಲ.

೬

ಶ್ರೀಕಂಠಶರ್ಮ ಯಾರಲ್ಲಿಯೂ ಹೋಗುತ್ತಿರಲಿಲ್ಲ. ವಿದ್ಯಾಪೀಠ ಬಿಟ್ಟರೆ ಪರ್ಣಕುಟಿ; ಪರ್ಣಕುಟಿ ಬಿಟ್ಟರೆ ವಿದ್ಯಾಪೀಠ. ಸಾಯಣರು ಮುಖ್ಯಮಂತ್ರಿಗಳಾದ ಮೇಲೆ ಶ್ರೀಕಠಶರ್ಮನ ಪಾಠಪ್ರವಚನಕ್ಕೆ ಅಡಚಣೆ ಯುಂಟಾಗಿತ್ತು. ಸಾಯಣರು ಹೆಚ್ಚು ಕಾಲ ಅನಿವಾರ್ಯವಾಗಿ ಮಂತ್ರಿ

ಮಹಲಿನಲ್ಲೇ ಕಳೆಯಬೇಕಾಗುತ್ತಿದ್ದುದರಿಂದ ಪರ್ಣಕುಟಿಯೆಲ್ಲಾ ಶ್ರೀಕಂಠ ಶರ್ಮನದೇ ಆಗಿತ್ತು.

ಸಿಂಗಮಭಟ್ಟನ ಮೇಲಣ ವಿಶ್ವಾಸ ಗೌರವಕ್ಕಾಗಿ ಶ್ರೀಕಂಠಶರ್ಮ, ರಾಮಭಟ್ಟನ ಗುರುವಾಗಲು ಒಪ್ಪಿಕೊಂಡಿದ್ದ.

ರಾಮಭಟ್ಟ ಪ್ರತಿನಿತ್ಯ ಸೂರ್ಯೋದಯ ಮುನ್ನವೇ ಎದ್ದು ತುಂಗಭದ್ರೆಯಲ್ಲಿ ಮಿಂದು ಆಹ್ನೀಕ ಮುಗಿಸಿಕೊಂಡು ಭುವನೇಶ್ವರಿ, ವಿರೂಪಾಕ್ಷರ ದರ್ಶನಪಡೆದು ಪರ್ಣಕುಟಿಗೆ ಹೋಗುತ್ತಿದ್ದ. ವಿದ್ಯಾಪೀಠಕ್ಕೆ ಹೋಗುವವರೆಗೂ ಶ್ರೀಕಂಠಶರ್ಮ ಪಾಠ ಹೇಳುತ್ತಿದ್ದ. ಪಾಠ ಮುಗಿದ ಮೇಲೆ ರಾಮಭಟ್ಟ ಮನೆಸೇರುತ್ತಿದ್ದ.

ಒಂದು ಶುಕ್ರವಾರ.

ಸಿಂಗಮಭಟ್ಟ ಮನೆಯಲ್ಲಿರಲಿಲ್ಲ.

ಅರಮನೆಯ ಬೋಯಿಗಳು ಒಂದು ಮೇನೆ ತಂದು, ಸಿಂಗಮಭಟ್ಟನ ಮುಂದೆ ಇಳುಹಿದರು

ಮೇನೆಯ ಜತೆ ಬಂದಿದ್ದ ಬಿಚ್ಚುಗತ್ತಿ ಭೀಮನಾಯಕ, ಹೊರಬಾಗಿಲಲ್ಲಿ ನಿಂತು

"ಬುದ್ಧಿ - ಸಿಂಗಮಭಟ್ಟರೇ" ಎಂದು ಕೂಗಿದ.

ರಾಮಭಟ್ಟ ಹೊರಗೆ ಬಂದು,

"ಸಿಂಗಮಭಟ್ಟರು ಮನೆಯಲಿಲ್ಲ - ಯಾರು ನೀನು ?" ಎಂದು ಕೇಳಿದ.

"ನಾನು ರಾಣಿವಾಸದ ಕಾಪಿನ ದಳನಾಯಕ - ನನ್ನ ಹೆಸರು ಭೀಮನಾಯಕ."

"ಏನಾಗಬೇಕಾಗಿತ್ತು ?"

"ನೀವು ಯಾರು ಬುದ್ಧಿ."

"ನಾನೇ ರಾಮಭಟ್ಟ. ಸಿಂಗಮಭಟ್ಟರ ಭಾವ."

"ವಿಜಯಲಕ್ಷ್ಮಮ್ಮಣ್ಣಿಯವರ ಯಜಮಾನರೇ ?"

"ಹೌದು."

"ಶುಕ್ರವಾರದ ಪೂಜೆಗೆ ಅರಮನೆಗೆ ಬರಬೇಕೆಂದು ವಿಜಯಲಕ್ಷ್ಮಮ್ಮಣ್ಣಿಯವರಿಗೆ ರಾಜಮಾತೆ ಶ್ರೀ ಶ್ರೀ ಗೌರಾಂಬಿಕಾದೇವಿಯವರು

ಹೇಳಿ ಕಳಿಸಿದ್ದಾರೆ. ಅವರನ್ನು ಕರೆದುಕೊಂಡು ಬರಲು ಮೇನೆ ಕಳಿಸಿದ್ದಾರೆ ಬುದ್ಧಿ."

ಹರ್ಷಗೊಂಡ ರಾಮಭಟ್ಟ,

"ಸ್ವಲ್ಪ ತಡೆ ಭೀಮನಾಯಕ. ಒಳಗೆ ಹೋಗಿ ತಿಳಿಸುತ್ತೇನೆ."

ಎಂದು ಉತ್ಸಾಹದಿಂದ ಒಳಗೆ ಹೋಗಿ ವಿಜಯಲಕ್ಷ್ಮಿಗೆ ಸುದ್ದಿ ಮುಟ್ಟಿಸಿ,

"ಬೇಗ ಸಿದ್ಧವಾಗು - ಭೀಮನಾಯಕ ಕಾದಿದ್ದಾನೆ. ರಾಜಮಾತೆಯುವರನ್ನು ಕಾಯಿಸುವುದು ತರವಲ್ಲ."

"ಅಣ್ಣಯ್ಯನನ್ನು ಕೇಳದೆ ನಾನು ಹೇಗೆ ಹೋಗಲಿ."

"ಅಣ್ಣಯ್ಯ ಹೇಳಿರುವ ಹೊತ್ತಿಗೇ ರಾಜಮಾತೆಯುವರು ನಿನಗೆ ಹೇಳಿಕಳಿಸಿದ್ದಾರೆ. ಇಂಥ ಅವಕಾಶ ಕಳೆದುಕೊಳ್ಳುವುದುಂಟೇ ವಿಜಯಾ - ಹೋಗಿ ಬಾ."

ವಿಜಯ ಅಲಂಕೃತಳಾಗಿ ಹೊರಡಲನುವಾಗಲು ರಾಮಭಟ್ಟ ತೃಪ್ತಿ ವ್ಯಕ್ತಪಡಿಸುತ್ತಾ

"ವಿಜಯಾ........" ಎಂದ.

"ಏನು ?"

"ಅವಕಾಶ ಸಿಕ್ಕಿದರೆ ರಾಜಮಾತೆಯುವರಿಗೂ, ಮಹಾರಾಣಿಯುವರಿಗೂ ನನ್ನ ವಿಷಯ ಹೇಳು".

"ಏನೆಂದು ಹೇಳಲಿ ?"

"ಮಹಾಪ್ರಭುಗಳು ನನ್ನನ್ನು ಕರೆಸುವ ವ್ಯವಸ್ಥೆ ಮಾಡಲೆಂದು."

"ರಾಜ್ಯದ ವ್ಯವಹಾರದಲ್ಲಿ ರಾಜಮಾತೆಯರು ಕೈ ಹಾಕುವರೋ ಇಲ್ಲವೋ ? - ಅಣ್ಣನಿಗೆ ಹೇಳಿದ್ದೀರಲ್ಲ. ಸ್ವಲ್ಪ ದಿನ ಸುಮ್ಮನಿರಬಾರದೇ ?"

"ರಾಜಮಾತೆಯುವರ ಮುಂದೆ ನನ್ನ ಹೆಸರು ಪ್ರಸ್ತಾಪಿಸಿದರೆ ನಿನ್ನ ಗಂಟು ಕಳೆದುಹೋಗುತ್ತದೆಯೇ ? ಲೋಕಾಭಿರಾಮವಾಗಿ ಅವರು ನನ್ನ ವಿಷಯ ಕೇಳಿಯೇ ಕೇಳುತ್ತಾರೆ - ಆಗ ಹೇಳಿದರಾಯಿತು.

"ಆಗಲಿ. ಸಮಯಾನುಕೂಲ ದೊರೆತರೆ ಹೇಳುತ್ತೇನೆ."

ಎಂದು ಮೇನೆಯಲ್ಲಿ ಕುಳಿತಳು.

ಶುಕ್ರವಾರದ ಪೂಜೆ ಆರಂಭವಾಗಲು ಕಾಲಾವಕಾಶವಿತ್ತು.

ರಾಣೀವಾಸದೊಳಗೆ ಬಂದ ವಿಜಯಲಕ್ಷ್ಮಿಯನ್ನು ಆದರದಿಂದ ಸ್ವಾಗತಿಸಿ ರಾಜಮಾತೆ ಗೌರಾಂಬಿಕಾದೇವಿಯರು,

"ವಿಜಯಲಕ್ಷ್ಮಿ, ನಿನ್ನನ್ನಿಲ್ಲಿ ಕರೆತರಬೇಕೆಂದು ಸಿಂಗಮುಭಟ್ಟರಿಗೆ ಎರಡು ಮೂರು ಬಾರಿ ಹೇಳಿಕಳಿಸಿದೆವು. ಅವರೇಕೆ ಮರೆತರೋ ಕಾಣೆವು. ಹೇಗೂ ಶುಕ್ರವಾರ - ಪೂಜೆಗೆ ನೀನು ಬರಲಿ ಎಂದು ನಾವೇ ನೇರವಾಗಿ ಹೇಳಿಕಳಿಸಿದೆವು."

"ತಾಯಿ - ಅಂದು ಶ್ರೀ ವಿರುಪಾಕ್ಷಸ್ವಾಮಿಯ ದೇವಾಲಯದ ಮುಂದೆ ನನ್ನನ್ನು ಆಕಸ್ಮಿಕವಾಗಿ ಕಂಡಿರಿ. ಅದನ್ನು ನೀವು ಮರೆಯದಿರುವುದು ಹೆಚ್ಚು."

"ವಿಜಯ, ನಿನ್ನ ಅಣ್ಣಂದಿರು ಸಿಂಗಮುಭಟ್ಟರು ಸಾಮ್ರಾಜ್ಯಕ್ಕೆ ಸಲ್ಲಿಸಿರುವ ಸೇವೆಗೆ ನಾವು ಎಷ್ಟು ಋಣಿಗಳಾಗಿದ್ದರೂ ಸಾಲದು. ರಾಜ್ಯ ರಕ್ಷಣೆಗಾಗಿ ಅವರು ವಹಿಸಿರುವ ಶ್ರಮಕ್ಕೆ ನಾವು ಇಷ್ಟನ್ನಾದರೂ ಮಾಡಬೇಡವೇ ? - ನಿನ್ನ ವಿಷಯ ಹೇಳು - ನಿನ್ನ ಯಜಮಾನರ ವಿಷಯ ಹೇಳು."

ಎಂದು ಸೊಸೆಯರು ಪಂಪಾದೇವಿ, ಮಲ್ಲಾಂಬಿಕೆಯರನ್ನೂ ಹತ್ತಿರ ಕರೆದು ಕೂಡಿಸಿಕೊಂಡು,

"ಹೇಳು ತಾಯಿ" ಎಂದರು.

ವಿಜಯಲಕ್ಷ್ಮಿ ಸಾದ್ಯಂತವಾಗಿ ತನ್ನ ಕಥೆ ಹೇಳಿ ಮುಗಿಸಲು, ರಾಜಮಾತೆಯರು,

"ರಾಮುಭಟ್ಟರು ಮುಸ್ಲಿಮಧರ್ಮಕ್ಕೆ ಮತಾಂತರ ಹೊಂದಲು ನಿಶ್ಚಯಿಸಿದ್ದರಂತೆ – ನೀನು ಹಟಹಿಡಿದು ಆ ಯೋಚನೆ ಬಿಡಿಸಿದೆಯಂತೆ - ನಿಜವೇ ವಿಜಯಲಕ್ಷ್ಮಿ."

ವಿಜಯಲಕ್ಷ್ಮಿ ಉತ್ತರಿಸಲಿಲ್ಲ.

ಅವಳ ಕಣ್ಣುಗಳಿಂದ ಹನಿಗಳು ತೊಟ್ಟಿಕ್ಕಿದವು.

ರಾಜಮಾತೆಯವರು ಅಂತಃಕರಣಪೂರಿತರಾಗಿ

"ಹೋಗಲಿ ಬಿಡು ತಾಯಿ. ತುಂಬಿದ ಶುಕ್ರವಾರ, ಮುತ್ತೈದೆ - ನೀನು ಕಣ್ಣೀರು ಹಾಕಬಾರದು – ರಾಮುಭಟ್ಟರಂಥ ತಂತ್ರನಿಪುಣರು ಸ್ಥಾನ, ಮಾನ, ಸಂಪತ್ತುಗಳಿಗಾಗಿ ಚಿಂತಿಸಬೇಕೇ? ಭರತಖಂಡದಲ್ಲಿರುವ ಯಾವ ಹಿಂದೂ ಆಸ್ಥಾನವಾದರೂ ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿತ್ತು.

ಮುಸ್ಲಿಮ್ ರಾಜ್ಯಗಳು ಹಿಂದೂ ರಾಜ್ಯಗಳನ್ನು ಕಬಳಿಸಿ, ಇಡಿಯ ಭಾರತವನ್ನು ಅರ್ಧಚಂದ್ರ ಬಾವುಟದ ಪಾದದಡಿ ತಳ್ಳಬೇಕೆಂದು ಪ್ರಯತ್ನಿಸುತ್ತಿರುವಾಗ ರಾಮಭಟ್ಟರಂಥ ತಿಳಿದವರು ದಿಲ್ಲಿಸುಲ್ತಾನರ ಊಳಿಗಕ್ಕೆ ಹೋಗುವುದು ಹಿಂದೂತ್ವಕ್ಕೆ ಅಪಮಾನಮಾಡಿದಂತಲ್ಲವೇ ?"

"ಮಹಾತಾಯಿಯವರಿಗೆ ಎಲ್ಲವೂ ತಿಳಿದಿದೆ."

"ಆಳುವ ಮಹಾಪ್ರಭುಗಳು ಸಮಸ್ತ ವಿಷಯವನ್ನೂ ನಮಗೆ ತಿಳಿಸಿ, 'ನಾವೇನು ಮಾಡಬೇಕು ಅಮ್ಮಾಜಿ' ಎಂದು ಕೇಳಿದರು. ಅವರಿಗೆ ಕೂಡಲೆ ನಾವು ಉತ್ತರಕೊಡದೆ 'ಅವಸರ ಪಡುವುದುಬೇಡ. ನಾಲ್ಕು ದಿನ ಕಳೆಯಲಿ' ಎಂದು ಹೇಳಿದೆವು. ವಿಜಯಾ - ನೀನು ಹೇಳು, ಮಹಾಪ್ರಭುಗಳ ಪ್ರಶ್ನೆಗೆ ಉತ್ತರ. ರಾಜ್ಯಕ್ಕಂತೂ ರಾಮಭಟ್ಟರಂಥ ತಂತ್ರ ಪ್ರವೀಣರ ಅಗತ್ಯವಿದೆ. ನೀನು ಒಪ್ಪುವುದಾದರೆ ನಾಳೆಯೇ ಅವರಿಗೆ ಸ್ಥಾನ ಕಲ್ಪಿಸಿ ಕೊಡಲಾಗುವುದು."

ಉತ್ತರಿಸಲು ವಿಜಯಲಕ್ಷ್ಮಿಗೆ ಬಾಯೇ ಇಲ್ಲದಂತಾಯಿತು.

ದೀರ್ಘಾಲೋಚನಾಮಗ್ನಳಾಗಿ ಕುಳಿತ ವಿಜಯಲಕ್ಷ್ಮಿಯನ್ನು ಎಚ್ಚರಿಸುತ್ತಾ ರಾಜಮಾತೆಯವರು,

"ಇದಕ್ಕೆ ಇಷ್ಟು ಯೋಚಿಸಬೇಕೆ ?" ಎಂದರು.

"ಸದ್ಯಕ್ಕೆ ತಾವು ಯಾವ ತೊಂದರೆಯನ್ನೂ ತೆಗೆದುಕೊಳ್ಳಬಾರದೆಂದು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ ಮಹಾತಾಯಿ. ಶ್ರೀಕಂಠಶರ್ಮರ ಬಳಿ ಅವರು ಪಾಠಪ್ರವಚನ ಆರಂಭಿಸಿದ್ದಾರೆ. ಒಂದು ಮಂಡಲ ಕಳೆದ ನಂತರ ವಿಷಯವನ್ನು ಪುನರಾಲೋಚಿಸಬಹುದು."

"ವಿಜಯಲಕ್ಷ್ಮಿ, ನಮಗೆ ಒಂದೆರಡು ಅನುಮಾನಗಳಿವೆ - ಪರಿಹರಿಸುತ್ತೀಯಾ ?

"ಪ್ರಯತ್ನಿಸುತ್ತೇನೆ."

"ರಾಮಭಟ್ಟರು ಇನ್ನೂ ದಿಲ್ಲಿಯ ಸಂಪರ್ಕ ಇಟ್ಟುಕೊಂಡಿರುವರೇ ?

"ಆ ವಿಷಯ ನಿಜವಾಗಿ ನನಗೆ ತಿಳಿಯದು ಮಾತಾಯಿ."

"ಅವರು ದಿಲ್ಲಿ, ಬಹಮನಿ ಸುಲ್ತಾನರ ಗೂಢಚಾರರಾಗಿ ಇಲ್ಲಿಗೆ ಬಂದಿಲ್ಲವಷ್ಟೆ !"

"ಅವರ ಅಂತರಂಗ ನಾನರಿಯೆ ಮಾತಾಯಿ."

"ವಿಜಯಲಕ್ಷ್ಮೀ – ನೀನು ಸಾಧ್ವಿ, ಪತಿಭಕ್ತಿಪರಾಯಣೆ. ನಿನಗೆ ಶಕ್ಯವಿದ್ದಷ್ಟು ಪತಿಯ ಧರ್ಮವನ್ನು ಕಾಪಾಡಿಕೊಂಡು ಬಂದಿರುವೆ. ಪತಿ ಭಕ್ತಿಯಷ್ಟೇ ಮುಖ್ಯವಾದುದು ರಾಜಭಕ್ತಿ, ದೇಶಭಕ್ತಿ ಎಂಬುದನ್ನು ನಾನು ಹೊಸದಾಗಿ ನಿನಗೆ ಹೇಳಬೇಕಾದದ್ದಿಲ್ಲ. ಈ ಸಾಮ್ರಾಜ್ಯಸ್ಥಾಪನೆಯಾಗಿ ಇನ್ನೂ ಅರ್ಧಶತಮಾನವಾಗಿಲ್ಲ. ಅದರ ಬಹ್ವಂಶವನ್ನು ನಾವು ರಣರಂಗ ದಲ್ಲಿಯೇ ಕಳೆದಿದ್ದೇವೆ. ಶ್ರೀಗುರು ವಿದ್ಯಾರಣ್ಯರ ತಪೋಬಲ, ನಮ್ಮ ಭಾವನವರು, ಪತಿದೇವರ ಅತುಲ ಶೌರ್ಯಪ್ರತಾಪದಿಂದ ಸಾಮ್ರಾಜ್ಯ ಈ ಸ್ಥಿತಿಗೆ ಬಂದು, ಈಗ ಸ್ವಲ್ಪ ನೆಮ್ಮದಿ - ಶಾಂತಿಯನ್ನು ಕಾಣುತ್ತಿದೆ. ನಮ್ಮ ಸುತ್ತ ವ್ಯಾಪಿಸಿರುವ ಮುಸ್ಲಿಮ್ ರಾಜ್ಯಗಳು, ದಿಲ್ಲಿಯ ಸುಲ್ತಾನಶಾಹಿ ನಮ್ಮ ಮೇಲೆ ಗಿಡುಗನಂತೆ ಬಂದೆರಗಲು ಅವಕಾಶಕಾಯುತ್ತಿದ್ದಾರೆ. ಈ ಸಂಧಿ ಕಾಲದಲ್ಲಿ ನಾವು ನಮ್ಮ ಪ್ರಜೆಗಳ ಭಕ್ತಿ ವಿಶ್ವಾಸಗಳನ್ನಷ್ಟೇ ಅಲ್ಲ - ಇಡಿಯ ಭಾರತದ ಸಮಸ್ತ ಹಿಂದೂ ಜನರ ಭಕ್ತಿ ವಿಶ್ವಾಸವನ್ನು ಅಪೇಕ್ಷಿಸುತ್ತೇವೆ. ವಿಜಯನಗರದ ಬದುಕು, ಸಾವುಗಳನ್ನೇ ಹಿಂದೂ ಧರ್ಮ ಅವಲಂಬಿಸಿದೆ ಯೆನ್ನುವುದನ್ನು ಸಮಸ್ತರೂ ನೆನಪಿನಲ್ಲಿಟ್ಟಿರಬೇಕು."

ಉದ್ವಿಗ್ನಳಾದ ವಿಜಯಲಕ್ಷ್ಮಿ, ರಾಜಮಾತೆಯವರ ಪಾದಮುಟ್ಟಿ,

"ಮಾತಾಯಿ, ಪಾದಮುಟ್ಟಿ ಆಣೆಮಾಡುತ್ತೇನೆ. ನನ್ನಿಂದಾಗಲಿ, ನನ್ನವರಿಂದಾಗಲಿ ವಿಜಯನಗರ ಸಾಮ್ರಾಜ್ಯಕ್ಕೆ ಕಿಂಚಿತ್ತಾದ ಅಪಮಾನ ವಾಗದಂತೆ ನಾನು ನೋಡಿಕೊಳ್ಳುತ್ತೇನೆ. ಬುದ್ಧ್ಯಾಪೂರ್ವಕವಾಗಿ ನಮ್ಮಿಂದ ಅಪಚಾರವಾದರೆ, ತಾವು ಪ್ರಾಣಾಂತಿಕ ಶಿಕ್ಷೆ ವಿಧಿಸಿ, ಸಾಮ್ರಾಜ ಗೌರವವನ್ನು ರಕ್ಷಿಸಬೇಕು. ಈ ಬಗ್ಗೆ ತಾವು ನಿಶ್ಚಿಂತರಾಗಿರಬೇಕೆಂದು ನನ್ನ ಪ್ರಾರ್ಥನೆ." ಎಂದಳು.

ಸುಪ್ರೀತರಾದ ರಾಜಮಾತೆಯವರು ವಿಜಯಲಕ್ಷ್ಮಿಯನ್ನಪ್ಪಿ,

"ಏಳು ತಾಯಿ - ಪೂಜೆಗೆ ಹೋಗೋಣ - ಮುತ್ತೈದೆಯರು ಕಾದಿದ್ದಾರೆ." ಎಂದರು.

೧೦

ಉತ್ತರ ಭಾರತದಿಂದ ಬಂದಿದ್ದ ಸಾಧು ಸನ್ಯಾಸಿಗಳು ಭೀಮದ್ವಾರದ ಬಳಿಯಿದ್ದ ಮಂಟಪದಲ್ಲಿ ಬೀಡುಬಿಟ್ಟಿದ್ದ ಸುದ್ದಿ ವಿಜಯನಗರ ರಾಜಧಾನಿಯಲ್ಲಿ ವ್ಯಾಪಿಸಲು ವಿಳಂಬವಾಗಲಿಲ್ಲ. ರಾಜಧಾನಿಯ ಸಂಪ್ರದಾಯಾನುಸಾರ ಸಾಧು ಸನ್ಯಾಸಿಗಳಿಗೆ ಎಲ್ಲ ಅನುಕೂಲ ಕಲ್ಪಿಸಿಕೊಡಲು ಮುದ್ದಪ್ಪ ದಣ್ಣಾಯಕರೇ ಆಜ್ಞೆ ಮಾಡಿದ್ದರು.

ಭಗವಾನ್ ಹರನಾರಾಯಣ ಗೋಸ್ವಾಮಿಗಳ ಕೀರ್ತಿಪರಿಮಳ ಇಡಿಯ ರಾಜಧಾನಿಯಲ್ಲಿ ವಿಸ್ತರಿಸಿತು.

ಭಗವಾನರು ಅಪರೋಕ್ಷಜ್ಞಾನಿಗಳು.

ಭಗವಾನರು ಪವಾಡಪುರುಷರು.

ಭಗವಾನರ ಕಟಾಕ್ಷವೀಕ್ಷಣದಿಂದಲೇ ಸಮಸ್ತ ರೋಗಗಳೂ ನಿವಾರಣೆಯಾಗುತ್ತವೆ.

ತಪಃಶಕ್ತಿಯಿಂದ ಭಗವಾನರು ಸತ್ತವರನ್ನು ಬದುಕಿಸಬಲ್ಲರು

ಎಂದು ಜನ ಹಾಡಿ ಹೊಗಳಲಾರಂಭಿಸಿದ್ದರು.

ಊರಿಗೆ ಊರೇ ಭೀಮದ್ವಾರಕ್ಕೆ ಯಾತ್ರೆ ಮಾಡಲಾರಂಭಿಸಿತು.

ಭಗವಾನರ ಕೀರ್ತಿಕಥನ ಕೇಳಿದ ಮಹಾ ಪ್ರಭುಗಳೇ ಮುದ್ದಪ್ಪ ನಾಯಕರಿಗೆ,

"ಹೇಗಾದರೂ ಮಾಡಿ ಭಗವಾನರನ್ನು ಅರಮನೆಗೆ ಕರೆದುಕೊಂಡು ಬನ್ನಿ. ಆ ಮಹಿಮಾಪುರುಷರ ದರ್ಶನಭಾಗ್ಯ ಪಡೆದು ನಾವೂ ರಾಣೀವಾಸದವರೂ ಕೃತಾರ್ಥರಾಗುತ್ತೇವೆ" ಎಂದರು.

ಮುದ್ದಪ್ಪನಾಯಕರ ಪ್ರಾರ್ಥನೆ ಲಾಲಿಸಿದ ಭಗವಾನರು,

"ನಾವು ಸಾಧು ಸನ್ಯಾಸಿಗಳು – ನಮಗೇಕೆ ರಾಜಮರ್ಯಾದೆ. ಊರಿನ ಸಂಪರ್ಕ, ಜನಗಳ ಸಂಗ ಕೂಡ ನಮಗಿಷ್ಟವಿಲ್ಲ"

ಎಂದು ಅಪ್ಪಣೆ ಕೊಡಿಸಿದ್ದರು.

ಭಕ್ತಜನ ತೆಗೆದುಕೊಂಡು ಹೋಗಿ ಒಪ್ಪಿಸುತ್ತಿದ್ದ ಫಲ, ಪುಷ್ಪ, ವಸ್ತ್ರ, ಕಾಣಿಕೆಗಳನ್ನು ಭಗವಾನರು ಬಡಭಕ್ತರಿಕೆ ಹಂಚಿಬಿಡುತ್ತಿದ್ದರು. ಅವರ ಅನಾಸಕ್ತಿ ಜನರ ಭಕ್ತಿಯನ್ನು ನೂರ್ಮಡಿಸಿತ್ತು.

ಅಧ್ಯಾತ್ಮ ಚಿಂತನೆಯಲ್ಲೇ ಇದ್ದ ರಾಮಭಟ್ಟನಿಗೆ ಮಹದಾಶ್ರಯ ಸಿಕ್ಕಿದಂತಾಯಿತು.

ಬೆಳಿಗ್ಗೆ, ಸಂಜೆ ಅವನು ತಪ್ಪದೆ ಭೀಮದ್ವಾರಕ್ಕೆ ಹೋಗಿ ಭಗವಾನರ ದರ್ಶನಪಡೆದು ಬರುತ್ತಿದ್ದ. ಒಂದೊಂದು ದಿನ ಅಲ್ಲಿಯೇ ನಿಂತು ಮಾರನೆಯ ಬೆಳಿಗ್ಗೆಯೋ ಮಧ್ಯಾಹ್ನವೋ ಮನೆ ತಲುಪುತ್ತಿದ್ದ.

ಭಗವಾನರ ದರ್ಶನ ಪಡೆಯಲು ಕುತೂಹಲಿಯಾಗಿದ ವಿಜಯಲಕ್ಷ್ಮಿ ಒಂದು ದಿನ ಗಂಡನಿಗೆ,

"ಜತೆಯಲ್ಲಿ ನನ್ನನ್ನೂ ಕರೆದುಕೊಂಡು ಹೋಗಿ ಭಗವಾನರ ದರ್ಶನ ಮಾಡಿಸಬಾರದೇ ?" ಎಂದಳು.

"ಆಗಲಿ – ನೋಡುವ"

ಎಂದು ರಾಮಭಟ್ಟ ಕಾಲದೂಡಿಕೊಂಡೇ ಬಂದ.

ಭಗವಾನರು ವಿಜಯನಗರಕ್ಕೆ ಬಂದು ಹನ್ನೆರಡು ದಿವಸಗಳಾಗಿದ್ದರೂ ರಾಮಭಟ್ಟ ಹೆಂಡತಿಯನ್ನು ಜತೆಯಲ್ಲಿ ಕರೆದುಕೊಂಡು ಹೋಗಲಿಲ್ಲ.

ಒಂದು ದಿನ ಸಂಜೆ ವಿಜಯಲಕ್ಷ್ಮಿ ಭಗವಾನರ ದರ್ಶನಕ್ಕೆ ಹೊರಟಿದ್ದ ಹೆಂಗಸರ ತಂಡದೊಂದಿಗೆ ಹೊರಟೇ ಬಿಟ್ಟಳು.

ಭೀಮದ್ವಾರದ ಬಳಿಯಿದ್ದ ಮಂಟಪದ ಸಾಲುಗಂಬದ ಹಜಾರದಲ್ಲಿ ಮೆತ್ತೆ, ಲೋಡುಗಳ ಸುಖಾಸನ. ಭಗವಾನರು ಅದರ ಮೇಲೆ ಉಪಸ್ಥಿತರಾಗಿದ್ದರು. ಅವರ ಸುತ್ತಲೂ ಮೂವತ್ತು, ಮೂವತ್ತೈದು ಶಿಷ್ಯರ ತಂಡ.

ಸ್ವಲ್ಪ ಸ್ಥೂಲಾಕಾರದ ಭಗವಾನರು ಶುದ್ಧ ಕಾವಿಯ ಲುಂಗಿ, ಅಂಗಿ ಧರಿಸಿ, ತಲೆಯ ಮೇಲೆ ರುಮಾಲು ಧರಿಸಿದ್ದರು. ಅವರ ಕೊರಳಿನ ತುಂಬ ತುಳಸೀ ಮಾಲೆಗಳು. ಆಗಾಗ್ಗೆ ತಮ್ಮ ನೀಳವಾದ ಗಡ್ಡ ನೀವಿಕೊಂಡು, ಭಕ್ತಜನ ಕೇಳುತ್ತಿದ್ದ ಪ್ರಶ್ನೆಗಳಿಗೆ ಫಾರಸಿ ಭಾಷೆಯಲ್ಲಿ ಉತ್ತರ ಕೊಡುತ್ತಿದ್ದರು. ಅವರ ಸಮೀಪದಲ್ಲಿ ಕುಳಿತಿರುತ್ತಿದ್ದ ರಾಮಭಟ್ಟ ಗುರುವಾಣಿಯನ್ನು ಕನ್ನಡಕೆ ಅನುವಾದ ಮಾಡಿ ಹೇಳುತ್ತಿದ್ದ.

ಭಕ್ತಜನ ಮಂಟಪದ ಮೇಲೆ ಹೋಗಲು ಅಪ್ಪಣೆಯಿರಲಿಲ್ಲ ಎಲ್ಲರೂ ಕೆಳಗೇ ನಿಂತು ಪ್ರಶ್ನೆ ಕೇಳಬೇಕು – ಕಾಣಿಕೆ ಅರ್ಪಿಸಬೇಕು. ಭಗವಾನರ ಶಿಷ್ಯನೊಬ್ಬ ಅವುಗಳನ್ನೊಯ್ದು ಗುರುಗಳಿಗೆ ಒಪ್ಪಿಸುತ್ತಿದ್ದ.

ಮಂಟಪದ ಬಳಿ ಹೋಗಲು ವಿಜಯಲಕ್ಷ್ಮಿಗೆ ಧೈರ್ಯವಾಗಲಿಲ್ಲ.

ಗಂಡನ ಅಪ್ಪಣೆ ಪಡೆಯದೆ ಬಂದಿದ್ದ ಅವಳ ಎದೆ ಡವಗುಟ್ಟುತ್ತಿತ್ತು. ಎಲ್ಲಿ ಗಂಡನ ಕಣ್ಣಿಗೆ ಬೀಳುವೆನೋ ಎಂದು ಹೆದರಿದ್ದ ವಿಜಯಲಕ್ಷ್ಮಿ ಮುಖದ ತುಂಬ ಅವಕುಂಠನ ಧರಿಸಿದ್ದಳು.

ಹೆಣ್ಣುಮಕ್ಕಳ ಗುಂಪಿನ ಮಧ್ಯೆ ನಿಂತಿದ್ದ ವಿಜಯಲಕ್ಷ್ಮಿಯನ್ನು ಯಾರೂ ಗುರುತಿಸಲಾಗುತ್ತಿರಲಿಲ್ಲ.

ಭಗವಾನರನ್ನೂ ಅವರ ಶಿಷ್ಯಮಂಡಳಿಯನ್ನೂ ಎವೆಯಿಕ್ಕದೆ ಕಾಲು ಗಂಟೆ ನೋಡುತ್ತ ನಿಂತಿದ್ದ ವಿಜಯಲಕ್ಷ್ಮಿ ಯಾರ ಕಣ್ಣಿಗೂ ಬೀಳದೆ, ಮೆಲ್ಲನೆ ನುಸುಳಿಕೊಂಡು ಮನೆಸೇರಿದಳು.

ಅಣ್ಣನ ದಾರಿ ನೋಡುತ್ತ ನಿಂತ ವಿಜಯಲಕ್ಷ್ಮಿಗೆ ಕ್ಷಣಗಳು ಯುಗಗಳಾದವು.

ಬಾನಿನಲ್ಲಿ ಸಂಧ್ಯಾರುಣಚ್ಛವಿ ಪಸರಿಸಲಾರಂಭಿಸಿತ್ತು. ಕಲರವ ಮಾಡುತ್ತಿದ್ದ ಹಕ್ಕಿಪಕ್ಕಿಗಳು ಗೂಡಿನತ್ತ ಧಾವಿಸುತ್ತಿದ್ದವು.

ಬೆಳಿಗ್ಗೆಯಿಂದ ಒಂದೇ ಸಮನೆ ದುಡಿದು, ಬಳಲಿ, ಬೆಂಡಾಗಿ, ಬೇಸತ್ತು ಸಿಂಗಮಭಟ್ಟ ಮನೆಸೇರಿ

"ವಿಜಯ, ಕುಡಿಯಲಷ್ಟು ನೀರುಕೊಡು ತಾಯಿ" ಎಂದ.

ಅಣ್ಣನಿಗೆ ನೀರು ಕೊಟ್ಟ ವಿಜಯ,

"ತುಂಬ ದಣಿವಾಗಿದೆಯೇ ಅಣ್ಣಯ್ಯ" ಎಂದಳು

"ಬೆಳಿಗ್ಗೆಯಿಂದ ಬಿಸುಲಲ್ಲಿ ಬೆಂದು ಬಂದಿದ್ದೇನಮ್ಮ."

"ನೀನು ದಣಿದು ಬಂದಿರುವುದನ್ನು ಲೆಕ್ಕಿಸದೆ ಒಂದು ಮಹತ್ತ್ವದ ಸುದ್ದಿ ತಿಳಿಸಬೇಕಾಗಿದೆ ಅಣ್ಣಯ್ಯ."

ಚಕಿತನಾಗಿ ಎದ್ದು ಕುಳಿತ ಸಿಂಗಮಭಟ್ಟ,

"ಏನದು ವಿಜಯಾ ?" ಎಂದ.

"ಘಾತವಾಯಿತು ಅಣ್ಣಾ–ಘಾತವಾಯಿತು !"

ಎಂದು ವಿಜಯಲಕ್ಷ್ಮಿ ಬಿಕ್ಕಿಬಿಕ್ಕಿ ಅಳಲು ಮೊದಲುಮಾಡಿದಳು.

ತಂಗಿಯನ್ನು ಸಮಾಧಾನಗೊಳಿಸುತ್ತ

"ಸಮಾಧಾನ ತಂದುಕೊಂಡು ಆದದ್ದೇನು ಹೇಳು ?"

"ಭಗವಾನ್ ಹರನಾರಾಯಣ ಗೋಸ್ವಾಮಿಗಳನ್ನು ನೀನು ನೋಡಿದ್ದೀಯಾ ?"

"ಇಲ್ಲ. ನಿನ್ನ ಗಂಡನಷ್ಟು ನಾನು ಧರ್ಮಾಭಿಮಾನಿಯಲ್ಲ!"

"ನಾನಿಂದು ಹೋಗಿ ಭಗವಾನರನ್ನು ನೋಡಿ ಬಂದೆ."

"ರಾಮಭಟ್ಟನಿಗೆ ತಿಳಿದರೆ ರಾದ್ಧಾಂತವಾಗುತ್ತದೆ. ಅವನು ಬೇಡ ಎಂದದ್ದನ್ನು ನೀನೇಕೆ ಮಾಡಬೇಕಾಗಿತ್ತು ವಿಜಯಾ?"

"ಅವರು ಬೇಡ ಎಂದದ್ದರಿಂದಲೇ!"

"ಹಾಗೆಂದರೆ?"

"ಹರನಾರಾಯಣ ಭಗವಾನರು ಯಾರು ಬಲ್ಲೆಯಾ?"

"ಇಲ್ಲ."

"ಇವರ ಆಪ್ತ ಸ್ನೇಹಿತ ರೇಜಾಖಾನ್. ಬಹಮನಿ ಸುಲ್ತಾನರ ಪ್ರತಿನಿಧಿಯಾಗಿ ರೇಜಾಖಾನ್ ದಿಲ್ಲಿಯಲ್ಲಿದ್ದ ವಿಷಯ ನಾನು ಮೊದಲೇ ನಿನಗೆ ತಿಳಿಸಿದ್ದೆ."

"ರೇಜಾಖಾನ್ – ಬಹಮನಿ ಪ್ರತಿನಿಧಿ – ವಿಜಯನಗರದಲ್ಲಿ!"

"ಅಷ್ಟೇ ಅಲ್ಲ – ಇನ್ನೂ ಕೇಳು."

"................................"

"ರೇಜಾಖಾನನ ಬಂಗಾರದವಳೊಬ್ಬಳಿದ್ದಳು, ರೋಷನಾರಾ – ಇವರಿಗೂ ರೇಜಾಖಾನನಿಗೂ ಸ್ನೇಹ ಬಲಿತಮೇಲೆ ರೋಷನಾರಾ ಇವರ ಬಂಗಾರದವಳಾದಳು."

"ಶಿವಶಿವಾ!"

"ಹರನಾರಾಯಣ ಭಗವಾನರ ಶಿಷ್ಯಮಂಡಳಿಯಲ್ಲಿ ರೋಷನಾರಳೂ ಇದ್ದಾಳೆ."

"ಏನು ಆಡುತ್ತಿರುವೆ ವಿಜಯಾ?"

"ಭಗವತಿ ಭುವನೇಶ್ವರಿಯ ಪ್ರಮಾಣವಾಗಿ ನಾನು ಸುಳ್ಳಾಡುತ್ತಿಲ್ಲ ಅಣ್ಣಯ್ಯ."

"ಭಗವಾನ್ ಹರನಾರಾಯಣ ಗೋಸ್ವಾಮಿಗಳಲ್ಲಿ ಭಾವ ತಳೆದಿರುವ ಭಕ್ತಿಗೆ ಕಾರಣ ತಿಳಿದಂತಾಯಿತು."

"ಮುಂದೆ?"

"ವಿಜಯನಗರ ರಕ್ಷಣೆ"

ಎಂದವನೇ ಮೇಲಕ್ಕೆದ್ದು ಹೊರಟುಬಿಟ್ಟ.

ಮನೆಬಿಟ್ಟು ಹೊರಟ ಸಿಂಗಮಭಟ್ಟ ನೇರವಾಗಿ ಇಮ್ಮಡಿ ದಣ್ಣಾಯಕರ ಮಹಲಿಗೆ ಬಂದು, ಕಾಪಿನ ಭಟನಿಗೆ,

" ನಾಯಕರು ಏನು ಮಾಡುತ್ತಿದ್ದಾರೆ " ಎಂದು ಕೇಳಿದ.

" ಗುಂಡನಾಯಕರೊಂದಿಗೆ ಮಾತಾಡುತ್ತ ಕುಳಿತಿದ್ದಾರೆ - ಒಳಗೆ ಯಾರನ್ನೂ ಬಿಡಕೂಡದೆಂದು ಕಟ್ಟಪ್ಪಣೆಯಾಗಿದೆ ಬುದ್ಧಿ."

" ಚಿಂತೆಯಿಲ್ಲ. - ಸಿಂಗಮಭಟ್ಟರು ಬಂದಿದ್ದಾರೆ, ಈ ಕೂಡಲೆ ನಿಮ್ಮನ್ನು ಕಾಣಬೇಕಂತೆ ಎಂದು ತಿಳಿಸು."

ಕಾಪಿನಭಟ ಅನುಮಾನಿಸಲು ಸಿಂಗಮಭಟ್ಟ ಕೆರಳಿ,

" ಮೂರ್ಖ -- ನಾಯಕರಿಗೆ ತಿಳಿಸುತ್ತೀಯೋ ನಾನು ಇಲ್ಲಿಂದಲೇ ಅವರ ಹೆಸರು ಹಿಡಿದು ಕೂಗಲೋ "

ಎಂದು ಬೆದರಿಸಲು ಭಟ ಒಳಗೆ ಹೋಗಿ, ನಾಯಕರ ಅಪ್ಪಣೆ ಪಡೆದು ಬಂದು, ಸಿಂಗಮಭಟ್ಟನನ್ನು ಒಳಗೆ ಕರೆದೊಯ್ದ.

ಉಭಯ ನಾಯಕರು ಎದ್ದು ನಿಂತು ಸಿಂಗಮಭಟ್ಟರನ್ನು ಸ್ವಾಗತಿಸಿ, ಪಕ್ಕದಲ್ಲಿ ಕುಳ್ಳಿರಿಸಿಕೊಂಡು,

" ನೀವು ತುಂಬ ದಣಿದಿರುವ ಹಾಗೆ ಕಾಣುತ್ತದೆ. ಸ್ವಲ್ಪ ವಿಶ್ರಮಿಸಿ ಕೊಳ್ಳದೆ ಈಗೇಕೆ ಬಂದಿರಿ ?-ಪರಬತ್ತು ತರಿಸಿಕೊಡಲೇ ?"

" ಏನೂ ಬೇಡಿ ನಾಯಕರೇ - ನಾನು ಹೇಳುವುದನ್ನು ಚಿತ್ತವಿಟ್ಟು ಕೇಳಿ. ಗುಂಡನಾಯಕರೂ ಇಲ್ಲೇ ಸಿಕ್ಕಿದುದು ಲೇಸಾಯ್ತು."

ಎಂದು ಭಗವಾನ ಹರನಾರಾಯಣ ಗೋಸ್ವಾಮಿಗಳ ಬಗ್ಗೆ ವಿಜಯ ಲಕ್ಷ್ಮಿ ತಿಳಿಸಿದ್ದುದನ್ನು ವಿವರಿಸಿ,

" ರಾಜಧಾನಿಯ ರಕ್ಷಣಾವ್ಯವಸ್ಥೆ ಎಷ್ಟು ಚೆನ್ನಾಗಿದೆ ನೋಡಿದಿರಾ ?" ಎಂದ.

ಉಭಯ ನಾಯಕರು ಕತ್ತು ತಗ್ಗಿಸಿ ಕುಳಿತುಬಿಟ್ಟರು.

ಸ್ವಲ್ಪ ಕಾಲಾನಂತರ ಗುಂಡನಾಯಕರು ಮೆಲ್ಲನೆ,

" ಈ ಸಂಚಿನಲ್ಲಿ ನಿಮ್ಮ ಭಾವನವರು ರಾಮಭಟ್ಟರೂ ಸೇರಿರುವರೇ ಸಿಂಗಮಭಟ್ಟರೇ ?"

" ಈ ಸಂಚು ಹೂಡಿರುವವರೇ ನನ್ನ ಭಾವನವರು. ಅವರ ಆಶ್ವಾಸನ ವಿಲ್ಲದೆ ರೇಜಾಖಾನ್ ಇಲ್ಲಿಗೆ ಧೈರ್ಯವಾಗಿ ಬರುತ್ತಿದ್ದನೇ ? ಆಸ್ಥಾನದಲ್ಲಿ,

ನಾಯಕ ವರ್ಗದಲ್ಲಿ ಹಾಗೂ ಜನತೆಯಲ್ಲಿ ನನಗಿರುವ ಸ್ಥಾನದ ಪೂರ್ಣಲಾಭ ಪಡೆದುಕೊಳ್ಳಲು ನಮ್ಮ ಭಾವನವರು ಯೋಚಿಸಿದಂತೆ ಕಾಣುತ್ತದೆ."

"ಇದೆಂಥಾ ದುರ್ವಿಧಿ?"

"ತಲೆಯಮೇಲೆ ಕೈಹೊತ್ತು ಸುಮ್ಮನೆ ಕುಳಿತುಕೊಳ್ಳುವಿರಾ ನಾಯಕರೇ?"

"ಇಲ್ಲ -- ಮಂಟಪವನ್ನೀಗಲೇ ಬಳಸಿ ರೇಜಾಖಾನನ್ನೂ ಅವನ ಶಿಷ್ಯ ಮಂಡಲಿಯನ್ನೂ ಸೆರೆಹಿಡಿಯುತ್ತೇನೆ."

"ಇವರು ಇಲ್ಲಿಗೆ ಬಂದಿರುವ ಉದ್ದೇಶವೇನು ಭಟ್ಟರೇ?"

ಎಂದು ಇರುಗನಾಯಕರು ಕೇಳಿದರು.

"ಉದ್ದೇಶ ಸ್ವತಃಸಿದ್ಧವಾಗಿದೆ. ನಾನು ಕಟ್ಟುತ್ತಿರುವ ಜಲಾಶಯ, ಅಣೆಕಟ್ಟು, ಜಲಮಾರ್ಗಗಳ ನಾಶಮಾಡುವುದು. ಮಂಟಪವನ್ನು ನೀವು ಶೋಧಿಸಿದರೆ ಧ್ವಂಸ ಸಾಮಗ್ರಿಗಳೂ, ಆಯುಧಗಳೂ ಖಂಡಿತ ದೊರಕುತ್ತವೆ."

"ನಾವು ಏನು ಮಾಡಬೇಕು ನೀವೇ ಹೇಳಿ."

"ನನ್ನ ಮಾತನ್ನು ಚಾಚೂ ತಪ್ಪದೆ ನಡೆಸುವಿರಾ?"

"ಅಗತ್ಯವಾಗಿ."

"ಈಗಲೇ ರೇಜಾಖಾನನನ್ನೂ ಅವನ ಮಂಡಳಿಯನ್ನೂ ಸೆರೆಹಿಡಿಯ ಬೇಡಿ. ಈ ಗುಂಪಿಗೂ ಬಹಮನಿ ರಾಜ್ಯಕ್ಕೂ ವಾರ್ತಾವಿನಿಮಯವಾಗುತ್ತಿರ ಬೇಕು. ನಂಬಿಕೆಯ ಗೂಢಚಾರರನ್ನು ಬಿಟ್ಟು ಈ ಗುಂಪಿನ ಚಟುವಟಿಕೆ ಗಳನ್ನು ತಿಳಿದುಕೊಳ್ಳಿ. ರೇಜಾಖಾನನನ್ನು ನೋಡಲು ಯಾರು ಬರುತ್ತಾರೆ ಎಂಬುದನ್ನು ನಾವು ಅರಿಯಬೇಕು. ಮೂರು ನಾಲ್ಕು ದಿನ ಕಳೆದ ಮೇಲೆ ಇವರೆಲ್ಲರನ್ನೂ ಸೆರೆಹಿಡಿಯುವುದೊಳ್ಳೆಯದು."

"ಹಾಗೇ ಮಾಡುತ್ತೇವೆ"

ಎಂದು ಉಭಯ ನಾಯಕರು ಆಶ್ವಾಸನವಿತ್ತರು.

ದಣಿದಿದ್ದ ದೇಹವನ್ನೆಳೆದುಕೊಂಡು ಸಿಂಗಮಭಟ್ಟ ಮನೆಸೇರಿದ.

೧೧

ಇರುಗನಾಯಕರ ನಂಬಿಕೆಗೆ ಪಾತ್ರರಾಗಿದ್ದ ಭಟರು, ಭೀಮದ್ವಾರದ ಮಂಟಪದ ಸರ್ಪಕಾವಲು ಕಾಯಲಾರಂಭಿಸಿದರು.

ಭಗವಾನ್ ಹರನಾರಾಯಣ ಗೋಸ್ವಾಮಿಗಳ ಬೀಡಿಗೆ ಅರಮನೆಯ ಉಗ್ರಾಣದಿಂದಲೇ ಸಕಲ ಸಾಮಗ್ರಿಯಗಳೂ ಸರಬರಾಯಿ ಆಗುತ್ತಿತ್ತು. ಸಾಮಗ್ರಿಗಳನ್ನು ಒಯ್ದು ಕೊಡುತ್ತಿದ್ದ ಸಮಸ್ತರೂ ಮಂಟಪದೊಳಗೆ ನಡೆಯುತ್ತಿದ್ದ ಚಟುವಟಿಕೆಗಳ ವಿವರಗಳನ್ನು ತಂದೊಪ್ಪಿಸುತ್ತಿದ್ದರು.

ಗೂಢಚಾರ ದಳದ ಸೋಮನಾಯಕ ತಂದೊಪ್ಪಿಸಿದ ವರದಿಯನ್ನು ಲಾಲಿಸಲು ಇರುಗನಾಯಕರು ಸಿಂಗಮಭಟ್ಟನನ್ನು ಬರಮಾಡಿದರು.

ಸಿಂಗಮಭಟ್ಟನ ಎದುರು ಬಾಯಿಬಿಡಲು ಸೋಮನಾಯಕ ಅನುಮಾನಿಸಲು ಇರುಗನಾಯಕರು,

“ಭಟ್ಟರು ಕೇಳಲೆಂದೇ ನಿನ್ನ ಬರಮಾಡಿರುವುದು ಸೋಮನಾಯಕ. ಯಾವದನ್ನೂ ಮರೆಮಾಜದೆ ಎಲ್ಲ ವಿಷಯಗಳನ್ನೂ ವಿವರಿಸು” ಎಂದರು.

“ಮಂಟಪದೊಳಗಿರುವ ಹಜಾರದಲ್ಲಿ ಮೇಲ್ವಾಸುಗಳೂ, ಸುಖಾಸನಗಳೂ ಏರ್ಪಾಡಾಗಿವೆ ದಣ್ಣಾಯಕರೇ. ಹರನಾರಾಯಣರೂ, ರಾಮಭಟ್ಟರೂ, ಇನ್ನು ಮೂರು ಜನ ಪೀಠಾಸೀನರಾದ ಕೂಡಲೆ ತೆಳುಪೋಷಾಕು ಧರಿಸಿದ ಯವನಸ್ತ್ರೀಯರು ಒಳಗಿನಿಂದ ಬಂದು ಅವರಿಗೆ ಮದ್ಯಖಾದ್ಯಗಳನ್ನು ನೀಡುತ್ತಾರೆ. ಕೆಲಕಾಲ ನರ್ತನ, ಗಾಯನ ಸಾಗುತ್ತದೆ. ಯವನಸ್ತ್ರೀಯರೂ ಮದ್ಯ ಸೇವಿಸಿ ಭಗವಾನರು, ಭಟ್ಟರು, ಇತರ ಮೂವರ ಬಳಿ ಬಂದು ಕೂಡುತ್ತಾರೆ. ಬೆಳಕು ಹರಿಯುವವರೆಗೂ ಇವರ ನಿರ್ಲಜ್ಜ ಶೃಂಗಾರ ಚೇಷ್ಟೆಗಳು ಸಾಗುತ್ತವೆ.”

“ಮಂಡಳಿಯ ದಾಸ್ತಾನು ಶೋಧಿಸಲು ಸಾಧ್ಯವಾಯಿತೇ?”

“ನಿನ್ನೆಯ ರಾತ್ರಿ ಈ ಪಾನ ಸಮಾರಂಭ ಸಾಗಿದ್ದಾಗ ನನ್ನ ಮಗ ಸರ್ಜ, ನೆಲಮಾಳಿಗೆಗಿಳಿದು ದಾಸ್ತಾನು ನೋಡಿ ಬಂದ. ಹಾರೆ, ಗುದ್ದಲಿ, ಪಿಕಾಸಿಗಳೂ ಸಿಡಿಮದ್ದಿನ ಭಾಂಡಗಳೂ ಸಂಗ್ರಹವಾಗಿವೆಯಂತೆ!”

“ಇನ್ನು ವಿಳಂಬಮಾಡುವುದು ಅಪಾಯಕಾರಿ ನಾಯಕರೇ”

"ವಿಳಂಬಮಾಡುವುದಿಲ್ಲ. ಇದೇ ರಾತ್ರಿ ಭಗವಾನರ ಮಂಡಳಿಯನ್ನು ಸುತ್ತುಗಟ್ಟಿ, ಸೆರೆಹಿಡಿಯಲು ಆಲೋಚಿಸಿದ್ದೇವೆ. ತಮ್ಮ ಒಪ್ಪಿಗೆಯಿದೆಯಷ್ಟೆ!"

"ಇದೆ. ಮಂಟಪಕ್ಕೂ ಬಹುಮನಿರಾಜ್ಯಕ್ಕೂ ಇರುವ ಸಂಪರ್ಕ ಪತ್ತೆಯಾಯಿತೇ?"

"ಮಧ್ಯರಾತ್ರಿಯ ವೇಳೆಗೆ ಒಬ್ಬ ಅಶ್ವಾರೋಹಿ ಬಂದು, ಭಗವಾನರೊಂದಿಗೆ ಮಾತನಾಡಿಕೊಂಡು ಹೋಗುತ್ತಾನಂತೆ!"

"ಈ ಅಶ್ವಾರೋಹಿಯನ್ನೂ ಸೆರೆಹಿಡಿಯುವುದು ಅಗತ್ಯ."

"ಇಂದವನು ಬಾರದಿದ್ದರೆ ಏನು ಮಾಡುವುದು?"

"ಇಂದು ಬಾರದಿದ್ದರೆ, ನಾಳೆ ಬಂದೇ ಬರುತ್ತಾನೆ. ಭಗವಾನರನ್ನೂ ಅವರ ಮಂಡಳಿಯನ್ನೂ ನೀವು ಸೆರೆಹಿಡಿದಿರುವ ಸಂಗತಿ ಗೋಪ್ಯವಾಗಿರಲಿ. ನಮ್ಮವರು ಭಗವಾನರು, ಅವರ ಮಂಡಳಿಯಂತೆ ವೇಷ ಧರಿಸಿ ಮಂಟಪದಲ್ಲಿ ಕೂಡಲಿ. ಬಹುಮನಿರಾಜ್ಯದ ಅಶ್ವಾರೋಹಿ ಬರುವವರೆಗೆ ಈ ನಾಟಕ ಸಾಗಲಿ. ಅವನು ಕೈಗೆ ಸಿಕ್ಕಿದ ಮೇಲೆ ನೀವು ನಿಜಸ್ಥಿತಿ ಬಹಿರಂಗ ಪಡಿಸಬಹುದು."

"ಸಲಹೆ ಸೂಕ್ತವಾಗಿದೆ"

ಎಂದು ಇರುಗನಾಯಕರು ಒಪ್ಪಿಕೊಂಡರು.

ಅದೇ ರಾತ್ರಿ ಇರುಗನಾಯಕರ ಸೈನ್ಯದ ತುಕಡಿ, ಮಂಟಪ ಸುತ್ತುಗಟ್ಟಿ ಹರನಾರಾಯಣರು, ಅವರ ಮಂಡಳಿ, ರಾಮಭಟ್ಟನನ್ನು ಸೆರೆಹಿಡಿದು ಅವರ ಸ್ಥಾನದಲ್ಲಿ ವೇಷಧಾರಿಗಳಾಗಿದ್ದ ತಮ್ಮ ಭಟರನ್ನು ಸ್ಥಾಪಿಸಿದರು.

ಸುಖ ನಿದ್ರೆಯಲ್ಲಿದ್ದ ವಿಜಯನಗರಕ್ಕೆ ರಾತ್ರಿಯ ಚಟುವಟಿಕೆಗಳು ತಿಳಿಯಲಿಲ್ಲ.

ಮಾರನೆಯ ಮಧ್ಯರಾತ್ರಿ ಮಂಟಪಕ್ಕೆ ಬಂದ ಬಹಮನಿ ರಾಜ್ಯದ ಅಶ್ವಾರೋಹಿಯನ್ನು ನಾಯಕರ ಭಟರು ಸೆರೆಹಿಡಿದರು.

ಆಪಾದಿತರ ವಿಚಾರಣೆ ಮಾರನೆಯ ಸಂಜೆ ಸಾರ್ವಜನಿಕವಾಗಿ ಆಗುವುದೆಂದು ಊರಿನಲ್ಲಿ ಡಂಗುರ ಸಾರಿಸಲಾಯಿತು.

ರಾಜಮಹಲಿನ ಕೈಸಾಲೆಯೇ ನ್ಯಾಯಾಲಯವಾಗಿ ಮಾರ್ಪಟ್ಟಿತು.

ವೇದಿಕೆಯ ಮೇಲೆ ಮಹಾ ಪ್ರಭುಗಳಿಗೂ, ಮಹಾ ಮಂತ್ರಿಗಳಿಗೂ ಪೀಠಗಳೇರ್ಪಟ್ಟವು. ಅತ್ತಿತ್ತ ಇತರ ಮಂತ್ರಿಗಳು, ನಾಯಕರ ಪೀಠಗಳು

ಎರಡು ಪಕ್ಕಗಳಲ್ಲಿಯೂ ಊರಿನ ಹಿರಿಯರು, ಗಣ್ಯರು, ಪ್ರತಿನಿಧಿಗಳ ಪೀಠಗಳು. ವೇದಿಕೆಯ ಹಿಂದೆ ತೆರೆಯಾಚೆ ರಾಣೀವಾಸದವರಿಗೆ ಪೀಠಗಳು ಏರ್ಪಟ್ಟಿವು.

ಮಹಾಪ್ರಭುಗಳು ಸಭೆಗೆ ಬರುವ ಮುನ್ನವೇ ಭಟರು ಆಪಾದಿತರನ್ನು ಕರೆತಂದು ಸಾಲುಸಾಲಾಗಿ ನಿಲ್ಲಿಸಿದರು.

ರೇಜಾಜಾನ್, ಅವನ ಜತೆಯಲ್ಲಿ ಬಹಮನಿಯ ಅಶ್ವಾರೋಹಿ ವಜೀರ್ ಅಹಮದ್, ಮತ್ತು ರಾಮಭಟ್ಟ.

ಅವರ ಹಿಂದೆ ರೇಜಾಖಾನನ ಅನುಯಾಯಿಗಳು !

ಅವರ ಹಿಂದೆ ರೋಷನಾರಾ, ಇತರ ಯವನಸ್ತ್ರೀಯರು.

ಸಕಾಲಕ್ಕೆ ರಾಜಸಭೆ ಪ್ರವೇಶಿಸಿದ ಮಹಾಪ್ರಭುಗಳನ್ನು ಸಭಾಸದರು ಎದ್ದು ನಿಂತು ಸ್ವಾಗತಿಸಿ ಅವರು ಪೀಠಾಸೀನರಾದ ಮೇಲೆ ಎಲ್ಲರೂ ಕುಳಿತರು.

ಪ್ರಭುಗಳು ಕಣ್ಸನ್ನೆ ಮಾಡಲು ಇರುಗನಾಯಕರು, ಭಗವಾನರು, ಅವರ ಮಂಡಳಿಯ ಮೇಲಣ ಆಪಾದನೆಯನ್ನೂ, ರಾಮಭಟ್ಟನ ಮೇಲಣ ಆಪಾದನೆಯನ್ನೂ ಓದಿ ಮುಗಿಸಿದರು.

ಸಭೆಗೆ ಗರಬಡಿದಂತಾಗಿತ್ತು.

ನಿಶ್ಚಲಚಿತ್ತದಿಂದ ಕುಳಿತಿದ್ದ ಮಹಾಪ್ರಭುಗಳು.

"ಸರ್ದಾರ್ ರೇಜಾಖಾನ್, ವಜೀರ್ ಅಹಮದ್ ಖಾನ್, ನಿಮ್ಮ ಬಹಮನಿರಾಜ್ಯಕ್ಕೂ ನಮಗೂ ಶಾಂತಿ ಒಪ್ಪಂದವಾಗಿ, ನಾವು ಸೌಹಾರ್ದದಿಂದ ಇರುವ ಸಂಗತಿ ನಿಮಗೆ ಗೊತ್ತಿಲ್ಲವೇ ?"

"ಗೊತ್ತಿದೆ ಹುಜೂರ್."

"ಗೊತ್ತಿದ್ದೂ ಮಾರುವೇಷ ಧರಿಸಿ, ನೀವಿಲ್ಲಿಗೆ ಬಂದು ಒಳಸಂಚು ಹೂಡಲು ಕಾರಣವೇನು ?"

"........................"

"ನೀವು ಸ್ವಯಂಪ್ರೇರಣೆಯಿಂದ ಇಲ್ಲಿಗೆ ಬಂದಿರೋ, ನಿಮ್ಮ ಸುಲ್ತಾನರ ಆಜ್ಞಾನುಸಾರ ಬಂದಿರೋ ?"

"ಸ್ವಯಂಪ್ರೇರಣೆಯಿಂದ."

ಕೈಕೋಳಗಳನ್ನು ಹಿಡಿದಲುಗಿಸುತ್ತಾ ರಾಮಭಟ್ಟ ಉಗ್ರರೂಪು ತಾಳಿ, "ಸುಳ್ಳು ಮಹಾಪ್ರಭು. ಬಹಮನಿ ಸುಲ್ತಾನರು ಮಹಮದ್

ಫಿರೋಜ್ ಷಾ ಅವರೇ ಈ ಒಳಸಂಚಿನ ನಾಯಕರು. ಅವರ ಆಣತಿಯಂತೆ ಬಹಮನಿರಾಜ್ಯದ ಪ್ರಧಾನ ವಜೀರರಾದ ಜೈನಲಾಬುದ್ದೀನ್ ಅವರು ದಿಲ್ಲಿಗೆ ಬಂದು ನನ್ನ ಸಹಾಯ ಅಪೇಕ್ಷಿಸಿದರು."

"ಈ ಒಳಸಂಚಿನ ಉದ್ದೇಶವೇನು ರಾಮುಭಟ್ಟರೇ ?"

"ತಾವು ಸಿಂಗಮುಭಟ್ಟರ ಸಹಾಯದಿಂದ ನಿರ್ವಹಿಸುತ್ತಿರುವ ಜಲಾಶಯ, ಆಣೆಕಟ್ಟು, ಸೇತುವೆ, ಜಲಮಾರ್ಗಗಳನ್ನು ವಿಧ್ವಂಸನಗೊಳಿಸುವುದು."

"ಇದರಿಂದ ಬಹಮನಿರಾಜ್ಯಕ್ಕೆ ಆಗುವ ಲಾಭ ?"

"ವಿಜಯನಗರ ಮುತ್ತಿದಾಗ ಇಲ್ಲಿಯ ಜನರಿಗೆ ಆಗುವ ಕಿರುಕುಳ."

"ವಿಜಯನಗರದ ಮೇಲೆ ನಿಮಗೇಕಿಷ್ಟು ದ್ವೇಷ ರಾಮುಭಟ್ಟರೇ ?"

"ವಿಜಯನಗರ ನನಗೇನು ಮಾಡಿತು ?"

"ಏನು ಮಾಡಬೇಕಾಗಿತ್ತು ?"

"ನನ್ನ ಪಾಂಡಿತ್ಯ, ಪ್ರಾವೀಣ್ಯತೆಯನ್ನು ಯಾವ ಹಿಂದೂ ರಾಜ್ಯವೂ ಗೌರವಿಸಲಿಲ್ಲ."

"ವಿಜಯನಗರದಲ್ಲಿ ನಿಮ್ಮ ಪಾಂಡಿತ್ಯ, ಪ್ರಾವೀಣ್ಯತೆಗೆ ಗೌರವ ದೊರಕಿಸಲು ಪ್ರಯತ್ನಿಸಿ ವಿಫಲರಾದಿರಾ ?"

"ಇಲ್ಲ."

"ಹಾಗಾದರೆ ವಿಜಯನಗರ ಆಕ್ಷೇಪಿಸುವ ಅಧಿಕಾರ ನಿಮಗಿಲ್ಲ."

"ಬಹಮನಿ ರಾಜ್ಯದವರು ನನ್ನ ವಿಷಯದಲ್ಲಿ ಅತ್ಯಂತ ಉದಾರತೆಯಿಂದ ನಡೆದುಕೊಂಡಿದ್ದಾರೆ."

"ಅವರಿಗೆ ಕೃತಜ್ಞತೆ ತೋರಿಸುವುದರ ಸಲುವಾಗಿ ವಿಜಯನಗರಕ್ಕೆ ದ್ರೋಹ ಬಗೆದಿರಾ ?"

"ನನ್ನ ನಡತೆ ವಿಮರ್ಶಿಸಿ ಏನು ಪ್ರಯೋಜನ ? -- ಈಗ ನಾನು ನಿಮ್ಮ ಬಂದಿ........ರಾಜ್ಯದ್ರೋಹಿ – ರಾಜ್ಯದ್ರೋಹಿಗೆ ವಿಧಿಸುವ ಶಿಕ್ಷೆ ವಿಧಿಸಬಹುದು."

"ನಿಮಗೆ ಶಿಕ್ಷೆ ವಿಧಿಸುವವರು ನಾವಲ್ಲ – ಅದಕ್ಕೆ ಬೇರೆಯವರಿದ್ದಾರೆ"

ಎಂದು ಮುದ್ದಪ್ಪನಾಯಕರ ಕಡೆ ತಿರುಗಿ,

"ಆಪಾದಿತನ ಅಪರಾಧ ಋಜುವಾತಾಗಿದೆಯಲ್ಲವೇ ?"

"ಆಗಿದೆ ಮಹಾಪ್ರಭು."

"ರೇಜಾಖಾನ್, ವಜೀರ್ ಅಹಮದ್ – ನೀವು ಹೇಳುವುದು ಏನಾದರೂ ಇದೆಯೇ?"

"ಏನೂ ಇಲ್ಲ ಹುಜೂರ್."

"ಗೂಢಚಾರರು, ಪ್ರತಿಗಾಮಿಗಳಿಗೆ ನಿಮ್ಮ ರಾಜ್ಯದಲ್ಲಿ ಯಾವ ಶಿಕ್ಷೆ ವಿಧಿಸುತ್ತೀರಿ?"

"ಮೈ ಚರ್ಮ ಸುಲಿಸಿ ತುಂಡು ತುಂಡಾಗಿ ಕತ್ತರಿಸಿ ರಣಹದ್ದುಗಳಿಗೆ ಹಾಕುತ್ತೇವೆ."

"ಅದೇ ಶಿಕ್ಷೆ ಇವರಿಗೂ ವಿಧಿಸಬೇಕು ಮಹಾಪ್ರಭೂ."

ಎಂದು ಗುಂಡನಾಯಕರು ಸೂಚಿಸಿದರು.

"ಇದು ಬಹಮನಿರಾಜ್ಯವಲ್ಲ ಗುಂಡನಾಯಕರೇ – ವಿಜಯನಗರ ಸಾಮ್ರಾಜ್ಯ."

ಮೊಣಕಾಲೂರಿ ಕುಳಿತು, ದೀನವದನನಾಗಿ ವಜೀರ್ ಅಹಮದ್.

"ತಪ್ಪು ನಮ್ಮದಲ್ಲ ಜಹಾಪನಾ, ಸಿಂಗಮಭಟ್ಟರು ಕೈಗೊಂಡಿದ್ದ ಕೆಲಸಗಳನ್ನು ಧ್ವಂಸಮಾಡಿದಲ್ಲದೆ ಬಹಮನಿ ರಾಜ್ಯಕ್ಕೆ ಉಳಿಗಾಲವಿಲ್ಲವೆಂದು ಹೇಳಿದವರೇ ರಾಮಭಟ್ಟರು. ಅವರ ಪ್ರೇರಣೆ, ಪ್ರೋತ್ಸಾಹದಿಂದಲೇ ನಾವೀ ಕೆಲಸಕ್ಕೆ ಉದ್ಯುಕ್ತರಾದುದು."

ಕೆರಳಿದ ರಾಮಭಟ್ಟ,

"ಮ್ಲೇಚ್ಛ ಹಂದಿ, ಹಾಳು ಪ್ರಾಣ ಉಳಿಸಿಕೊಳ್ಳಲು ಸುಳ್ಳೇಕೆ ಬೊಂಕುವೆ? ನಾಯಿ ನರಿಗಳಂತೆ ಬದುಕುತ್ತೀರಿ – ಸಾಯುವಾಗಲಾದರೂ ಮನುಷ್ಯರಂತಿರಬೇಡವೇ? – ಮಹಾಪ್ರಭೂ, ರೇಜಾಖಾನ್ ಮತ್ತು ನಾನು ಗೆಳೆಯರು. ಸಿಂಗಮಭಟ್ಟರು ಇಲ್ಲಿಗೆ ಬಂದು ಜಲಯೋಜನೆಗಳನ್ನು ಕೈಗೊಂಡ ಮೇಲೆ ಬಹಮನೀರಾಜ್ಯದ ವಜೀರರಾದ ಜೈನಲಾಬುದ್ದೀನ್ ಅವರು ದಿಲ್ಲಿಗೆ ಬಂದು, ವಿಜಯನಗರದ ಸಮಸ್ತ ಚಟುವಟಿಕೆಗಳನ್ನು ವರ್ಣಿಸಿ, ನನ್ನ ನೆರವು ಬೇಡಿದರು. ರೇಜಾಖಾನನೂ ನನ್ನನ್ನು ಒತ್ತಾಯಪಡಿಸಿದ. ಹಲವು ವಿಧಗಳಲ್ಲಿ ನಾನು ರೇಜಾಖಾನನಿಗೆ ಋಣಿಯಾಗಿದ್ದೆ. ಅವನ ಮಾತು ತೆಗೆದು ಹಾಕಲಾಗದೆ, ಜೈನಲಾಬುದ್ದೀನ್ ಇತ್ತ ಸುವರ್ಣರಾಶಿಯನ್ನು ತಿರಸ್ಕರಿಸಲಾರದೆ ಈ ಕೃತ್ಯಕ್ಕೆ ಒಪ್ಪಿಕೊಂಡೆ. ನಾನು ಅಪರಾಧಿಯಾದರೂ ಈ ಕೃತ್ಯದ ಪ್ರೇರಕನಲ್ಲ."

ದೀರ್ಘಪ್ರಲಾಪ ಆರಂಭಿಸಿದ ರೇಜಾಖಾನ್ ಮೊಣಕಾಲೂರಿ,

"ನಮ್ಮದು ಮಹಾಪರಾಧ ಪ್ರಾಣಭಿಕ್ಷೆ ಕೊಟ್ಟು ಕಾಪಾಡಿ ಹುಜೂರ್."

ಎಂದು ಬೇಡಿದ.

ರೋಷಕಷಾಯಿತರಾದ ಇರುಗನಾಯಕರು,

"ಪ್ರಾಣಭಿಕ್ಷೆ! ಯಾರಿಗೆ!! ನಿಮಗೆ!!! ವಿಜಯನಗರದ ಲಕ್ಷಾಂತರ ಪ್ರಜೆಗಳನ್ನೂ ಆಹುತಿ ತೆಗೆದುಕೊಳ್ಳಲು ಸಿದ್ಧರಾಗಿದ್ದ ಕೊಲೆಗಡಕರಿಗೆ ಪ್ರಾಣ ಭಿಕ್ಷೆಯೇ? ಮಹಾಪ್ರಭೂ ಆಪಾದಿತರಿಗೆ ಪ್ರಾಣದಾನ ಮಾಡಿದಲ್ಲಿ ನಾವೂ ನಮ್ಮ ರಾಜ್ಯ ಬಹಮನಿ ಸುಲ್ತಾನರ ಕಣ್ಣಲ್ಲಿ ಯಃಕಶ್ಚಿತರಾಗುತ್ತೇವೆ. ಸುಲ್ತಾನರಿಗೆ ನಾವು ಹೆದರಿದೆವೆಂದು ಬಹಮನಿಯವರು ಅಪಪ್ರಚಾರ ಮಾಡಲು ಅವಕಾಶವಾಗುತ್ತದೆ"

ನಾಯಕ ಮಂಡಳಿ ಎದ್ದು ನಿಂತು ಒಕ್ಕೊರಲಿನಿಂದ

"ಇರುಗನಾಯಕರ ಅಭಿಪ್ರಾಯ ಸರ್ವಸಮ್ಮತವಾಗಿದೆ. ಆಪಾದಿತರೆಲ್ಲರಿಗೂ ಮರಣದಂಡನೆಯಾಗಬೇಕು."

ಎಂದರು. ಸಭಾಸದರು ಏಕಕಂಠರಾಗಿ

"ಮರಣದಂಡನೆಯಾಗಲಿ"

ಎಂದು ಕೂಗಿದರು.

ಮಹಾಪ್ರಭುಗಳೆದ್ದು ನಿಲ್ಲಲು ಸಭೆ ಪ್ರಶಾಂತವಾಯಿತು.

"ಅಪರಾಧಿಗಳಿಗೆ ಶಿಕ್ಷೆಯಾಗಬೇಕಾದುದು ನ್ಯಾಯ ರಕ್ಷಣಾ ದೃಷ್ಟಿಯಿಂದ ಅತ್ಯವಶ್ಯಕವಾದರೂ ನಾವು ಪ್ರತೀಕಾರ ಮನೋಭಾವದಿಂದ ಶಿಕ್ಷೆ ವಿಧಿಸಬೇಕಾಗಿಲ್ಲ. ರೇಜಾಖಾನ್ ಮತ್ತು ವಜೀರ್ ಆಹಮದ್ ಇವರೇ ಈ ಸಂಚಿನ ಪ್ರೇರಕರು ಹಾಗೂ ಸಚೇತಕರು. ಇವರಿಬ್ಬರಿಗೂ ಮರಣದಂಡನೆ ವಿಧಿಸಿದ್ದೇವೆ."

"ಇವರ ಅನುಯಾಯಿಗಳಾಗಿ ಬಂದಿರುವ ಪುರುಷರೆಲ್ಲರಿಗೂ ನೂರು ಕೋರಡೆ ಪೆಟ್ಟುಗಳನ್ನಿತ್ತು ಗಡಿಯಿಂದಾಚೆ ಸಾಗಿಸತಕ್ಕದ್ದು.

"ರೇಜಾಖಾನರ ಪರಿವಾರದಲ್ಲಿರುವ ಯುವನ ಸ್ತ್ರೀಯರನ್ನು ಗೌರವಯುತವಾಗಿ ಗಡಿದಾಟಿಸತಕ್ಕದ್ದು."

ಎಂದು ಸಿಂಗಮಭಟ್ಟರ ಕಡೆ ತಿರುಗಿ

" ರಾಮುಭಟ್ಟರಿಗೆ ಶಿಕ್ಷೆ ವಿಧಿಸುವ ಹೊಣೆ ನಿಮ್ಮದು ಸಿಂಗಮುಭಟ್ಟರೇ " ಎಂದರು.

ಸಿಂಗಮುಭಟ್ಟ ಮಹಾಪ್ರಭುಗಳ ಮುಂದೆ ಬಂದು ನಿಂತು ಕೈಜೋಡಿಸಿ,

" ಧರ್ಮಪರಾಯಣರೂ ನ್ಯಾಯನಿಷ್ಠುರರೂ ಆದ ಮಹಾಪ್ರಭುಗಳು ರಾಮುಭಟ್ಟರಿಗೆ ಯಾವ ಶಿಕ್ಷೆ ವಿಧಿಸಿದ್ದರೂ ನಾನಾಗಲಿ, ಇತರರಾಗಲಿ ಆಕ್ಷೇಪಿಸುವಂತಿರಲಿಲ್ಲ.

" ಅವರು ದೈವದ್ರೋಹ, ಸ್ವಾಮಿದ್ರೋಹ, ದೇಶದ್ರೋಹಗಳನ್ನು ಬಗೆದು ನಮ್ಮ ಮನೆತನದ ಕೀರ್ತಿಯನ್ನು ಮಣ್ಣುಪಾಲು ಮಾಡಿದ್ದಾರೆ.

" ಆದರೂ ನಾನು ಅವರಿಗೆ ಕ್ಷಮಾಭಿಕ್ಷೆ ಬೇಡುತ್ತೇನೆ ಮಹಾಪ್ರಭೂ. ರಾಮುಭಟ್ಟರು ನನ್ನ ಏಕಮಾತ್ರ ಸೋದರಿಯ ಪತಿ ಎನ್ನುವ ಕಾರಣಕ್ಕಾಗಿಯಲ್ಲ – ಅವರು ಅತ್ಯಂತ ಶ್ರೇಷ್ಠವರ್ಗದ ತಂತ್ರವಿಶಾರದರೆಂದು ! ರಾಮುಭಟ್ಟರನ್ನು ನಮ್ಮಲ್ಲಿಯೇ ಇಟ್ಟುಕೊಂಡು ಅವರ ತಂತ್ರಪ್ರಾವೀಣ್ಯದ ಪ್ರಯೋಜನ ಪಡೆದುಕೊಳ್ಳುವುದು ವಿಹಿತವಾಗಿ ಕಾಣುತ್ತದೆ. ಇದರ ಮೇಲೆ ಪ್ರಭುಚಿತ್ತ "

ಎಂದನ್ನುತ್ತಿರುವಂತೆ ರುದ್ರಕಾಳಿಯ ಅವತಾರ ತಾಳಿದ್ದ ಒಬ್ಬ ಸ್ತ್ರೀ, ಜನಸಮೂಹವನ್ನು ಭೇದಿಸಿಕೊಂಡು ಪ್ರಭುಗಳ ಸಮ್ಮುಖಕ್ಕೆ ಸಾರಿ,

" ಅದಾಗತಕ್ಕದ್ದಲ್ಲ – ವಿಜಯನಗರ ಸಾಮ್ರಾಜ್ಯವನ್ನು ಧ್ವಂಸಗೊಳಿಸಲೆತ್ನಿಸಿದ ಪರಮದ್ರೋಹಿ ರಾಮುಭಟ್ಟರಿಗೆ ಮರಣದಂಡನೆಯಾಗಲೇಬೇಕು. ರಾಮುಭಟ್ಟರಂಥ ಕ್ಷುಲ್ಲವ್ಯಕ್ತಿಗಳು ಬದುಕಲವಕಾಶವಿತ್ತರೆ ಹಿಂದೂ ಧರ್ಮವೇ ಹೇಳ ಹೆಸರಿಲ್ಲವಾಗುತ್ತದೆಂಬುದನ್ನು ಮಹಾಪ್ರಭುಗಳು ಗಮನಿಸಬೇಕು." ಎಂದಳು.

ಮಹಾಪ್ರಭುಗಳು ಪೀಠದಿಂದ ಬಾಗಿ,

" ತಾಯೀ – ನೀನು ಯಾರು ?" ಎಂದು ಕೇಳಿದರು.

" ರಾಮುಭಟ್ಟರ ಭಾಗ್ಯಹೀನ ಪತ್ನಿ !"

" ಸಿಂಗಮುಭಟ್ಟರ ತಂಗಿಯೇ ?"

" ಹೌದು."

" ಪತಿಭಿಕ್ಷೆ ಕೇಳುವುದು ಸತಿಯ ಕರ್ತವ್ಯ ತಾಯಿ."

"ನಾನು ಪತಿವಿಹೀನೆ – ವಿಧವೆ ! ಹಿಂದೂತ್ವದ ಭದ್ರಕೋಟೆಯಂತಿರುವ ವಿಜಯನಗರದ ಪತನ ಸಾಧಿಸಲು ಹೊರಟ ಪರಮದ್ರೋಹಿಯನ್ನು ನಾನು

ಪತಿ ಎಂದು ಒಪ್ಪಿಕೊಳ್ಳಲಾರೆ ಪ್ರಭೂ."

ಸಿಂಗಮಭಟ್ಟರು ತಂಗಿಯ ಬಳಿ ಬಂದು,

"ವಿಜಯ, ಮತಿಶೂನ್ಯಳಂತೆ ಆಡಬೇಡ ತಂಗಿ. ರಾಮಭಟ್ಟರ ಅಪರಾಧ ಮನ್ನಿಸಿ ಅವರಿಗೆ ಪ್ರಾಣದಾನಮಾಡು."

"ಇಲ್ಲ ಅಣ್ಣಾ – ಇಂಥವರ ಉಸಿರಿನಿಂದ ವಿಜಯನಗರದ ಪವಿತ್ರಗಾಳಿ ವಿಷಪೂರಿತವಾಗುತ್ತದೆ. ನನಗವರು ಬಗೆದಿರುವ ದ್ರೋಹವನ್ನು ಕ್ಷಮಿಸ ಬಲ್ಲೆ – ಆದರೆ ವಿಜಯನಗರಕ್ಕೆ ಬಗೆದಿರುವ ದ್ರೋಹವನ್ನು ಕ್ಷಮಿಸಲಾರೆ. ಅಣ್ಣಾ, ನಾನು ನಿನ್ನ ತಂಗಿ, ರಾಮಭಟ್ಟರ ಪತ್ನಿ – ಹಾಗೇ ಹಿಂದೂ ಸ್ತ್ರೀಯಾಗಿದ್ದೇನೆ. ನನ್ನ ದೇವರು, ದೇಶ, ದೊರೆಯ ಬಗ್ಗೆ ಅಭಿಮಾನ ಉಳ್ಳವಳಾಗಿದ್ದೇನೆ."

ಎಂದು ಮಹಾಪ್ರಭುಗಳ ಕಡೆ ತಿರುಗಿ

"ನಾನು ಹೇಳಬೇಕಾದುದು ಮುಗಿದಿದೆ. ಇದರ ಮೇಲೆ ನಿಮ್ಮ ಚಿತ್ತ"

ಎಂದು ಕ್ಷಣಮಾತ್ರವೂ ಅಲ್ಲಿ ನಿಲ್ಲದೆ ಹೊರಟುಹೋದಳು.

ಸ್ತಂಭೀಭೂತರಾಗಿದ್ದ ಮಹಾಪ್ರಭುಗಳು ಚೇತರಿಸಿಕೊಂಡು,

"ಇರುಗನಾಯಕರೇ, ನಾವು ತೀರ್ಪು ಕೊಟ್ಟದ್ದಾಗಿದೆ. ಅದರಂತೆ ನಡೆಯಲಿ – ಸದ್ಯಕ್ಕೆ ರಾಮಭಟ್ಟರನ್ನು ಬಂದಿಗಳನ್ನಾಗಿಡಿ – ಅವರ ಬಗ್ಗೆ ಏನು ಮಾಡತಕ್ಕದೆನ್ನುವುದನ್ನು ನಾವು ಸಾವಕಾಶವಾಗಿ ನಿರ್ಧರಿಸುತ್ತೇವೆ"

ಎಂದು ಸಭಾಮಂದಿರ ಬಿಟ್ಟು ತೆರಳಿದರು.

೧೨

ವಜೀರ್ ಅಹಮದನಿಗೂ, ರೇಜಾಖಾನನಿಗೂ, ಆದ ಮರಣದಂಡನೆ, ಅವರ ಪರಿವಾರದವರಿಗಾದ ತೇಜೋವಧೆಯನ್ನು ಕೇಳಿದ ಸುಲ್ತಾನ್ ಫಿರೋಜ್ ಷಾ ಕಿಡಿಕಿಡಿಯಾಗಿ ತನ್ನ ಕ್ರೋಧಾಗ್ನಿಯನ್ನು ವಜೀರ್ ಜೈನಲಾಬುದ್ದೀನನ ಕಡೆ ಬಿತ್ತರಿಸಿದ.

ಖಾಜಿ ಕಮಾಲುದ್ದೀನ್ ಅಲ್ಲಿಯೇ ಇದ್ದುದನ್ನೂ ಸುಲ್ತಾನ ಲಕ್ಷಿಸದೆ ಜೈನಲಾಬುದ್ದೀನನ್ನು ಹೀನಾಮಾನ ಬಯ್ಯಲಾರಂಭಿಸಿದ.

ಸ್ಥೂಲಕಾಯದ ಜೈನಲಾಬುದ್ದೀನ್ ಆಪಾದಮಸ್ತಕ ಬೆವರಿ, ಗಡಗಡನೆ ನಡುಗುತ್ತ ನಿಂತ.

"ನೀವು ಶುದ್ಧ ಬೇವಕೂಫರು – ಸೈನ್ಯ ಕಳುಹಿಸಿ ವಜೀರ್ ಅಹಮದ ನನ್ನೂ ರೇಜಾಖಾನನನ್ನೂ ರಕ್ಷಿಸುವುದಕ್ಕಾಗುತ್ತಿರಲಿಲ್ಲವೇ ?"

"ರೇಜಾಖಾನನ ಸಂಚು ಪ್ರತಿಬಂಧಕವಿಲ್ಲದೆ ಸಾಗಿತ್ತು ಹುಜೂರ್. ಯಾವನೋ ನಮ್ಮಕ್ ಹರಾಮ್ ಗುಟ್ಟನ್ನು ರಟ್ಟುಮಾಡಿದ್ದಾನೆ."

"ರಾಮಭಟ ನಮಗೆ ಮೋಸಮಾಡಿದನೇ ?"

"ಇಲ್ಲ – ಅವನು ಸಾಚಾ ಮನುಷ್ಯ. ರೋಷನಾರಾ ಮೇಲಣ ಮೋಹದಿಂದ ಅವನು ವಿಜಯನಗರವನ್ನೇ ನಮಗೆ ಭಕ್ಷೀಸಾಗಿ ಕೊಡಲು ಸಿದ್ಧನಾಗಿದ್ದ-"

"ಹಾಗಾದರೆ ರಾಮಭಟ್ಟನನ್ನೇಕೆ ಗಲ್ಲಿಗೇರಿಸಲಿಲ್ಲ ?"

"ಸದ್ಯಕ್ಕಂತೂ ಅವನು ಕಾರಾಗೃಹದಲ್ಲಿದ್ದಾನೆ. ಅವನ ತಂತ್ರನೈಪುಣ್ಯ ವನ್ನು ಉಪಯೋಗ ಮಾಡಿಕೊಂಡು ತರುವಾಯ ಗಲ್ಲಿಗೇರಿಸಬಹುದು. ಅವನಿಗೆ ಮರಣದಂಡನೆಯಾಗಬೇಕೆಂದು ಅವನ ಬೀಬಿಯೇ ಪ್ರಾರ್ಥಿಸಿದಳಂತೆ ಹುಜೂರ್."

"ಈ ಅಪಮಾನ ನಾವು ಸಹಿಸುವುದು ಹೇಗೆ ವಜೀರ್ ?"

"ಸಹಿಸಬೇಕಾದುದಿಲ್ಲ ಜಹಾಪನಾ. ಸೆರೆಯಲ್ಲಿರುವ ರಾಮಭಟ್ಟ ನಮ್ಮವನು – ಅವನನ್ನು ನಮಗೆ ಒಪ್ಪಿಸಬೇಕು. ವಿನಾಕಾರಣ ರೇಜಾಖಾನ್ ವಜೀರ್ ಅಹಮದನನ್ನು ಗಲ್ಲಿಗೇರಿಸಿದುದಕ್ಕೆ ನಮಗೆ ಎರಡು ಲಕ್ಷ ಚಿನ್ನದ ಮೊಹರುಗಳನ್ನು ತಪ್ಪುಕಾಣಿಕೆಯಾಗಿತ್ತು ಕ್ಷಮೆ ಬೇಡಬೇಕು ಎಂದು ವಿಜಯ ನಗರದ ದೊರೆಗಳಿಗೆ ಪತ್ರ ಬರೆಯಬೇಕು."

"ನಮ್ಮ ಪತ್ರ ಅವರು ನಿರಾಕರಿಸಿದರೆ."

"ನಿರಾಕರಿಸಲಾರರೆಂದು ನನ್ನ ತರ್ಕ."

"ಹೇಗೆ ?"

"ವಿಜಯನಗರ ಸದ್ಯಕ್ಕೆ ಯುದ್ಧಮಾಡುವ ಸ್ಥಿತಿಯಲ್ಲಿಲ್ಲ. ಹಿಂದಿನ ಯುದ್ಧಗಳಲ್ಲಿ ಅವರಿಗಾಗಿರುವ ಆಘಾತದಿಂದ ಅವರಿನ್ನೂ ಚೇತರಿಸಿಕೊಂಡಿಲ್ಲ.

ರಾಜ್ಯಾಭಿವೃದ್ಧಿಗೆ ಹಲವು ನಿಯೋಜನೆಗಳನ್ನು ಕೈಗೊಂಡಿರುವ ವಿಜಯನಗರ ಶಾಂತಿಯನ್ನಪೇಕ್ಷಿಸುತ್ತಿದೆ. ಈಗ ಯುದ್ಧ ಸಂಭವಿಸಿದರೆ ಅವರು ನಿಯೋಜನೆಗಳ ಕೈಬಿಡಬೇಕಾಗುತ್ತದೆ. ಆದ್ದರಿಂದ ಅವರು ನಮ್ಮ ಕರಾರುಗಳಿಗೊಪ್ಪಿ ಶಾಂತಿಯನ್ನು ಮುಂದುವರಿಸಬಹುದು."

ವಜೀರನ ವಾದವನ್ನು ಖಾಜಿಯೇ ಒಪ್ಪಲಿಲ್ಲ.

"ವಿಜಯನಗರದರಸರು ಕರಾರುಗಳಿಗೊಪ್ಪಿ, ನಮಗೆ ಹಣ ಕೊಟ್ಟರೆನ್ನೋಣ – ಇದರಿಂದ ನಮಗಾದ ಲಾಭವೇನು ವಜೀರರೇ. ಈಗವರು ಯುದ್ಧಕ್ಕೆ ಸಿದ್ಧವಾಗಿಲ್ಲವೆನ್ನುತ್ತಿದ್ದೀರಿ. ಅವರ ಮೇಲೆ ಯುದ್ಧ ಘೋಷ ಮಾಡಲು ಇದೇ ಸುಸಮಯವಲ್ಲವೇ ?"

"ವಿಜಯನಗರ ಪ್ರಭುಗಳ ಅಪ್ಪಣೆಪಡೆಯದೆ ರೇಜಾಖಾನ್ ಮತ್ತು ವಜೀರ್ ಅಹಮದ್ ಅವರ ಗಡಿಯೊಳಗೆ ಪ್ರವೇಶಿಸಿದುದೇ ತಪ್ಪು. ಗೂಢಚಾರರನ್ನು ಹೇಗೆ ಶಿಕ್ಷಿಸಬೇಕೋ ಹಾಗೆ ಅವರನ್ನು ವಿಜಯನಗರದವರು ಶಿಕ್ಷಿಸಿದ್ದಾರೆ. ರೇಜಾಖಾನ್, ವಜೀರ್ ಅಹಮದರಿಬ್ಬರಿಗೇ ಪ್ರಾಣದಂಡನೆ ವಿಧಿಸಿ ಉಳಿದಿರುವವರೆಗೆ ಪ್ರಾಣದಾನ ಮಾಡಿ ವಿಜಯನಗರದವರು ಔದಾರ್ಯವನ್ನೇ ಪ್ರಕಟಿಸಿದ್ದಾರೆಂದು ಹೇಳಬಹುದು. ಸದ್ಯಕ್ಕೆ ನಾವು ಅವರ ಮೇಲೆ ಯಾವ ದೋಷವನ್ನು ಹೊರಸುವಂತಿಲ್ಲ. ರಾಮಭಟ್ಟನ ವ್ಯಾಜ್ಯ ಮಾಡಿಕೊಂಡು ನಾವು ಜಗಳ ಆರಂಭಿಸಬೇಕು."

"ನೀವು ಹೇಳಿದಂತೆ ಅವರು ಕರಾರುಗಳಿಗೊಪ್ಪಿಕೊಂಡು ಶಾಂತಿ ಮುಂದುವರಿಸಲು ಅಪೇಕ್ಷಿಸಿದರೆ."

"ನಮ್ಮ ಅನುಕೂಲವರಿತು ರಾಯಚೂರು, ಮುದಕಲ್ ಕೋಟೆಗಳನ್ನು ಹಿಡಿಯುವುದಿದ್ದೇ ಇದೆ. ಆಗ ನಿರ್ವಾಹವಿಲ್ಲದೆ ವಿಜಯನಗರದವರು ಯುದ್ಧಕ್ಕೆ ಇಳಿಯಬೇಕಾಗುತ್ತದೆ."

"ನಮ್ಮ ಬಲಾಬಲ ಹೇಗಿದೆ ಜೈನಲಾಬುದ್ದೀನ್."

ಎಂದು ಸುಲ್ತಾನರು ಕೇಳಿದರು.

"ವಿಜಯನಗರದ ಬಲಕ್ಕೆ ಸಮವಾಗಿದೆಯೆಂದು ಹೇಳಬಹುದು."

"ವಿಜಯನಗರದ ನೀರಾವರಿ ಯೋಜನೆಗಳು ಮುಗಿದರೆ ಅವರು ಮತ್ತಷ್ಟು ಬಲಿಷ್ಠರಾಗುವುದಿಲ್ಲವೇ ?"

" ಆಗುವ ಸಂಭವವಿದೆ."

" ಎರಡು ಮಾತನ್ನೂ ನೀವೇ ಹೇಳುತ್ತಿರುವಿರಲ್ಲಾ ಜೈನಲಾಬುದ್ಧೀನ್. ಯಾವದಾದರೂ ಖಚಿತವಾದ ಅಭಿಪ್ರಾಯ ವ್ಯಕ್ತಮಾಡಿ."

" ಸದ್ಯಕ್ಕೆ ಪತ್ರ ಕಳುಹಿಸಿ, ಅದರ ಪರಿಣಾಮವೇನಾಗುವುದು ನೋಡಿ ಕೊಂಡು ಮುಂದಿನ ವಿಷಯ ನಿರ್ಧರಿಸಬಹುದು ಹುಜೂರ್. ಯುದ್ಧ ಸಿದ್ಧತೆಯ ಬಗ್ಗೆ ನಾವು ತಾಪುಸರಾಗಬೇಕಾಗಿಲ್ಲ. ರಾಯಚೂರ್, ಮುದ ಕಲ್ ಮುತ್ತಿಗೆಗೆ ಅವಶ್ಯಕವಾದ ವ್ಯವಸ್ಥೆ ನಾನು ಮಾಡಿರುತ್ತೇನೆ."

" ಏನು ಮಾಡುತ್ತೀರೋ ಮಾಡಿ – ನೋಡೋಣ "

ಎಂದು ಸುಲ್ತಾನರು ಬೇಸರದಿಂದ ನುಡಿದರು.

೧೩

ಸಾಮಾನ್ಯ ಖೈದಿಗಳನ್ನಿಡುವ ಕಾರಾಗೃಹದಲ್ಲಿ ರಾಮುಭಟ್ಟನನ್ನಿಡದೆ, ಅವನಿಗೆ ಪ್ರತ್ಯೇಕ ಮನೆಯನ್ನು ಅಣಿಮಾಡಿ ಊಟೋಪಚಾರಗಳಿಗೆ ಯಾವ ಕೊರತೆಯೂ ಆಗದಂತೆ ವ್ಯವಸ್ಥೆ ಮಾಡಲಾಗಿತ್ತು.

ಅವನು ವಾಸವಾಗಿದ್ದ ಮನೆಯ ಮೇಲೆ ಸೋಮನಾಯಕನ ನೇತೃತ್ವ ದಲ್ಲಿ ಬಲವಾದ ಕಾವಲು ಏರ್ಪಡಿಸಲಾಗಿತು. ರಾಮುಭಟ್ಟ ಹೊರಗೆ ಹೋಗು ವಂತಿರಲಿಲ್ಲ. ಯಾರು ಅವನನ್ನು ನೋಡಬೇಕಾದರೂ ದಣ್ಣಾಯಕ ಇರುಗನಾಯಕರ ನಿರೂಪ ತರಬೇಕಾಗಿತ್ತು.

ರಾಮುಭಟ್ಟ ಮೂರು ದಿನ ಆಹಾರ ಸ್ವೀಕರಿಸಲಿಲ್ಲ – ಜಲಪಾನವನ್ನೂ ನಿರಾಕರಿಸಿದ. ರಾತ್ರಿಯೆಲ್ಲಾ ಒಂದೇ ಸಮನಾಗಿ ಬಡಬಡಿಸುತ್ತಿದ್ದ.

ನಾಲ್ಕನೆಯ ದಿನ ಬೆಳಿಗ್ಗೆ ಭಟ್ಟನ ಶಯ್ಯಾಗೃಹಕ್ಕೆ ಬಂದ ಸೋಮ ನಾಯಕ,

" ಎದ್ದು ಸ್ನಾನಮಾಡಿ ಬುದ್ಧಿ " ಎಂದ.

" ಏಕೆ ?"

"ಮೂರು ದಿವಸದಿಂದ ಹೊಟ್ಟೆಗೇನೂ ಇಲ್ಲ. ಸ್ವಲ್ಪ ಹಾಲೂ ಹಣ್ಣು ತೆಗೆದುಕೊಳ್ಳಿ."

"ನನಗೇನೂ ಬೇಕಾಗಿಲ್ಲ ಸೋಮನಾಯಕ. ಅಪಮಾನದ ಬೇಗೆ ಅನುಭವಿಸಲು ಪ್ರಭುಗಳು ಇಂತು ಜೀವದಾನಮಾಡದೆ ಮರಣದಂಡನೆ ವಿಧಿಸಿದ್ದರೆ ಮಹೋಪಕಾರವಾಗುತ್ತಿತ್ತು."

"ನೀವೇ ಹೀಗಂದರೆ ಹೇಗೆ ಬುದ್ಧಿ."

"ನಾನು ಯಾವ ಮಹಾವ್ಯಕ್ತಿ ?"

"ನೀವು ಮಹಾವ್ಯಕ್ತಿಗಳೇ !"

"ರಾಜ್ಯದ್ರೋಹಿ ಮಹಾವ್ಯಕ್ತಿಯೇ ?"

"ಪಾಪಮಾಡಿದ್ದಾಯಿತು – ಪ್ರಾಯಶ್ಚಿತ್ತ ಮಾಡಿಕೊಂಡು, ಮನಸ್ಸಿನ ಭಾರ ನೀಗಿಕೊಳ್ಳಬಹುದು !"

"ನನಗೆ ಪ್ರಾಯಶ್ಚಿತ್ತವಿದೆಯೇ ಸೋಮನಾಯಕ."

"ಎಲ್ಲರೂ ತಪ್ಪೊಪ್ಪಿಕೊಂಡು, ಬಾಳು ಹಸನುಮಾಡಿಕೊಂಡು, ಪುನೀತರಾಗಬಹುದೆಂದು ದೊಡ್ಡ ಗುರುಗಳು ಶ್ರೀ ವಿದ್ಯಾರಣ್ಯ ಮಹಾಸ್ವಾಮಿಯವರು ಅಪ್ಪಣೆ ಕೊಡಿಸುತ್ತಿದ್ದರು."

"ನಾನೂ ಪುನೀತನಾಗಬಹುದೇ ಸೋಮನಾಯಕ."

"ಆಗಬಹುದು ಬುದ್ಧಿ – ನನ್ನ ಮಾತು ನಂಬಿ."

ಛಟ್ಟನೆದ್ದು ಸೋಮನಾಯಕನನ್ನಪ್ಪಿಕೊಂಡು, ಅವನ ಬುಜದ ಮೇಲೆ ತಲೆಯಿಟ್ಟು ಮಕ್ಕಳಂತೆ ಅಳುತ್ತಾ,

"ನನ್ನ ಹೊಟ್ಟೆಗೆ ಹಾಲೆರೆದೆ ನಾಯಕ."

"ಇನ್ನಾದರೂ ಸ್ನಾನಮಾಡಿ ಬುದ್ಧಿ."

"ಸ್ನಾನ ಮಾಡುತ್ತೇನೆ – ನೀನು ನನಗೊಂದು ಉಪಕಾರ ಮಾಡುವೆಯಾ ?"

"ಅಪ್ಪಣೆಯಾಗಲಿ-"

"ವಿದ್ಯಾಪೀಠದಲ್ಲಿ ಶ್ರೀಕಂಠಶರ್ಮರಿರುತ್ತಾರೆ. ಅವರನ್ನು ಇಲ್ಲಿಗೆ ಕರೆದುಕೊಂಡು ಬರುವೆಯಾ ?"

"ದಣ್ಣಾಯಕರ ಅಪ್ಪಣೆಯಾಗಬೇಕು."

" ದಣ್ಣಾಯಕರಿಗೆ ನನ್ನ ಪ್ರಾರ್ಥನೆ ಸಲ್ಲಿಸಿ, ಶರ್ಮರನ್ನು ಇಲ್ಲಿಗೆ ಕರೆದು ಕೊಂಡು ಬಾ."

" ಪ್ರಯತ್ನಿಸಿ ನೋಡುತ್ತೇನೆ ಬುದ್ಧಿ "

ಎಂದು ಸೋಮನಾಯಕ ಹೊರಗೆ ಹೋದ.

ಸೋಮನಾಯಕನ ನಲ್ನುಡಿ ರಾಮಭಟ್ಟನ ಮನಸ್ಸಿನಲ್ಲಿ ಆಸೆಯನ್ನು ಅಂಕುರಿಸಿತ್ತು. ಶುಭ್ರಸ್ನಾತನಾಗಿ, ಭಕ್ತಿಯಿಂದ ಪೂಜೆಮಾಡಿ ಸ್ವಲ್ಪ ಹಾಲು ಸ್ವೀಕರಿಸಿದ.

ತಲೆಯಲ್ಲಿ ನೂರಾರು ಯೋಚನೆಗಳು – ಚಿಂತೆಗಳು.

ಏಳುವನು – ಕೂಡುವನು – ಸ್ವಲ್ಪ ಹೊತ್ತು ಮಲಗುವನು.

ಮತ್ತೆ ಎದ್ದು ಕಿಟಕಿಯಾಚೆ ಕಾಣುತ್ತಿದ್ದ ಮತಂಗಪರ್ವತವನ್ನು ದಿಟ್ಟಿಸಿ ನೋಡುವನು.

ಹೃದಯದ ಕಟ್ಟೆಯನ್ನೊಡೆಯುವಂತೆ ದುಃಖ ಉಕ್ಕಿಬರುತ್ತಿತ್ತು.

ದುಃಖವನ್ನು ಉಪಶಮನಮಾಡಿಕೊಂಡು ಮತ್ತೆ ಹೋಗಿ ಮಲಗಿದ.

ಗಾಢನಿದ್ರಾಪರವಶನಾಗಿದ್ದ ರಾಮಭಟ್ಟನನ್ನು ಎಬ್ಬಿಸಲು ಶ್ರೀಕಂಠ ಶರ್ಮನಿಗೆ ಮನಸ್ಸಾಗಲಿಲ್ಲ.

ಅರ್ಧ ಗಂಟೆ ಶ್ರೀಕಂಠಶರ್ಮ ಕೂಡಲು ಧಿಗ್ಗನೆದ್ದ ರಾಮಭಟ್ಟ ಕಣ್ಣು ಬಿಟ್ಟು ನೋಡಿ

" ಯಾರದು ?" ಎಂದ.

" ನಾನು ಭಟ್ಟರೇ – ಶ್ರೀಕಂಠಶರ್ಮ."

ರಾಮಭಟ್ಟ ಎದ್ದು ವಿನಮ್ರನಾಗಿ ಶರ್ಮನಿಗೆ ನಮಸ್ಕರಿಸಿ,

" ತಾವು ಬಂದು ಬಹಳ ಹೊತ್ತಾಯಿತೇ ?"

" ಹೆಚ್ಚೇನಿಲ್ಲ – ಅರ್ಧಗಂಟೆಯಾಗಿರಬಹುದು."

" ನನ್ನನ್ನು ಎಬ್ಬಿಸಬಾರದಾಗಿತ್ತೇ ?"

" ಗಾಢನಿದ್ರೆಯಲ್ಲಿದ್ದಿರಿ – ಎಬ್ಬಿಸುವುದೇಕೆಂದು ಸುಮ್ಮನಿದ್ದೆ .... ನನ್ನನ್ನು ನೋಡಬಯಸಿದರಂತೆ !"

" ಹೌದು – ಒಂದು ಪ್ರಾರ್ಥನೆ ಸಲ್ಲಿಸುವುದಕ್ಕಾಗಿ.

" ಏನು ಪ್ರಾರ್ಥನೆ ?"

" ಈ ಪತಿತ ಬ್ರಾಹ್ಮಣನನ್ನು ಪುನೀತನನ್ನಾಗಿ ಮಾಡಿ. ಹಿಂದೊಮ್ಮೆ

ಧರ್ಮವ್ಯಾಸಂಗದ ಸೋಗು ಹಾಕಿ ನಾನು ನಿಮಗೆ ಮೋಸಮಾಡಿದೆ. ಅದನ್ನು ಉದಾರಚಿತ್ತದಿಂದ ಕ್ಷಮಿಸಿ"

ಎಂದು ಗಟ್ಟಿಯಾಗಿ ಶ್ರೀಕಂಠಶರ್ಮನ ಪಾದಗಳನ್ನು ಹಿಡಿದ.

"ಇದೇನು ಭಟ್ಟರೇ – ನೀವು ನನಗೆ ಹಿರಿಯರು. ನನ್ನ ಪಾದಕ್ಕೆ ನೀವು ಮಣಿಯುವುದು ನನಗೆ ಅಶ್ರೇಯಸ್ಸು"

"ಬ್ರಾಹ್ಮಣೋತ್ತಮಾ – ನೀವು ಮಹರ್ಷಿ ವಿದ್ಯಾರಣ್ಯರ ಹಾಗೂ ವೇದಾಂತಕೇಸರಿ ಸಾಯಣಾಚಾರ್ಯರ ಶಿಷ್ಯರು. ಉಭಯ ಗುರುಗಳ ತಪಸ್ಸು, ಪಾಂಡಿತ್ಯ ಎರಡೂ ನಿಮ್ಮಲ್ಲಿ ಸಮಾವೇಶಗೊಂಡಿವೆ. ಭ್ರಷ್ಟ ಬ್ರಾಹ್ಮಣನಾಗಿ, ದೇಶ, ಧರ್ಮ, ದೊರೆಗೆ ದ್ರೋಹ ಬಗೆದಿರುವ ಈ ನನ್ನನ್ನು ಉದ್ಧರಿಸುವುದಿಲ್ಲವೇ ?"

"ಉದ್ಧರಿಸಲು ನಾನು ಯಾರು ರಾಮಭಟ್ಟರೇ."

"ನನ್ನ ಬಾಳಿನ ಬೆಳಕು"

"ನನ್ನಿಂದೇನಾಗಬೇಕು ಹೇಳಿ."

"ಈ ಬಂಧನದಿಂದ ನಾನು ಮುಕ್ತಿ ಬಯಸುವುದಿಲ್ಲ – ಮನಸ್ಸಿನ ಬಂಧನದಿಂದಷ್ಟೇ ಮುಕ್ತಿ ಬಯಸುವುದು."

"ಆ ಮುಕ್ತಿ ಲಭಿಸುವ ಬಗೆ ?"

"ಪ್ರಾಯಶ್ಚಿತ್ತದಿಂದ !"

"ಹೇಗೆ ?"

"ನಾನು ಜಲತಂತ್ರ ವಿಶಾರದನೆಂಬುದನ್ನು ಬಲ್ಲಿರಷ್ಟೆ !"

"ಬಲ್ಲೆ."

"ಜಲತಂತ್ರ ವಿಶಾರದ ಮಾತ್ರವೇ ಅಲ್ಲ – ವಾಸ್ತುಶಿಲ್ಪ ವಿಶಾರದನೂ ಹೌದು. ನಿಮ್ಮ ಜಲತಂತ್ರ ವಿಶಾರದ ಸಿಂಗಮಭಟ್ಟ ನನ್ನ ಶಿಷ್ಯ. ಈಶ್ವರ ದತ್ತವಾದ ಯಾವದೋ ಪ್ರತಿಭೆ, ಶಕ್ತಿ ನನ್ನಲ್ಲಿ ಹುದುಗಿದೆ. ಅದನ್ನು ಈವರೆಗೆ ಸ್ವಾರ್ಥ, ಭೋಗಕ್ಕಾಗಿ ಬಳಸಿಕೊಂಡೆ. ಇನ್ನಾದರೂ ಆ ಈಶ್ವರ ದತ್ತ ಪ್ರತಿಭೆಯನ್ನು ಈಶ್ವರನ ಚರಣಕ್ಕೇ ಅರ್ಪಿಸಲು ನಿರ್ಧರಿಸಿದ್ದೇನೆ. ನನಗೆ ಅನುಕೂಲ ಕಲ್ಪಿಸಿಕೊಡಿ."

"ಅದಕ್ಕೆ ನೀವು ಬಂಧವಿಮುಕ್ತರಾಗಬೇಕು."

"ಅಗತ್ಯವಿಲ್ಲ – ರಾಜಧಾನಿಯ ಅವಶ್ಯಕತೆಗಳೇನೆಂಬುದನ್ನು ನಾನು

ಅಲ್ಪಸ್ವಲ್ಪ ಬಲ್ಲೆ. ಕಾಪಿನಭಟರ ವಶದಲ್ಲಿದ್ದುಕೊಂಡೇ ನಾನೊಮ್ಮೆ ರಾಜಧಾನಿಯ ಸವಿಾಕ್ಷಣೆ ನಡೆಸಿ, ಅಗತ್ಯವಾಗಿ ಆಗಬೇಕಾದ ಕೆಲಸ ಕಾರ್ಯ ಗಳನ್ನು ಸೂಚಿಸುತ್ತೇನೆ. ನನ್ನ ಸಲಹೆಯಂತೆ ಸಿಂಗಮಭಟ್ಟ ಕೆಲಸ ನಿರ್ವಹಿ ಸಲಿ. ಸೆರೆಯಲ್ಲಿಯೇ ಕುಳಿತು ನಾನು ಸೂಕ್ತ ಸಲಹೆಗಳನ್ನು ನೀಡುತ್ತೇನೆ— ನಿಯೋಜನೆಗಳಿಗೆ ಅಗತ್ಯವಾದ ನಕ್ಷೆಗಳನ್ನು ಸಿದ್ಧಪಡಿಸಿಕೊಡುತ್ತೇನೆ. ನನ್ನ ಮೇಲಿನ ಕಾವಲು ಸ್ವಲ್ಪವೂ ಸಡಿಲವಾಗಬೇಕಾಗಿಲ್ಲ"

"......................."

"ತಾವು ದಿನಕ್ಕೊಮ್ಮೆ ಇಲ್ಲಿಗೆ ಬಂದು ನನಗೆ ದರ್ಶನಕೊಡಿ. ತಮ್ಮ ಅಮೌಲ್ಯ ವೇಳೆಯ ಕಾಲುಗಂಟೆ – ಅರ್ಧಗಂಟೆ ನನಗಾಗಿ ವಿಾಸಲಾಗಿಡಿ."

"ನಾನು ನಿತ್ಯವೂ ಬಂದು ನಿಮ್ಮನ್ನು ನೋಡಿಕೊಂಡು ಹೋಗು ತ್ತೇನೆಂದು ಆಶ್ವಾಸನ ಕೊಡುತ್ತೇನೆ. ಇನ್ನೊಂದು ವಿಷಯ – ನಾನು ನಿರ್ಧರಿಸಲಾರೆ. ಮಹಾಮಂತ್ರಿ ಶ್ರೀ ಸಾಯಣರಿಗೆ ನಿವೇದಿಸುತ್ತೇನೆ. ಪ್ರಾಯಶಃ ಅವರು ನಿಮ್ಮ ಪ್ರಾರ್ಥನೆ ನಿರಾಕರಿಸಲಾರರು."

"ಅಷ್ಟಾದರೆ ಸಾಕು – ನಾನು ಧನ್ಯನಾದೆ."

ಎಂದು ರಾಮಭಟ್ಟ ನುಡಿದ.

೧೪

ರಾಮಭಟ್ಟನ ಪ್ರಾರ್ಥನೆಯನ್ನು ಲಾಲಿಸಿದ ಆರ್ಯ ಸಾಯಣರು, ತಮ್ಮ ಅಂಗೀಕಾರ ಮುದ್ರೆಯನ್ನೊತ್ತಿ ಇರುಗ ನಾಯಕನಿಗೆ ಸೂಚನೆ ಯಿತ್ತರು.

ಸಿಂಗಮಭಟ್ಟ ತನ್ನ ನಿಯೋಜನೆಗಳನ್ನೆಲ್ಲಾ ರಾಮಭಟ್ಟನಿಗೆ ತಿಳಿಸಿ, ಅವನ ಸಲಹೆಗಳನ್ನು ಪಡೆಯುತ್ತಿದ್ದ.

ತುಂಗಭದ್ರಾ ನದಿಯಿಂದ ಕಾಲುವೆ ತೋಡಿ ಕಮಲಾಪುರದವರೆಗೆ ನೀರು ಹಾಯಿಸುವ ಕಾರ್ಯಾರಂಭವಾಯಿತು.

ಸೈನಿಕರು, ಊರಿನ ಪ್ರಜೆಗಳು ಏಕಮನಸ್ಕರಾಗಿ ಈ ಉದ್ಯಮಕ್ಕೆ ನೆರವು ನೀಡಿದರು.

ಕಾಲುವೆಯ ಕೆಲಸ ಒಂದು ವಾರ ಭರದಿಂದ ಸಾಗಿ ತಟಸ್ಥವಾಯಿತು. ಎದುರಿಗೆ ಸಿಕ್ಕಿದ ಒಂದು ಮಹಾ ಬಂಡೆಯನ್ನೊಡೆದಲ್ಲದೆ ಕಾಲುವೆಯನ್ನು ಮುಂದಕ್ಕೊಯ್ಯುವುದು ದುಸ್ಸಾಧ್ಯವಾಯಿತು.

ಸಿಂಗಮಭಟ್ಟ ತನ್ನ ಬುದ್ಧಿಯನ್ನೆಲ್ಲಾ ಪ್ರಯೋಗಿಸಿ ನೋಡಿದ. ಕಲ್ಲು ಕುಟಿಗರ ಉಳಿಗಾಗಲಿ, ಮದ್ದಿನವರ ಸಿಡಿಮದ್ದುಗಳಾಗಲಿ ಬಂಡೆಯ ಶತಾಂಶ ವನ್ನೂ ನಿವಾರಿಸಲಾಗಲಿಲ್ಲ.

ಮುಂದೇನು ಗತಿ ಎಂದು ಚಿಂತಾಕುಲನಾದ ಸಿಂಗಮಭಟ್ಟ, ರಾಮ ಭಟ್ಟನಿಗೆ ವಿಷಯ ತಿಳಿಸಲು,

" ನಾಳೆ ಸೂರ್ಯೋದಯಕ್ಕೆ ಮುನ್ನ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡು ಸಿಂಗಮಭಟ್ಟ "

ಎಂದು ರಾಮಭಟ್ಟ ಹೇಳಿದ.

ಬೆಳಿಗ್ಗೆ ರಾಮಭಟ್ಟನ ಜತೆ ಹೋಗಲು ಕಾಪಿನ ಭಟರು, ಕೆಲವು ಸಶಸ್ತ್ರ ಸೈನಿಕರು, ಸಿಂಗಮಭಟ್ಟ, ಇರುಗನಾಯಕರು ಸಿದ್ಧರಾದರು.

ಬಂಡೆಯ ಬಳಿಗೆ ಬಂದ ರಾಮಭಟ್ಟ ಅದರ ಅಷ್ಟಮೂಲೆಗಳನ್ನೂ ಪರೀಕ್ಷಿಸಿ ನೋಡಿ, ಒಂದು ತುಣುಕು ಕಲ್ಲನ್ನು ಪುಡಿ ಮಾಡಿ ನೋಡಿ, ಕಾಪಿನ ಭಟರೊಂದಿಗೆ ಹೊರಟು, ಸುತ್ತಣ ಪ್ರದೇಶದಲ್ಲಿ ದೊರೆಯುತ್ತಿದ್ದ ಕೆಲವು ಎಲೆ ಹೂಗಳನ್ನೂ ಮೂಲಿಕೆಗಳನ್ನೂ ಆಯ್ದು ತಂದು

" ಇವುಗಳನ್ನು ಅರೆದು ಕೊಡಿ " ಎಂದು ಕೇಳಿದ.

ಭಟರು ಅರೆದು ಮುದ್ದೆ ಮಾಡಿಟ್ಟ ಉಂಡೆಗಳನ್ನೆತ್ತಿಕೊಂಡು ರಾಮ ಭಟ್ಟ, ಎರಡು ಬೋಗುಣಿ ನೀರಿನಲ್ಲಿ ಕದರಿ ದಪ್ಪ ಕಷಾಯ ಸಿದ್ಧಗೊಳಿಸಿ, ಬಂಡೆಯ ಮೇಲೆ, ಸುತ್ತಲೂ ಮಸಿಯಿಂದ ರೇಖೆಗಳನ್ನು ಬರೆದು,

" ನಾನು ಬರೆದಿರುವ ರೇಖೆಗಳ ಮೇಲೆ ಮಂದವಾಗಿ ಈ ಕಷಾಯ ಬಳಿಯಿರಿ " ಎಂದ.

ಎಂಟು ಬಾರಿ ಕಷಾಯದ ಲೇಪವಾದಮೇಲೆ ರಾಮಭಟ್ಟ ಇರುಗ ನಾಯಕರ ಕಡೆ ತಿರುಗಿ,

" ನಮ್ಮ ಕೆಲಸ ಆಯಿತು ನಾಯಕರೇ. ನಾಳೆ ಬೆಳಿಗ್ಗೆವರೆಗೆ ವಿಶ್ರಾಂತಿ.

ಎಲ್ಲರೂ ಮನೆಗೆ ಹೋಗಬಹುದು."

"ಬೆಳಿಗ್ಗೆ ನೀವೂ ಬರುವಿರಾ ರಾಮಭಟ್ಟರೇ ?"

"ಏನೂ ಅಗತ್ಯವಿಲ್ಲ."

ಎಂದು ಹೇಳಿ ಭಟರೊಂದಿಗೆ ತನ್ನ ಬಂದಿವಾಸ ಸೇರಿದ.

'ಇದೇನು ಹುಚ್ಚಾಟ' ಎಂದು ಇರುಗನಾಯಕರಂದುಕೊಂಡು,

"ರಾಮಭಟ್ಟರು ಮಾಡಿದ್ದೇನು ಸಿಂಗಮಭಟ್ಟರೇ." ಎಂದು ಕೇಳಿದರು.

"ನನಗೂ ಅರ್ಥವಾಗಿಲ್ಲ ನಾಯಕರೇ – ನಾಳೆ ಬೆಳಿಗ್ಗೆವರೆಗೆ ಕಾದು ನೋಡೋಣ."

ಎಂದರು.

ಇರುಗನಾಯಕರಿಂದ ಬಂಡೆಯ ಕಥೆ ಕೇಳಿದ ಮಹಾಪ್ರಭುಗಳು, ತಾವೂ ಬೆಳಿಗ್ಗೆ ಬರುವುದಾಗಿ ಸೂಚನೆಯಿತ್ತರು.

ಬೆಳಗಾಗುವುದನ್ನೇ ನಿರೀಕ್ಷಿಸುತ್ತಿದ್ದ ಸಿಂಗಮಭಟ್ಟ, ಪರಿವಾರದೊಂದಿಗೆ ಬಂಡೆಯಿದ್ದೆಡೆಗೆ ಹೊರಟ.

ಇರುಗನಾಯಕರ ಜತೆಗೆ ಮಹಾಪ್ರಭುಗಳೂ ಅಶ್ವಾರೋಹಿಗಳಾಗಿ ಬಂದರು.

ಸಮಸ್ತರೂ ಬಂಡೆಯನ್ನು ನೋಡುತ್ತಾ ಮಂತ್ರಮುಗ್ಧರಂತೆ ನಿಂತರು.

ರಾಮಭಟ್ಟ ಮಸಿಯಿಂದ ಗುರುತುಹಾಕಿದ್ದ ಎಡೆಗಳಲ್ಲಿ ಬಂಡೆ ಸೀಳು ಬಿಟ್ಟಿತ್ತು. ಯಾರೋ ಗರಗಸ ತೆಗೆದುಕೊಂಡು ಕೊಯ್ದಿರುವಂತೆ ಭಾಸವಾಗುತ್ತಿತ್ತು.

ಆನಂದೋತ್ಸುಕನಾಗಿದ್ದ ಸಿಂಗಮಭಟ್ಟ,

"ಇನ್ನೂ ಕಾಲುವೆಯನ್ನು ಕಮಲಾಪುರ ಮುಟ್ಟಿಸುತ್ತೇನೆ ಮಹಾಪ್ರಭೂ" ಎಂದ.

ಪ್ರಸನ್ನವದನರಾಗಿದ್ದ ಮಹಾಪ್ರಭುಗಳು,

"ಈ ಮನುಷ್ಯ ದೇವಾಂಶಸಂಭೂತ ನಾಯಕರೇ— ಮನುಷ್ಯ ಮಾತ್ರದವರಿಂದ ಆಗತಕ್ಕ ಕೆಲಸವಲ್ಲ ಇದು.— ರಾಮಭಟ್ಟರನ್ನು ಇನ್ನೂ ಸೆರೆಯಲ್ಲಿಟ್ಟಿರುವುದು ಉಚಿತವೆಂದು ನಮಗನಿಸುವುದಿಲ್ಲ."

ಸಿಂಗಮಭಟ್ಟ ಮುಂದೆ ಬಂದು,

"ಸೆರೆಯಿಂದ ಮುಕ್ತರಾಗಲು ರಾಮಭಟ್ಟರು ಇಷ್ಟಪಡುವುದಿಲ್ಲ ಮಹಾಪ್ರಭೂ."

"ಏಕೆ ?"

"ಪ್ರಾಯಶ್ಚಿತ್ತದ ಸಲುವಾಗಿ ತಾವು ಸೆರೆಯಲ್ಲಿಯೇ ಇರಲು ಅವರು ಶಪಥಮಾಡಿದ್ದಾರೆ."

"ಪ್ರತಿಭೆಗೆ ತಕ್ಕ ಹಟ ಈ ಬ್ರಾಹ್ಮಣೋತ್ತಮನ ವೈಶಿಷ್ಟ್ಯವೆಂದು ಕಾಣುತ್ತದೆ. ಇರುಗನಾಯಕರೇ – ಇನ್ನುಮೇಲೆ ರಾಮಭಟ್ಟರನ್ನು ಬಂದಿಗಳೆಂದು ಕಾಣಬೇಡಿ. ಅವರ ಮೇಲಿನ ಕಾವಲನ್ನೂ ಸಡಿಲಿಸಿ. ಅವರು ಏನು ಬಯಸಿದರೂ ನಿರಾಕರಿಸಬೇಡಿ."

"ಅವರು ಏನನ್ನೂ ಬಯಸುತ್ತಿಲ್ಲ ಪ್ರಭೂ. ನಾವು ಕೊಡುವ ಹಣ್ಣುಗಳನ್ನೂ ಕಾಪಿನ ಭಟರಿಗೆ ಹಂಚಿಬಿಡುತ್ತಾರೆ. ಜೀವಧಾರಣೆಗೆ ಎಷ್ಟು ಅವಶ್ಯಕವೋ ಅಷ್ಟು ಆಹಾರ ಸ್ವೀಕರಿಸುತ್ತಾರೆ. ಹಗಲಿರುಳೂ ಒಂದೇ ಸಮನೆ ನಕ್ಷೆ ಬರೆಯುತ್ತಿರುತ್ತಾರೆ."

"ಅವರಿಗೆ ಹೇಗೆ ಬೇಕೋ ಹಾಗೆ ಇರಲಿ. ಯಾವ ಕಾರ್ಯಕ್ಕೂ ಅವರ ನೆಮ್ಮದಿಗೆ ಭಂಗ ಉಂಟಾಗದಂತೆ ನೋಡಿಕೊಳ್ಳಿ."

ಎಂದು ಆಣತಿಯಿತ್ತು ಪ್ರಭುಗಳು ಅಶ್ವವನ್ನೇರಿದರು.

೧೫

ಅರಮನೆಯಲ್ಲಿದ್ದ ಪ್ರಭುಗಳ ಕಾರ್ಯಮಂದಿರದಲ್ಲಿ, ಅವರೂ ಸಾಯಣ ಮಂತ್ರಿಗಳೂ ಕುಳಿತಿದ್ದಾಗ ಪ್ರವೇಶಿಸಿದ ಮುದ್ದಪ್ಪನಾಯಕರು,

"ಬಹಮನಿ ಸುಲ್ತಾನರಿಂದ ಪತ್ರ ಬಂದಿದೆ" ಎಂದರು.

ಪ್ರಭುಗಳು ನಸುನಗುತ್ತಾ,

"ಈ ವೇಳೆಗೇ ಪತ್ರ ಬರಬೇಕಾಗಿತ್ತು. ಏಕೋ ತಡವಾಯಿತು ಅಲ್ಲವೇ ನಾಯಕರೇ."

“ಅಪ್ಪಣೆಯಾದರೆ ಓದುತ್ತೇನೆ. ಪತ್ರ ತಂದಿರುವ ದೂತ ಉತ್ತರ ಅಪೇಕ್ಷಿಸುತ್ತಿದ್ದಾನೆ.”

“ಬಹಮನಿ ಸುಲ್ತಾನರು ಬಹಳ ಅವಸರದಲ್ಲಿರುವಂತಿದೆ. ಪತ್ರ ಓದಿ.”

ಮುದ್ದಪ್ಪನಾಯಕರು, ಪತ್ರದ ಸುರುಳಿ ಬಿಚ್ಚಿ,

“ಶ್ರೀಮನ್ ಮಹಾರಾಜಾಧಿರಾಜ, ವಿಜಯನಗರದ ಪ್ರಭುಗಳು ಶ್ರೀ ಶ್ರೀ ಇಮ್ಮಡಿ ಹರಿಹರರಾಯರ ಸ|| ಕ್ಕೆ, ಬಹಮನಿರಾಜ್ಯದ ಸುಲ್ತಾನರಾದ ತಾಜವುದ್ದೀನ್ ಫಿರೋಜ್ ಷಾ ಬಹದ್ದೂರ್ ಅವರ ಅನೇಕ ಸಲಾಮುಗಳು.

ಅಲ್ಲಾನ ಕೃಪೆಯಿಂದ ನಾವೂ ನಮ್ಮ ಪ್ರಜೆಗಳೂ ಈವರೆಗೆ ಸುಖವಾಗಿದ್ದೇವೆ. ತಾವೂ ತಮ್ಮ ಪ್ರಜೆಗಳು ಸುಖವಾಗಿದ್ದೀರೆಂದು ನಂಬಿದ್ದೇವೆ.

ಗತಿಸಿದ ತಮ್ಮ ತೀರ್ಥರೂಪರವರಾದ ಶ್ರೀ ಶ್ರೀ ಬುಕ್ಕರಾಯರ ಕಾಲದಿಂದ ನಿಮ್ಮ ನಮ್ಮ ರಾಜ್ಯಗಳು ಸ್ನೇಹ ವಿಶ್ವಾಸಗಳಿಂದಿರುವುದು ತಮಗೆ ತಿಳಿದೇ ಇದೆ. ನಮ್ಮ ಸ್ನೇಹವಿಶ್ವಾಸ ಅಭಿವೃದ್ಧಿಪಡಿಸುವುದಕ್ಕೆ ನಾವು ಸತತವಾಗಿ ಪ್ರಯತ್ನಿಸುತ್ತಿದ್ದೇವೆ.

ಈಚಿನ ಕೆಲವು ಘಟನೆಗಳು ನಮ್ಮ ಶಾಂತಿಯನ್ನು ಕದಡಿವೆ. ನಮ್ಮ ಪ್ರಜೆಗಳಲ್ಲಿ ಒಬ್ಬರಾದ ಶ್ರೀ ರಾಮುಭಟ್ಟರನ್ನು ನೀವು ಸೆರೆಯಲ್ಲಿಟ್ಟಿರುವುದಾಗಿ ತಿಳಿದು ಬಂದಿದೆ. ಅಲ್ಲದೆ ನಮ್ಮ ಅಧಿಕಾರಿಗಳು ರೇಜಾಖಾರ್ ಮತ್ತು ವಜೀರ್ ಅಹಮದರನ್ನು ನೀವು ವಿನಾಕಾರಣ ಕೊಲ್ಲಿಸಿ, ಅವರ ಪರಿವಾರವನ್ನು ಅಪಮಾನಗೊಳಿಸಿರುವಿರಿ.

ತಾವು ಈ ಪತ್ರ ಕೈಸೇರಿದ ಕೂಡಲೆ ಸೆರೆಯಲ್ಲಿರುವ ಶ್ರೀ ರಾಮುಭಟ್ಟರನ್ನು ಉಚಿತ ಗೌರವದಿಂದ ಇಲ್ಲಿಗೆ ಕಳುಹಿಸಿಕೊಡಬೇಕು. ಮತ್ತು ರೇಜಾಖಾರ್, ವಜೀರ್ ಅಹಮದರ ಸಂಸಾರಗಳಿಗೆ ಎರಡು ಲಕ್ಷದ ಚಿನ್ನದ ಮೊಹರುಗಳನ್ನು ಕಳಿಸಿಕೊಟ್ಟು, ಇಂಥ ಘಟನೆಗಳು ಮುಂದೆ ಜರುಗುವುದಿಲ್ಲವೆಂದು ಮುಚ್ಚಳಿಕೆ ಬರೆದು ಕಳಿಸಬೇಕು. ಯಾವ ಕಾರಣಕ್ಕಾಗಿಯಾದರೂ ನೀವು ಉದಾಸೀನ ಮಾಡುವುದಾದರೆ ನಾವು

ಮುಂದಿನ ಕ್ರಮ ಕೈಗೊಂಡು ನಿಮ್ಮ ಉದ್ಧಟವರ್ತನೆಗೆ ತಕ್ಕ ಶಾಸ್ತಿ ಮಾಡಬೇಕಾಗುತ್ತದೆ."

ಮಹಾಪ್ರಭುಗಳು ಗಹಗಹಿಸಿ ನಗುತ್ತಾ

"ಬಹಮನಿ ದೂತರನ್ನು ಕಳಿಸಿಬಿಡಿ ನಾಯಕರೇ."

"ಅವರಿಗೇನೆಂದು ಹೇಳಲಿ ?"

"ಸಾವಧಾನವಾಗಿ ಉತ್ತರ ಬರೆಯುತ್ತೇವೆಂದು ತಿಳಿಸಿ – ಹಾಗೇ ರಾಮುಭಟ್ಟರನ್ನು ಇಲ್ಲಿಗೆ ಬರಮಾಡಿ."

ಮುದ್ದಪ್ಪನಾಯಕರು ಬಹಮನಿ ದೂತರನ್ನು ಕಳುಹಿಸಿ, ರಾಮುಭಟ್ಟ ನನ್ನು ಕರೆತರಲು ಇರುಗನಾಯಕರನ್ನು ಕಳಿಸಿದರು.

ನಕ್ಷೆಗಳ ರಾಶಿಯಲ್ಲಿ ಅಡಗಿ ಕುಳಿತಿದ್ದ ರಾಮುಭಟ್ಟನ ಭುಜ ತಟ್ಟಿದ ನಾಯಕರು,

"ವಿಶ್ರಾಂತಿಯಿಲ್ಲದೇಕೆ ದುಡಿಯುತ್ತಿರುವಿರಿ ರಾಮುಭಟ್ಟರೆ ?"

"ಇರುವ ಅಲ್ಪಾಯುಷ್ಯ ನಿಸ್ಸಾರ್ಥಕವಾಗದಿರಲೆಂದು !"

"ಈಗಲೇ ಸಾರ್ಥಕವಾಗಿದೆ – ಸ್ವಲ್ಪ ಎದ್ದು ನನ್ನ ಜತೆ ಬನ್ನಿ."

"ಎಲ್ಲಿಗೆ ?"

"ಅರಮನೆಗೆ."

"ಏಕೆ ?"

"ನಿಮ್ಮನ್ನು ಈಗಲೇ ಕರೆತರುವಂತೆ ಮಹಾಪ್ರಭುಗಳ ಆಜ್ಞೆಯಾಗಿದೆ."

ಚಕಿತನಾಗಿ ಮೇಲಕ್ಕೆದ್ದ ರಾಮುಭಟ್ಟ,

"ಏಕೆ ನಾಯಕರೇ ?

"ನಿಜವಾಗಿ ನನಗೆ ಗೊತ್ತಿಲ್ಲ. ಮುದ್ದಪ್ಪ ದಣ್ಣಾಯಕರು ಹೇಳಿದರು – ನಾನಿತ್ತ ಬಂದೆ."

"ಈ ಧರ್ಮಸಂಕಟದಿಂದ ನನ್ನನ್ನು ಪಾರುಮಾಡಿ ನಾಯಕರೇ – ಕೈ ಜೋಡಿಸಿ ನಿಮ್ಮನ್ನು ಪ್ರಾರ್ಥಿಸುತ್ತೇನೆ."

"ಮಹಾಪ್ರಭುಗಳ ಆಜ್ಞೆಯನ್ನು ಉಲ್ಲಂಘಿಸಲಾಗುತ್ತದೆಯೇ ?"

"ಏನಾದರೂ ಹೇಳಿಬಿಡಿ – ನನಗೆ ಮೈಯಲ್ಲಿ ಚೆನ್ನಾಗಿಲ್ಲ ಎಂದು ಹೇಳಿಬಿಡಿ."

" ಸುಳ್ಳು ಹೇಳುವ ಅಭ್ಯಾಸ ನನಗಿಲ್ಲ ಭಟ್ಟರೇ – ಏಳಿ."

" ಅವರಿಗೆ ನಾನು ಹೇಗೆ ಮುಖ ತೋರಿಸಲಿ ನಾಯಕರೇ."

ಈಗವರು ನಿಮ್ಮ ವಿಷಯದಲ್ಲಿ ಪ್ರಸನ್ನರಾಗಿದ್ದಾರೆ – ನೀವು ಯೋಚಿಸುವ ಕಾರಣವಿಲ್ಲ. – ಏಳಿ, ಮಹಾಪ್ರಭುಗಳನ್ನು ಕಾಯಿಸುವುದು ತರವಲ್ಲ."

ಉಟ್ಟಿದ್ದ ಧೋತ್ರದ ಮೇಲೊಂದು ಬಗಲುಗಸೆ ಅಂಗಿ, ಉತ್ತರೀಯ ಧರಿಸಿ ರಾಮಭಟ್ಟ ಹೊರಡಲು ಸಿದ್ಧನಾದ.

ತಕ್ಷಣವೇ ಏನೋ ನೆನಪಾಯಿತು.

ಕೆಲವು ನಕ್ಷೆಗಳನ್ನು ಸುರುಳಿಸುತ್ತಿ ಕೈಯಲ್ಲಿ ಹಿಡಿದುಕೊಂಡು ಇರುಗ ನಾಯಕರನ್ನು ಹಿಂಬಾಲಿಸಿದ.

ನಗೆಮೊಗದಿಂದಲೇ ಮಹಾಪ್ರಭುಗಳು ರಾಮಭಟ್ಟನನ್ನು ಸ್ವಾಗತಿಸಿ,

" ಬನ್ನಿ – ಕುಳಿತುಕೊಳ್ಳಿ " ಎಂದರು.

" ಕ್ಷಮಿಸಬೇಕು ಮಹಾಪ್ರಭೂ – ಸನ್ನಿಧಿಯಲ್ಲಿ ಕೂಡುವಷ್ಟು ನನಗೆ ಯೋಗ್ಯತೆಯಿಲ್ಲ."

" ಬಹುಮನಿ ಸುಲ್ತಾನರಿಂದ ನಮಗೊಂದು ಪತ್ರ ಬಂದಿದೆ. ಸುಲ್ತಾನರು ನಿಮ್ಮ ವಿಷಯ ಪ್ರಸ್ತಾಪಿಸಿದ್ದಾರೆ. ನಿಮ್ಮ ಅಭಿಪ್ರಾಯ ತಿಳಿದು ಅವರಿಗೆ ಉತ್ತರ ಬರೆಯೋಣವೆಂದು ನಿಮ್ಮನ್ನು ಬರಮಾಡಿದೆವು."

ಸುಲ್ತಾನರ ಪತ್ರವನ್ನು ಮುದ್ದಪ್ಪನಾಯಕರು ರಾಮಭಟ್ಟನ ಕೈಗಿತ್ತರು.

ರಾಮಭಟ್ಟ ಪತ್ರ ಓದಿಕೊಂಡು, ನಾಯಕರಿಗೆ ಅದನ್ನು ಹಿಂದಿರುಗಿಸಿ ಕೈಕಟ್ಟಿ ನಿಂತ.

" ನಿಮ್ಮ ಅಭಿಪ್ರಾಯವೇನು ?"

" ನಾನು ತಮ್ಮ ಪ್ರಜೆಯೆಂದು ಸುಲ್ತಾನರು ಅಪ್ಪಣೆ ಕೊಡಿಸಿದ್ದಾರೆ. ಇದು ಶುದ್ಧ ಸುಳ್ಳು. ನಾನು ಯಾವಾಗಲೂ ಅವರ ಪ್ರಜೆಯಾಗಿರಲಿಲ್ಲ."

" ಸುಲ್ತಾನರು ನಿಮ್ಮನ್ನು ಸ್ವಾಗತಿಸಲು ಉತ್ಸುಕರಾಗಿದ್ದಾರೆ."

" ನಾನು ಇಲ್ಲಿರುವುದು ಮಹಾಪ್ರಭುಗಳಿಗೆ ಅಸಮ್ಮತವಾಗಿದೆಯೇ ?"

" ಹಾಗಲ್ಲ."

" ನಾನು ಇಲ್ಲಿರುವುದರಿಂದ ವಿಜಯನಗರಕ್ಕೇನಾದರೂ ಹಾನಿಯೊದಗುವ ಸಂಭವವಿದೆಯೇ ?"

" ಅಂದರೆ........"

" ನನ್ನಿಂದ ತೊಂದರೆಯಾಗುವುದಿದ್ದರೆ ನಾನು ವಿಜಯನಗರ ಬಿಡುವುದಕ್ಕೆ ಸಿದ್ಧವಾಗಿದ್ದೇನೆ."

" ಬಿಟ್ಟು ಎಲ್ಲಿಗೆ ಹೋಗುವಿರಿ ?"

" ಎಲ್ಲಿಂದ ಬಂದೆನೋ ಅಲ್ಲಿಗೆ – ಹೊಯ್ಸಳರಾಜ್ಯಕ್ಕೆ."

" ರಾಮಭಟ್ಟರೇ, ನಿಮ್ಮನ್ನು ಕಳೆದುಕೊಳ್ಳುವಷ್ಟು ನಾವು ಅವಿಚಾರಿಗಳೆಂದು ಭಾವಿಸಿದಿರಾ ? ನಿಮ್ಮ ಅಭಿಪ್ರಾಯ ಸ್ಪಷ್ಟವಾಗಿ ತಿಳಿಯಲು ಕೇಳಬೇಕಾಯಿತು. ನಿಮ್ಮ ಸಲುವಾಗಿ ನಾವು ಬಹಮನಿ ರಾಜ್ಯದ ಮೇಲೆ ಯುದ್ಧಮಾಡುವುದಕ್ಕೂ ಸಿದ್ಧರಾಗಿದ್ದೇವೆ."

ರಾಮಭಟ್ಟನ ಕಣ್ಣುಗಳಿಂದ ಆನಂದಭಾಷ್ಪಗಳೊಸರಿದವು. ಅವನು ಕೈಜೋಡಿಸಿ,

" ಮಹಾಪ್ರಭು, ತಾವೂ ಆರ್ಯ ಸಾಯಣಾಚಾರ್ಯರೂ ಸೇವಾವಕಾಶ ಕಲ್ಪಿಸಿಕೊಟ್ಟು ನನ್ನನ್ನು ಪುನೀತನನ್ನಾಗಿ ಮಾಡಿದಿರಿ ನನ್ನ ಶೇಷಾಯುಷ್ಯವನ್ನು ತಮ್ಮ ಪಾದಸೇವೆಗೆ ಮೀಸಲಾಗಿಟ್ಟದ್ದೇನೆ. ಈ ನನ್ನ ಅಲ್ಪ ಕಾಣಿಕೆಯನ್ನು ಒಪ್ಪಿಸಿಕೊಳ್ಳಬೇಕು."

ಎಂದು ನಕ್ಷೆಯ ಸುರುಳಿಗಳನ್ನು ಬಿಚ್ಚಿ ಪ್ರಭುಗಳ ಮುಂದೆ ಹರಡಿದ.

" ಇವೇನು ಭಟ್ಟರೇ."

" ರಾಜಧಾನಿಯ ಕೋಟೆಕೊತ್ತಳಗಳನ್ನು ಭದ್ರಪಡಿಸುವ ರೀತಿ – ಹಂತ ಹಂತದಲ್ಲಿ ಶತ್ರುಗಳನ್ನೆದುರಿಸುವ ಮಾರ್ಗಗಳನ್ನು ನಿರ್ದೇಶಿಸಿದ್ದೇನೆ. ಕೃತಕ ಕಂದಕಗಳು, ಮಾರ್ಗಗಳನ್ನು ನಿರ್ಮಿಸಿ ಶತ್ರುಗಳನ್ನು ದಂಗುಬಡಿಸಬಹುದು."

ನಕ್ಷೆಗಳನ್ನು ಸಾಯಣಾಚಾರ್ಯರಿಗೆ ಕೊಡುತ್ತಾ ಪ್ರಭುಗಳು,

" ಒಂದು ಅಪರಾಧ ಮಾಡಿದಿರಿ. ಅದರ ಪಾಪನಿವಾರಣಾರ್ಥವಾಗಿ ನೂರು ಉಪಕಾರ ಮಾಡಿರುವಿರಿ. ಮಹಾಶಿಲ್ಪಿ, ನಿಮ್ಮಲ್ಲಿ ನಮಗೆ ಪೂರ್ಣ ನಂಬಿಕೆ, ಭರವಸೆ ಇದೆ. ಇನ್ನಾದರೂ ಬಂದಿವಾಸದಿಂದ ಹೊರಗೆ ಬನ್ನಿ."

" ಅದಕ್ಕೆ ನಾನು ಸಮ್ಮತಿಸಲಾರೆ ಮಹಾಪ್ರಭೂ. ಅಲ್ಪವಾದ ಚಿನ್ನದ ತುಂಡಿಗಾಗಿ ದೇಶವನ್ನು ಮಾರಲು ಈ ದುರ್ಬಲ ಮನಸ್ಸು ಸಿದ್ಧವಾಯಿತು. ಅದನ್ನು ಇನ್ನೂ ನಾನು ನಂಬುವುದಿಲ್ಲ. ಇದ್ದಲ್ಲಿಯೇ ನಾನು ಸ್ವತಂತ್ರನಾಗಿದ್ದೇನೆ – ಸುಖವಾಗಿದ್ದೇನೆ. ನನಗೆ ಜನಸಂಗ, ಜನಸಂಪರ್ಕವೂ ಬೇಕಿಲ್ಲ."

"ನಿಮ್ಮ ಇಷ್ಟ."

ಸಾಯಣರು ರಾಮಭಟ್ಟನನ್ನು ಹತ್ತಿರ ಕರೆದು

"ಶ್ರೀಕಂಠ ಕ್ರಮವಾಗಿ ಬರುತ್ತಿದ್ದಾನೆಯೇ ಭಟ್ಟರೇ ?"

"ಬರುತ್ತಿದ್ದಾರೆ. ಗುರುದೇವಾ."

"ನಿಮ್ಮ ಆಧ್ಯಾತ್ಮಿಕ ಪ್ರಗತಿಯ ಬಗ್ಗೆ ಶ್ರೀಕಂಠ ಬಹಳ ಒಳ್ಳೆಯ ಅಭಿಪ್ರಾಯವ್ಯಕ್ತಮಾಡಿದ್ದಾನೆ."

"ಅದು ಅವರ ಹಿರಿತನದ ಸಾಕ್ಷಿ. ಒಂದು ಪ್ರಾರ್ಥನೆ......."

"ಏನು ರಾಮಭಟ್ಟರೇ ?"

"ಯಾವಾಗಲಾದರೊಮ್ಮೆ ನಾನು ಪರ್ಣಕುಟಿಗೆ ಬಂದು ತಮ್ಮ ದರ್ಶನ ಪಡೆಯಬಹುದೇ ?"

"ಏಕೆ ಹಾಗೆ ಕೇಳುವಿರಿ. ದಿನವೂ ಬನ್ನಿ – ನಾನು ಬೇಡವೆನ್ನು ತ್ತೇನೆಯೇ ?"

"ತಮ್ಮ ಅಮೌಲ್ಯವೇಳೆಯನ್ನು ವೃಥಾ ಕಳೆಯಲು ನನಗಿಷ್ಟವಿಲ್ಲ. ಒಮ್ಮೆ – ಒಂದೇ ಒಂದು ಬಾರಿ ಬರುತ್ತೇನೆ – ಮಹಾಗುರು ಶ್ರೀ ವಿದ್ಯಾರಣ್ಯರ ಸಮಾಧಿಗೆ ನನ್ನ ಅಶ್ರುತರ್ಪಣ ಅರ್ಪಿಸಿ. 'ನನ್ನ ಸರ್ವಾಪರಾಧಗಳನ್ನೂ ಮನ್ನಿಸು ಗುರುನಾಥ' ಎಂದು ಬೇಡಿಕೊಂಡು, ತಮ್ಮ ಶ್ರೀಚರಣಗಳಿಗೆ ನಮಿಸಿ ಹೋಗುತ್ತೇನೆ."

ಸಾಯಣರ ಕಣ್ಣುಗಳು ತೇವಗೊಂಡವು.

ರಾಮಭಟ್ಟನನ್ನು ಹತ್ತಿರ ಕರೆದು, ಅವನ ನೆತ್ತಿಯ ಮೇಲೆ ತಮ್ಮ ಅಮೃತಹಸ್ತವನ್ನಿಟ್ಟು,

"ನಿಮ್ಮ ಹೃದಯದಲ್ಲಿ ಯಾವ ವೇದನೆ ಇದೆಯೆಂಬುದನ್ನು ನಾನರಿತಿರುವೆ ರಾಮಭಟ್ಟರೇ. ಚಿಂತಿಸಬೇಡಿ. ಸರ್ವಭೂತಸಾಕ್ಷಿಣ್ಯೈತನ್ಯಳಾದ ಶ್ರೀ ಭುವನೇಶ್ವರಿ ನಿಮ್ಮನ್ನು ಕಾಪಾಡುತ್ತಾಳೆ. ಆಕೆಯನ್ನು ನಂಬಿ – ಆಕೆಯಲ್ಲಿ ಅನನ್ಯ ಭಕ್ತಿ ಪ್ರೇಮ ಇಡಿ.

"ಜಪೋ ಜಲ್ಪಂ ಶಿಲ್ಪಂ ಸಕಲಮಪಿ ಮುದ್ರಾವಿರಚನಾ
ಗತಿಃ ಪ್ರಾದಕ್ಷಿಣ್ಯಕ್ರಮಣಮಶನಾದ್ಯಾಹುತಿವಿಧಿಃ ।

**ಪ್ರಮಾಣಃ ಸಂವೇಶಃ ಸುಖಮಖಿಲಮಾತ್ಮಾರ್ಪಣದೃಶಾ
ಸಪರ್ಯಾಪರ್ಯಾಸ್ತವ ಭವತು ಯನ್ಮೇ ವಿಲಸಿತಂ ||**

—ಜಗನ್ಮಾತೆ, ನನ್ನ ಮಾತೆಲ್ಲ ನಿನ್ನನ್ನು ಜಪಿಸುವ ಮಂತ್ರವಾಗಲಿ; ನನ್ನ ಅಂಗಚೇಷ್ಟೆಗಳೆಲ್ಲ ನಿನಗಾಗಿ ಮಾಡುವ ಮುದ್ರೆಯಾಗಲಿ; ನನ್ನ ಸಂಚಾರವೆಲ್ಲಾ ನಿನ್ನ ಪ್ರದಕ್ಷಿಣೆಯಾಗಲಿ; ನಾನು ಮಾಡುವ ಭೋಜನ ನಿನಗೆ ಅರ್ಪಿಸುವ ಹವಿಸ್ಸಾಗಲಿ; ನಾನು ನೆಲದ ಮೇಲೆ ಹೊರಳಾಡುವುದು ನಿನಗೆ ಮಾಡುವ ಸಾಷ್ಟಾಂಗ ಪ್ರಣಾಮವಾಗಲಿ; ಪಂಚೇಂದ್ರಿಯಗಳ ಮೂಲಕ ನಾನು ಮಾಡುವ ಕ್ರಿಯೆಗಳೆಲ್ಲ ಪರಮೇಶ್ವರನಿಗೆ ಅರ್ಪಿತವಾಗಲೆಂಬ ಭಾವನೆ ಯಿಂದ ಮಾಡಿದ ಪೂಜೆಯಾಗಲಿ. ಎಂದು ಪ್ರಾರ್ಥಿಸಿ,"

" ಅನುಗ್ರಹೀತನಾದೆ. ಇದೇ ನನ್ನ ಗುರೂಪದೇಶ"

ಎಂದು ಪ್ರಭುಗಳಿಗೂ ಸಾಯಣರಿಗೂ ನಮಿಸಿ ರಾಮುಭಟ್ಟ ಗೃಹಾಭಿ ಮುಖನಾದ.

೧೬

ಸಿಂಗಮುಭಟ್ಟ, ರಾಮುಭಟ್ಟರಲ್ಲಿ ಭಾವ, ಮೈದುನ ಸಂಬಂಧ ನೀಗಿಹೋಗಿ ಕೇವಲ ಕರ್ತವ್ಯಬಾಂಧವ್ಯ ಮಾತ್ರ ಉಳಿದಿತ್ತು.

ಗೃಹಕೃತ್ಯದತ್ತ ರಾಮುಭಟ್ಟನ ಮನಸ್ಸನ್ನೆಳೆಯಲು ಸಿಂಗಮುಭಟ್ಟ ಹಲವು ಬಾರಿ ಪ್ರಯತ್ನಿಸಿ ವಿಫಲವಾಗಿದ್ದ.

ಶ್ರೀ ಸಾಯಣರ ಆಶೀರ್ವಚನ ದೊರೆತ ಮೇಲೆ ರಾಮುಭಟ್ಟನಲ್ಲಿ ಸೂಕ್ಷ್ಮಪರಿವರ್ತನೆಯಾಗಿತ್ತು. ಅವನ ದುಗುಡ, ಆಂಹತಿ, ಒಳಗುದಿ ಅಡಗಿ ಶಾಂತಿ ನೆಲಸಿತ್ತು.

ಒಂದು ದಿನ ಸಮಾಲೋಚನೆ ಮುಗಿಸಿ ಹೊರಡಲು ಸಿದ್ಧನಾದ ಸಿಂಗಮುಭಟ್ಟನನ್ನು ರಾಮುಭಟ್ಟ,

" ಸಿಂಗಮುಭಟ್ಟ, ಬಹಳ ದಿವಸಗಳ ಹಿಂದೆಯೇ ನಾನು ನಿನಗೆ ಕೃತಜ್ಞತೆ

ಅರ್ಪಿಸಬೇಕಾಗಿತ್ತು. ಆಗ ನನ್ನ ಮನಃಸ್ಥಿತಿ ಸರಿಯಾಗಿರಲಿಲ್ಲ."

" ಕೃತಜ್ಞತೆ ಏತಕ್ಕೆ ?"

" ನೀನು ನನ್ನ ಪ್ರಾಣ ಉಳಿಸಿದೆ – ನನ್ನ ಪ್ರಾಣ ಉಳಿಸಿದೆಯಲ್ಲಾ ಎಂದು ನಿನ್ನ ಮೇಲೆ ನನಗೆ ಕೋಪವಿತ್ತು. ಆ ಕೋಪವೂ ಈಗ ಮಾಯ ವಾಗಿದೆ. ಪ್ರಾಣ ಉಳಿಸಿ ನೀನು ನನಗೆ ಮಹೋಪಕಾರಮಾಡಿದೆ."

" ಮಹೋಪಕಾರವಾಗಿರುವುದು ನಿನ್ನಿಂದ ರಾಮಭಟ್ಟ. ನೀನಿಂದು ವಿಜಯನಗರದ ಆರಾಧ್ಯಮೂರ್ತಿ. ತಲೆತಲಾಂತರದವರೆವಿಗೂ ಜನ ನಿನ್ನನ್ನು ಸ್ಮರಿಸುತ್ತಾರೆ."

" ನಾನು ಮಾಡಿರುವುದು ಹಾಗಿರಲಿ. ನಿನ್ನ ನಿಷ್ಠೆ, ದಕ್ಷತೆ ಸಾಧಿಸಿರುವ ಕೀರ್ತಿಗೆ ನಾನು ಬಾಧ್ಯನಲ್ಲ........ಸಿಂಗಮಾ........ಸಿಂಗಮಾ........"

" ಹೇಳು ರಾಮಭಟ್ಟ. ಏಕೆ ಅನುಮಾನಿಸುತ್ತಿರುವೆ ?"

" ನಿನ್ನ ತಂಗಿ........ಚೆನ್ನಾಗಿದ್ದಾಳೆಯೇ ?"

" ಇದ್ದಾಳೆ."

" ಯಾವಾಗಲಾದರೂ ಈ ಪಾಪಿಯನ್ನು ಸ್ಮರಿಸಿಕೊಳ್ಳುತ್ತಾಳೆಯೇ ?"

" ಸ್ಮರಿಸಿಕೊಳ್ಳುತ್ತಾಳೆ."

" ನೀನು ಅವಳ ಮೇಲೆ ಅಸಮಾಧಾನಗೊಂಡಿರುವೆಯಾ ?"

" ಪೂರ್ಣ ಅಸಮಾಧಾನಗೊಂಡಿದ್ದೇನೆ."

" ಏಕೆ ? ಅವಳೇನು ತಪ್ಪುಮಾಡಿದಳು."

" ಅಂದು ರಾಜಸಭೆಯಲ್ಲಿ ವಿಜಯನೇ ನಿನ್ನ ಮರಣದಂಡನೆಯನ್ನಪೇಕ್ಷಿಸ ಬಾರದಾಗಿತ್ತು. ಅವಳ ನಡತೆ ಸತೀತ್ವಕ್ಕೇ ಕಳಂಕಪ್ರಾಯವಾದುದು."

" ಅಯ್ಯೋ ಮೂಢಾ – ಅವಳು ಮಹಾಸತಿಯೆಂಬುದನ್ನು ಏಕೆ ಕಾಣ ಲೊಲ್ಲೆ. ಮಹಾತಾಯಿ ಭುವನೇಶ್ವರಿಯೇ ವಿಜಯನ ರೂಪು ತಳೆದು ಬಂದು ನನ್ನ ಶಿರ ಬೇಡಿದಳು. ಅವಳ ಸತ್ಯ – ಧರ್ಮವೇ ನನ್ನನ್ನು ಕಾಪಾಡಿ, ಪತಿತನನ್ನು ಪುನೀತನನ್ನಾಗಿ ಮಾಡಿತು."

" ಭಾವ – ಭಾವ, ವಿಜಯನ ಮೇಲೆ ನಿನಗೆ ಕೋಪವಿಲ್ಲವೇ ?"

" ಭುವನೇಶ್ವರಿ ಸಾಕ್ಷ್ಯವಾಗಿ ಕೋಪವಿಲ್ಲ. ಅವಳ ಧೀರನಡತೆ ಕಂಡು ನನ್ನ ಹೃದಯ ಹೆಮ್ಮೆ, ಗೌರವ, ಭಕ್ತಿ ತಳೆದಿದೆ."

" ಹಾಗಾದರೆ ಅವಳನ್ನು ನೋಡಲೇಕೆ ನಿರಾಕರಿಸುತ್ತಿರುವೆ ?"

“ ಅದಕ್ಕಿನ್ನೂ ಕಾಲ ಬಂದಿಲ್ಲ ಸಿಂಗಮಾ. ಒಂದಲ್ಲ ಒಂದು ದಿನ ನಾನೇ ಅವಳ ಬಳಿಗೆ ಹೋಗಿ ಉದ್ದಂಡ ಪ್ರಣಾಮ ಮಾಡಿ ‘ ನನ್ನ ಸತಿಯಾಗಿ ಬಂದು, ನೀನು ನನ್ನ ಗುರುವಾದೆ. ನನ್ನ ಮನಸ್ಸಿನ ಮಾಯೆಯನ್ನು ಪರಿಹರಿಸಿದೆ ’ ಎಂದು ಹೇಳುತ್ತೇನೆ. ಅಲ್ಲಿಯವರೆಗೂ ಅವಳೂ ಕಾಯ ಬೇಕು.”

“ ಭಾವ, ಆ ಜೀವ ಬಲುನೊಂದಿದೆ – ಎಂದಾದರೊಮ್ಮೆ ನಿನ್ನ ಪ್ರೀತಿಯ ನುಡಿಯೊಂದು ಕೇಳಿಬರಬಹುದು ಎಂಬ ಒಂದೇ ಆಶೆ ತಳೆದು ಅವಳಿನ್ನೂ ಜೀವಧಾರಣೆ ಮಾಡಿಕೊಂಡಿದ್ದಾಳೆ.”

“ ನಾನವಳನ್ನು ಬಲು ನೋಯಿಸಿದೆ. ದಿಲ್ಲಿಯಲ್ಲಿ ರೋಷನಾರಾಳ ಮೋಹಪರವಶನಾಗಿ ವಿಜಯನ ಬಾಳು ನರಕಸದೃಶಮಾಡಿಬಿಟ್ಟೆ. ಅವೆಲ್ಲಕ್ಕೂ ಈಗ ಪ್ರಾಯಶ್ಚಿತ್ತ ಅನುಭವಿಸುತ್ತಿದ್ದೇನೆ ಸಿಂಗಮಾ. ಬ್ರಾಹ್ಮಣ ಪತಿತನಾಗಬಹುದು – ಪರಮಪತಿತನಾಗಲು ಶಕ್ಯವಿಲ್ಲ. ನಮ್ಮ ಪಂಚೇಂದ್ರಿಯ ಗಳಲ್ಲಿ, ತ್ರಿಕರಣಗಳಲ್ಲಿ, ತ್ರಿಕರ್ಮಗಳಲ್ಲಿ ಹಾಸುಹೊಕ್ಕಾಗಿರುವ ಆಧ್ಯಾತ್ಮಿಕ ಶಕ್ತಿ ಯಾವಾಗಲೋ ಅಭಿವ್ಯಕ್ತಿಗೊಂಡು, ನಮ್ಮ ಉಪಾಧಿಗಳೆಲ್ಲವನ್ನೂ ತೊಡೆದುಹಾಕುತ್ತದೆ. ಉಪಾಧಿ ನಿರಾಕರಣೆಯಾಗುವವರೆಗೆ ಆತ್ಮವಿಸ್ಮೃತಿ ಅನಿವಾರ್ಯ.”

“ ಭಾವ – ಆರ್ಯ ಸಾಯಣರ ಭವಿಷ್ಯ ನಿಜವಾಯಿತು ”

“ ಗುರುದೇವರು ಏನು ಅಪ್ಪಣೆಕೊಡಿಸಿದ್ದರು.”

“ ನಿನ್ನನ್ನು ಕಾಣಲು ಬರುವುದಕ್ಕೆ ಶ್ರೀಕಂಠಶರ್ಮರು ಶ್ರೀ ಸಾಯಣರ ಅಪ್ಪಣೆ ಕೇಳಿದಾಗ ‘ ಆತ್ಮವಿಕಾಸವೆಂದರೇನು ಎಂದು ಕೇಳಿದೆಯಲ್ಲವೇ ಶ್ರೀಕಂಠ. ರಾಮಭಟ್ಟರನ್ನು ಗಮನವಿಟ್ಟು ನೋಡು. ನಿನ್ನ ಪ್ರಶ್ನೆಗೆ ಉತ್ತರ ಅವರಲ್ಲಿ ದೊರೆಯುತ್ತದೆ.’ ಎಂದರು.”

“ ಗುರುದೇವಾ – ಅವ್ಯಾಜಕರುಣಾಮೂರ್ತಿ – ನನ್ನ ಮೇಲೆ ಎಷ್ಟು ಕರುಣೆ ಭಗವಾನ್ ನಿನಗೆ.”

ಎನ್ನುತ್ತ ಕಣ್ಮುಚ್ಚಿ ಕುಳಿತ.

ಸಿಂಗಮಭಟ್ಟ ಮೆಲ್ಲನೆ ಅಲ್ಲಿಂದ ಹೊರಬಿದ್ದ.

೧೭

ವಿಜಯನಗರದಿಂದ ಬಂದಿದ್ದ ಪತ್ರವನ್ನು ಸುಲ್ತಾನರಿಗೆ ಓದುವುದಕ್ಕೆ
ಜೈನಲಾಬುದ್ದೀನನಿಗೆ ಧೈರ್ಯವಿಲ್ಲವಾಯಿತು.

“ಪತ್ರ ಓದಿ ಜೈನಲಾಬುದ್ದೀನ್”

ಎಂದು ಸುಲ್ತಾನರು ಗುಡುಗಲು ಜೈನಲಾಬುದ್ದೀನ್ ತರಗೆಲೆಯಂತೆ
ತತ್ತರಿಸುತ್ತಾ ಪತ್ರ ಓದಲಾರಂಭಿಸಿದ.

“ಬಹುಮನಿರಾಜ್ಯದ ಸುಲ್ತಾನರಾದ ಶ್ರೀ ಶ್ರೀ ತಾಜವುದ್ದೀನ್
ಫಿರೋಜ್ ಷಾ ಬಹದ್ದೂರ್‌ರವರ ಸನ್ನಿಧಿಗೆ. ವಿಜಯನಗರದ ಚಕ್ರವರ್ತಿಗಳು
ಮಹಾರಾಜಾಧಿರಾಜ, ರಾಜಪರಮೇಷ್ಠಿ, ಭಾಷೆಗೆ ತಪ್ಪುವ ರಾಯರಗಂಡ
ಶ್ರೀಶ್ರೀ ಇಮ್ಮಡಿ ಹರಿಹರರಾಯರ ಅನೇಕ ಪ್ರಣಾಮಗಳು.

“ನಮ್ಮ ಕುಲಸ್ವಾಮಿ ಮತ್ತು ಸ್ವಾಮಿನಿ ಶ್ರೀ ವಿರೂಪಾಕ್ಷ,
ಭುವನೇಶ್ವರಿದೇವಿಯವರ ಆಶೀರ್ವಾದದಿಂದ ನಾವೂ ನಮ್ಮ ಪ್ರಜರೂ
ಸುಕ್ಷೇಮದಿಂದ್ದೇವೆ. ನೀವೂ ನಿಮ್ಮ ಪ್ರಜರೂ ಸುಖಸಂತೋಷಗಳಿಂದಿದ್ದೀ
ರೆಂದು ನಂಬಿದ್ದೇವೆ.

ನಿಮ್ಮ ಪತ್ರವನ್ನು ಆಮೂಲಾಗ್ರವಾಗಿ ಓದಿ ನೋಡಿದೆವು. ನಿಮ್ಮ
ಸೇವಕವರ್ಗದವರು ನಿಜಸ್ಥಿತಿಯ ಪರಿಚಯದಿಂದ ನಿಮ್ಮನ್ನು ವಂಚಿತರನ್ನಾಗಿ
ಸಿದ್ದಾರೆಂದು ನಾವು ತಿಳಿದಿದ್ದೇವೆ.

ನಮ್ಮ ನಿಮ್ಮ ರಾಜ್ಯಗಳ ಮೈತ್ರಿಗೆ ಯಾವ ರೀತಿಯಲ್ಲಿಯೂ ಧಕ್ಕೆ
ಯೊದಗಬಾರದೆಂದು ನಾವು ಸತತವಾಗಿ ಪ್ರಯತ್ನಿಸುತ್ತಿದ್ದೇವೆ. ವಿಶ್ವಾಸ
ಘಾತಕತನ ನಾವು ಕಂಡು, ಕೇಳರಿಯೆವು.

ತಂತ್ರವಿಶಾರದರಾದ ಶ್ರೀರಾಮಭಟ್ಟರನ್ನು ವಿಚಾರಿಸಿ ನೋಡಲಾಗಿ,
ಅವರು ನಿಮ್ಮ ಪ್ರಜೆಗಳಲ್ಲವೆಂಬುದು ತಿಳಿಯಿತು. ಹೊಯ್ಸಳ ರಾಜ್ಯದವರಾದ
ಶ್ರೀರಾಮಭಟ್ಟರು ಸ್ವಯಂಪ್ರೇರಣೆಯಿಂದ ಇಲ್ಲಿಗೆ ಬಂದು ನಮ್ಮ ರಾಜ್ಯಸೇವೆ
ಯಲ್ಲಿ ನಿರತರಾಗಿದ್ದಾರೆ. ಆಶ್ರಿತರಕ್ಷಕರಾದ ನಾವು ಶ್ರೀರಾಮಭಟ್ಟರನ್ನು ಬಿಟ್ಟು
ಕೊಡಲು ಸಿದ್ಧವಾಗಿಲ್ಲ. ನಮ್ಮ ಹಿರಿಯರ ಕಾಲದಲ್ಲಿ ನಡೆದ ಜನಾಬ್ ಬಹಾ
ಉದ್ದೀನರ ಪ್ರಕರಣವನ್ನು ತಾವು ಜ್ಞಾಪಿಸಿಕೊಳ್ಳಬಹುದು. ನಮ್ಮ ಸೇವಾವೃತ್ತಿ

ತ್ಯಜಿಸಿ ನಿಮ್ಮ ರಾಜ್ಯಕ್ಕೆ ಬರಲು ಶ್ರೀರಾಮಭಟ್ಟರು ಒಪ್ಪುತ್ತಿಲ್ಲ.

ನಿಮ್ಮ ಅಧಿಕಾರವರ್ಗದ ರೇಜಾಖಾನರೂ, ವಜೀರ ಅಹಮದರೂ ಹಿಂದೂ ಸನ್ಯಾಸಿಗಳ ವೇಷಧರಿಸಿ ಇಲ್ಲಿಗೆ ಬಂದು ವಿನಾಶಾತ್ಮಕ ಚಟುವಟಿಕೆಗಳಲ್ಲಿ ಉದ್ಯುಕ್ತರಾಗಿದ್ದರು. ನಮ್ಮ ಅತಿಥಿಗಳಾಗಿ ಬಂದು, ನಮ್ಮ ರಾಜ್ಯವನ್ನೇ ಅಲ್ಲಕಲ್ಲೋಲ ಮಾಡಲೆತ್ನಿಸಿದ ಈ ಇಬ್ಬರು ಗೂಢಚಾರರಿಗೆ ದೇಶದ ರಕ್ಷಣಾನಿಯಮದಂತೆ ಶಿಕ್ಷೆ ವಿಧಿಸಲಾಯಿತು.

ನಾವು ಎರಡು ಲಕ್ಷ ಚಿನ್ನದ ಮೊಹರುಗಳನ್ನು ಕಳಿಸಿಕೊಡಬೇಕೆಂದೂ, ಕಳಿಸಿಕೊಡದಿದ್ದರೆ ನಮ್ಮ ಮೇಲೆ ಕ್ರಮ ಕೈಗೊಳ್ಳುವುದಾಗಿಯೂ ಬೆದರಿಸಿದ್ದೀರಿ. ವಿಜಯನಗರದ ಒಬ್ಬ ಸಾಮಾನ್ಯ ಪ್ರಜೆಯನ್ನೂ ಹೆದರಿಕೆ ಬೆದರಿಕೆಯಿಂದ ಸಗ್ಗಿಸುವುದು ಸಾಧ್ಯವಿಲ್ಲವೆಂದು ಈ ವೇಳೆಗೆ ನಿಮಗೆ ಮನವರಿಕೆಯಾಗಿರಬೇಕು.

ನಾವು ಶಾಂತಿಯನ್ನೇ ಅಪೇಕ್ಷಿಸುತ್ತವೆಂಬ ಮಾತನ್ನು ಇನ್ನೊಮ್ಮೆ ಹೇಳಲು ಇಚ್ಛಿಸುತ್ತೇವೆ.

ನೀವು ದುರಾಗ್ರಹದಿಂದ ನಮ್ಮ ಮೇಲೆ ಯುದ್ಧ ಸಾರುವುದಾದರೆ ನಿಮ್ಮೊಂದಿಗೆ ಸೆಣಸಿ ನಮ್ಮ ಆತ್ಮಗೌರವ ರಕ್ಷಿಸಿಕೊಳ್ಳಲು ನಾವು ಸಿದ್ಧರಾಗಿದ್ದೇವೆ. ವಿಜಯನಗರದ ಸ್ನೇಹಹಸ್ತ ಬೇಕೋ, ಕೃಪಾಣಪಾಣಿ ಬೇಕೋ ಎನ್ನುವುದನ್ನು ನೀವೇ ನಿಶ್ಚಯಿಸಬೇಕು.

ಇಂತು ನಿಮ್ಮ ವಿಶ್ವಾಸಾಕಾಂಕ್ಷಿ"

ಸುಲ್ತಾನರು ಕೋಪಾವಿಷ್ಟರಾಗಿ

"ನಿಮ್ಮ ಮಾತು ಕೇಳಿ ನಾವು ಬೇವಕೂಫರಾದೆವು. ಅನವಶ್ಯಕವಾಗಿ ಪತ್ರ ಬರೆದು ಈ ಉತ್ತರ ತರಿಸಿಕೊಂಡಿರುವಿರಿ. ವಿಜಯನಗರದರಸರ ಪತ್ರದಲ್ಲಿ ಎಷ್ಟು ತಿರಸ್ಕಾರ ತುಂಬಿದೆ ನೋಡಿದಿರಾ ?"

"ರಾಯರ ಪತ್ರ ನನಗೂ ಆಶ್ಚರ್ಯವನ್ನುಂಟುಮಾಡಿದೆ ಹುಜೂರ್. ತಮ್ಮ ತರ್ಕವೇ ಸರಿ."

"ಹೇಗೂ ರಂಜಾನ್ ಕಳೆದಿದೆ. ಇನ್ನು ನಮ್ಮ ಸೈನ್ಯಗಳನ್ನು ರಾಯಚೂರು, ಮುದಕಲ್ ಕಡೆಗೆ ಸಾಗಿಸಬಹುದಲ್ಲವೇ ?"

"ಸಾಗಿಸಬಹುದು ಜಹಾಪನಾ."

“ಯುದ್ಧ ಘೋಷಣೆ ಮಾಡಿಬಿಡಿ. ನಾವೇ ಸೈನ್ಯಗಳನ್ನು ಮುನ್ನಡೆಸುತ್ತೇವೆ. ವಿಜಯನಗರವನ್ನು ನುಚ್ಚುನೂರಾಗಿಸಿ, ಇಮ್ಮಡಿ ಹರಿಹರ ರಾಯರನ್ನು ಹೆಡೆಮುರಿಕಟ್ಟಿ ಇಲ್ಲಿಗೆ ಕರೆತಂದು ಚಿತ್ರಹಿಂಸೆಮಾಡಿದಲ್ಲದೆ ನಮ್ಮ ಮನಸ್ಸಿಗೆ ಶಾಂತಿಯಿಲ್ಲ.

ದಾರಿಯುದ್ಧಕ್ಕೂ ಸಿಕ್ಕುವ ಹಿಂದೂ ಸಂಸಾರಗಳನ್ನು ಕೊಚ್ಚುತ್ತಾ, ಹಿಂದೂ ಹಳ್ಳಿಗಳನ್ನು ಲೂಟಿ ಮಾಡಲು ಸೈನ್ಯಕ್ಕೆ ತಿಳಿಸಿ. ಬಹಮನಿಯಿಂದ ವಿಜಯನಗರದವರೆಗೆ ಬಂದು ಹಿಂದೂ ಪಿಳ್ಳೆ ಉಳಿಯದಂತೆ ಸಾರಿಸಿಬಿಡಬೇಕು.

ಇಸ್ಲಾಮಿನ ನಿಜಭಕ್ತರಿಬ್ಬರ ಪ್ರಾಣಗಳಿಗೆ ವಿನಿಮಯವಾಗಿ ಎರಡು ಲಕ್ಷ ಹಿಂದುಗಳನ್ನು ನಾವು ಬಲಿಹಾಕಬೇಕು.

ಇನ್ನು ಯಾವ ಕಾಲಕ್ಕೂ ವಿಜಯನಗರವಾಗಲಿ, ಬೇರೊಂದು ಹಿಂದೂ ರಾಜ್ಯವಾಗಲಿ ತಲೆಯೆತ್ತದಂತೆ ಮಾಡದಿದ್ದರೆ ನಾನು ಫಿರೋಜ್ ಷಹನೇ ಅಲ್ಲ – ಶುಕ್ರವಾರದ ಜುಮ್ಮಾ ಮುಗಿಸಿಕೊಂಡು ನಾವು ವಿಜಯಯಾತ್ರೆ ಹೊರಡುವ ಸಂಗತಿ ರಾಜಧಾನಿಯಲ್ಲಿ ಸಾರಲ್ಪಡಲಿ” ಎಂದರು.

ಜೈನಲಾಬುದ್ದೀನ್ ಸೊಂಟ ತಗ್ಗಿಸಿ ಮುಜರೆ ಮಾಡಿ,

“ಅಪ್ಪಣೆ ಜಹಪನಾ” ಎಂದ.

ಕಮಾಲುದ್ದೀನ್ ಸಂತೋಷಭರಿತನಾಗಿ

“ಇನ್‌ಷಾ ಅಲ್ಲಾ – ಸುಲ್ತಾನ್ ಫಿರೋಜ್ ಷಾ ಜಿಂದಾಬಾದ್.” ಎಂದು ಘೋಷಿಸಿದ.

೧೮

ಬಹಮನಿ ಸುಲ್ತಾನರಿಗೆ ಪತ್ರಕಳಿಸಿದ ಕೂಡಲೆ ಯುದ್ಧಸಿದ್ಧತೆಗೆ ಪ್ರಭುಗಳು ಮನಸ್ಸುತೆತ್ತರು.

ಸಾಯಣರಿಗೆ ರಾಜ್ಯಸೂತ್ರಗಳನ್ನು ವಹಿಸಿಕೊಟ್ಟು, ತಾವೇ ಸೈನ್ಯಗಳನ್ನು ಮುನ್ನಡೆಸಲು ಪ್ರಭುಗಳು ಸಿದ್ಧರಾದರು. ವಯೋವೃದ್ಧರಾದ ಮುದ್ದಪ್ಪ ದಣ್ಣಾಯಕರು ಸಾಯಣರಿಗೆ ಸಹಾಯಕರಾಗಿದ್ದುಕೊಂಡು,

ರಾಜಧಾನಿಯ ರಕ್ಷಣೆಯ ಕಾರ್ಯ ನಿರ್ವಹಿಸತಕ್ಕುದ್ದೆಂದು ನಿರ್ಣಯಿಸ ಲಾಯಿತು. ಇರುಗನಾಯಕರು, ಗುಂಡನಾಯಕರು ಪ್ರಭುಗಳ ಇಕ್ಕೆಲಗಳ ಸೈನ್ಯಾಧಿಕಾರಿಗಳಾದರು.

ಪ್ರಭುಗಳ ನಾಲ್ವರು ಮಕ್ಕಳಾದ ಬುಕ್ಕರಾಯ, ದೇವರಾಯ, ವಿರೂಪಾಕ್ಷ, ಚಿಕ್ಕರಾಯರು ಪ್ರಭುಗಳನ್ನು ಹಿಂಬಾಲಿಸಲು ಕಾತರರಾದರು. ಬುಕ್ಕನನ್ನು ಕಳಿಸುವುದಕ್ಕೆ ಪಂಪಾದೇವಿ, ದೇವರಾಯ, ವಿರೂಪಾಕ್ಷ, ಚಿಕ್ಕರಾಯರನ್ನು ಕಳಿಸುವುದಕ್ಕೆ ಮಲ್ಲಾದೇವಿ ಹಿಂದೆಗೆದರು.

ಪ್ರಭುಗಳ ಮುಂದೆ ಈ ವಿಷಯ ಇತ್ಯರ್ಥಕ್ಕೆ ಬಂದಾಗ ಅವರು,

"ರಾಜಮಾತೆಯವರನ್ನೂ ಆಚಾರ್ಯ ಸಾಯಣರನ್ನೂ ಕೇಳಿ ನೋಡಿ. ಅವರ ನಿರ್ಣಯ ನಾವು ಒಪ್ಪಿಕೊಳ್ಳುತ್ತೇವೆ." ಎಂದರು.

ಸಾಯಣರನ್ನು ರಾಣೀವಾಸಕ್ಕೆ ಬರಮಾಡಿಕೊಂಡ ಗೌರಾಂಬಿಕಾ ದೇವಿಯವರು

"ಮಕ್ಕಳು ಹಟ ಹಿಡಿದಿದ್ದಾರೆ ಏನು ಮಾಡಲಿ?" ಎಂದು ಕೇಳಿದರು.

"ಅವರು ಪ್ರಭುಗಳ ಜತೆಗೆ ಹೋಗಬೇಕಾದುದು ಯುಕ್ತವಾಗಿದೆ. ಹೋಗಿ ಬರಲಿ ಬಿಡಿ ಅಮ್ಮಾಜಿ."

"ಬುಕ್ಕ ಪಂಪಾದೇವಿಯ ಏಕಮಾತ್ರ ಪುತ್ರ. ಅವನೇ ರಾಜ್ಯದ ಉತ್ತರಾಧಿಕಾರಿ. ಅವನನ್ನು ಕಳಿಸಲು ಪಂಪಾದೇವಿ ಒಪ್ಪುತ್ತಿಲ್ಲ."

"ಉಳಿದವರು ಹೋಗಲಿ."

"ನಾನೇನು ಕಡಿಮೆ – ನಾನೇಕೆ ಹೋಗಬಾರದು ಎಂದು ಬುಕ್ಕ ಜಗಳ ಕಾಯುತ್ತಿದ್ದಾನೆ."

"ಅಮ್ಮಾಜಿ, ಕರ್ತವ್ಯ – ಅಭಿಮಾನಗಳಲ್ಲಿ ಯಾವದು ದೊಡ್ಡದೆಂದು ಭಾವಿಸುವಿರಿ?"

"ನನ್ನ ಅಭಿಪ್ರಾಯ ತಮಗೆ ಅಪರಿಚಿತವಾದುದೇ?"

"ಯುವರಾಜಕುಮಾರರು ನಾಳೆ ಪಟ್ಟಕ್ಕೆ ಬರತಕ್ಕವರು. ಈಗಿರುವಷ್ಟು ಶಾಂತಿ ಮುಂದೆಯೂ ಇರುತ್ತದೆಂದು ಹೇಳಲು ಸಾಧ್ಯವೇ? ಯುವರಾಜ ಕುಮಾರರು ಯುದ್ಧವಿದ್ಯೆಯಲ್ಲಿ ನಿಷ್ಣಾತರಾಗದಿದ್ದರೆ ನಾಳೆ ಅವರಿಗೂ ತೊಂದರೆ – ರಾಜ್ಯಕ್ಕೂ ತೊಂದರೆ. ಸೊಸೆಯಂದಿರನ್ನು ಒಪ್ಪಿಸಿ ಮಕ್ಕಳ ನ್ನೆಲ್ಲಾ ಕಳಿಸಿಕೊಡಿ. ವಿಜಯನಗರದ ಪ್ರತಿಯೊಬ್ಬ ತಾಯಿಯೂ ತನ್ನ

ಮಕ್ಕಳನ್ನು ರಣರಂಗಕ್ಕೆ ಕಳಿಸುತ್ತಿರುವಾಗ ರಾಣಿಯರೇ ಹಿಂತೆಗೆಯುವುದು ಶೋಭಾಯಮಾನವಲ್ಲ."

"ಆಗಲಿ ಪಂಪಾದೇವಿ, ಮಲ್ಲಾದೇವಿಯವರನ್ನೂ ಒಪ್ಪಿಸಲು ಪ್ರಯತ್ನಿಸುತ್ತೇನೆ." ಎಂದು ಗೌರಾಂಬಿಕೆ ಒಪ್ಪಿಕೊಂಡರು.

ಯುದ್ಧರಂಗಕ್ಕೆ ತೆರಳಲು ಊರಿಗೆ ಊರೇ ಸಿದ್ಧವಾಯಿತು. ವಿವಿಧ ಕಾಯಕದವರು, ಕಲಾವಿದರು, ನರ್ತನ ಗಾಯನ ಪ್ರವೀಣರು ಸೈನ್ಯವನ್ನು ಹಿಂಬಾಲಿಸಲು ಅನುವಾದರು.

ಇರುಗನಾಯಕರು ಎಷ್ಟು ಬೇಡವೆಂದರೂ ಕೇಳದೆ ರಾಮಭಟ್ಟನೂ ಹೊರಟುನಿಂತ.

ತಾವಾಗಿಯೇ ಕದನವಾರಂಭಿಸಿದ ಅಪಖ್ಯಾತಿಗೆ ಗುರಿಯಾಗಬಾರದೆಂದು ಪ್ರಭುಗಳು ಬಹಮನಿ ಸುಲ್ತಾನರ ಚಲನವಲನಗಳನ್ನು ಗಮನಿಸಲಾರಂಭಿಸಿದರು. ವಿಜಯನಗರದ ಬೇಹುಗಾರರು ಗಂಟೆಗಂಟೆಗೆ ಸುದ್ದಿಗಳನ್ನು ತಂದೊಪ್ಪಿಸುತ್ತಿದ್ದರು.

ಸುಲ್ತಾನರ ಸೈನ್ಯ ಅವರ ನೇತೃತ್ವದಲ್ಲಿ ಕಲ್ಬುರ್ಗಿ ರಾಜಧಾನಿ ಬಿಟ್ಟ ಸುದ್ದಿ ಬಂದಿತು.

ಸಾಯಣರು ಗೊತ್ತುಮಾಡಿದ ಮಹೂರ್ತದಲ್ಲಿ ಪ್ರಭುಗಳು ಸೈನ್ಯ ಸಮೇತರಾಗಿ ಯುದ್ಧರಂಗಕ್ಕೆ ತೆರಳಿದರು.

ವಿಜಯನಗರದ ಸೈನ್ಯ ಉತ್ತರದ ಗಡಿಯ ಬಳಿಗೆ ಬಂದು ಕೃಷ್ಣಾನದಿಯ ದಂಡೆಯ ಮೇಲೆ ಬೀಡುಬಿಟ್ಟಿತು.

ರಾಜಧಾನಿ ಬಿಟ್ಟು ಹೊರಟ ಬಹಮನಿ ಸೈನ್ಯ ದಾರಿಯುದ್ದಕ್ಕೂ ಹಿಂದುಗಳ ಮಾರಣಹೋಮ ಮಾಡುತ್ತಾ ಮುನ್ನಡೆಯಿತು.

ಹೊಲದಿಂದ ಹಿಂದಿರುಗುತ್ತಿದ್ದ ರೈತ ದಂಪತಿಗಳಾಗಲಿ, ಮನೆಗೆ ನೀರು ಹೊತ್ತುಕೊಂಡು ಹೋಗುತ್ತಿದ್ದ ಗೃಹಿಣಿಯರಾಗಲಿ, ಬೀದಿಯಲ್ಲಿ ನಿರಾಪದವಾಗಿ ಆಡುತ್ತಿದ್ದ ಮಕ್ಕಳಾಗಲಿ, ಹಿಂದುವಾಗಿದ್ದರೆ ಸಾಕು, ಬಹಮನಿ ಸೈನಿಕರು ತುಂಡುತುಂಡುಮಾಡಿ ಮುಂದಡಿಯಿಡುತ್ತಿದ್ದರು.

ಸುಲ್ತಾನರ ಸೈನ್ಯ ಕೋವಿಲುಕೊಂಡಕ್ಕೆ ಬರುವ ವೇಳೆಗೆ ಕೋವಿಲುಕೊಂಡದ ಶ್ರೀಮಂತ ಜಮೀನುದಾರ ಚೆನ್ನಾರಡ್ಡಿ ಏಳೆಂಟುಸಾವಿರ ಜನರೊಂದಿಗೆ ಸೈನ್ಯವನ್ನು ಪ್ರತಿಭಟಿಸಿದ.

ಹಾರೆಗುದ್ದಲಿ ಹಿಡಿದಿದ್ದ ಚೆನ್ನಾರೆಡ್ಡಿಯ ಪಡೆಯನ್ನು ನೋಡಿ ಸುಲ್ತಾನರು ತಿರಸ್ಕಾರಪೂರ್ವಕವಾಗಿ ನಕ್ಕು

“ ಒಳ್ಳೆಯಮಾತಿನಿಂದ ನೀನೂ ನಿನ್ನ ಹಿಂಬಾಲಕರೂ ಶರಣಾಗತರಾಗಿ, ಇಸ್ಲಾಂಮತಕ್ಕೆ ಮತಾಂತರ ಹೊಂದುವುದಾದರೆ ನಿಮ್ಮ ಜೀವ ಉಳಿಸುತ್ತೇವೆ. ಸ್ವಲ್ಪ ಪ್ರತಿಭಟನೆ ತೋರಿದರೂ ನಿಮ್ಮೆಲ್ಲರನ್ನೂ ಖಡ್ಗಕ್ಕೆ ಆಹುತಿಕೊಟ್ಟು, ರಕ್ತದ ಹೊಳೆ ಹರಿಸಿ ಮುಂದೆ ಹೋಗುತ್ತೇವೆ.” ಎಂದರು.

ಚೆನ್ನಾರೆಡ್ಡಿ ದಿಟ್ಟತನದಿಂದ

“ ನಾವು ರಕ್ತವನ್ನಾದರೂ ಚೆಲ್ಲಿಕೊಡುತ್ತೇವೆ. ನಿಮ್ಮನ್ನು ಮುಂದಕ್ಕೆ ಬಿಡುವುದಿಲ್ಲ ” ಎಂದ.

ಸುಲ್ತಾನರ ಸುಸಜ್ಜಿತ ಸೈನ್ಯ ಚೆನ್ನಾರೆಡ್ಡಿಯನ್ನೂ ಅವನ ಸಂಗಡಿಗರನ್ನೂ ಸುತ್ತುಗಟ್ಟಿ ಒಂದು ಪಿಳ್ಳೆ ಉಳಿಯದಂತೆ ಮಾರಣಹೋಮ ಮಾಡಿಬಿಟ್ಟರು.

ಒಂದೆಡೆ ರಕ್ತದ ಹೋಳೆ ; ಒಂದೆಡೆ ಬೆಟ್ಟದಂತೆ ಹೆಣಗಳ ರಾಶಿ.

ಅತ್ಯುತ್ಸಾಹಗೊಂಡಿದ್ದ ಒಬ್ಬ ಸೈನಿಕ ಹೆಣಗಳರಾಶಿಯ ಮಧ್ಯೆ ಬಹಮನಿಯ ಬಾವುಟ ನೆಟ್ಟು

‘ಕಾಫಿರ್ ಮುರ್ದಾಬಾದ್

ಷರ್ಷಹಾ ಜಿಂದಾಬಾದ್ ’ ಎಂದು ಘೋಷಿಸಿದ.

ಸುಲ್ತಾನರ ಸೈನ್ಯ ಅವನ ಘೋಷಕ್ಕೆ ಧ್ವನಿಗೊಟ್ಟಿತು.

ಸುಲ್ತಾನರ ಸೈನ್ಯ ಪ್ರಯಾಣ ಮುಂದುವರಿಸಿ ಕೃಷ್ಣಾನದಿಯ ಆಚೆಯ ದಂಡೆಯಲ್ಲಿ ಬೀಡುಬಿಟ್ಟಿತು.

೧೯

ಮಹಾಪೂರದಲ್ಲಿದ್ದ ಕೃಷ್ಣಾನದಿ ಮಹಾಸಾಗರದಂತೆ ಭೋರ್ಗರೆಯುತ್ತಿತ್ತು.

ಬಹಮನಿ ಸೈನ್ಯವಾಗಲಿ, ವಿಜಯನಗರ ಸೈನ್ಯವಾಗಲಿ ನದಿಯನ್ನು ದಾಟುವುದು ದುಸ್ಸಾಧ್ಯವಾಗಿತ್ತು.

ವೃಥಾ ಕಾಲಯಾಪನ ಮಾಡುತ್ತ ಕುಳಿತ ಸುಲ್ತಾನರಿಗೆ ಬೇಸರ ಬಂದಿತ್ತು. ಕೋಪದ ಭರದಲ್ಲಿ ಕೃಷ್ಣಾನದಿಯ ಮೇಲೆ ಉಗುಳಿ 'ಹರಾಮ್ ಜಾದಿ' ಎಂದು ಬಯ್ಯುತ್ತಿದ್ದರು.

ಒಮ್ಮೊಮ್ಮೆ ವಜೀರ್ ಜೈನಲಾಬುದ್ದೀನ್ ಕಡೆ ತಿರುಗಿ,

"ಏನು ಸುಮ್ಮನೆ ನಿಂತಿರುವಿರಿ. ನೆರೆ ಇಳಿಯಲು ಏನನ್ನಾದರೂ ಮಾಡಬಾರದೇ ?"

"ಪ್ರಕೃತಿಯ ಪ್ರಕೋಪವನ್ನೆದುರಿಸಲು ನಮಗೆ ಶಕ್ಯವೇ ಹುಜೂರ್."

"ಶಕ್ಯವಿಲ್ಲದಿದ್ದರೆ ನೀವೇಕೆ ವಜೀರರಾದಿರಿ ?"

ಸುಲ್ತಾನರಿಗೆ ಉತ್ತರ ಕೊಡಹೋಗುವುದು ಮೂರ್ಖತನವೆಂದು ಭಾವಿಸಿದ ಜೈನಲಾಬುದ್ದೀನ್ ಕತ್ತು ಬಗ್ಗಿಸಿ ತೆಪ್ಪಗಾದ.

ದಿನಗಳೆದಂತೆ ಮಹಾಪೂರ ಏರುತ್ತಿದ್ದಿತಲ್ಲದೆ ಇಳಿಮುಖವಾಗಲಿಲ್ಲ. ಸುಲ್ತಾನರ ರೋಷ ಕೋಪಗಳೂ ಏರುತ್ತಿದ್ದವು.

ಮುಖ್ಯ ಸರ್ದಾರರನ್ನೆಲ್ಲಾ ಬರಮಾಡಿಕೊಂಡು, ನದಿಯ ದಾಟುವ ಸಾಧ್ಯತೆಯನ್ನು ಸುಲ್ತಾನರು ಚರ್ಚಿಸಿದರು. 'ಹಗಲು ಕಂಡ ಭಾವಿಯಲ್ಲಿ ಇರುಳು ಬೀಳಲು' ಯಾರೂ ಸಿದ್ಧವಾಗಲಿಲ್ಲ.

ಸರ್ದಾರರೆಲ್ಲಾ ಹೋದ ಮೇಲೆ ಮೆಲ್ಲನೆ ಸುಲ್ತಾನರ ಬಳಿಗೆ ಬಂದ ರಿಸಾಲ್ದಾದ್ ಖಾಜಿ ಸಿರಾಜುದ್ದೀನ್ ಮುಜರೆ ಮಾಡಿ ನಿಂತುಕೊಂಡ.

ಅವನತ್ತ ತಿರುಗಿ ನೋಡಿದ ಸುಲ್ತಾನರು

"ಯಾರು ನೀನು ?" ಎಂದು ಕೇಳಿದರು.

"ಷಹನಷಾ ಅವರ ಗುಲಾಮ. ರಿಸಾಲ್ದಾರ್ ಸಿರಾಜುದ್ದೀನ್."

"ಏನಾಗಬೇಕಾಗಿತ್ತು."

"ಖಾವಂದಿರು ಪರವಾನಗಿಯಿತ್ತರೆ, ನದೀ ದಾಟುವ ಯತ್ನ ಮಾಡುತ್ತೇನೆ."

"ಕತ್ತೇಮಗನೆ, ಈಗತಾನೆ ಸರ್ದಾರರೆಲ್ಲಾ ಸಾಧ್ಯವಿಲ್ಲ ಎಂದು ಹೇಳಿದುದು ಕೇಳಲಿಲ್ಲವೇ ?"

"ಕೇಳಿದೆ. ಖಾವಂದಿರ ಸೇವೆಯಲ್ಲಿ ಪ್ರಾಣ ಹೋದರೂ ಚಿಂತೆಯಿಲ್ಲ,

ಈ ಸಾಹಸಮಾಡು ಎಂದು ಅಲ್ಲಾನ ಹುಕುಂ ಆಗಿದೆ."

"ನೀನೇನು ಮಾಡಬಲ್ಲೆಯೋ ?"

"ಹುಟ್ಟುಗಳ ಮೂಲಕ ಕೆಲವು ಸಂಗಡಿಗರನ್ನು ಕರೆದುಕೊಂಡು ವಿಜಯನಗರದ ಸೈನ್ಯ ಠಾಣಿಗೆ ಹೋಗಿ, ದೊರೆಯನ್ನೂ ದೊರೆಯ ಮಕ್ಕಳನ್ನೂ ಕಡಿದು ಬರುತ್ತೇನೆ."

"ಅಷ್ಟು ನೀನು ಸಾಧಿಸುವುದಾದರೆ ರಾಯಚೂರು ಕೋಟೆ ಸುಬೇದಾರಿ ನಿನಗೆ ಕೊಡುತ್ತೇನೆ."

"ಸಾಧಿಸುತ್ತೇನೆ ಹುಜೂರ್. ತಾವು ಒಪ್ಪಿಗೆ ಕೊಟ್ಟರೆ ಸಾಕು."

"ಅಚ್ಛಾ – ಹೋಗು – ಖುದಾ ಹಾಫೀಜ್."

ಸಿರಾಜುದ್ದೀನ್ ಏಳು ಮಂದಿ ನೆಚ್ಚಿನ ಸಂಗಡಿಗರನ್ನಾಯ್ದುಕೊಂಡು, ಚರ್ಮಗಳಿಂದ ಹುಟ್ಟುಗಳನ್ನು ತಯಾರಿಸಿ, ಅದೇ ರಾತ್ರಿ ಕೃಷ್ಣಾನದಿಗೆ ಇಳಿದ.

ಯಾವ ಅಪಘಾತಕ್ಕೂ ಸಿಕ್ಕದೆ ಸಿರಾಜುದ್ದೀನ್, ಅವನ ಸಂಗಡಿಗರು ನದಿಯನ್ನು ಸುಖವಾಗಿ ದಾಟಿ, ಒಂದು ಕಾಡು ಸೇರಿ, ಸಂಗೀತಗಾರರಂತೆ ಮಾರುವೇಷ ಧರಿಸಿ ವಿಜಯನಗರದ ಸೈನ್ಯದ ಶಿಬಿರದ ಬಳಿಗೆ ಬಂದರು.

ಶಿಬಿರದ ಮಧ್ಯೆಯಿದ್ದ ಕೆಂಪು ವರ್ಣದ ವಸ್ತ್ರವೇಶ್ಮವೇ ಚಕ್ರವರ್ತಿಗಳದ್ದಾಗಿತ್ತು ; ಅದರ ಬದಿಗಿದ್ದ ನೀಲಿ ವಸ್ತ್ರವೇಶ್ಮದಲ್ಲಿ ರಾಜಕುಮಾರರು ವಾಸಿಸುತ್ತಿದ್ದರು. ಪ್ರಭು ರಾಜಕುಮಾರರ ವಸ್ತ್ರವೇಶ್ಮಗಳ ಸಮೀಪದಲ್ಲೇ ಇರುಗನಾಯಕರು, ಗುಂಡನಾಯಕರ ಬಿಡಾರಗಳು. ಇರುಗನಾಯಕರು ರಾಮಭಟ್ಟನನ್ನು ತಮ್ಮೊಂದಿಗೇ ಇಟ್ಟುಕೊಂಡಿದ್ದರು. ಅದಕ್ಕೆ ಸ್ವಲ್ಪ ದೂರದಲ್ಲಿ ಗಾಯನ, ನರ್ತನಕೋವಿದರ ಬಿಡಾರಗಳು, ರಾಜಪರಿವಾರದವರ ಸೇವೆ ಶಿಶ್ರೂಷೆಗೆ ಬಂದಿದ್ದ ಸೇವಕ ವರ್ಗದವರು ; ಚೇಟಿಯರು, ದಾಸಿಯರ ಬಿಡಾರಗಳು

ಈ ವಸ್ತ್ರವೇಶ್ಮಗಳಿಗೆ ಸ್ವಲ್ಪ ದೂರದಲ್ಲಿ ಸೈನ್ಯ ಶಿಬಿರ.

ನರ್ತಕ ಗಾಯಕರ ಬಿಡಾರಗಳಿಗೆ ಸ್ವಲ್ಪ ದೂರದಲ್ಲಿದ್ದ ಆಲದ ಮರಗಳ ಗುಂಪಿನ ಮಧ್ಯೆ ಕುಳಿತ ಸಿರಾಜುದ್ದೀನ್ ಅವನ ಸಂಗಡಿಗರು, ತಮ್ಮ ಸಂಗೀತ ವಾದ್ಯಗಳನ್ನು ಶ್ರುತಿಮಾಡಿಕೊಂಡು ನುಡಿಸಲಾರಂಭಿಸಿದರು.

ತನ್ನ ಬಿಡಾರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಅರಮನೆಯ ನರ್ತಕಿ

ಮೋಹನಾಂಬೆ, ಅನತಿದೂರದಲ್ಲಿ ಮೃದುಮಧುರವಾಗಿ ಕೇಳಿಬರುತ್ತಿದ್ದ ತಂತೀವಾದ್ಯಗಳ ಮಂಜುಳರವ ಲಾಲಿಸುತ್ತಿದ್ದಳು.

ಮೊದಲನೆಯ ಕಾಲ ಮುಗಿದು, ವಾದ್ಯಗಾರರು ಎರಡನೆಯ ಕಾಲಕ್ಕೆ ಬರಲು, ಮೋಹನಾಂಬೆ ಎದ್ದು ಕುಳಿತು ತನ್ನ ಚೇಟಿ ಬಂಗಾರುವನ್ನು ಕರೆದಳು.

ಒಳಗೆ ಬಂದ ಬಂಗಾರು,

" ಏನಮ್ಮಣ್ಣಿ " ಎಂದು ಕೇಳಿದಳು.

" ಸ್ವಲ್ಪ ಕಿವಿಗೊಟ್ಟು ಕೇಳು ಬಂಗಾರು. ಎಲ್ಲಿಂದಲೋ ತಂತೀವಾದ್ಯಗಳ ದನಿ ಕೇಳಿಬರುತ್ತಿಲ್ಲವೇ ?"

ಆಲೈಸಿ ಕೇಳಿದ ಬಂಗಾರು,

"ಹೌದು ಅಮ್ಮಣ್ಣಿ – ನಮ್ಮ ದೇಶದ ವಾದ್ಯಗಳಿದ್ದಂತೆ ಕಾಣುವುದಿಲ್ಲ."

" ನುಡಿಸುತ್ತಿರುವವರು ಯಾರು – ನೋಡಿಕೊಂಡು ಬಾ."

ಹೊರಗೆ ಹೋಗಿ ಅರ್ಧಗಂಟೆಯಲ್ಲಿ ಹಿಂದಿರುಗಿದ ಬಂಗಾರು,

" ಯಾರೋ ಉತ್ತರ ಹಿಂದೂಸ್ಥಾನದ ಸಂಗೀತಗಾರರಂತೆ ಅಮ್ಮಣ್ಣಿ."

" ಇಲ್ಲೇಕೆ ಬಂದಿದ್ದಾರಂತೆ !"

" ಮಹಾಪ್ರಭುಗಳ ಮುಂದೆ ಕಛೇರಿ ಮಾಡಿ, ಬಹುಮಾನ ಪಡೆಯಲು ರಾಜಧಾನಿಗೆ ಹೋದರಂತೆ. ಪ್ರಭುಗಳು ಇತ್ತ ಬಂದಿರುವುದು ತಿಳಿಯಲು, ಇಲ್ಲಿಗೇ ಬಂದರಂತೆ !"

" ವಾದ್ಯಗಾರರ ಮುಖಂಡನ ಹೆಸರೇನು."

" ಘನಶಾಮಲಾಲ್."

" ಅವರನ್ನಿಲ್ಲಿ ಬರಮಾಡುವೆಯಾ ?"

" ಬೇಡ ತಾಯಿ – ಇದು ಯುದ್ಧಕಾಲ, ಯಾರನ್ನೂ ನಂಬಲು ಸಾಧ್ಯವಿಲ್ಲ. ಅಪರಿಚಿತರಾದ ಈ ವಾದ್ಯಗಾರರು ಶತ್ರುಪಕ್ಷದವರಿದ್ದರೂ ಇರಬಹುದು."

" ನೀನೆಂಥ ಹೇಡಿಯೇ ? ನಮ್ಮ ಶಿಬಿರಕ್ಕೆ ಬರುವಷ್ಟು ಧೈರ್ಯ ಶತ್ರುಪಕ್ಷದವರಿಗಿದೆಯೇ ? ಒಂದು ವೇಳೆ ಈ ವಾದ್ಯಗಾರರು ಶತ್ರುಪಕ್ಷದವರಾದರೆ ಭಯವೇನು – ಸಹಸ್ರಾರು ಸೈನಿಕರಿಂದ ತುಂಬಿರುವ ನಮ್ಮ ಶಿಬಿರದಲ್ಲಿ ಇವರು

ಯಾವ ಅನರ್ಥಮಾಡಲು ಶಕ್ಯ."

"ಏನಾದರೂ ಗುಂಡನಾಯಕರನ್ನು ಒಂದು ಮಾತು ಕೇಳುವುದು ಒಳ್ಳೆಯದು ತಾಯಿ."

"ಅರಮನೆಯ ಪ್ರಧಾನ ನರ್ತಕಿ – ಪ್ರಭುಗಳ ಮೆಚ್ಚಿನ ಕಲಾವಿದೆ – ನನಗಷ್ಟು ಸ್ವಾತಂತ್ರ್ಯವಿಲ್ಲವೇನೇ? ನಾವು ಉಸಿರಾಡುವುದಕ್ಕೂ ಗುಂಡನಾಯಕರ ಅಪ್ಪಣೆ ಪಡೆಯಬೇಕೇ? – ಹೋಗು, ನಾನು ಹೇಳಿದಂತೆ ಮಾಡು."

ಎಂದು ಗದರಿ ಬಂಗಾರುವನ್ನು ಕಳಿಸಿದಳು.

ಬಂಗಾರು ಜತೆಗೆ ಬಂದ ಗಾಯಕ, ವಾದ್ಯಗಾರರು ಮೋಹನಾಂಬೆಗೆ 'ಜೈ ಗೋಪಾಲ್' ಹೇಳಿದರು.

ಗೋಷ್ಠಿಯ ಮುಖಂಡನನ್ನು ಗುರುತಿಸಿದ ಮೊಹನಾಂಬೆ,

"ನೀವೇ ಘನಶಾಮುಲಾಲ್‌ರವರೇ?" ಎಂದಳು.

"ಹೌದು."

"ನಿಮ್ಮದು ಯಾವೂರು?"

"ಶ್ರೀಕಾಶಿ ಕ್ಷೇತ್ರ."

"ನೀವು ಯಾರ ಶಿಷ್ಯರು?"

"ಗಾಯನಾಚಾರ್ಯ ಬೃಂದಾವನಲಾಲ್ ತ್ರಿವೇದಿಯವರ ಶಿಷ್ಯರು."

"ನೀವು ನುಡಿಸಿದ ವಾದ್ಯಗಳು ಯಾವವು?"

"ಸಿತಾರ, ದಿಲ್‌ರುಬಾ, ಇಸ್ರಾಜ್, ತಬಲ"

"ಈ ವಾದ್ಯಗಳನ್ನು ನುಡಿಸುವುದನ್ನು ನನಗೆ ಕಲಿಸಿಕೊಡುವಿರಾ?"

"ಕೆಲವೇ ದಿನಗಳಲ್ಲಿ ನೀವು ವಾದ್ಯವಾದನ ಕಲಿಯಲು ಹೇಗೆ ಶಕ್ಯ?"

"ಇಲ್ಲಿಯೇ ಪಾಠವಾರಂಭವಾಗಲಿ – ಯುದ್ಧದ ಗಲಭೆ ತೀರಿದ ಮೇಲೆ ನನ್ನೊಂದಿಗೆ ನೀವು ರಾಜಧಾನಿಗೆ ಬನ್ನಿ."

"ನಿಮ್ಮ ರಾಜಧಾನಿಯಲ್ಲಿಯೇ ನಾವು ನೆಲಸಬೇಕೆಂದು ಅಪೇಕ್ಷಿಸುವಿರಾ?"

"ಪ್ರಭುಗಳ ಪರಿಚಯವಾದರೆ ನೀವೇ ಅಪೇಕ್ಷಿಸುತ್ತೀರಿ. ಇಂಥ ದಾನವೀರ – ಕಲಾಭಿಮಾನಿ ಜಗತ್ತಿನಲ್ಲಿ ಇನ್ನಿದುವರೆಗೆ ಹುಟ್ಟಿಲ್ಲ. ಯಾವ ದೇಶ

ದಲ್ಲಿ ನೀವಿದ್ದರೇನು – ಕಲೆಗೆ ಎಲ್ಲಿ ಪ್ರೋತ್ಸಾಹವಿದೆಯೋ ಅದೇ ಕಲಾವಿದರ ದೇಶ."

" ಮೊದಲು ಮಹಾಪ್ರಭುಗಳ ಭೆಟ್ಟಿಮಾಡಿಸಿ, ಅವರ ಮುಂದೆ ನಾವು ವಿದ್ವತ್ಪ್ರದರ್ಶನ ಮಾಡಲು ಅವಕಾಶ ಕಲ್ಪಿಸಿಕೊಡಿ."

" ಅದು ನನಗಿರಲಿ – ನೀವು ನಮ್ಮ ಶಿಬಿರದಲ್ಲೇ ಇರಿ. ದಣ್ಣಾಯಕರಿಗೆ ತಿಳಿಸಿ, ನೀವು ಇರುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ."

" ಆಗಬಹುದು."

ಎಂದು ಘನಶಾಮಲಾಲ್ ಒಪ್ಪಿಕೊಂಡರು.

ಮೂರು ದಿನಗಳು ಕಳೆದವು.

ಘನಶಾಮಲಾಲರ ವಿಷಯ ಪ್ರಭುಗಳಿಗೆ ಬಿನ್ನವಿಸಿಕೊಳ್ಳಲು ಮೋಹನಾಂಬೆಗೆ ಅವಕಾಶವೇ ಸಿಕ್ಕಲಿಲ್ಲ. ಯುದ್ಧಚಿಂತನೆಯಲ್ಲಿ ಮಗ್ನ ರಾಗಿದ್ದ ಪ್ರಭುಗಳಿಗೆ ನೃತ್ಯ ಗಾಯನಗಳು ಬೇಡವಾಗಿದ್ದವು.

ಉದ್ದಿಷ್ಟ ಕಾರ್ಯಸಾಧನೆಯಾಗದಿರಲು ಬೇಸರಗೊಂಡ ಘನಶಾಮಲಾಲ್

" ನಿಮ್ಮ ಪ್ರಭುಗಳು ನಮಗೆ ಭೇಟಿಕೊಡುವಂತಿಲ್ಲ. ಇಲ್ಲಿ ಕುಳಿತು ನಾವೇಕೆ ವೃಥಾ ಕಾಲಹರಣ ಮಾಡಬೇಕು. ನಮ್ಮ ಅದೃಷ್ಟನಕ್ಷತ್ರವನ್ನರಿಸಿಕೊಂಡು ಹೋಗುತ್ತೇವೆ ಮೋಹನಾಂಬೆ." ಎಂದರು.

ಘನಶಾಮಲಾಲರನ್ನು ಕಳಿಸಿಕೊಡಲು ಮೋಹನಾಂಬೆ ಒಪ್ಪಲಿಲ್ಲ. ಅವಳ ಸೂಕ್ಷ್ಮಮತಿಗೆ ಒಂದು ವಿಚಾರ ಹೊಳೆಯಿತು.

" ಐದಾರು ದಿನಗಳಿಂದ ಮಹಾಪ್ರಭುಗಳು ನನಗೆ ಕರೆಕಳಿಸಿಲ್ಲ. ಇಂದೋ ನಾಳೆಯೋ ಅವರಿಂದ ಕರೆ ಬರಬಹುದು. ನೀವು ಒಪ್ಪುವುದಾದರೆ ನನ್ನದೊಂದು ಸೂಚನೆಯಿದೆ."

" ಹೇಳು."

" ನನ್ನ ನೃತ್ಯಕ್ಕೆ ನೀವು ಸಂಗೀತ ಅಳವಡಿಸಿ. ನನ್ನ ಜತೆಯಲ್ಲಿಯೇ ನಿಮ್ಮನ್ನೂ ಕರೆದೊಯ್ಯುತ್ತೇನೆ. ಮಹಾಪ್ರಭುಗಳ ಸಮ್ಮುಖದಲ್ಲಿ ನನ್ನ ನೃತ್ಯದೊಂದಿಗೆ, ನಿಮ್ಮ ವಾದ್ಯವಾದನವೂ ನಡೆಯಲಿ. ನಾನೇ ಮಹಾ ಪ್ರಭುಗಳಿಗೆ ನಿಮ್ಮ ಪರಿಚಯ ಮಾಡಿಕೊಡುತ್ತೇನೆ."

ಸ್ವಲ್ಪಹೊತ್ತು ಯೋಚಿಸಿದ ಘನಶಾಮಲಾಲರು

"ನರ್ತಕಿಯ ಮೇಳಗಾರರಾಗಿ ವಾದ್ಯನುಡಿಸುವುದು ನಮ್ಮಂಥ ಘನ ವಿದ್ವಾಂಸರಿಗೆ ತಕ್ಕುದಲ್ಲ. ಆದರೇನು ಮಾಡುವುದು? ಹೊಟ್ಟೆಯ ಪಾಡಿಗಾಗಿ ಆತ್ಮಗೌರವವನ್ನೂ ಬದಿಗಿಡಬೇಕಾಗಿದೆ. ನೀನು ಹೇಳಿದಂತೆಯೇ ಆಗಲಿ ಮೋಹನಾಂಬಾ." ಎಂದು ಒಪ್ಪಿಕೊಂಡರು.

ಎರಡು ದಿನ ವಾದ್ಯಗಾರರ ಜತೆ ಅಭ್ಯಾಸ ಮಾಡಿಕೊಂಡ ಮೋಹನಾಂಬೆ, ತಾನು ಹೊಸ ವಾದ್ಯಗಳೊಂದಿಗೆ ಹೊಸ ನೃತ್ಯಗಳನ್ನು ಕೂಡಿಸಿರುವುದಾಗಿಯೂ, ಮಹಾಪ್ರಭುಗಳ ಮುಂದೆ ಪ್ರದರ್ಶಿಸಲು ಇಚ್ಛಿಸುವುದಾಗಿಯೂ ಪ್ರಾರ್ಥನೆ ಸಲ್ಲಿಸಿದಳು.

ಮೋಹನಾಂಬೆಯ ಪ್ರಾರ್ಥನೆ ಲಾಲಿಸಿದ ಮಹಾಪ್ರಭುಗಳು, ಗುಂಡನಾಯಕರಿಗೆ,

"ನೀವೇನು ಹೇಳುವಿರಿ ನಾಯಕರೇ?" ಎಂದರು.

"ಯುದ್ಧದ ಚಿಂತನೆಯಲ್ಲಿ ನಾವು ಇರುವಾಗ, ನೃತ್ಯ ನೋಡುತ್ತ ಕೂಡುವುದಕ್ಕೆ ಮನಃಶಾಂತಿಯೆಲ್ಲಿದೆ ಮಹಾಪ್ರಭು."

"ಯುದ್ಧವಂತೂ ನಮ್ಮ ಜನ್ಮಕ್ಕಂಟಿದ ಶನಿ. ಯುದ್ಧವಿದೆಯೆಂದು ಕಲಾಪ್ರಗತಿ ನಿಲ್ಲಬೇಕೇಕೆ? ಯುದ್ಧದ ಚಿಂತನೆ ಮಾಡುತ್ತಾ ನಮ್ಮ ವಿಚಾರಶಕ್ತಿಗೇ ಮೋಡ ಮುಸುಕಿದಂತಾಗಿದೆ. ಮೋಹನಾಂಬೆಯ ಕಲಾನೈಪುಣ್ಯ ನಮ್ಮ ವಿಚಾರಶಕ್ತಿಯನ್ನು ಹೊಡೆದೆಬ್ಬಿಸಬಹುದು. ನಾಳೆಯ ರಾತ್ರಿ, ಮೋಹನಾಂಬೆಯ ನೃತ್ಯ ನಮ್ಮ ಬಿಡಾರದಲ್ಲೇ ಏರ್ಪಡಲಿ. ರಾಜಕುಮಾರರಿಗೂ, ಎಲ್ಲ ನಾಯಕರಿಗೂ ಆಹ್ವಾನ ಕೊಡಿ–ಈ ವಿಷಯ ಮೋಹನಾಂಬೆಗೆ ಈಗಲೇ ತಿಳಿಸಿಬಿಡಿ."

ಎಂದು ಅಪ್ಪಣೆ ಕೊಡಿಸಿದರು,

ಭರದಲ್ಲಿ ಸಾಗಿದ್ದ ಮೋಹನಾಂಬೆಯ ಸಿದ್ಧತೆಗೆ ಕ್ರತುಶಕ್ತಿ ದೊರೆತಂತಾಯಿತು.

ಭಾಗವತದ ಶ್ಲೋಕಗಳನ್ನೇ ಆಯ್ದುಕೊಂಡು ಮೋಹನಾಂಬೆ, ಶ್ರೀಕೃಷ್ಣನ ಜೀವನದ ಕೆಲವು ಸನ್ನಿವೇಶಗಳನ್ನು ನೃತ್ಯಕ್ಕೆ ಅಳವಡಿಸಿಗೊಂಡಿದ್ದಳು.

ನೃತ್ಯಪ್ರದರ್ಶನ ಪ್ರಭುಗಳ ಬೀಡಿನಲ್ಲೇ ವ್ಯವಸ್ಥೆ ಮಾಡಲಾಗಿತ್ತು.

ಎತ್ತರದ ಸುಖಾಸನದ ಮೇಲೆ ಪ್ರಭುಗಳಿಗೆ ಪೀಠ, ಅವರ ಅತ್ತಿತ್ತ

ನಾಲ್ವರು ರಾಜಕುಮಾರರ ಪೀಠಗಳು. ಇರ್ಕೆಲಗಳಲ್ಲಿ ನಾಯಕರೂ, ಸೈನ್ಯದ ಮುಖ್ಯಾಧಿಕಾರಿಗಳು ನಿಲ್ಲಲು ಅವಕಾಶ ಕಲ್ಪಿಸಲಾಗಿತ್ತು.

ಪ್ರಭುಗಳೆದುರಿಗೆ ರಂಗ ಸಜ್ಜುಗೊಳಿಸಲಾಗಿತ್ತು. ರಂಗದ ವಾಮ ಪಾರ್ಶ್ವದಲ್ಲಿ ಹಿಂಬದಿಯ ಗಾಯಕರು, ವಾದ್ಯಗಾರರಿಗೆ ಸ್ಥಳ ಏರ್ಪಡಿಸಲಾಗಿತ್ತು.

ಸಭಾಸದಸರೆಲ್ಲರೂ ಸೇರಿದ ಮೇಲೆ ಇರುಗನಾಯಕರು ಒಳಗೆ ಹೋಗಿ ಪ್ರಭುಗಳನ್ನು ಕರೆದುಕೊಂಡು ಬಂದರು.

ಪ್ರಭುಗಳು ಪೀಠಸ್ಥರಾಗಲು ಶಂಖ, ಜಾಗಟೆಗಳ ಧ್ವಾನವಾಗಿ, ರಂಗದ ತೆರೆ ಸರಿಯಿತು.

ಮೊದಲನೆಯ ದೃಶ್ಯ :

ದ್ವಾರಕಾಪುರದ ರಾಜಬೀದಿಯಲ್ಲಿ ಗೊಲ್ಲಕನ್ಯೆಯರು ಹಾಲು ಮೊಸರಿನ ಹರವೆಗಳನ್ನು ಹೊತ್ತು ಹೋಗುತ್ತಿದ್ದಾರೆ. ಅವರನ್ನೇ ಹಿಂಬಾಲಿಸಿದ ಕೃಷ್ಣ ಒಬ್ಬ ಗೊಲ್ಲಿತಿಯ ಕೈಯಲ್ಲಿದ್ದ ಹಾಲಿನ ಪಾತ್ರೆ ಕಸುಗೊಳ್ಳುತ್ತಾನೆ. ಇನ್ನೊಬ್ಬ ಗೊಲ್ಲಿತಿ ತನ್ನ ಹರವೆಗಳನ್ನು ಕೆಳಗಿಟ್ಟು, ಕೃಷ್ಣನ ತೋಳು ಹಿಡಿದು ಅವನನ್ನು ದಂಡಿಸುತ್ತಾಳೆ.

ಕೃಷ್ಣ ದೀನವದನನಾಗಿ ನಿಲ್ಲುತ್ತಾನೆ.

ಅವನ ಮುಖಾರವಿಂದ ಕಳೆಗುಂದಿದುದನ್ನು ಕಂಡ ಗೊಲ್ಲಿತಿ ರಾಧೆ, ಕೃಷ್ಣನ ತಲೆ ನೇವರಿಸಿ, ತನ್ನ ಹರವೆಯನ್ನು ಕೃಷ್ಣನ ಕೈಯಲ್ಲಿಟ್ಟು ಗೊಲ್ಲಿತಿಯರಿಗೆ,

'ಕ್ಷೀರಪಾನ ಮಾಡಿ ಶ್ರೀಕೃಷ್ಣ ಸಂತೃಪ್ತನಾದರೆ ಇಡಿಯ ವಿಶ್ವವೇ ಸಂತೃಪ್ತವಾಗುತ್ತದೆ. ವಿಶ್ವದ ಅನಂತಚೈತನ್ಯವೇ ಶಿಶುರೂಪದಲ್ಲಿ ಕೃಷ್ಣನಾಗಿ ಕಾಣಿಸಿಕೊಂಡಿದೆ' ಎನ್ನುತ್ತಾಳೆ. ಗೊಲ್ಲಿತಿಯರು ರಾಧೆಯನ್ನು ಪರಿಹಾಸ್ಯಮಾಡುತ್ತಾರೆ.

ಬಿಲಾವಲ್ ಮತ್ತು ಭೈರವಿ ರಾಗಗಳಲ್ಲಿ ಈ ದೃಶ್ಯಸಾಗುತ್ತದೆ.

ಎರಡನೆಯ ದೃಶ್ಯ :

ರಾಸಕ್ರೀಡೆ– ಶ್ರೀಕೃಷ್ಣ ಮತ್ತು ದ್ವಾರಕಿಯ ಸ್ತ್ರೀಯರು ರಾಸಕ್ರೀಡಾ ಮಗ್ನರಾಗಿದ್ದಾರೆ.

ವಿಮನಸ್ಕನಾದ ಕೃಷ್ಣ ಆಗಾಗ್ಗೆ ಸುತ್ತಮುತ್ತ ನೋಡುತ್ತಿರುತ್ತಾನೆ.

ಗೋಪಿಯರು ಬಲವಂತದಿಂದ ಅವನನ್ನು ಹಿಡಿದೆಳೆದೊಯ್ದು ನೃತ್ಯದಲ್ಲಿ ತೊಡಗಿಸುತ್ತಾರೆ.

ರಾಧೆ ಬರಲು, ಗೋಪಿಯರ ತಂಡದಿಂದ ಕೃಷ್ಣ ಹೊರಬಂದು

'ಏಕಿಷ್ಟು ತಡಮಾಡಿದೆ ರಾಧಾ ?' ಎಂದು ಕೇಳುತ್ತಾನೆ.

ದುಃಖಿತಳಾಗಿದ್ದ ರಾಧಾ

'ನಾನೇನು ಮಾಡಲಿ. ನನ್ನ ಅತ್ತೆಗೂ, ಗಂಡನಿಗೂ ಗೋಪಿಯರು ಇಲ್ಲಸಲ್ಲದ ಚಾಡಿ ಹೇಳಿದ್ದಾರೆ. ಕುಪಿತರಾದ ಅತ್ತೆ, ಗಂಡ ನನ್ನನ್ನು ಕತ್ತಲೆ ಕೋಣೆಯಲ್ಲಿ ಕೂಡಿ, ಬೀಗ ಹಾಕಿದ್ದರು. ನಾನು ಕಿಟಕಿಯ ಬಳಿ ನಿಂತು ಬೀದಿಯಲ್ಲಿ ಹೋಗುತ್ತಿದ್ದ ನನ್ನ ಗೆಳತಿಯೊಬ್ಬಳನ್ನು ಕರೆದು, ಅವಳಿಂದ ಬೀಗ ತೆಗೆಯಿಸಿಕೊಂಡು ಬಂದೆ.'

'ನಿನ್ನ ಮೇಲೆ ಚಾಡಿ ಹೇಳಿದವರೆಲ್ಲಾ ಇಲ್ಲಿಯೇ ಇದ್ದಾರಲ್ಲಾ !'

'ಅವರು ಮಾಡುವುದನ್ನೇ ನಾನು ಮಾಡಿದರೆ ತಪ್ಪಾಗುತ್ತದೆ, ಇದೇ ಲೋಕನೀತಿ.'

'ನಾನು ದುರ್ಮಾರ್ಗಪ್ರವರ್ತಕನೆಂದು ನಿನ್ನ ಗಂಡ, ಅತ್ತೆ ಭಾವಿಸುವರೇ ?'

'ಹಾಗೇ ಕಾಣುತ್ತದೆ.'

'ಪ್ರಿಯ ರಾಧಿಕಾ, ಲೋಕೋತ್ತರ ಸುಂದರಿಯಾದ ನನ್ನ ತಾಯಿ ಯಶೋಧೆಯ ಪ್ರತೀಕಗಳಲ್ಲವೇ ನೀವು. ಕೃಷ್ಣನಿದ್ದೆಡೆ ಕಾಮ ಸುಳಿಯ ಲಾರದು. ನನ್ನ ವಿರಾಟ್‌ಗರ್ಭದಿಂದಲೇ ವಿಶ್ವವು ಜನ್ಮತಳೆದಿರುವುದು. ನಾನು ವಿಶ್ವದ ಸಖನೂ ಆಗಿದ್ದೇನೆ – ವಿಶ್ವದ ಮಾತೃವೂ ಆಗಿದ್ದೇನೆ'

'ಭಗವಾನ್, ನಿನ್ನನ್ನು ಕಾಣದೆ ನಾನಿರಲಾರೆ. ನಿನ್ನ ನಿತ್ಯಮಂಗಳ ಸ್ವರೂಪವನ್ನು ನೋಡದಿದ್ದರೆ ನನ್ನ ಕಣ್ಣುಗಳು ಕುರುಡಾಗುತ್ತವೆ. ನಿನ್ನ ಕೊಳಲಿನ ಇಂಚರ ಕೇಳಿ ಬಂದರೆ ಸಾಕು – ನನ್ನ ಪ್ರಾಣಪಕ್ಷಿ ಅತ್ತ ಧಾವಿಸುತ್ತದೆ.'

'ನಾನಿದ್ದಲ್ಲಿಗೆ ನೀನು ಬರಬೇಕಾಗಿಲ್ಲ ರಾಧೆ. ನೀನು ಇರುವಲ್ಲಿಗೇ ನಾನು ಬರುತ್ತೇನೆ. ಕರೆದವರ ಕಂಠದಲ್ಲಿ, ನೆನೆದವರ ಮನದಲ್ಲಿ ನಾನಿರುತ್ತೇನೆ. ಸದಾಸರ್ವದಾ ವಿಶ್ವ ಆನಂದಪೂರ್ಣವಾಗಿರಬೇಕೆಂಬುದೇ ನನ್ನ ಅಭೀಷ್ಟ.'

ರಾಧಾಕೃಷ್ಣರು ನರ್ತಿಸಲಾರಂಭಿಸುತ್ತಾರೆ. ಗೋಪಿಯರು ಅವರನ್ನು ಸುತ್ತುಗಟ್ಟಿ ನಿಂತು, ಸ್ವಲ್ಪ ಕಾಲಾನಂತರ ತಾವೂ ನರ್ತಿಸಲಾರಂಭಿಸುತ್ತಾರೆ.

ಹಿಂದೋಳ ರಾಗದಲ್ಲಿ ಆರಂಭವಾದ ದೃಶ್ಯ ತೋಡಿಯಲ್ಲಿ ಮುಂದುವರಿದು ಹಿಂದೋಳದಲ್ಲಿಯೇ ಮುಕ್ತಾಯಗೊಳ್ಳುತ್ತದೆ.

ಮೂರನೆಯ ದೃಶ್ಯ :

ಅಕ್ರೂರನೊಂದಿಗೆ ಶ್ರೀಕೃಷ್ಣ ಹೊರಟು ನಿಂತಿದ್ದಾನೆ.

ರಥದ ಗಾಲಿಗಡ್ಡಲಾಗಿ ಕೆಲವು ಗೋಪಿಯರು ನಿಂತಿದ್ದಾರೆ. ಕೆಲವರು ಕೃಷ್ಣನ ಕೈಹಿಡಿದು ಎಳೆಯುತ್ತಿದ್ದಾರೆ. ಕೃಷ್ಣನನ್ನೂ ಕರೆದೊಯ್ಯಲು ಬಂದಿದ್ದ ಅಕ್ರೂರನನ್ನು ಕೆಲವು ಗೋಪಿಯರು ಅಕ್ಷೇಪಿಸುತ್ತಿದ್ದಾರೆ.

ಅನತಿದೂರದಲ್ಲಿ ರಾಧೆಯೊಬ್ಬಳೇ ನಿಂತಿದ್ದಾಳೆ.

ಗೋಪಿಯರ ತಂಡದಿಂದ ಪಾರಾಗಿ, ಕೃಷ್ಣ ರಾಧೆಯ ಬಳಿಗೆ ಬಂದು,

'ನಾನು ಹೋಗುತ್ತೇನೆಂದು ನಿನಗೆ ದುಃಖವಾಗುವುದಿಲ್ಲವೇ ರಾಧಿಕಾ?'

ಎಂದು ಕೇಳುತ್ತಾನೆ.

'ಇಲ್ಲ.'

'ಈ ಗೋಪಿಯರಷ್ಟು ನೀನು ನನ್ನನ್ನು ಪ್ರೀತಿಸುತ್ತಿಲ್ಲ.'

'ಸರ್ವಭೂತಸಾಕ್ಷಿ ಚೈತನ್ಯನಾದ ನಿನಗೆ ನನ್ನ ಅಂತರಂಗವೇನೆಂಬುದು ಗೊತ್ತಿದೆ.'

'ನಾನು ಹೋಗಲನುಮತಿ ಕೊಡುವೆಯಾ ?'

'ಅಗತ್ಯವಾಗಿ. ಭಗವಾನ್, ಬೃಂದಾವನಕ್ಕೆ ನೀನೆಷ್ಟು ಅಗತ್ಯವೋ ಅಷ್ಟೇ ಜಗತ್ತಿಗೂ ಅಗತ್ಯ. ಜಗಜ್ಜ್ಯೋತಿಯನ್ನು ನಾವು ಅಡಗಿಸಿಟ್ಟು ಕೊಳ್ಳಲು ಸಾಧ್ಯವೇ ?'

'ಈಗ ನಾನು ಹೋಗಿ ಮತ್ತೆ ಬರುತ್ತೇನೆ ರಾಧೆ. ಕೃಷ್ಣ ಮಾತಿಗೆ ತಪ್ಪುವವನಲ್ಲ ಎಂಬುದನ್ನು ಬಲ್ಲೆಯಷ್ಟೆ ?'

'ಬಲ್ಲೆ ಪ್ರಭೂ – ಹೋಗಿ ಬಾ.'

ಸಿಂಧು ಭೈರವಿ, ಜಿಂಜೋಟಿಯಲ್ಲಿ ಸಾಗಿದ ಈ ದೃಶ್ಯ ಶಾಮಕಲ್ಯಾಣಿಯಲ್ಲಿ ಮುಕ್ತಾಯವಾಗುತ್ತದೆ.

ನಾಲ್ಕನೆಯ ದೃಶ್ಯ :

ಕುರುಕ್ಷೇತ್ರದ ಯುದ್ಧ ಮುಗಿದಿದೆ. ಹಸ್ತಿನಾವತಿಯಲ್ಲಿ ಯುಧಿಷ್ಠಿರನ

ಪಟ್ಟಾಭಿಷೇಕ ಮಹೋತ್ಸವ ಮುಗಿಸಿಕೊಂಡು ಶ್ರೀಕೃಷ್ಣ ದ್ವಾರಕಿಗೆ ಹಿಂದಿರುಗಿದ್ದಾನೆ.

ಈ ವೇಳೆಗೆ ರಾಧೆಗೆ ಮುಪ್ಪಡಿಸಿದೆ.

ಕೃಷ್ಣನ ಬರುವನ್ನೇ ನಿರೀಕ್ಷಿಸುತ್ತಿದ್ದ ರಾಧೆ, ಹೌಹಾರಿ ಬಂದು ಅವನನ್ನಪ್ಪಿ

'ಬಂದೆಯಾ ಸ್ವಾಮಿ' ಎನ್ನುತ್ತಾಳೆ.

'ಬಂದೆ – ಹಣ್ಣಾಗಿ ಬಂದಿದ್ದೇನೆ ರಾಧಾ.'

'ದುಷ್ಟದಮನಮಾಡಿ, ಶಿಷ್ಟರಕ್ಷಣೆಮಾಡಿ ಬಂದಿರುವ ಪುರುಷೋತ್ತಮ ನಿಗೂ ದಣಿವೇ?'

'ಸತ್ಯ, ಪ್ರೇಮ, ಶಾಂತಿ ಲೋಕದಲ್ಲಿ ನೆಲಸಬೇಕೆಂದು ಕಾತರಿಸುತ್ತಿದ್ದ ನಾನೇ ಯುದ್ಧಪ್ರವರ್ತಕನಾಗಬೇಕಾಯಿತು. ಗೋಪಿಯರ ರಾಸವಿಲಾಸದಲ್ಲಿ ಮೈಮರೆಯುತ್ತಿದ್ದ ನಾನು ಸಮರಾಂಗಣದಲ್ಲಿ ನಿಂತು ಅಣ್ಣ ತಮ್ಮಂದಿರ ಸ್ವಯೂಥಕಾಳಗ ನೋಡಬೇಕಾಯಿತು. ಹೋಳಿಯ ಕೆನ್ನೀರಿನಲ್ಲಿ ಮಿಾಯುತ್ತಿದ್ದ ನಾನು ವೀರಾಧಿವೀರರ ರುಧಿರಪ್ರವಾಹದಲ್ಲಿ ಮಿಾಯಬೇಕಾಯಿತು. ಹಗರಣ ಕಂಡು ಕಂಡು ಬೇಸತ್ತು ಇಲ್ಲಿಗೆ ಬಂದಿದ್ದೇನೆ. ನನ್ನ ಬಾಲ್ಯದ ಸಖರೊಂದಿಗೆ, ಶೇಷಾಯುಷ್ಯವನ್ನು ಕಳೆದು, ಆ ಅಮೃತ ದಿನಗಳ ಸವಿನೆನಪಿನಲ್ಲಿ ನನ್ನ ಅವತಾರ ಪರಿಸಮಾಪ್ತಿಗೊಳಿಸುತ್ತೇನೆ. ಮತ್ತೊಮ್ಮೆ ನಿನ್ನ ತೊಡೆಯ ಪಲ್ಲಂಕದ ಮೇಲೆ ನನಗೆ ಎಡೆಕೊಡುತಾಯಿ. ನಿನ್ನ ಸೌರಭಕಂಠದಿಂದ ಮತ್ತೊಮ್ಮೆ ಜೋಗುಳ ಕೇಳಬಯಸುತ್ತೇನೆ.'

'ಪ್ರಭೂ – ಗೀತೆಯ ಜಯಗಾನ ಹಾಡಿದ ನಿನಗೆ ನಾನು ಜೋಗುಳ ಹಾಡುವುದೇ?'

'ತಾಯಿಯ ಕಂಠದ ಉಲುಹೇ ಗೀತೆಯ ಶ್ರುತಿ – ಗತಿ – ಮತಿ.'

ರಾಧೆ ಜೋಗುಳ ಹಾಡುವಳು.

ಅಸಾವೇರಿ ರಾಗದಲ್ಲಿ ಆರಂಭವಾದ ಈ ದೃಶ್ಯ, ಲಲಿತಾ ಗೌರಿ ರಾಗದಲ್ಲಿ ಮುಕ್ತಾಯಗೊಳ್ಳುತ್ತದೆ."

ರಂಗದ ಮೇಲಣ ತೆರೆಜಾರಲು ಹೊರಗೆ ಬಂದ ಮೋಹನಾಂಬಾ ಪ್ರಭುಗಳಿಗೆ ನಮಸ್ಕರಿಸಿದಳು.

"ನೃತ್ಯನಾಟಕ ಮುಗಿದದ್ದು ನಮಗೆ ಗೊತ್ತೇ ಆಗಲಿಲ್ಲ – ನಮಗೆ ಬಹಳ ಸಂತೋಷವಾಗಿದೆ. ಹೊಸ ವಾದ್ಯಕಾರರ ಕೋಮಲ ವಾದ್ಯಗಳು ನಾಟ್ಯ ವಸ್ತುವಿನ ರಸಪೋಷಣೆಗೆ ಹೆಚ್ಚಿನ ನೆರವು ನೀಡಿದೆ. – ಈ ವಾದ್ಯಕಾರರು ಯಾರು ?"

ಮೋಹನಾಂಬಾ ವಾದ್ಯಕಾರನನ್ನು ಹತ್ತಿರ ಕರೆದು

"ಇವರೇ ಕಾಶಿಯ ಪ್ರಸಿದ್ಧ ಸಂಗೀತಾಚಾರ್ಯ ಪಂಡಿತ ಘನಶಾಮಲಾಲರು ; ಘನವಾಗಿ ಹಾಡಬಲ್ಲರು. ಆರೇಳು ವಾದ್ಯಗಳನ್ನು ನುಡಿಸಬಲ್ಲರು. – ಉಳಿದವರೆಲ್ಲಾ ಘನಶಾಮಲಾಲರ ಶಿಷ್ಯರು. ಇವರು ಇಸ್ರಾಜ್ ವಾದ್ಯ ನಿಪುಣ ಚತುರಲಾಲರು, ಇವರು ಸಿತಾರವಾದ್ಯ ಪ್ರವೀಣ ಪ್ರೇಮನಾಥರು, ಇವರು ದಿಲ್‌ರುಬಾ ವಾದ್ಯಪ್ರವೀಣ ಜಗತ್ ಪ್ರಸಾದರು, ಇವರು ತಬಲಾವಾದ್ಯ ನಿಪುಣ ಪಂಡಿತ ಪ್ರಭುಕಿಂಕರ್ ಅವರು."

"ಸಂತೋಷ – ಇರುಗನಾಯಕರೇ, ನೃತ್ಯಕಲಾವಿದೆಗೂ ವಾದ್ಯಗೋಷ್ಠಿಯವರಿಗೂ ಉಚಿತ ಸನ್ಮಾನ ಮಾಡಿ"

ಎಂದು ಅಪ್ಪಣೆ ಕೊಡಿಸಿ ಒಳಗೆ ಹೋದರು.

ಪ್ರಭುಗಳು ನಿಷ್ಕ್ರಮಿಸಿದ ಮೇಲೆ ಯುವರಾಜ ಬುಕ್ಕರಾಯರು,

"ನಾಳೆ ರಾತ್ರಿ ವಾದ್ಯಗಾರರು ನಮ್ಮ ಬೀಡಿನಲ್ಲಿ ನುಡಿಸಲಿ"

ಎಂದು ಅಪ್ಪಣೆ ಮಾಡಿದರು.

೨೦

ರಾಜಬಿಡಾರದಿಂದ ಇರುಗನಾಯಕರು ಬಂದಾಗ ಮಧ್ಯರಾತ್ರಿಯಾಗಿತ್ತು.

ರಾಮಭಟ್ಟ ಯಾವುದೋ ಗ್ರಂಥ ಓದುತ್ತ ಕುಳಿತಿದ್ದ.

ನಾಯಕರು ಬಂದುದನ್ನು ಕಂಡ ರಾಮಭಟ್ಟ,

"ಇಷ್ಟು ಹೊತ್ತಾಯಿತೇ ನಾಯಕರೇ" ಎಂದ.

"ಆಯಿತು. ಮೋಹನಾಂಬೆ ತನ್ನ ಕಲಾಕೌಶಲ್ಯದಿಂದ ನಮ್ಮನ್ನು ಪರವಶರನ್ನಾಗಿ ಮಾಡಿಬಿಟ್ಟಳು. ಹೊತ್ತು ಹೋದುದೇ ಯಾರಿಗೂ

ಗೊತ್ತಾಗಲಿಲ್ಲ. ಅವಳ ನೃತ್ಯ, ಅದಕ್ಕೆ ಮೇಳವಿಸಿದ ಉತ್ತರ ಭಾರತದವರ ವಾದ್ಯಗೋಷ್ಠಿ ಎರಡೂ ಅಪರೂಪದ ರಸದೌತಣವನ್ನೊದಗಿಸಿದವು. ನೀವು ಇರಬೇಕಾಗಿತ್ತು ಭಟ್ಟರೇ."

"ಮೋಹನಾಂಬೆಯು ದಕ್ಷಿಣ ನೃತ್ಯ ಸಂಪ್ರದಾಯಕ್ಕೆ ಉತ್ತರದ ವಾದ್ಯಗಾರರು ಹೇಗೆ ಹೊಂದಿಕೊಂಡರು ?"

"ಘನಶಾಮುಲಾಲರು ಅದ್ಭುತ ಮೇಧಾವಿಗಳು. ಸ್ವಯಂ ಅವರೇ ಐದಾರು ವಾದ್ಯಗಳನ್ನು ನುಡಿಸುವರಂತೆ. ಅವರ ವಾದ್ಯವಾದನ ಕೇಳಿ ಸಂತೋಷಗೊಂಡ ಯುವರಾಜ ಶ್ರೀ ಬುಕ್ಕರಾಯರು ಆಮಂತ್ರಣವಿತ್ತು, ನಾಳೆ ತಮ್ಮ ಬಿಡಾರದಲ್ಲಿ ನುಡಿಸಲು ಆಜ್ಞೆಮಾಡಿದ್ದಾರೆ."

"ನಾಳೆ ನನ್ನನ್ನು ಬಿಟ್ಟುಹೋಗಬೇಡಿ ನಾಯಕರೇ – ನಾನೂ ಬರುತ್ತೇನೆ. ಅವಶ್ಯಕವಿದ್ದರೆ ಯುವರಾಜರವರ ಅಪ್ಪಣೆ ಪಡೆದುಕೊಳ್ಳಿ."

"ಏನೂ ಅಗತ್ಯವಿಲ್ಲ – ನನ್ನ ಜತೆ ನೀವು ಬನ್ನಿ. ಯುವರಾಜರವರ ಬಿಡಾರಕ್ಕೆ ಬರುವುದಕ್ಕೆ ನಿಮಗೆ ಅಪ್ಪಣೆ ಬೇಕೇ" ಎಂದರು.

ಯುವರಾಜ ಶ್ರೀ ಬುಕ್ಕರಾಯರ ಬಿಡಾರದಲ್ಲಿ ವ್ಯವಸ್ಥೆಯಾಗಿದ್ದ ಸಂಗೀತಕಛೇರಿಗೆ ಹೆಚ್ಚು ಜನ ಆಮಂತ್ರಿತರಿರಲಿಲ್ಲ. ಯುವರಾಜರು, ಅವರ ಸೋದರರು, ಇರುಗನಾಯಕರು, ರಾಮಭಟ್ಟರು, ಘನಶಾಮುಲಾಲರು, ಅವರ ಸಂಗಡಿಗರ ಕಛೇರಿ ಕೇಳುತ್ತ ಕುಳಿತರು.

ಕಛೇರಿ ಸಾಗಿದ್ದಂತೆ ಯುವರಾಜ ಬುಕ್ಕರಾಯರು, ರಾಜಕುಮಾರ ದೇವರಾಯ, ವಿರೂಪಾಕ್ಷರು ಒಳಗೆದ್ದು ಹೋಗಿ ಮಿತವಾಗಿ ಮದ್ಯ ಸೇವಿಸಿ ಬಂದರು.

ಚಿಕ್ಕರಾಯರು ಮಾತ್ರ ಸ್ಥಳ ಬಿಟ್ಟು ಅಲುಗಾಡಲಿಲ್ಲ.

ಮಾಲಕಂಸ, ಗೌಡಮಲ್ಹಾರ ರಾಗಗಳನ್ನು ನುಡಿಸಿ ಘನಶಾಮುಲಾಲರು ಯುವರಾಜರಿಂದ ಭಲೆ ಎನಿಸಿಕೊಂಡರು.

ವಿಸ್ತಾರವಾಗಿ ರಾಗಾಲಾಪ ಮಾಡಿ, ಚೀಸುಗಳನ್ನು ನುಡಿಸಿ ಮುಗಿಸಿದ ಕೂಡಲೆ ಯುವರಾಜರು, ರಾಜಕುಮಾರರು ಒಳಗೆದ್ದು ಹೋಗಿ ಮತ್ತೆ ಬಂದು ಕೂಡುತ್ತಿದ್ದರು.

ವಾದ್ಯಗೋಷ್ಠಿಯವರು ನಾಯಕಿಕಾನಡ ರಾಗಕ್ಕೆ ಬರುವ ವೇಳೆಗೆ ಪಾನ

ಪ್ರಭಾವದಿಂದ ಯುವರಾಜರು, ರಾಜಕುಮಾರರು ಅರ್ಧನಿಮೀಲಿತರಾಗಿದ್ದರು.

ಮೆಲ್ಲನೆ ಅವರ ಬಳಿ ಸಾರಿದ ಇರುಗನಾಯಕರು,

" ಮಹಾಸ್ವಾಮಿಯವರಿಗೆ ಆಯಾಸವಾದಂತಿದೆ. ಅಪ್ಪಣೆಯಾದರೆ ಕಛೇರಿ ಮುಗಿಸಲು ವಾದ್ಯಗಾರರಿಗೆ ತಿಳಿಸುತ್ತೇನೆ." ಎಂದರು.

ಯುವರಾಜ ಬುಕ್ಕರಾಯರು ತೊದಲುತ್ತಾ

" ಕ–ಛೇ–ರಿ ನ–ಡೆ–ಯ–ಲಿ " ಎಂದರು.

ವಾದ್ಯಗಾರರು ನಾಯಕಿಕಾನಡ ಮುಗಿಸಲು ಇರುಗನಾಯಕರು ಕಣ್ಸನ್ನೆಮಾಡಿ ' ಕಛೇರಿ ಸಾಕು ' ಎಂದು ಸೂಚಿಸಿದರು.

ವಾದ್ಯಗಾರರೆದ್ದು, ತಮ್ಮ ವಾದ್ಯಗಳನ್ನು ಕೈಯಲ್ಲಿ ಹಿಡಿದು ಯುವರಾಜಕುಮಾರರ ಮುಂದೆ ನಿಂತರು.

ಯುವರಾಜರು ತೊದಲುತ್ತಲೇ,

" ಸೊಗಸಾಗಿತ್ತು – ನೀವು ಒಳ್ಳೆಯ ವಿದ್ವಾಂಸರು – ನಮ್ಮ ಆಸ್ಥಾನಕ್ಕೆ ಬನ್ನಿ "

ಎಂದು ಹೇಳುತ್ತಿದ್ದಂತೆ ವಾದ್ಯಗಾರರು ತಮ್ಮ ವಾದ್ಯಗಳೊಳಗೆ ಹುದುಗಿಸಿಟ್ಟಿದ್ದ ಕತ್ತಿಗಳನ್ನು ಸೆಳೆಯಲು ಖಡ್ಗಧಾರಿಗಳಾಗಿ ಹಿಂದಿನಿಂದ ಧಾವಿಸಿ ಬಂದ ಗುಂಡನಾಯಕರು, ಅವರ ಸೈನಿಕರು ವಾದ್ಯಗಾರರನ್ನು ಸುತ್ತುಗಟ್ಟಿ ಸೆರೆ ಹಿಡಿದರು.

ರಾಮುಭಟ್ಟರು, ಶಾಮುಲಾಲರ ಕೃತಕಗಡ್ಡ ಕಿತ್ತೆಸೆದು,

" ಮಹಾಸ್ವಾಮಿ, ಇವರು ಕಾಶಿಯ ಸಂಗೀತ ವಿದ್ವಾಂಸರಲ್ಲ; ಬಹಮನಿ ರಾಜ್ಯದ ಗೂಢಚಾರರು. ಇವನೇ ರಿಸಾಲ್ದಾರ್ ಖಾಜಿ ಸಿರಾಜುದ್ದೀನ್ " ಎಂದರು.

ಯುವರಾಜರು, ರಾಜಕುಮಾರರ ಮತ್ತು ಒಂದೇ ಕ್ಷಣದಲ್ಲಿ ಕೆಳಗಿಳಿದು ಹೋಯಿತು.

ರಾತ್ರಿ ನಡೆದ ಘಟನೆ ಕೇಳಿ ಮೋಹನಾಂಬೆ ಗಡಗಡನೆ ನಡುಗಿಬಿಟ್ಟಳು.

ಇರುಗನಾಯಕರ ಸೈನಿಕರು ಅವಳನ್ನೂ ಬಂಧಿಸಿದರು.

ತಮ್ಮ ಅಜಾಗರೂಕತೆಗಾಗಿ ಪಶ್ಚಾತ್ತಾಪಗೊಂಡಿದ್ದ ಇರುಗನಾಯಕರಿಗೆ

ಎಲ್ಲವೂ ಸಮಸ್ಯೆಯಾಗಿತ್ತು. ಸಕಾಲಕ್ಕೆ ಗುಂಡನಾಯಕರು ಹೇಗೆ ಬಂದರೆಂದು ತಿಳಿಯಲು ಕುತೂಹಲಿಗಳಾಗಿ, ಅವರನ್ನು ಪ್ರಶ್ನಿಸಲು,

"ವಾದ್ಯಗಾರರು ನಮ್ಮ ಶಿಬಿರ ಪ್ರವೇಶಿಸಿದ ಕೂಡಲೇ ರಾಮಭಟ್ಟರು ನನಗೆ ಎಚ್ಚರಿಕೆ ಕೊಟ್ಟರು ಯುವರಾಜರ ಆಮಂತ್ರಣದ ವಿಷಯ ತಿಳಿದ ಕೂಡಲೆ ಭಟ್ಟರು ನನ್ನಲ್ಲಿ ಬಂದು 'ಗುಂಡನಾಯಕರೇ, ಈ ರಾತ್ರಿ ಏನೋ ಅಪಘಾತ ಸಂಭವಿಸುವುದೆಂದು ನನ್ನ ಅಂತರಾತ್ಮ ಹೇಳುತ್ತಿದೆ. ಮಹಾಪ್ರಭುಗಳ ಬಿಡಾರ, ಯುವರಾಜಕುಮಾರರ ಬಿಡಾರದ ಮೇಲೆ ಸರ್ಪಕಾವಲಿಡಬೇಕು. ತೆರೆಮರೆಯಲ್ಲಿ ನಿಂತು ನೀವು ವಾದ್ಯಗೋಷ್ಠಿಯವರ ಪ್ರತಿಯೊಂದು ಚಲನವಲನವನ್ನೂ ಗಮನಿಸುತ್ತಿರಬೇಕು' ಎಂದರು. ಅದಕ್ಕೇ ನಾನು ಕಛೇರಿಗೆ ಬರಲಿಲ್ಲ. ಯುವರಾಜರ ಹಿಂಬದಿಯ ವಸ್ತ್ರವೇಶ್ಮದಲ್ಲಿ ಎರಡು ರಂಧ್ರ ಕೊರೆದು, ವಾದ್ಯಗಾರರನ್ನೇ ದಿಟ್ಟಿಸಿ ನೋಡುತ್ತ ನಿಂತೆ. ಅವರು ವಾದ್ಯಗಳನ್ನು ಹಿಂದುಮುಂದು ಮಾಡಿದ ಕೂಡಲೆ ಒಳಗೆ ನುಗ್ಗಿದೆ."

"ರಾಮಭಟ್ಟರ ದೂರದೃಷ್ಟಿ ನಮ್ಮನ್ನು ಕಾಪಾಡಿತು. ಯುವರಾಜಕುಮಾರರಿಗೆ ಅಪಘಾತವಾಗಿದ್ದರೇನುಗತಿ ?"

"ಈ ಮಹಾಬ್ರಾಹ್ಮಣನ ಋಣವನ್ನು ನಾವು ಜನ್ಮಜನ್ಮಾಂತರಕ್ಕೂ ತೀರಿಸಲಾಗುವುದಿಲ್ಲ ಇರುಗನಾಯಕರೇ"

ಎಂದು ಗುಂಡನಾಯಕರು ಹೃತ್ಪೂರ್ವಕವಾಗಿ ನುಡಿದರು.

೨೧

ಮಹಾಪ್ರಭುಗಳೇ ತಪ್ಪಿತಸ್ಥರ ವಿಚಾರಣೆ ನಡೆಸಿದರು.

ಮೋಹನಾಂಬಾ ನಿರ್ದೋಷಿಯೆನ್ನುವುದು ಸ್ಥಿರಪಟ್ಟಿತು.

ಖಾಜಿ ಸಿರಾಜುದ್ದೀನನಿಗೂ, ಅವನ ಆರು ಮಂದಿ ಸಂಗಡಿಗರಿಗೂ ದೇಹಾಂತ ಶಿಕ್ಷೆ ವಿಧಿಸುತ್ತಾ ಮಹಾಪ್ರಭುಗಳು,

"ನಿಮ್ಮ ಸುಲ್ತಾನರು ವೀರರು – ನ್ಯಾಯಪಕ್ಷಪಾತಿಗಳು ಎಂದು ಭಾವಿಸಿದ್ದೆವು. ಅವರು ಯುದ್ಧಕ್ಕೆ ಅಂಜಿ ಕೊಲೆಗಡಕರನ್ನು ಕಳುಹಿಸಿ ಜಯ

ದೊರಕಿಸಲು ಹವಣಿಸಿದುದು ರಾಜಸತ್ತೆಗೇ ಅಪಮಾನಕರವಾಗಿದೆ. ನಿಮ್ಮ ವರ್ತನೆಯಿಂದ ನಮ್ಮ ಶಕ್ತಿ ಉತ್ಸಾಹ ನೂರ್ಮಡಿಸಿದೆ. ಈ ಸಾರೆ ನಿಮ್ಮ ಬಹಮನಿರಾಜ್ಯದ ಹೆಸರು ತೊಡೆದು ಹಾಕಿದಲ್ಲದೆ ನಾವು ರಾಜಧಾನಿಗೆ ಹಿಂದಿರುಗುವುದಿಲ್ಲ" ಎಂದರು

ಪ್ರಭುಗಳಿಗೂ, ರಾಜಕುಮಾರರಿಗೂ ಕುತ್ತು ಒದಗಿದ್ದುದೂ, ಅದು ಪರಿಹಾರವಾದುದೂ ರಾಜಧಾನಿ ಮುಟ್ಟಿತು.

ಪ್ರಜರು ರಾಜಧಾನಿಯ ಎಲ್ಲ ದೇವಾಲಯ, ಮಸೀದಿಗಳಲ್ಲೂ ಪೂಜೆ, ಪ್ರಾರ್ಥನೆ ಸಲ್ಲಿಸಿದರು.

ಕೃಷ್ಣಾನದಿಯ ಮಹಾಪೂರ ಇಳಿಯುತ್ತಾ ಬಂದಿತ್ತು.

ದಂಡನಾಯಕರ ಸಭೆಕರೆದ ಮಹಾಪ್ರಭುಗಳು,

"ನಾವು ಹೀಗೆ ಇನ್ನೆಷ್ಟು ದಿನ ಕುಳಿತಿರುವುದು. ಆಚೆಯ ದಂಡೆಯಲ್ಲಿ ಬಹಮನಿಯವರು ನಮ್ಮನ್ನು ನಿರೀಕ್ಷಿಸುತ್ತಿದ್ದಾರೆ; ಈ ದಂಡೆಯಲ್ಲಿ ನಾವು ಅವರನ್ನು ನಿರೀಕ್ಷಿಸುತ್ತಿದ್ದೇವೆ. ಹೇಗಾದರೂ ಈ ನೆನೆಗುದಿಯನ್ನು ಕೊನೆಗಾಣಿಸಲೇ ಬೇಕು."

"ಮಹಾಪೂರ ಹೇಗೂ ಇಳಿದಿದೆ. ನಾವೇ ಏತಕ್ಕೆ ನದಿದಾಟಿ ಆ ದಂಡೆಗೆ ಹೋಗಿ ಯುದ್ಧವನ್ನಾರಂಭಿಸಬಾರದು — ಸೈನಿಕರು ಅಶಾಂತರಾಗುತ್ತಿದ್ದಾರೆ. ಅವರನ್ನು ನಿರುದ್ಯೋಗಿಗಳನ್ನಾಗಿ ಕೂಡಿಸುವುದು ತರವಲ್ಲ."

ಎಂದು ಗುಂಡನಾಯಕರು ಸೂಚಿಸಿದರು.

"ಆಚೆಯ ದಂಡೆಯಲ್ಲಿ ಬೀಡುಬಿಟ್ಟಿರುವ ಬಹಮನಿಯವರು, ನಮ್ಮ ಬರುವನ್ನು ಎದುರು ನೋಡುತ್ತಾ, ಹಲವಾರು ಬಗೆಯಲ್ಲಿ ನಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಲು ಅವಶ್ಯಕವಾದ ಕಾರ್ಯಕ್ರಮ ಕೈಗೊಂಡೇ ಇದ್ದಾರೆ. ನಾವಾಗಿಯೇ ಶತ್ರುಬಲಕ್ಕೆ ಏಕೆ ಬಲಿಯಾಗಬೇಕು. ನಾಲ್ಕು ದಿನ ತಡವಾದರೂ ಚಿಂತೆಯಿಲ್ಲ. ಇಲ್ಲೇ ಕುಳಿತು ಅವರನ್ನು ನಿರೀಕ್ಷಿಸುವುದೇ ಉತ್ತಮ ಎಂದು ನನ್ನ ಅಭಿಪ್ರಾಯ."

ಎಂದು ಇರುಗನಾಯಕರು ಹೇಳಿದರು.

ದಣ್ಣಾಯಕರಲ್ಲಿ ತೋರಿದ್ದ ತೀವ್ರಮತಭೇದವನ್ನು ಪರಿಹರಿಸುವುದು ಹೇಗೆಂದು ಪ್ರಭುಗಳು ಯೋಚಿಸುತ್ತಿರುವಲ್ಲಿ ರಾಮಭಟ್ಟ ಕಾಣಿಸಿಕೊಂಡು,

"ನಾನು ಯುದ್ಧವಿದ್ಯಾಕುಶಲನಲ್ಲ. ಅನೇಕ ವೇಳೆ ತಜ್ಞರಿಗೆ

ಹೊಳೆಯದಿರುವ ವಿಷಯಗಳು ಸಾಮಾನ್ಯರಿಗೆ ಹೊಳೆಯುತ್ತವೆ. ಈ ಬಿಕ್ಕಟ್ಟನ್ನು ಪರಿಹರಿಸಲು ನಾನೊಂದು ಸೂಚನೆ ಮಾಡಲು ಬಯಸುತ್ತೇನೆ."

"ಅಗತ್ಯವಾಗಿ ಸೂಚಿಸಿ ರಾಮಭಟ್ಟರೇ."

"ಎಷ್ಟು ಬೇಗ ಸೆಣಸಿ ಸಾಮ್ರಾಜ್ಯಕ್ಕೆ ವಿಜಯ ದೊರಕಿಸಿಕೊಟ್ಟೇನೋ ಎಂದು ಕಾತರರಾಗಿರುವ ಗುಂಡನಾಯಕರು ಮೃತ್ಯುದವಡೆ ಪ್ರವೇಶಿಸಲು ಅಂಜುತ್ತಿಲ್ಲ. ಸಾಮ್ರಾಜ್ಯ ಇಂದು ಇಂಥ ಮಹಾವೀರನನ್ನು ಕಳೆದುಕೊಳ್ಳಲು ಸಿದ್ಧವಾಗಿಲ್ಲ. ಇರುಗನಾಯಕರ ಸಲಹೆ ವಿಚಾರಾರ್ಹವಾಗಿದೆ. ಅದಕ್ಕೆ ಪೋಷಕವಾಗಿ ನಾನು ಸೂಚಿಸುವುದಿಷ್ಟೆ! ಸುಲ್ತಾನರು ಹಿಮ್ಮೆಟ್ಟಿದ್ದರೆ ನಾವು ನಿರಾಪದವಾಗಿ ಊರಿಗೆ ಹಿಂದಿರುಗುತ್ತಿದ್ದೆವಷ್ಟೆ! ಈಗ ನಾವು ಈ ಭಾವನೆ ಸುಲ್ತಾನರ ಮನಸ್ಸಿನಲ್ಲುಂಟುಮಾಡಿ, ಎರಡು ದಿನ ಇಲ್ಲಿಯೇ ಸಂಭ್ರಮಯುತವಾಗಿ ಉತ್ಸವ ನೆರವೇರಿಸೋಣ. ಮೂರನೆಯ ದಿನ ಇಲ್ಲಿಂದ ಹೊರಟ ನಾವು ನಾಲ್ಕೈದು ಮೈಲಿ ದೂರದಲ್ಲಿ ಬೀಡುಬಿಟ್ಟು ಅಡಗಿ ಕುಳಿತುಕೊಳ್ಳಬೇಕು. ನಾವು ಊರಿಗೆ ಹಿಂದಿರುಗಿದೆವೆಂದು ಭಾವಿಸಿದ ಸುಲ್ತಾನರು, ನಮ್ಮನ್ನು ಹಿಂಬಾಲಿಸುತ್ತಾರೆ. ತಾವು ಹಿಂದಿರುಗಿ ಸುಲ್ತಾನರನ್ನು ಎದುರಿಸಬೇಕು. ಎಡಬಲಗಳಿಂದ ಇರುಗನಾಯಕರು, ಗುಂಡನಾಯಕರು ಸುಲ್ತಾನರ ಸೈನ್ಯವನ್ನು ಬಳಸಬೇಕು. ನಮ್ಮ ವೀರರ ಕತ್ತಿಗಳಿಗೆ ನಿಲುಕದವರು ಕೃಷ್ಣಾನದಿಯ ಪಾಲಾಗುತ್ತಾರೆ. ಸುಲ್ತಾನರ ಸೈನ್ಯವನ್ನು ಮೂಲೋತ್ಪಾಟನ ಮಾಡಲು ಇದೇ ರಾಜಮಾರ್ಗವೆಂದು ನನಗನಿಸುತ್ತದೆ."

ಸ್ವಲ್ಪಕಾಲ ಸಭೆಯಲ್ಲಿ ಮೌನವಾವರಿಸಿತು.

ಇರುಗನಾಯಕರು, ಗುಂಡನಾಯಕರು ಏಕಕಾಲದಲ್ಲಿಯೇ,

"ಭಟ್ಟರ ಸಲಹೆ ಮಾನ್ಯವಾಗಿದೆ ಮಹಾಪ್ರಭೂ" ಎಂದರು.

ಪ್ರಭುಗಳು ಅಭಿಮಾನಪೂರ್ವಕವಾಗಿ ಭಟ್ಟರನ್ನು ನೋಡಿ,

"ಒಂದಲ್ಲ ಹತ್ತು ರೀತಿಯಲ್ಲಿ ನಾವು ನಿಮಗೆ ಉಪಕೃತರಾಗಿದ್ದೇವೆ. ಹೇಗೆ ಪ್ರತ್ಯುಪಕಾರ ಸಲ್ಲಿಸಿ ಋಣಭಾರ ನೀಗಬಹುದೋ ತಾವೇ ಸೂಚಿಸಿ."

"ಸೂಚಿಸುತ್ತೇನೆ ಮಹಾಪ್ರಭು. ಅದಕ್ಕೆ ಮೊದಲು ನಾನು ಇರುಗನಾಯಕರ ಮೇಲೆ ದೂರು ಕೊಡಬೇಕಾಗಿದೆ."

ಇರುಗನಾಯಕರು ಗಾಬರಿಕೊಂಡು,

"ನಾನು ಏನುಮಾಡಿದೆ ಭಟ್ಟರೇ" ಎಂದರು.

ಮಹಾಪ್ರಭುಗಳು ಸುಹಾಸವದನರಾಗಿ

" ಹೇಳಿ ಭಟ್ಟರೇ – ಇರುಗನಾಯಕರು ಅಪರಾಧಿಗಳಾಗಿದ್ದರೆ, ಅವರೂ ಶಿಕ್ಷಾರ್ಹರೇ."

" ಯುದ್ಧ ಸಂಭವಿಸಿದಾಗ ನಾನೂ ರಣರಂಗಕ್ಕೆ ಬರುತ್ತೇನೆಂದೆ. ಇರುಗನಾಯಕರು ಒಪ್ಪದೆ ಅರಮನೆಯ ದಾಸದಾಸಿಯರಂತೆ ನಾನೂ ಹಿಂದುಳಿದಿರಬೇಕೆಂದು ಅಪ್ಪಣೆ ಕೊಡಿಸಿದರು."

" ವಿಜಯನಗರ ಸಾಮ್ರಾಜ್ಯಕ್ಕಾಗಿ ಪ್ರಾಣ ಒಪ್ಪಿಸಬಲ್ಲವರು ಬಹಳ ಜನರಿದ್ದಾರೆ ರಾಮಭಟ್ಟರೇ. ಆದರೆ ಅದನ್ನು ಕಟ್ಟಿ, ಭದ್ರಬುನಾದಿಯ ಮೇಲೆ ನಿಲ್ಲಿಸಬಲ್ಲವರು ವಿರಳ. ಯಾವ ಕಾರಣಕ್ಕೂ ನಾವು ನಿಮ್ಮನ್ನು ಕಳೆದುಕೊಳ್ಳಲು ಸಿದ್ಧವಾಗಿಲ್ಲ. ಇರುಗನಾಯಕರ ತೀರ್ಪೆ ನಮ್ಮ ತೀರ್ಪು."

" ಬ್ರಾಹ್ಮಣನ ಹತ್ತಿರ ಯಾವಾಗಲೂ ಒಂದು ಬ್ರಹ್ಮಾಸ್ತ್ರವಿದೆ ಪ್ರಭೂ."

" ಯಾವದದು ?"

" ಪ್ರಾಯೋಪ್ರವೇಶ."

" ಭಟ್ಟರೇ, ದಯೆಮಾಡಿ ನಮ್ಮನ್ನು ಉಭಯ ಸಂಕಟಕ್ಕೆ ಸಿಕ್ಕಿಸಬೇಡಿ."

" ಪ್ರಭೂ, ಕೃಪೆಮಾಡಿ ನನ್ನ ಪ್ರಾರ್ಥನೆಯನ್ನೊಪ್ಪಿಕೊಳ್ಳಿ."

" ನಿಮ್ಮ ಇಷ್ಟವಿದ್ದಂತೆಯೇ ಆಗಲಿ – ಇರುಗನಾಯಕರೇ...."

" ಮಹಾಪ್ರಭೂ."

" ಸಮರಸನ್ನಿಹಿತವಾಗುವವರೆಗೂ ನೀವೇ ರಾಮಭಟ್ಟರಿಗೆ ಶಸ್ತ್ರಾಸ್ತ್ರ ಪ್ರಯೋಗ ಅಭ್ಯಾಸಮಾಡಿಸಿ. ಮಹಾಬ್ರಾಹ್ಮಣರಾಗಿದ್ದ ದ್ರೋಣರು ದ್ವಾಪರದಲ್ಲಿ ರಣಕೇಳಿಯನ್ನಾಡಿದ್ದರೆಂದು ಕೇಳಿದ್ದೆವು; ಕಲಿಯುಗದಲ್ಲಿ ನೋಡುತ್ತೇವೆ. ಭಟ್ಟರು ಹೇಳಿದಂತೆ ಉತ್ಸವ ಆರಂಭವಾಗಲಿ. ಸೈನಿಕರಿಗೆ ಮೃಷ್ಟಾನ್ನಭೋಜನ, ನೃತ್ಯ, ಗೀತ, ಗಾಯನ ವ್ಯವಸ್ಥೆಯಾಗಲಿ. ರಾಜನರ್ತಕಿ ಮೋಹನಾಂಬಾ ನಾಳೆ ಸಂಜೆ ಸಕಲರನ್ನೂ ತನ್ನ ಕಲಾನೈಪುಣ್ಯದಿಂದ ಹರ್ಷಗೊಳಿಸಲಿ. ಶುಭ ಸೋಮವಾರ ನಾವು ಇಲ್ಲಿಂದ ಹಿಂದಿರುಗೋಣ."

ಎಂದು ಅಪ್ಪಣೆಕೊಡಿಸಿದರು.

೨೨

ಸಿರಾಜುದ್ದೀನ್ ಅವನ ಸಂಗಡಿಗರಿಗೆ ಒದಗಿದ ದುರ್ಗತಿಯನ್ನು ಕೇಳಿ ಸುಲ್ತಾನರು ಖತಿಗೊಂಡಿದ್ದರು.

ಆದರವರು ಯಾರನ್ನೂ ಆಕ್ಷೇಪಿಸುವಂತಿರಲಿಲ್ಲ.

ಸಿರಾಜುದ್ದೀನನ ದುರ್ಮರಣಕ್ಕೆ ತಾವೇ ಕಾರಣರೆಂದು ಭಾವಿಸಿ ಸುಲ್ತಾನರು ವಿಷಾದಗೊಂಡರು.

ಆಚೆಯ ದಂಡೆಯಿಂದ ಬಂದ ಸುದ್ದಿ ಕೇಳಿ ಸುಲ್ತಾನರ ಮುಖ ಪ್ರಫುಲ್ಲವಾಯಿತು.

" ನಾವು ಹೊಳೆದಾಟುವುದಿಲ್ಲವೆಂದುಕೊಂಡು ಕಾಫಿರರು ಹಬ್ಬಮಾಡಿ ಉಂಡು, ತಿಂದು, ತೇಗಿ ಊರಿಗೆ ಹೊರಟು ಹೋದರು ಹುಜೂರ್ "

ಎಂದು ಜೈನಲಾಬುದ್ದೀನ್ ಪರಮೋತ್ಸಾಹದಿಂದ ನಿವೇದಿಸಿದ.

" ಅವರ ಹುಟ್ಟಡಗಿಸುವುದಕ್ಕೆ ಇದೇ ಸುಸಮಯ ಜೈನಲಾಬುದ್ದೀನ್. ದೋಣಿಗಳು, ತೆಪ್ಪಗಳು, ಹುಟ್ಟುಗಳು ಸಿದ್ಧವಾಗಲಿ. ನಾವು ಏಕಕಾಲದಲ್ಲಿ ನದಿದಾಟಿ, ಆಚೆ ದಂಡೆಗಿಳಿದು, ವಿಜಯನಗರ ಸೈನ್ಯ ರಾಜಧಾನಿ ಮುಟ್ಟುವಷ್ಟರಲ್ಲಿ ಅವರನ್ನು ಹಿಂದಿನಿಂದ ಇರಿಯಬೇಕು."

" ಆಗಬಹುದು ಸರ್ಕಾರ್. ಕೂಡಲೆ ಪ್ರಯಾಣದ ವ್ಯವಸ್ಥೆಮಾಡುತ್ತೇನೆ."

ಒಂದೇ ದಿನದಲ್ಲಿ ವ್ಯವಸ್ಥೆಮುಗಿಯಿತು.

ಅದೇ ರಾತ್ರಿ ಸುಲ್ತಾನ್ ಫಿರೋಜ್‌ಷಹಾ ತನ್ನ ಸಮಸ್ತ ಪರಿವಾರದೊಂದಿಗೆ ಕೃಷ್ಣಾನದಿ ದಾಟಿ, ಆಚೆಯ ದಡ ಮುಟ್ಟಿದರು.

ಒಳ್ಳೆಯ ಆವೇಶದಲ್ಲಿದ್ದ ಸುಲ್ತಾನರು, ಅಶ್ವಾರೂಢರಾಗಿ,

" ಅಲ್ಲಾ ಹೆಸರು ಜಪಿಸುತ್ತ ನನ್ನನ್ನು ಹಿಂಬಾಲಿಸಿ. ಸತ್ತರೆ ಸ್ವರ್ಗ: ಬದುಕಿದರೆ ವಿಜಯನಗರ ಸಾಮ್ರಾಜ್ಯದ ಲೂಟಿ – ವಿಜಯನಗರದ ಸುಂದರಿಯರೊಡನೆ ರಾಸಕೇಳಿ "

ಎಂದು ತಮ್ಮ ಪ್ರೀತಿಯ ಕೃಷ್ಣಾಶ್ವ ' ಜಂಗ್ ಬಹದ್ದೂರ್ 'ನ ಭುಜ ಚಪ್ಪರಿಸಿ,

" ಚಲ್ ಬೇಟಾ " ಎಂದರು.

ಸುಲ್ತಾನರ ಸೈನ್ಯ ನಾಲ್ಕು ಮೈಲು ಒಳಪ್ರಾಂತ್ಯ ಹೋದಮೇಲೆ, ದಟ್ಟವಾದ ಕಾಡಿನೊಳಗೆ ಹಾದು ಹೋಗಬೇಕಾಗಿತ್ತು. ಸೈನಿಕರು ಗಿಡಮರಗಳನ್ನು ಕಡಿಯುತ್ತ, ಸೈನ್ಯದ ಮುನ್ನಡೆಗೆ ದಾರಿಮಾಡಿಕೊಡುತ್ತ ಹೊರಟರು.

ಒಳಕ್ಕೆ ಹೋದಂತೆ ಕಾಡು ದಟ್ಟವಾಗುತ್ತಿತ್ತು.

" ಈ ಸೈತಾನ್ ಕಾಡಿಗೆ ಕೊನೆಯೇ ಇರುವಂತಿಲ್ಲ "

ಎಂದು ಸುಲ್ತಾನರು ಕಸಿವಿಸಿಗೊಂಡರು.

ಅರ್ಧಮೈಲಿ ಕಾಡಿನೊಳಗೆ ಸುಲ್ತಾನರ ಸೈನ್ಯ ಹೋಗಲು, ಸುತ್ತ ನಾಲ್ಕು ಕಡೆಯಿಂದ

" ಜಯ್ ವಿರೂಪಾಕ್ಷ !
ಜಯ ಭುವನೇಶ್ವರಿ !!"

ಎಂಬ ರಣಘೋಷ ಇಡಿಯ ವನಪ್ರಾಂತ್ಯದಲ್ಲಿ ಪ್ರತಿಧ್ವನಿಸಿತು.

ಕ್ಷಣಕಾಲ ಚಕಿತರಾದ ಸುಲ್ತಾನರು

" ಏನಿದು ಜೈನಲಾಬುದ್ದೀನ್. ಈ ಸೈತಾನರು ಇಲ್ಲಿಯೇ ಇದ್ದಾರೆ " ಎಂದರು.

ದಿಕ್ಕುಕಾಣದಾಗಿದ್ದ ಸುಲ್ತಾನರ ಸೈನಿಕರು ಸ್ವಪಕ್ಷದವರು ಯಾರು, ಶತ್ರುಪಕ್ಷದವರು ಯಾರು ಎಂದು ತಿಳಿಯದೆ ಕಾದಲಾರಂಭಿಸಿದರು.

ಜೈನಲಾಬುದ್ದೀನನ ತುಕಡಿಯನ್ನು ಗುಂಡನಾಯಕರು ಎದುರಿಸಿದ್ದರು. ಸರ್ದಾರ ಅಹಮದನ ತುಕಡಿಯನ್ನು ಇರುಗನಾಯಕರು ಎದುರಿಸಿದ್ದರು. ಸ್ವಯಂ ಚಕ್ರವರ್ತಿಗಳು ಸುಲ್ತಾನರ ತುಕಡಿಯನ್ನೆದುರಿಸಿದ್ದರು

ಅಂದಿನ ಸಂಜೆಯವರೆಗಾದ ಯುದ್ಧ ವಿಜಯನಗರದ ಕೈಮೇಲೆನಿಸಿದರೂ, ವಿಜಯ ದೊರಕಿಸಿ ಕೊಡಲಿಲ್ಲ. ಇಸ್ಲಾಮಿನ ಸರ್ವಸ್ವಾಮ್ಯ ಸ್ಥಾಪಿಸಲು ಹೋರಾಡುತ್ತಿದ್ದ ಬಹಮನಿ ಸೈನಿಕರು ಜೀವದ ಮೇಲಣ ಹಂಗುದೊರೆದಿದ್ದರು. ಖಾಜಿ ಕಮಾಲುದ್ದೀನ್ ಸಾವಿರ ಮೈಯ್ಯಾಗಿ ಎಲ್ಲೆಲ್ಲಿಯೂ ಕಾಣಿಸಿಕೊಂಡು ಸೈನಿಕರಿಗೆ ಹುರುಪುಗೊಡುತ್ತಿದ್ದ.

ಗುಂಡನಾಯಕರ ಮಹಾಪರಾಕ್ರಮದಿಂದ ಜೈನಲಾಬುದ್ದೀನನ ತುಕಡಿ ಧೂಳೀಪಟವಾಗಿತ್ತು. ಜೈನಲಾಬುದ್ದೀನ್ ಪ್ರಾಣ ಉಳಿಸಿಕೊಳ್ಳುವುದೇ ಕಷ್ಟವಾಯಿತು.

ಮಾರನೆಯ ಬೆಳಿಗ್ಗೆ ಸಮರತೂರ್ಯಗಳು ಮೊಳಗಲು ಉಭಯ ಸೈನ್ಯಗಳು ರಣರಂಗ ಪ್ರವೇಶಿಸಿದವು.

ಹಿಂದಿನ ದಿನದ ಅನುಭವ ಸ್ಮರಿಸಿಕೊಂಡು, ಸುಲ್ತಾನರು ತುಕಡಿಗಳನ್ನು ಸಣ್ಣಸಣ್ಣದಾಗಿ ವಿಭಜಿಸಿ ಖಂಡಸಮರ ಆರಂಭಿಸಿದರು.

ಅಹಮದನ ಹೊಡೆತ ಬಲವಾಗಿ ವಿಜಯನಗರದ ನೂರಾರು ಸೈನಿಕರು ಸತ್ತು ಉರುಳಿದರು. ವೀರಾವೇಶಗೊಂಡ ಇರುಗನಾಯಕರು, ಪರಶುರಾಮ ನವತಾರ ತಾಳಿ, ಶತ್ರುಸೈನ್ಯವನ್ನು ತುಂಡರಿಸಲಾರಂಭಿಸಿದರು. ಯುವರಾಜ ಬುಕ್ಕರಾಯರೂ ನಾಯಕರಿಗೆ ಬೆಂಬಲವಾದರು.

ಖಂಡಸಮರ ಸಾಗಿರಲು ಒಬ್ಬ ತರುಣ ಸೈನಿಕ ರಾಮಭಟ್ಟರನ್ನು ಎದುರಿಸಿದ್ದ. ಸೈನಿಕನೂ ಭಟ್ಟರಷ್ಟೇ ಯುದ್ಧವಿದ್ಯಾಪ್ರವೀಣನಾಗಿದ್ದನೆಂದು ಕಾಣುತ್ತದೆ. ಉಭಯರೂ ಕತ್ತಿಯೇಟು ತಪ್ಪಿಸಿಕೊಳ್ಳುವುದರಲ್ಲಿಯೇ ಹೊತ್ತುಗಳೆಯಲಾರಂಭಿಸಿದರು.

ಅರ್ಧಗಂಟೆ ಈ ಚೆಲ್ಲಾಟ ಸಾಗಲು ಸೈನಿಕ ತನ್ನ ಮುಂಡಾಸು ಕಿತ್ತೊಗೆದು,

" ನಾನು ಯಾರು ನೋಡು ನಮ್ಮಕ್ ಹರಾಮ್ " ಎಂದು ಕೂಗಿದ.

ಸೈನಿಕನ ಮುಖಾವಲೋಕನ ಮಾಡಿದ ರಾಮಭಟ್ಟ ಸ್ತಂಭೀಭೂತನಾದ. ಅವನ ಕೈಯಲ್ಲಿದ್ದ ಕೃಪಾಣ ಜಾರಿ ಕೆಳಗೆ ಬಿತ್ತು.

ಅದೇ ಸಮಯ ಸಾಧಿಸಿದ ಸೈನಿಕ ರಾಮಭಟ್ಟನ ಎದೆಗೆ ತನ್ನ ಕೃಪಾಣ ನೆಟ್ಟ

" ಕೊನೆಗೆ ನೀನೇ ನನ್ನ ಮೃತ್ಯುವಾದೆಯಾ ರೋಷನಾರಾ "

ಎನ್ನುತ್ತಾ ರಾಮಭಟ್ಟ ನೆಲಕ್ಕುರುಳಿದ.

ಅವನನ್ನು ಎಡಗಾಲಿನಲ್ಲಿ ಒದೆದು, ಅವನ ಮುಖದ ಮೇಲೆ ಉಗುಳಿದ ರೋಷನಾರಾ,

" ಸಾಯಿ ಸೈತಾನ್."

ಎಂದವಳೇ

" ಯಾ – ಖುದಾ, ಪರವರ್ದಿಗಾರ್ – ನಾನು ಸತ್ತೆ "

ಎಂದು ಚೀರಿದಳು.

ದುರ್ಗಾವತಾರ ತಾಳಿದ ಒಬ್ಬ ಸ್ತ್ರೀ ರೋಷನಾರಾ ಬೆನ್ನಿಗೆ ಬಾಕು ನೆಟ್ಟಿದ್ದಳು.

ಸ್ತ್ರೀ ಧಾವಿಸಿ ರಾಮಭಟ್ಟನ ಬಳಿ ಬಂದು, ಮೊಣಕಾಲೂರಿ ಕುಳಿತು, ಅವನ ರಕ್ತಸ್ನಾತ ದೇಹವನ್ನು ತನ್ನ ತೊಡೆಯಮೇಲಿಟ್ಟುಕೊಂಡಳು.

ಎಲ್ಲಿಂದಲೋ ಹಾರಿಬಂದ ಒಂದು ಭಲ್ಲೆ ಸ್ತ್ರೀಯ ಬೆನ್ನನ್ನಿರಿಯಿತು. ಅವಳ ಎದೆಗುಂಡಿಗೆಯಿಂದ ರಕ್ತ ಚಿಮ್ಮಲಾರಂಭಿಸಿತು.

ರಾಮಭಟ್ಟ ಮೆಲ್ಲನೆ ಕಣ್ತೆರದು ನೋಡಿ,

“ವಿಜಯಾ – ಯುದ್ಧ – ಮುಗಿದ ಕೂಡಲೆ – ನಾನೇ ನಿನ್ನ ಬಳಿ ಬಂದು – ನಿನ್ನ ಕ್ಷಮೆ – ಬೇಡಬೇಕೆಂದಿದ್ದೆ – ನೀನೇ ಬಂದೆಯಾ ?”

“ಸ್ವಾಮಿ – ನೀವು ಪುಣ್ಯಜೀವಿಗಳು – ವಿಜಯನಗರ ನಿಮ್ಮಿಂದ ಧನ್ಯವಾಯಿತು.”

ರಾಮಭಟ್ಟ ಆನಂದಭಾಷ್ಪ ಸುರಿಸುತ್ತ,

“ದೊರೆಗಾಗಿ – ಧರ್ಮಕ್ಕಾಗಿ – ದೇಶಕ್ಕಾಗಿ ಪ್ರಾಣ ಒಪ್ಪಿಸುತ್ತಿದ್ದೇನೆ. ವಿಜಯಾ – ನೀನು ನನ್ನನ್ನು ಪುಣ್ಯಜೀವಿ ಎಂದು ಕರೆದೆ – ಇದಕ್ಕಿಂತ – ಹೆಚ್ಚಿನ ಭಾಗ್ಯ ಬೇಕೇ ? ಇನ್ನು ನಿಶ್ಚಿಂತನಾಗಿ ಮೃತ್ಯುಮಂದಿರಕ್ಕೆ ಹೋಗುತ್ತೇನೆ.”

“ನೀವೊಬ್ಬರೇ ಹೋಗಲು ನಾನು ಬಿಡುವೆನೇ – ಬಾಳುಬದುಕಿನಲ್ಲಿ ನಾನು ನಿಮ್ಮ ಸಹಧರ್ಮಿಣಿ – ಸಾವಿನಲ್ಲೂ ನಾನು ನಿಮ್ಮ ಸಹಧರ್ಮಿಣಿ”

ಎನ್ನುತ್ತಾ ಅವನ ಮೇಲೆ ಬಿದ್ದು ಬಿಟ್ಟಳು.

“ವಿಜಯಾ – ನಿನಗೂ ಘಾತ..........”

“ಇಲ್ಲ ಸ್ವಾಮಿ – ನನಗೂ ಮಂದಿರ ಪ್ರವೇಶ..........”

ಎನ್ನುತ್ತಾ ಕಣ್ಣುಮುಚ್ಚಿದಳು.

೨೩

ವಿಜಯನಗರದ ಪ್ರಭುಗಳೊಬ್ಬರನ್ನು ಭೂಗತ ಮಾಡಿಬಿಟ್ಟರೆ, ಇಡಿಯ ಸೈನ್ಯ ದಿಕ್ಕುಪಾಲಾಗುತ್ತದೆಂದು ಸುಲ್ತಾನರು ಭಾವಿಸಿ, ತಮ್ಮ ಸೈನ್ಯ

ಬಲವನ್ನೆಲ್ಲಾ ಪ್ರಭುಗಳ ಮೇಲೆ ಪ್ರಯೋಗಿಸಿದರು. ಪ್ರಭುಗಳು ಸೆಣಸುತ್ತಿದ್ದ ಭಾಗ ದುರ್ಬಲವಾಗುತ್ತಿದ್ದುದನ್ನು ಕಂಡ ಇರುಗನಾಯಕರು, ತಮ್ಮ ತುಕಡಿಯೊಂದಿಗೆ ಅತ್ತ ಧಾವಿಸಿದರು.

ಅಹಮುದ್ ತನ್ನ ತುಕಡಿಯೊಂದಿಗೆ ಪ್ರಭುಗಳ ಕಡೆಗೆ ಬರುತ್ತಿದ್ದುದನ್ನು ಕಂಡ ಗುಂಡನಾಯಕರು, ಅಹಮುದನ ಪ್ರಗತಿಗೆ ಅಡ್ಡನಿಂತು ಸೆಣಸಲಾರಂಭಿಸಿದರು.

ಗುಂಡನಾಯಕರ ಕದನಕೌಶಲ್ಯ, ಅವರ ವ್ಯೂಹರಚನೆ, ವ್ಯೂಹಭೇದನಗಳನ್ನೀಕ್ಷಿಸುತ್ತಿದ್ದ ಅಹಮುದ್ ತನ್ನ ನೀಳ್ಗತ್ತಿಯನ್ನೊಮ್ಮೆ ಬೀಸಿ, ಗುಂಡನಾಯಕರಿಗೆ ಸಲಾಮ್ ಮಾಡಿ

" ಮುಬಾರಕ್ – ಮೇರಾ ಷೇರ್ "

ಎಂದು ತನ್ನ ಸೈನಿಕರನ್ನು ಹಿಂದೆ ನಿಲ್ಲಿಸಿ ದ್ವಂದ್ವಯುದ್ಧಕ್ಕಾಗಿ ಮುನ್ನುಗ್ಗಿದ.

ಕ್ಷಣಮಾತ್ರದಲ್ಲಿ ಅವನ ಇಂಗಿತಗ್ರಹಿಸಿದ ಗುಂಡನಾಯಕರು ತಮ್ಮ ಸೈನಿಕರನ್ನು ಹಿಂದೆ ಸರಿಸಿ,

" ನಿಮ್ಮ ಅಂಭಿವಂದನೆಗಳಿಗೆ ಮರುವಂದನೆ ಸ್ವೀಕರಿಸಿ ಅಹಮುದ್. ನಿಮ್ಮಂಥ ರಣವಿಕ್ರಮನೊಂದಿಗೆ ಕಾದುವುದೇ ನನಗೆ ಹೆಮ್ಮೆ."

ಮಹಾವೀರರಿಬ್ಬರ ಸೆಣಸಾಟ ನೋಡುತ್ತಾ ದಂಗುಬಡಿದಂತೆ ಉಭಯ ಸೈನ್ಯಗಳೂ ನಿಂತವು.

' ಇವರೇನು – ನಿಜವಾಗಿ ಕಾದುತ್ತಿರುವರೋ, ಚೆಲ್ಲಾಟವಾಡುತ್ತಿರುವರೋ' ಎನ್ನುವಷ್ಟು ಚಮತ್ಕಾರವಾಗಿ ಕದನ ಸಾಗಿತು.

ಅಹಮುದ್ ಕತ್ತಿ ಬೀಸಿದನೆಂದರ ವಾತಾವರಣವೇ ಗಡಗಡ ನಡುಗಿದಂತೆ ಶಬ್ದವಾಗುತ್ತಿತ್ತು.

ಮಹಾಪ್ರಭೂಗಳೂ, ಇರುಗನಾಯಕರೂ, ಸುಲ್ತಾನರನ್ನೂ ಅವರ ಪಡೆಯನ್ನೂ ಹಿಂದುಹಿಂದಕ್ಕೆ ಅಟ್ಟುತ್ತಿದ್ದರು.

ಸ್ವಪಕ್ಷದ ಸೈನಿಕರು ತರಗೆಲೆಗಳಂತೆ ಉದುರುತ್ತಿದ್ದುದ್ದನ್ನು ನೋಡುತ್ತಿದ್ದ ಸುಲ್ತಾನರ ಆತ್ಮಸ್ಥೈರ್ಯ ಅಲುಗಾಡಲಾರಂಭಿಸಿತು.

ಗುಂಡನಾಯಕರ ಕತ್ತಿಯ ಪೆಟ್ಟು ಅಹಮುದನ ರಿಕಾಪಿಗೆ ಬಿದ್ದು, ಅವನ ಕಡಿವಾಣ ಕತ್ತರಿಸಿ ಹೋಯಿತು. ಕುದುರೆ ಅಸ್ತವ್ಯಸ್ತವಾಗದಂತೆ

ಅಹಮದ್ ಅದನ್ನು ತನ್ನ ವಾಮಹಸ್ತದಲ್ಲಿ ಹಿಡಿದು, ಹತೋಟಿಗೆ ತಂದು ಕೊಂಡು, ಹೋರಾಟ ಮುಂದುವರಿಸಿದ.

ಅಹಮದನ ನಿರೋಧಶಕ್ತಿಯನ್ನು ಕಂಡು ತಲೆದೂಗಿದ ಗುಂಡ ನಾಯಕರು,

" ಬೇರೆ ಕುದುರೆ ತೆಗೆದುಕೊಳ್ಳಿ ಅಹಮದ್ " ಎಂದರು.

ವೀರಾವೇಶಗೊಂಡಿದ್ದ ಅಹಮದರ ಕಿವಿಗಳಿಗೆ ನಾಯಕರ ಮಾತು ಬೀಳಲೇ ಇಲ್ಲ. ತುಫಾನಿನ ವೇಗದಲ್ಲಿ ಅಹಮದ್ ಕುದುರೆಯನ್ನು ನಾಯಕರ ಕಡೆಗೆ ನುಗ್ಗಿಸಿ ' ಇನ್‌ಷಾ ಅಲ್ಲಾ ' ಎಂದು ಘೋಷಿಸಿ ಕತ್ತಿ ಪ್ರಯೋಗಿಸಿದ.

ಗುಂಡನಾಯಕರ ಕುದುರೆ ಕೆಳಗುರುಳಿತು. ಅದರೊಂದಿಗೆ ನೆಲಕ್ಕುರು ಳಿದ ನಾಯಕರು ಚಂಗನೆದ್ದು, ನಿಂತೇ ಹೋರಾಡಲಾರಂಭಿಸಿದರು.

ತನ್ನ ಕುದುರೆಯಿಂದ ಧುಮ್ಮಿಕ್ಕಿದ ಅಹಮದ್ ತಾನೂ ನಿಂತೇ ಕದನ ಮುಂದುವರೆಸಿದ.

ಸಮಾನ ಬಲ, ಸಮಾನ ಕೌಶಲ್ಯದ ಇಬ್ಬರಿಗೂ ಗೆಲುವು ಮರೀಚಿಕೆ ಯಾಯಿತು.

ಇಬ್ಬರಿಗೂ ದಣಿವು ಆವರಿಸಿತ್ತು.

ಆಪಾದಮಸ್ತಕ ಬೆವರಿನ ಸ್ನಾನವಾಗಿತ್ತು.

ಕ್ಷಿಪ್ರವಾಗಿ ಹೋರಾಟ ಮುಗಿಸಬೇಕೆಂದು ನಿರ್ಧರಿಸಿದ ಗುಂಡ ನಾಯಕರು.

' ಜಯ್ ಭುವನೇಶ್ವರಿ '

ಎಂದು ವೀರಘೋಷಮಾಡಿದವರೇ,

" ಭಗವಂತನನ್ನು ಸ್ಮರಿಸಿಕೊಳ್ಳಿ ಅಹಮದ್ "

ಎಂದು ನುಗ್ಗಿದರು.

ಫಲಪುಷ್ಪಭರಿತವಾಗಿದ್ದ ಹೆಮ್ಮರ ಉರುಳಿದಂತೆ ಅಹಮದರು ಉರುಳಲು, ಸುಲ್ತಾನರ ಕೆಲವು ಸೈನಿಕರು ನಾಯಕರ ಮೇಲೆ ಬಿದ್ದರು.

ನಾಯಕರು ಅವರೊಂದಿಗೆ ಕಾದುತ್ತಾ ಅವರನ್ನು ನದಿಯ ದಂಡೆಗೆ ಅಟ್ಟಿಸಿಕೊಂಡು ಹೋದರು.

ಈ ವೇಳೆಗೆ ಪ್ರಭುಗಳಿಂದ ಪೂರಾ ಹೊಡೆತ ತಿಂದಿದ್ದ ಸುಲ್ತಾನರು

ಅದೃಶ್ಯರಾಗಿದ್ದರು. ಅಹಮುದನ ಸಾವು, ಸುಲ್ತಾನರ ಪರಾರಿ ಕಂಡ ಬಹಮನಿ ಸೈನಿಕರು ದಿಕ್ಕುಪಾಲಾಗಿ ಓಡಲಾರಂಭಿಸಿದರು. ನೂರಾರು ಜನ ಹೊಳೆ ಬಿದ್ದರು.

ವಿಜಯನಗರದ ನೆಲದ ಮೇಲೆ ಒಬ್ಬನೇ ಒಬ್ಬ ಬಹಮನಿಯ ಸೈನಿಕನೂ ಉಳಿಯಲಿಲ್ಲ.

ಇಡಿಯ ವನಪ್ರದೇಶ ಹೆಣಗಳ ರಾಶಿಯಿಂದ ತುಂಬಿಹೋಯಿತು.

ಇರುಗನಾಯಕರು ಓಡಿಬಂದು ಗುಂಡನಾಯಕರನ್ನಪ್ಪಿ,

" ಇಂದಿನ ಮಹಾವಿಜಯ ನಿಮ್ಮದು " ಎಂದರು.

ಎದುರಿಗೆ ಸತ್ತುಬಿದ್ದಿದ ವಿಜಯನಗರದ ಸೈನಿಕರ ಹೆಣಗಳ ರಾಶಿಯ ಕಡೆಗೆ ಬೊಟ್ಟುಮಾಡಿ ಗುಂಡನಾಯಕರು

" ವಿಜಯ ದೊರಕಿಸಿಕೊಟ್ಟವರು ಅವರು, ಪ್ರಭುಗಳೆಲ್ಲಿ ?" ಎಂದರು.

" ಅವರನ್ನು ನಾನೇ ಶಿಬಿರಕ್ಕೆ ಕಳಿಸಿಕೊಟ್ಟೆ."

ಎಂದು ಅಹಮುದನ ಮೃತದೇಹವಿದ್ದ ಬಳಿಗೆ ಬಂದು, ತಮ್ಮ ಸೈನಿಕರಿಗೆ,

" ಈ ಮಹಾವೀರನನ್ನು ಸಕಲ ಮರ್ಯಾದೆಯೊಡನೆ ಇಲ್ಲಿಯೇ ಸಮಾಧಿಮಾಡಿ " ಎಂದರು.

ಹೆಣಗಳ ರಾಶಿಯಲ್ಲಿ ಇರುಗನಾಯಕರು ರಾಮಭಟ್ಟನ ಪಾರ್ಥಿವ ಶರೀರವನ್ನರಸಲಾರಂಭಿಸಿದರು.

ಸತಿಪತಿಯರಿಬ್ಬರೂ ಒಂದೇ ಎಡೆ ಮೃತರಾಗಿ ಬಿದ್ದುದನ್ನು ಕಂಡು ಇರುಗನಾಯಕರು ರಕ್ತಸ್ನಾತವಾಗಿದ್ದ ರಾಮಭಟ್ಟನ ಮುಖ ಒರೆಸಿ ನೋಡಿ,

" ನಿಸ್ಸಂದೇಹವಾಗಿ ಇವರೇ ರಾಮಭಟ್ಟರು " ಎಂದರು.

" ಇವರಿಗಿಲ್ಲೇ ಅಗ್ನಿ ಕಾಣಿಸೋಣವೇ ನಾಯಕರೇ."

" ಬೇಡ ಬೇಡ – ಈ ಮಹಾಪುರುಷ, ಮಹಾಸತಿಯರ ಕಳೇಬರಗಳನ್ನು ರಾಜಧಾನಿಗೆ ತೆಗೆದುಕೊಂಡು ಹೋಗೋಣ. ಅಲ್ಲಿ ವಿರೋಚಿತವಾಗಿ ಇವರ ಸಂಸ್ಕಾರವಾಗಲಿ "

ಎಂದು ಇರುಗನಾಯಕರು ತಡೆತಡೆದು ನುಡಿದರು.

೨೪

ಯುದ್ಧರಂಗದಿಂದ ನಾಗಾಲೋಟದಲ್ಲಿ ಬಂದ ರಾಹುತ ತಂದಿತ್ತ ಪತ್ರ ನೋಡಿ ಶ್ರೀ ಸಾಯಣರಿಗೆ ಏಕಕಾಲದಲ್ಲಿ ಆನಂದಾಶ್ಚರ್ಯಗಳಾದುವು. ಕಾಗದದ ಪೂರ್ಣ ತಾತ್ಪರ್ಯ ಅವರಿಗರ್ಥವಾಗದಿರಲು ಮುದ್ದಪ್ಪನಾಯಕರ ಕೈಗಿತ್ತು

"ಇದರ ಅರ್ಥವೇನು ನಾಯಕರೇ ?" ಎಂದು ಕೇಳಿದರು.

ಒಮ್ಮೆ ಮನಸ್ಸಿನಲ್ಲೇ ಪತ್ರ ಓದಿಕೊಂಡ ಮುದ್ದಪ್ಪನಾಯಕರು, ಇನ್ನೊಮ್ಮೆ ಗಟ್ಟಿಯಾಗಿ ಪತ್ರ ಓದಿದರು.

"ವಿಜಯನಗರ ಸಾಮ್ರಾಜ್ಯದ ಮಹಾಮಂತ್ರಿ, ಪರಮ ಪೂಜ್ಯ, ಶ್ರೀ ಶ್ರೀ ಸಾಯಣಾಚಾರ್ಯರ ದಿವ್ಯಸನ್ನಿಧಿಗೆ, ವಿಜಯನಗರದ ಚಕ್ರವರ್ತಿಗಳಾದ ಶ್ರೀಶ್ರೀ ಇಮ್ಮಡಿ ಹರಿಹರರಾಯರು ಮಾಡುವ ಭಕ್ತಿಪೂರ್ವಕ ಪ್ರಣಾಮಗಳು,

ಶ್ರೀ ವಿರೂಪಾಕ್ಷಸ್ವಾಮಿ, ಶ್ರೀ ಭುವನೇಶ್ವರಿ ದೇವಿಯರ ಕಟಾಕ್ಷದಿಂದಲೂ, ತಮ್ಮ ಆಶೀರ್ವಾದದಿಂದಲೂ ಯುದ್ಧದಲ್ಲಿ ನಮಗೆ ಪೂರ್ಣ ಜಯ ದೊರೆತು, ಸುಲ್ತಾನರ ಸೈನ್ಯ ಪುಡಿಗುಟ್ಟಿ ಹೋಯಿತೆಂದು ತಿಳಿಸಲು ಸಂತೋಷಿಸುತ್ತೇವೆ. ಸುಲ್ತಾನರ ಪಕ್ಷದ ಅಸಹಾಯ ಶೂರ ಅಹಮದ್ ಖಾನರು ನಮ್ಮ ವೀರಶಿರೋಮಣಿ ಗುಂಡನಾಯಕರ ಕತ್ತಿಗೆರವಾದಮೇಲೆ ಸುಲ್ತಾನರ ಸೈನ್ಯದ ಜಂಘಾಬಲವೇ ಉಡುಗಿಹೋಯಿತು. ಸೈನ್ಯವನ್ನು ನಾವು ನದಿಯವರೆಗೆ ಅಟ್ಟಿಸಿಕೊಂಡು ಹೋದೆವು. ಸಾಯದೆ ಉಳಿದಿದ್ದವರು ನದಿಗೆ ಬಿದ್ದು ಜೀವದೊಂದಿಗೆ ಪಾರಾದರು. ಸುಲ್ತಾನರಿಗೂ ಇದೇ ಗತಿಯಾಯಿತೆಂದು ಕಾಣುತ್ತದೆ.

ಈ ಮಹಾವಿಜಯದಿಂದಾಗಿರುವ ಸಂತೋಷವನ್ನು ಅನುಭವಿಸದಂತೆ ಕೆಲವು ಘಟನೆಗಳು ನಡೆದಿವೆ. ಸಾಮ್ರಾಜ್ಯದ ಅಸ್ತಿತ್ವ ಉಳಿಸಲು ತ್ರಿಕರಣಪೂರ್ವಕವಾಗಿ ಶ್ರಮಿಸಿ, ಯುದ್ಧರಂಗದಲ್ಲಿ ಪುಣ್ಯದೇವತೆಯಂತೆ ನಮ್ಮ ಬೆನ್ನು ಕಾದ ಒಬ್ಬ ಮಹಾಪುರುಷ, ಅವರ ಸತೀರತ್ನ ಇಬ್ಬರ ಪಾರ್ಥಿವ ಶರೀರಗಳನ್ನು ನಾವು ಜತೆಯಲ್ಲಿ ತರುತ್ತಿದ್ದೇವೆ.

ರಾಜಧಾನಿ ಮೌನದಿಂದಿದ್ದು, ಪೂಜೆ, ಪ್ರಾರ್ಥನೆಗಳನ್ನು ಎಲ್ಲ ದೇವಾಲಯ, ಮಸೀದಿಗಳಲ್ಲಿಯೂ ಸಲ್ಲಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರತಕ್ಕದ್ದು. ಪರಮದುಃಖದ ಈ ಸಮಯದಲ್ಲಿ ನಾವು ಉತ್ಸವದ ಉತ್ಸಾಹವನ್ನಾಗಲೀ ಕೋಲಾಹಲವನ್ನಾಗಲಿ ಸಹಿಸಲಾರೆವು. ಈ ಬಗ್ಗೆ ನಮ್ಮ ಪ್ರಜಾವರ್ಗಕ್ಕೆ ಸೂಕ್ತ ಸೂಚನೆಗಳನ್ನು ತಾವೇ ಕೊಡತಕ್ಕದ್ದು."

"ಮಹಾಪುರುಷ– ಅವರ ಸತೀರತ್ನ ಯಾರು ಮಹಾಮಂತ್ರಿಗಳೇ?"

ಗದ್ಗದ ಕಂಠಿತರಾಗಿದ್ದ ಸಾಯಣರು

"ರಾಮಭಟ್ಟರು, ಅವರ ಪತ್ನಿ ವಿಜಯಲಕ್ಷ್ಮೀದೇವಿ ಇರಬೇಕು."

"ಕೊನೆಗೂ ಭಟ್ಟರೇ ಗೆದ್ದರು."

"ಈ ಸುದ್ದಿಯನ್ನು ಉಚಿತರೀತಿಯಲ್ಲಿ ನೀವೇ ಸಿಂಗಮಭಟ್ಟರಿಗೆ ಮುಟ್ಟಿಸಬೇಕು ನಾಯಕರೇ—ಇಂಥ ಮಹಾಪುರುಷನನ್ನು ಕಳೆದು ಕೊಂಡುದು ನಮ್ಮ ದೌರ್ಭಾಗ್ಯ—ದೊಡ್ಡ ಅಮ್ಮಾಜಿಯವರಿಗೂ, ರಾಣಿಯರಿಗೂ ಈ ವಿಷಯ ತಿಳಿಸಿಬಿಡಿ– ನಾವು ಸ್ನಾನಕ್ಕೆ ತೆರಳುತ್ತೇವೆ."

ಎಂದು ಸಾಯಣರು ಮೇಲಕ್ಕೆದ್ದರು.

ಊರಿನ ಹೆಬ್ಬಾಗಿಲಿನಲ್ಲಿ ಶ್ರೀ ಸಾಯಣರು, ಲಕ್ಷ್ಮೀಧರ, ಮುದ್ದಪ್ಪ ನಾಯಕರು, ಪ್ರಮುಖನಾಗರಿಕರು, ಪ್ರಜಾಜನರು, ಪ್ರಭುಗಳ ಆಗಮನ ನಿರೀಕ್ಷಿಸುತ್ತ ನಿಂತಿದ್ದರು.

ಮೊದಲು ಗಾರವ ಪಡೆ ಬಂದಿತು.

ಅದರ ಹಿಂದೆ ಪುಷ್ಪಗಳಿಂದಲಂಕೃತವಾಗಿದ್ದ ವಿಜಯನಗರದ ರಾಷ್ಟ್ರ ಪತಾಕೆಯಿಂದಾವೃತವಾಗಿದ್ದ ರಥ; ರಥದ ಇಕ್ಕೆಲಗಳಲ್ಲಿ ಅಶ್ವಾರೋಹಿಗಳಾದ ಇರುಗನಾಯಕರು, ಗುಂಡನಾಯಕರು.

ರಥದ ಹಿಂದೆ ಅಶ್ವಾರೋಹಿಗಳಾಗಿದ್ದ ಮಹಾಪ್ರಭುಗಳು, ಯುವ ರಾಜರು, ರಾಜಕುಮಾರರು.

ಅವರ ಹಿಂದೆ ಅಶ್ವಪಡೆ.

ಅಶ್ವಪಡೆಯ ಹಿಂದೆ ಪದಾತಿಗಳು.

ಮೆರವಣಿಗೆ ಊರುಬಾಗಿಲಿಗೆ ಬಂದಕೂಡಲೆ ಪ್ರಭುಗಳು, ರಾಜ

ಕುಮಾರರು ಅಶ್ವಗಳಿಂದಿಳಿದು ಶ್ರೀ ಸಾಯಣರ ಪಾದಗಳಿಗೆ ಮಣಿದರು.

ಸಾಯಣರ ಬಳಿ ದುಃಖಿಸುತ್ತಿದ್ದ ಸಿಂಗಮಭಟ್ಟರನ್ನು ಹತ್ತಿರ ಕರೆದ ಪ್ರಭುಗಳು,

"ರಾಮಭಟ್ಟರನ್ನೂ ಅವರ ಮಹಾಸತಿಯನ್ನೂ ಈ ಸ್ಥಿತಿಯಲ್ಲಿ ತಂದಿದ್ದೇವೆ ಭಟ್ಟರೇ."

ಎಂದನ್ನುತ್ತಿದ್ದಂತೆ ಪ್ರಭುಗಳ ಕಂಗಳಿಂದ ಅಶ್ರುಪ್ರವಾಹ ಹೊರಟಿತು.

ದುಃಖೋಪಶಮನ ಮಾಡಿಕೊಂಡ ಪ್ರಭುಗಳು ಸಾಯಣರಿಗೆ,

"ಈ ದಂಪತಿಗಳಿಗೆ ವೀರೋಚಿತವಾದ ಸಂಸ್ಕಾರವಾಗಲಿ. ಇನ್ನು ಹತ್ತು ದಿನಗಳು ರಾಜಧಾನಿ ದುಃಖದ ದಿನಗಳೆಂದು ಪರಿಗಣಿಸಲಿ. ಹನ್ನೆರಡನೆಯ ದಿನ ಸಮಸ್ತ ಜಾತಿ, ಮತಸ್ಥರಿಗೂ ಅನ್ನಸಂತರ್ಪಣೆಯಾಗಲಿ. ರಾಮಭಟ್ಟರು, ಅವರ ಮಹಾಸತಿಯ ಚಿತಾಭಸ್ಮದ ಮೇಲೆ ವೀರಗಲ್ಲು ನೆಡಸಿ, ಅವರು ಸಾಮ್ರಾಜ್ಯಕ್ಕೆ ಸಲ್ಲಿಸಿದ ದಿವ್ಯಸೇವೆ ಶಾಸನದಲ್ಲಿ ಉಲ್ಲಿಖಿತವಾಗಲಿ."

ಎಂದು ಸೂಚಿಸಿ ಮುನ್ನಡೆದರು.

ರಾಮಭಟ್ಟ, ವಿಜಯಲಕ್ಷ್ಮಿಯರ ಪಾರ್ಥಿವ ಶರೀರದ ಅಂತ್ಯವಿಧಿಗಳಿಗೆ ತಕ್ಕ ವ್ಯವಸ್ಥೆಯಾಯಿತು.

ರಾಜಮಾತೆ ಗೌರಾಂಬಿಕಾದೇವಿಯವರು, ರಾಣಿಯರು ಬಂದು ಮಹಾಸತಿಯನ್ನು ಹರಿದ್ರಾಕುಂಕುಮ, ಪುಷ್ಪಗಳಿಂದ ಅರ್ಚಿಸಿದರು.

ಊರಿಗೆ ಊರೇ ಭಟ್ಟರಿಗೂ, ಅವರ ಪತ್ನಿಗೂ ಅಂತಿಮಗೌರವ ಸಲ್ಲಿಸಿತು.

ಸಿಂಗಮಭಟ್ಟ ಚಿತೆಗೆ ಬೆಂಕಿಯನ್ನಿಡುವ ವೇಳೆಗೆ ಸಂಜೆಯಾಗಿತ್ತು.

ಆ ಪ್ರಶಾಂತ ಸಂಧ್ಯಾಸಮಯದಲ್ಲಿ ರಾಮಭಟ್ಟ, ವಿಜಯಲಕ್ಷ್ಮಿಯರ ಪಾರ್ಥಿವ ದೇಹಗಳು ಅಗ್ನಿದಗ್ಧವಾಗಿ, ಪಂಚಭೂತಗಳೊಂದಿಗೆ ಬೆರೆತವು.

ಎಲ್ಲವನ್ನೂ ನೋಡುತ್ತ ನಿಂತಿದ್ದ ಇರುಗನಾಯಕರು, ದುಃಖ ಸಹಿಸಲಾಗದೆ ಸ್ಮೃತಿತಪ್ಪಿ ಕೆಳಗೆ ಬಿದ್ದುಬಿಟ್ಟರು.

೨೫

ಇಮ್ಮಡಿ ಹರಿಹರರಾಯರ ಹೊಡೆತದಿಂದ ಕೆಲಕಾಲ ಬಹಮನಿಯವರು ಚೇತರಿಸಿಕೊಳ್ಳಲಾಗಲಿಲ್ಲ. ಯುದ್ಧದಿಂದಾಗಿದ್ದ ಅಪಾರ ನಷ್ಟವನ್ನು ತುಂಬಿಕೊಂಡು ಒಳಾಡಳಿತವನ್ನು ಸರಿಪಡಿಸುವುದರಲ್ಲೇ ಫಿರೋಜ್‌ಷಹರ ಕಾಲ ವ್ಯಯವಾಯಿತು. ವಿಜಯನಗರದವರ ಮೇಲೆ ಇನ್ನೊಮ್ಮೆ ಸೆಣಸುವ ಯೋಚನೆ ಅವರ ಕನಸುಮನಸ್ಸಿಗೆ ಬರದಾಯಿತು.

ಈ ಅವಧಿಯನ್ನು ವಿಜಯನಗರದ ಪ್ರಭುಗಳು ರಾಷ್ಟ್ರದ ಹಲವಾರು ಅಭಿವೃದ್ಧಿ ಕಾರ್ಯಗಳ ನಿರ್ವಹಣೆಗೆ ಚೆನ್ನಾಗಿ ಬಳಸಿಕೊಂಡರು.

ರಾಜಕುಮಾರರಿಗೆ ಆಡಳಿತಾನುಭವ ಬರಲೆಂದು ಮಹಾಪ್ರಭುಗಳು ಅವರನ್ನು ರಾಜ್ಯದ ಬೇರೆ ಬೇರೆ ವಿಭಾಗಗಳ ರಾಜಪ್ರತಿನಿಧಿಗಳಾಗಿ ಕಳಿಸಲು ನಿಶ್ಚಯಿಸಿದರು. ದೇವರಾಯನನ್ನು ಉದಯಗಿರಿಗೂ, ವಿರೂಪಾಕ್ಷನನ್ನು ತೊಂಡಮಂಡಲ, ಚೋಳ, ಪಾಂಡ್ಯ ಪ್ರಾಂತ್ಯಗಳಿಗೂ, ಚಿಕ್ಕರಾಯನನ್ನು ಅರಗರಾಜ್ಯಕ್ಕೂ ಕಳಿಸಿಕೊಟ್ಟು ಯುವರಾಜ ಬುಕ್ಕರಾಯನನ್ನು ತಮ್ಮ ಜತೆಯಲ್ಲಿಯೇ ಇಟ್ಟುಕೊಂಡರು.

ಕರ್ನಾಟಕ ವಿದ್ಯಾವಿಲಾಸ ಎಂಬ ಬಿರುದು ಹೊತ್ತಿದ್ದ ಮಹಾಪ್ರಭುಗಳ ಆಸ್ಥಾನದಲ್ಲಿ ಕನ್ನಡ, ಸಂಸ್ಕೃತ ಕವಿಗಳಿಗೆ ವಿಶೇಷ ಪುರಸ್ಕಾರ ದೊರೆಯುತ್ತಿತ್ತು. ವರ್ಷಕ್ಕೊಮ್ಮೆ ಪ್ರಭುಗಳ ಸಮ್ಮುಖದಲ್ಲಿ **'ಕವಿಸಭೆ'** ಸೇರುತ್ತಿತ್ತು. ಕವಿಗಳಿಂದಲೇ ಅವರ ಕೃತಿಗಳನ್ನು ಓದಿಸಿ ಕೇಳಿ, ಪ್ರಭುಗಳು ಸಂತೋಷಪಟ್ಟುಕೊಂಡು ಅವರಿಗೆ ಉಚಿತ ಸನ್ಮಾನಗಳನ್ನೂ ಬಿರುದು ಬಾವಲಿಗಳನ್ನೂ ದಯೆಪಾಲಿಸುತ್ತಿದ್ದರು.

ಮುದ್ದಣ್ಣದಂಡನಾಯಕರ ಆಶ್ರಿತನಾಗಿದ್ದ **ಮಧುರ ಕವಿಯ** ನೂತನ ಕೃತಿವಾಚನ ಒಂದು ದಿನ 'ಕವಿಸಭೆ'ಯಲ್ಲಿ ಏರ್ಪಾಟಾಯಿತು.

ಮಧುರ ಕವಿ ಪ್ರಭುಸಮ್ಮುಖದಲ್ಲಿ ನನ್ನ **'ಧರ್ಮನಾಥ ಪುರಾಣ'**ದ ಕೆಲವು ಭಾಗಗಳನ್ನು ಓದಲಾರಂಭಿಸಿದ.

"ಕವಿತಾಶ್ರೀಗೆ ಜನಾರ್ದನಂ ಪುರುಷರತ್ನಂ ಪುಷ್ಪದಂತಂ ರಿಪು
ಪ್ರವರೋತ್ತುಂಗ ಗಜಾಂಕುಶಂ ಮನಸಿಜಾಕಾರಂ ಸಭಾಮಧ್ಯಲ
ಬ್ಧವರ ಶ್ರೀ ವಿಜಯಂ ಸಮಸ್ತ ಸುಜನೋತ್ತಂಸಂ ಯಶಶ್ಚಂದ್ರಸು
ಪ್ರವಲೀಲಾರಥನೇಮಿಯೆಂದು ಮಧುರಂ ಪೆತ್ತ ಮಹಾಖ್ಯಾತಿಯಂ"

'ಇದು ಸಕಲಸುಕವಿಜನಮನಸ್ಸುಧಾಕರಕಾಂತಾಸಂತತ ದ್ರವೀಕರಣ ಕಾರಣ ಕರ್ಣಾಟಕವಿತಾಕಲಾವಿಲಾಸವಿಧು ಮಧುರಕವೀಂದ್ರ ನಿರ್ಮಿತ ಮಪ್ಪ ಧರ್ಮನಾಥ ಪುರಾಣ'

ಎಂದು ತನ್ನ ಮತ್ತು ತನ್ನ ಕಾವ್ಯದ ಪರಿಚಯಮಾಡಿಕೊಟ್ಟು, ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಪುಣ್ಯಚರಿತ್ರೆಯನ್ನು ವಿಸ್ತರಿಸಿದ.

ಅವನ ಕಾವ್ಯಶ್ರವಣಮಾಡಿ ಸಂತೋಷಿಸಿದ ಪ್ರಭುಗಳು ಅವನಿಗೆ **'ಕವಿರಾಜ ಕಲಾವಿಲಾಸ'** ಎಂಬ ಬಿರುದನ್ನೂ, ಉದಾರ ದತ್ತಿಯನ್ನೂ ಕೊಟ್ಟು ಗೌರವಿಸಿದರು.

ಪ್ರಭುಗಳ ಕೃಪೆಗೆ ಪಾತ್ರನಾಗಿದ್ದ ಇನ್ನೊಬ್ಬ ಕವಿ **ಪದ್ಮಣಾಂಕ**. ಕೆರೆಯ ಪದ್ಮರಸನ ಚಾರಿತ್ರ್ಯವನ್ನೇ ಕಾವ್ಯರೂಪದಲ್ಲಿ **'ಪದ್ಮರಾಜಪುರಾಣ'**ವೆಂದು ಕವಿ ಬರೆದು ಪ್ರಭುಗಳಿಗೆ ಸಮರ್ಪಿಸಿದ.

" ಸರಸತ್ವದಿಂ ಸಲಕ್ಷಣದಿಂ ಬೆಡಂಗಿನಿಂ
ಪರಮಸೌಂದರ್ಯದಿಂ ಜಾತಿಯಿಂ ಗುಣದಿನು
ತ್ಕರವೃತ್ತಿಯಿಂದಲಂಕಾರದಿಂ ಮೋಹನದೆ ಭಾವದಿಂ ನಿರ್ದೋಷದಿಂ ।
ನಿರುಪಮಮೃದೂಕ್ತಿಯಿಂ ಪ್ರೀತಿಯಿಂ ರೀತಿಯಿಂ
ವರಗಮಕದೆಸಕದೊಳ್ಪಿನಿಂ ಸಕಲಕಲಾ
ಸ್ಫುರಣದಿಂದೊಪ್ಪುತೀಕೃತಿಯುವತಿ ಕೋವಿದರನೇಂ ಸೋಲಿಸದೆ ಬಿಡುವಳೇ ॥

ಪ್ರೌಢಬಂಧದಿಂದಲೂ, ಮಹೋಪಮೆಗಳಿಂದಲೂ ತುಂಬಿ ತುಳುಕುತ್ತಿದ್ದ ಕಾವ್ಯವಾಚನ ಕೇಳಿ ಹರ್ಷಿಸಿದ ಪ್ರಭುಗಳು, ಪದ್ಮಣಾಂಕನನ್ನು ಗೌರವಿಸಿ, ಆಸ್ಥಾನದ ಗವಿಗಣದಲ್ಲಿ ಅವನಿಗೆ ಎಡೆಮಾಡಿಕೊಟ್ಟರು.

ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನ ರೂಪವಾದ **'ಕ್ರಿಯಾಸಾರ'** ಗ್ರಂಥ ಬರೆದ **ನೀಲಕಂಠ ಶಿವಾಚಾರ್ಯನೂ** ಮಹಾಪ್ರಭುಗಳಿಂದ ಸನ್ಮಾನಿತನಾದ.

ಮಹಾಮಂತ್ರಿತ್ವದ ಜವಾಬುದಾರಿ ಅತ್ಯಧಿಕವಾಗಿದ್ದರೂ ಶ್ರಿ ಸಾಯಣರು 'ಗೀರ್ವಾಣ ವಿದ್ಯಾಪೀಠ'ದ ಪುರೋಭಿವೃದ್ಧಿಯಲ್ಲಿ ವಿಶೇಷ ಆಸಕ್ತರಾಗಿದ್ದರು.

ಆರ್ಯಕ್ಷೇಮೇಂದ್ರರು ಗತಿಸಿದ ಮೇಲೆ ಶ್ರೀಕಂಠಶರ್ಮನೇ ಆಚಾರ್ಯ ಪಟ್ಟಕ್ಕೆ ಬಂದಿದ್ದ. ಷಟ್-ಶಾಸ್ತ್ರಾಭ್ಯಾಸದ ಜತೆಗೆ ಲೌಕಿಕವಿದ್ಯೆಗಳ ಪರಿಚಯವೂ ವಿದ್ಯಾರ್ಥಿಗಳಿಗೆ ಆಗಬೇಕೆಂದು ಶ್ರೀ ಸಾಯಣರು ವೈದ್ಯ, ಜ್ಯೋತಿಷ್ಯ, ಗಣಿತ, ಖಗೋಳಶಾಸ್ತ್ರ, ಪ್ರಾಣಿಶಾಸ್ತ್ರ, ವನಸ್ಪತಿಶಾಸ್ತ್ರ, ಪಶು ವಿದ್ಯೆಗಳಲ್ಲಿ ತಜ್ಞರಾದವರನ್ನು ನಾಡಿನ ಹಲವು ಭಾಗಗಳಿಂದ ಬರಮಾಡಿ ಕೊಂಡು ವಿದ್ಯಾಪೀಠವನ್ನು 'ಕರ್ನಾಟಕ ವಿಶ್ವವಿದ್ಯಾನಿಲಯ'ವನ್ನಾಗಿ ಮಾರ್ಪಡಿಸಿದರು.

ವರ್ಷಕ್ಕೊಮ್ಮೆ ಸ್ನಾತಕರಿಗೆ ಮಹಾಪ್ರಭುಗಳೇ ಶಾಲು, ಕಂಕಣ, ಕಂಠ ಹಾರಗಳನ್ನೂ ಪ್ರಶಸ್ತಿಗಳನ್ನೂ ಕೊಡುತ್ತಿದ್ದರು.

ಸಿರಿ-ಸರಸತಿಯರಿಬ್ಬರೂ ಹುರುಡಿನಿಂದ ವಿಜಯನಗರದ ಸೇವೆಗೆ ನಿಂತಿದ್ದರು.

ಪ್ರಭುಗಳ ಉದಾರಧೋರಣೆಯ ಫಲವಾಗಿ ದೋರಸಮುದ್ರ, ಪೆನು ಗೊಂಡೆ, ಬಂಕಾಪುರ, ಉದಯಗಿರಿ ಪಟ್ಟಣಗಳು ಬೆಳೆದು ಸಂಪತ್ಸಮೃದ್ಧ ವಾದವು.

ಜನಗಳ ನಿರಾಪದ ಜೀವನ ಹೊರಗಿನಿಂದ ಬರುತ್ತಿದ್ದವರ ಕಣ್ಣು ಕುಕ್ಕುತ್ತಿತ್ತು.

ವಿಜಯನಗರದ ಜನ ಬೀಗದ ಉಪಯೋಗವನ್ನೇ ಕಾಣದಿದ್ದುದನ್ನು ನೋಡಿ ಹೊರಗಿನ ಜನ ವಿಸ್ಮಯಗೊಳ್ಳುತ್ತಿದ್ದರು.

ಸಕಲರಿಗೂ ಜೀವನ ಸುಲಭವಿದ್ದುದರಿಂದ ವಿಜಯನಗರದಲ್ಲಿ ಕಳ್ಳಕಾಕರ ಭಯವಿರಲಿಲ್ಲ. ಹೆಣ್ಣುಮಕ್ಕಳು ಕೂಡ ನಿರ್ಭಯವಾಗಿ ರಾಜ್ಯದಲ್ಲಿ ಸಂಚರಿಸು ತ್ತಿದ್ದರು.

ಪಾಂಥಶಾಲೆಗಳು, ಅರವಟ್ಟಿಗೆಗಳು, ಛತ್ರಗಳು ಎಲ್ಲೆಡೆಯಲ್ಲಿಯೂ ಸ್ಥಾಪಿಸಲ್ಪಟ್ಟಿದ್ದವು.

ಪ್ರಭುಗಳ ಔದಾರ್ಯ ಪ್ರಜಾವರ್ಗದ ಸುಸಂಸ್ಕೃತ ನಡೆವಳಿಕೆ ವಿಜಯ ನಗರವನ್ನು ಪ್ರವಾಸಿಗಳ, ಯಾತ್ರಾರ್ಥಿಗಳ ಕಣ್ಮಣಿಯನ್ನಾಗಿ ಮಾಡಿದ್ದವು.

೨೬

ವಯೋಧರ್ಮಕ್ಕನುಗುಣವಾಗಿ ರಾಜಮಾತೆಯವರ ಆರೋಗ್ಯ ಇಳಿಮುಖವಾಯಿತು. ತಮ್ಮ ಅಂತಿಮಕಾಲ ಸನ್ನಿಹಿತವಾಯಿತೆಂದು ಭಾವಿಸಿದ ಗೌರಾಂಬಿಕಾದೇವಿಯವರು ಶ್ರೀಸಾಯಣರಿಗೆ ಹೇಳಿಕಳಿಸಿದರು.

ರಾಜಮಾತೆಯವರ ಚೇಟಿಯರ ಜತೆ ಬಂದ ಶ್ರೀ ಸಾಯಣರು,

" ಆರೋಗ್ಯ ಹೇಗಿದೆ ?" ಎಂದು ಕೇಳಿದರು.

" ನಾವು ಭಗವಂತನ ಪಾದಸನ್ನಿಧಿ ಸೇರುವ ಕಾಲ ಸಮೀಪಗತವಾಗಿದೆ. ನಮ್ಮ ದೀರ್ಘಕಾಲದ ಬಾಳು ಸಾರ್ಥಕವಾಗಿದೆ. ಶ್ರೀವಿದ್ಯಾರಣ್ಯರು, ಶ್ರೀ ಹರಿಹರರಾಯರು, ನಮ್ಮ ಪತಿದೇವರು ಕಟ್ಟಿದ ಸಾಮ್ರಾಜ್ಯ ಕುಮಾರ ಇಮ್ಮಡಿ ಹರಿಹರರಾಯರ ಕಾಲದಲ್ಲಿ ಇತೋಪ್ಯತಿಶಯವಾಗಿ ಅಭಿವೃದ್ಧಿಗೊಂಡಿದೆ. ಇದರ ಕೀರ್ತಿ ತಮ್ಮದಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಇದೇ ಕೀರ್ತಿ ಶಾಶ್ವತವಾಗಿ ಉಳಿಯಬೇಕೆಂಬುದೇ ನಮ್ಮ ಅಪೇಕ್ಷೆ."

" ಅದರಲ್ಲಿ ಯಾವ ಸಂದೇಹವೂ ಇಲ್ಲ."

" ಇದೆ ಶ್ರೀಸಾಯಣಾಚಾರ್ಯರೇ. ಮನೆಯೊಳಗಣ ಹಗರಣ ಹೊರಕ್ಕೆ ಬರಬಾರದೆಂದು ಈವರೆಗೆ ನಾವು ಮುಚ್ಚಿಟ್ಟದ್ದಾಯಿತು. ಆದರೆ ಇದು ಕೇವಲ ನಮ್ಮ ಮನೆತನಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ – ವಿಜಯನಗರ ಸಾಮ್ರಾಜ್ಯದ ಭವಿಷ್ಯದಮೇಲೆ ಈ ಸಮಸ್ಯೆ ಪರಿಣಾಮಬೀರುವುದರಿಂದ ನಾವು ಕಳವಳಗೊಂಡಿದ್ದೇವೆ."

" ಸಮಸ್ಯೆ ಎಷ್ಟೇ ಕ್ಲಿಷ್ಟವಾದರೂ, ಅದನ್ನು ಪರಿಹರಿಸಲು ಮಹಾಪ್ರಭುಗಳು ಸಮರ್ಥರಾಗಿದ್ದಾರೆ."

" ಇದು ಅವರ ಕೈಗೂ ನಿಲುಕುವುದಿಲ್ಲವೇನೋ ಎಂಬ ಭಯ ನಮ್ಮನ್ನಾವರಿಸಿದೆ."

" ಅಂಥ ಸಮಸ್ಯೆ ಯಾವದು ಮಾತೃಶ್ರೀಯವರೇ ?"

" ರಾಜ್ಯದ ಉತ್ತರಾಧಿಕಾರಿಯ ಪ್ರಶ್ನೆ. ನಮ್ಮ ಕುಮಾರರ ಇಪ್ಪತ್ತಾರು ವರ್ಷಗಳ ಆಳ್ವಿಕೆಯಿಂದ ವಿಜಯನಗರದ ಅಸ್ತಿತ್ವ ದೃಢವಾಗಿ, ದೇಶದಲ್ಲಿ ಶಾಂತಿ ನೆಲಸಿತು – ಸಂಪತ್ತು ನಿರೀಕ್ಷೆಗಿಂತ ಮಿಗಿಲಾಗಿ ಹೆಚ್ಚಿತು."

" ನಿಸ್ಸಂದೇಹವಾಗಿ."

"ಹೊರಗಿನ ಬಂಡಾಯಗಳು ಅಳಿದವು – ಆದರೆ ಒಳಗಿನ ಬಂಡಾಯ...."

" ಒಳಗಿನ ಬಂಡಾಯ !"

" ರಾಜ್ಯಾಧಿಕಾರ ಪ್ರಾಪ್ತವಾಗಲಿಲ್ಲವೆಂದು ಯುವರಾಜಕುಮಾರ ಶ್ರೀ ಬುಕ್ಕರಾಯರು ಅಸಂತುಷ್ಟರಾಗಿದ್ದಾರೆ."

" ಮಹಾಪ್ರಭುಗಳು ಜೀವಂತರಾಗಿರುವಾಗಲೇ ರಾಜ್ಯತ್ಯಾಗಮಾಡಿ, ಅಧಿಕಾರವನ್ನು ಯುವರಾಜರಿಗೆ ಒಪ್ಪಿಸಿಕೊಡಬೇಕೇ ?"

" ಹಾಗೆ ಮಾಡುವುದು ಉಚಿತವೆಂದು ಯುವರಾಜರು ನಮ್ಮೊಂದಿಗೆ ಸ್ಪಷ್ಟವಾಗಿ ನುಡಿದರು."

" ಇದೆಂಥ ಮಾತು ! – ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಯಾರಾದರೂ ಯುವರಾಜರಿಗೆ ದುರುಪದೇಶ ಮಾಡುತ್ತಿರಬಹುದೇ ?"

" ತಾವು ಯಾರ ಬಗ್ಗೆ ಅನುಮಾನ ತಳೆದಿರುವಿರಿ ?"

" ಮಹಾರಾಣಿ ಪಂಪಾದೇವಿಯವರ ಬಗ್ಗೆ !"

" ತಮ್ಮ ಕುಮಾರ ಸಮ್ರಾಟನಾಗಬೇಕೆಂಬ ಆಸೆ ಪಂಪಾದೇವಿಯವರಿಗಿಲ್ಲ ಎಂದು ನಾವು ಹೇಳುತ್ತಿಲ್ಲ. ಆದರೆ ಮಹಾಪ್ರಭುಗಳು ನಿವೃತ್ತರಾಗಿ ಮಗನಿಗೆ ಪಟ್ಟಗಟ್ಟಲಿ ಎಂದು ಪಂಪಾದೇವಿಯವರು ಯೋಚಿಸುತ್ತಿಲ್ಲ."

" ರಾಜ್ಯಾಧಿಕಾರ ವಹಿಸಿಕೊಳ್ಳಲು ಯುವರಾಜ ಶ್ರೀ ಬುಕ್ಕರಾಯರು ಆತುರರಾಗಿರುವುದಕ್ಕೇನು ಕಾರಣ ಮಹಾಮಾತೆಯವರೇ – ತಾವು ದಯೆ ಮಾಡಿ ಈ ವಿಷಯ ಸ್ಪಷ್ಟಗೊಳಿಸಬೇಕು."

" ಯುವರಾಜರ ಮಲತಮ್ಮಂದಿರಾದ ದೇವರಾಯ, ವಿರೂಪಾಕ್ಷ, ಚಿಕ್ಕರಾಯರು ಬಲಿಷ್ಠರಾಗಿದ್ದಾರೆ. ಮಹಾಪ್ರಭುಗಳು ಈ ವಿಷಯ ಇತ್ಯರ್ಥ ಮಾಡದಿದ್ದರೆ ಮಲತಮ್ಮಂದಿರು ವಿರೋಧಿಗಳಾಗಿ ನಿಂತು ರಾಜ್ಯವನ್ನು ತಮ್ಮಿಂದ ಕಸುಗೊಳ್ಳಬಹುದೆಂದು ಯುವರಾಜರು ಹೆದರಿದ್ದಾರೆ."

" ಈ ವಿಷಯ ತಾವು ಮಹಾಪ್ರಭುಗಳೆದುರಿಗೆ ಪ್ರಸ್ತಾಪಿಸಿದ್ದೀರಾ ?"

" ಇಲ್ಲ. ನಾನು ಹೇಗೆ ಹೇಳಲಿ "

" ಈ ಸಂಧಿಕಾಲದಲ್ಲಿ ರಾಜಮನೆತನದಲ್ಲಿಯೇ ಬಂಡಾಯವೆದ್ದರೆ ದೇಶಕ್ಕೆ ಒಳ್ಳೆಯದಲ್ಲ. ನಮ್ಮಲ್ಲಿ ಪಕ್ಷ, ವಿಪಕ್ಷಗಳಾಗಿವೆ ಎಂಬ ಒಡಕು ಸುದ್ದಿ ಹೊರಬಿದ್ದರೆ ಬಹಮನಿಯವರಿಗೆ ನಾವೇ ಆಮಂತ್ರಣ ಕೊಟ್ಟಂತಾಗು

ತ್ತದೆ. ಆದಷ್ಟು ಬೇಗ ಮಹಾಪ್ರಭುಗಳೇ ಈ ವಿಷಯ ಇತ್ಯರ್ಥಮಾಡುವುದು ಒಳ್ಳೆಯದು."

"ನನ್ನದೂ ಅದೇ ಅಭಿಪ್ರಾಯ. ತಾವೇ ಮಹಾಪ್ರಭುಗಳಿಗೆ ಈ ವಿಷಯ ಅರಿಕೆಮಾಡಿ."

"ಅಗತ್ಯವಾಗಿ ಆಗಲಿ"

ಎಂದು ಸಾಯಣರು ಒಪ್ಪಿಕೊಂಡರು.

ಮುದ್ದಪ್ಪನಾಯಕರು, ಇರುಗನಾಯಕರು, ಗುಂಡನಾಯಕರೊಂದಿಗೆ ಸಮಾಲೋಚನೆ ನಡೆಸಿದ ಸಾಯಣರು ಒಂದು ದಿನ ಈ ವಿಷಯವನ್ನು ಮಹಾಪ್ರಭುಗಳೊಂದಿಗೆ ಪ್ರಸ್ತಾಪಿಸಿ,

"ಉತ್ತರಾಧಿಕಾರಿಯನ್ನು ಈಗಲೇ ನೇಮಿಸುವುದು ಒಳ್ಳೆಯದು ಮಹಾಪ್ರಭು" ಎಂದರು.

"ಯುವರಾಜ ಬುಕ್ಕರಾಯರೇ ಹಿರಿಯರು. ಅವರೇ ನಮ್ಮ ಉತ್ತರಾಧಿಕಾರಿಗಳು."

"ರಾಜಕುಮಾರರು ದೇವರಾಯರು, ವಿರೂಪಾಕ್ಷರು, ಚಿಕ್ಕರಾಯರು ಪ್ರಭಾವಶಾಲಿಗಳಾಗಿದ್ದಾರೆ. ಸ್ವಾರ್ಥಿಗಳು ಅವರನ್ನು ಹುರಿದುಂಬಿಸಿ ಬುಕ್ಕರಾಯರನ್ನು ಪ್ರತಿಭಟಿಸಬಹುದು. ಬುಕ್ಕರಾಯರ ನೇಮಕದ ಬಗ್ಗೆ ಅವರೆಲ್ಲರ ಅನುಮತಿಯನ್ನು ಪೂರ್ವಭಾವಿಯಾಗಿ ದೊರಕಿಸಿಕೊಳ್ಳುವುದು ಒಳ್ಳೆಯದೆಂದು ನಮ್ಮ ಅಭಿಪ್ರಾಯ."

"ಅವರನ್ನೆಲ್ಲಾ ಇಲ್ಲಿಗೆ ಬರಮಾಡಬೇಕಾಗುತ್ತದೆ."

"ಹೌದು. ರಾಜಮಾತೆಯವರ ಆರೋಗ್ಯ ಚೆನ್ನಾಗಿಲ್ಲ. ಮೊಮ್ಮಕ್ಕಳನ್ನೆಲ್ಲಾ ನೋಡಲು ಅವರು ಬಯಸುತ್ತಿದ್ದಾರೆ. ಈ ವ್ಯಾಜದಲ್ಲಿಯೇ ರಾಜಕುಮಾರರನ್ನು ಬರಮಾಡಿಕೊಂಡು, ತಮ್ಮ ನಿರ್ಧಾರವನ್ನು ಸೂಚಿಸಬಹುದು."

"ಹಾಗೇ ಆಗಲಿ – ಮೂವರಿಗೂ ಪತ್ರ ಬರೆದು ಕಳಿಸಿ." ಎಂದರು.

ಸ್ವಲ್ಪವೂ ಕಾಲವಿಳಂಬಮಾಡದೆ ಶ್ರೀ ಸಾಯಣರು, ದೇವರಾಯರನ್ನು ಕರೆತರಲು ತಮ್ಮ ಸೋದರಳಿಯ ಲಕ್ಷ್ಮೀಧರನನ್ನು ಉದಯಗಿರಿಗೂ, ವಿರೂಪಾಕ್ಷರನ್ನು ಕರೆತರಲು ಇರುಗನಾಯಕರನ್ನು ತೊಂಡಮಂಡಲಕ್ಕೂ, ಚಿಕ್ಕರಾಯರನ್ನು ಕರೆತರಲು ಗುಂಡನಾಯಕರನ್ನೂ ಕಳಿಸಿಕೊಟ್ಟರು.

ಲಕ್ಷ್ಮೀಧರ, ನಾಯಕರು ಪ್ರಯಾಣ ಬೆಳಸಿದ ಐದನೆಯ ದಿನ ಪ್ರಾತಃ

ಕಾಲ ರಾಜಮಾತೆ ಶ್ರೀಶ್ರೀ ಗೌರಾಂಬಿಕೆದೇವಿಯುವರು ಪರಲೋಕಯಾತ್ರೆ ಮಾಡಿಬಿಟ್ಟರು.

ಇಡಿಯ ರಾಜ್ಯವೇ ಅಪಾರ ದುಃಖಕೊಳ್ಳಗಾಯಿತು.

ಹತ್ತನೆಯ ದಿನ ರಾಜಕುಮಾರರು, ಲಕ್ಷ್ಮೀಧರ, ನಾಯಕರು ಹಿಂದಿರುಗಿದರು.

ಸಂಸ್ಕಾರವಿಧಿಗಳನ್ನೆಲ್ಲಾ ಪೂರೈಸುವವರೆಗೆ ರಾಜಧಾನಿಯಲ್ಲಿದ್ದ ರಾಜ ಕುಮಾರರು ಹೊರಡಲನುವಾದರು.

ದುಃಖತಪ್ತರಾಗಿದ್ದ ಮಹಾಪ್ರಭುಗಳು ಉತ್ತರಾಧಿಕಾರಿಯ ವಿಷಯ ಅವರ ಮುಂದೆ ಪ್ರಸ್ತಾಪಿಸಲೇ ಇಲ್ಲ.

೨೭

ರಾಜಮಾತೆಯ ನಿಧನಾನಂತರ ಮಹಾಪ್ರಭುಗಳಲ್ಲಿ ವೈರಾಗ್ಯಭಾವನೆ ತಲೆದೋರಿತು.

ರಾಜ್ಯಾಡಳಿತವನ್ನು ಯುವರಾಜ ಬುಕ್ಕರಾಯರಿಗೇ ವಹಿಸಿಕೊಟ್ಟು ತಾವು ನಾಮಮಾತ್ರಕ್ಕೆ ಪ್ರಭುಗಳಾಗಿ ಉಳಿದುಕೊಂಡರು.

ಶ್ರೀಕಂಠಶರ್ಮ ಪ್ರತಿದಿನ ಬೆಳಿಗ್ಗೆ ಅರಮನೆಯಲ್ಲಿ ಸಂಜೆ 'ಗಿರಿವನ'ದಲ್ಲಿ ಪ್ರಭುಗಳನ್ನು ಕಂಡು, ಅವರಿಗೆ ಧರ್ಮಗ್ರಂಥಗಳನ್ನು ಓದಿಹೇಳುತ್ತಿದ್ದ.

ಒಂದು ದಿನ ಸಂಜೆ, ಶ್ರೀಕಂಠಶರ್ಮನಿಗೂ ಮಹಾಪ್ರಭುಗಳಿಗೂ 'ಗಿರಿವನ'ದಲ್ಲಿ ಧರ್ಮಜಿಜ್ಞಾಸೆ ನಡೆದಿತ್ತು. ಆ ವೇಳೆಗೆ ಅಲ್ಲಿಗೆ ಶ್ರೀ ಸಾಯಣರು ಬರಲು, ಮಹಾಪ್ರಭುಗಳು

"ಶರ್ಮರೇ, ನಮ್ಮ ವಾದವನ್ನು ಶ್ರೀ ಗುರುಗಳ ಮುಂದೆ ಮಂಡಿಸೋಣ. ಅವರೇ ಇತ್ಯರ್ಥ ಮಾಡಲಿ." ಎಂದರು.

"ವಿವಾದಾಸ್ಪದವಾದ ವಿಷಯ ಯಾವುದು ಶ್ರೀಕಂಠ"

ಎಂದು ಸಾಯಣರು ಕೇಳಿದರು.

" ತ್ಯಾಗದ ರೂಪರೇಷೆಯನ್ನು ನಾನೂ ಮಹಾಪ್ರಭುಗಳೂ ಚರ್ಚಿಸುತ್ತಿದ್ದೆವು. ತ್ಯಾಗ ಕೇವಲ ಆಂತರಂಗಿಕವಾದದ್ದು, ಅದಕ್ಕೆ ಬಹಿಪ್ರರ್ದರ್ಶನ ಅಗತ್ಯವಿಲ್ಲ ಎಂದು ಪ್ರಭುಗಳು ಅಪ್ಪಣೆ ಕೊಡಿಸಿದರು. ನಾನು ಒಪ್ಪಲಿಲ್ಲ."

" ಏಕೆ ?"

" ತ್ಯಾಗ ಅಂತರಂಗದಿಂದಲೇ ಸ್ಫುರಿಸುವುದಾದರೂ ಅದಕ್ಕೆ ಬಹಿರಾಕೃತಿಯೂ ಬೇಕು. ಬಹಿರಾಕೃತಿಯಿಂದ ತ್ಯಾಗಿಗೆ ಯಾವ ಪ್ರಯೋಜನವಾಗದಿದ್ದರೂ, ಇತರರ ಮೇಲೆ ಅದು ಸತ್ಪರಿಣಾಮ ಬೀರುತ್ತದೆ ಎಂದು ನನ್ನ ಅಭಿಪ್ರಾಯ."

ಶ್ರೀ ಸಾಯಣರು ನಸುನಕ್ಕು,

" ಬರೀ ಪಂಡಿತವಕ್ಕಿಯಾದೆಯಲ್ಲೋ ಶ್ರೀಕಂಠ " ಎಂದರು.

" ಏಕೆ ಗುರುಗಳೇ ?"

" ಸ್ವಲ್ಪ ಕತ್ತೆತ್ತಿ ಬಾನಿನತ್ತ ನೋಡು – ಸಂಧ್ಯಾರವಿ ತನ್ನ ಹೊಂಗಿರಣಗಳನ್ನು ಪಸರಿಸಿಕೊಂಡು ಅಸ್ತಮಿಸುತ್ತಿದ್ದಾನೆ. ಅವನನ್ನು ನಿರ್ದೇಶಿಸುವುದು ಯಾವುದು – ಲಾಂಛನವೋ, ಅಂತಸ್ಸತ್ವವೋ ? ಬೆಂಕಿಯಲ್ಲಿ ಕಾವು, ವಾಯುವಿನಲ್ಲಿ ವೇಗ, ಜಲದಲ್ಲಿ ಅಗ್ನಿ ಹೇಗೆ ಸಮಾವೇಶಗೊಂಡಿವೆಯೋ ಹಾಗೆ ಮನುಷ್ಯನಲ್ಲಿ ತ್ಯಾಗ ಸಮಾವೇಶಗೊಂಡಿರಬೇಕು. ಅದು ತನ್ನ ನೈಸರ್ಗಿಕ ಗುಣದಿಂದಲೇ ಅಭಿವ್ಯಕ್ತವಾಗಿ, ಪ್ರಭಾವ ಬೀರಬೇಕು."

" ಲೋಕಕ್ಕೊಂದು ಪ್ರತೀಕ ಬೇಡವೇ ಗುರುಗಳೇ ?"

" ಲಾಂಛನಧಾರಿಯಾಗಿ ಲೋಕದ ಕಣ್ಣು ಮೆಚ್ಚಿಸುವುದಕ್ಕಿಂತ, ಅಂತಸ್ಸತ್ವಭರಿತನಾಗಿ ಲೋಕದ ಮನಮೆಚ್ಚಿಸುವುದು ಲೇಸಲ್ಲವೇ ?"

" ಹೌದು ಗುರುನಾಥ."

ಎಂದು ಶ್ರೀಕಂಠ ಸಮ್ಮತಿ ಸೂಚಿಸಿದ.

ಮಹಾಪ್ರಭುಗಳ ಸಮೀಪಕ್ಕೆ ಬಂದ ಸಾಯಣರು,

" ನಾನೊಂದು ವಿಷಯ ಅರಿಕೆ ಮಾಡಿಕೊಳ್ಳಲು ಬಂದೆ ಪ್ರಭೂ " ಎಂದರು.

" ಅಪ್ಪಣೆಯಾಗಲಿ."

ಎಂದು ಮಹಾಪ್ರಭುಗಳು ಸೂಚಿಸಲು ಸಾಯಣರು,

" ಮಹಾಮಾತೃಶ್ರೀಯವರು ಅಸ್ವಸ್ಥರಾಗುವ ಮುನ್ನವೇ ನಮಗೆ

ಶೃಂಗೇರಿಯಿಂದ ನಿರೂಪ ಬಂದಿತ್ತು. ಆ ಸಮಯದಲ್ಲಿ ತಮ್ಮನ್ನು ಬಿಟ್ಟು ಹೋಗಲು ಮನಸ್ಸಾಗಲಿಲ್ಲ. ಶೃಂಗೇರಿಯಿಂದ ಮತ್ತೆ ನಿರೂಪ ಬಂದಿದೆ. ಇನ್ನು ನಾವು ಪ್ರಯಾಣ ಮುಂದಕ್ಕೆ ತಳ್ಳುವುದು ಉಚಿತವಲ್ಲ. ಶ್ರೀ ವಿರೂಪಾಕ್ಷ, ಶ್ರೀ ಭುವನೇಶ್ವರಿಯರ ಅನುಗ್ರಹದಿಂದ ಸಾಮ್ರಾಜ್ಯ ಭದ್ರವೂ ಸುಭಿಕ್ಷವೂ ಆಗಿದೆ. ನಾವಿಲ್ಲಿ ಮಾಡಬೇಕಾದ ಕೆಲಸ ಮುಗಿದಂತಾಗಿದೆ. ಶೃಂಗೇರಿಗೆ ನಾವು ಹೋಗಲು ಮಹಾಪ್ರಭುಗಳು ಅಪ್ಪಣೆ ದಯೆಪಾಲಿಸಬೇಕು."

"ಗುರುದೇವಾ, ನಮ್ಮ ಲೌಕಿಕ, ಆಧ್ಯಾತ್ಮಿಕ ಉತ್ಕರ್ಷಕ್ಕೆ ತಾವು ಕಾರಣರಾಗಿದ್ದೀರಿ. ಶ್ರೀಗುರು ವಿದ್ಯಾರಣ್ಯರು ಮತ್ತು ತಮ್ಮ ತಪಃಪ್ರಭಾವದಿಂದ ಸಾಮ್ರಾಜ್ಯವಿಂದು ಭಾರತದ ನಂದಾದೀಪವಾಗಿದೆ. ನಾವೂ ಜೀವನದ ಸಂಧ್ಯೆಯಲ್ಲಿದ್ದೇವೆ. ನಮ್ಮ ಕೊನೆಗಳಿಗೆಯಲ್ಲಿ ತಾವು ಜತೆಯಲ್ಲಿದ್ದುಕೊಂಡು, ಮುಂದಣ ಪ್ರಯಾಣ ಕೈಗೊಳ್ಳುವುದಕ್ಕೆ ಅವಶ್ಯಕವಾದ ಶಕ್ತಿ, ಸ್ಥೈರ್ಯವನ್ನು ದಯೆಪಾಲಿಸಬೇಕು."

"ರಾಜರ್ಷಿಗಳಾದ ತಮಗೆ ನಾವು ಶಕ್ತಿ, ಸ್ಥೈರ್ಯ ನೀಡಬೇಕೆ? ತಾಯಿಯ ಒಂದು ಸ್ತನಕ್ಕೆ ಬಾಯಿ ಹಾಕಿರುವ ಮಗು, ಇನ್ನೊಂದು ಸ್ತನವನ್ನು ಕೈಯಲ್ಲಿ ಹಿಡಿದಿರುವಂತೆ ತಾವು ಲೋಕಾಯತನದಲ್ಲಿದ್ದರೂ ಪರಮಾರ್ಥ ಚಿಂತನೆಗೇ ಮನಸ್ಸನ್ನು ಮೀಸಲು ಮಾಡಿರುವಿರಿ. ಲೌಕಿಕಾಧ್ಯಾತ್ಮಗಳನ್ನು ಬೆಸೆದು ರಾಜಕುಲಕ್ಕೇ ಆದರ್ಶಪ್ರಾಯರಾಗಿದ್ದೀರಿ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಉಲ್ಲಿಖಿತವಾಗುವ ತಮ್ಮ ದಿವ್ಯಚರಿತ್ರೆ ಅಮರಜ್ಯೋತಿಯಂತೆ ಬೆಳಗುತ್ತ ಭವಿಷ್ಯತ್ ಸಂತಾನಕ್ಕೆ ಮಾರ್ಗದರ್ಶಕವಾಗುವುದು. ನಿಯತಿಯ ರಂಗಭೂಮಿಯ ಮೇಲೆ ನಾವೆಲ್ಲಾ ಪಾತ್ರಧಾರಿಗಳಾಗಿ ಅಭಿನಯಿಸಿದ್ದೇವೆ. ತಮ್ಮದು ದೊಡ್ಡ ಪಾತ್ರ - ನಮ್ಮದು ಸಣ್ಣ ಪಾತ್ರ. ನಮ್ಮ ಪ್ರವೇಶ ಮುಗಿದು, ನಿಷ್ಕ್ರಮಿಸುವ ಕಾಲ ಸನ್ನಿಹಿತವಾಗಿದೆ. ಪಾತ್ರಧಾರಿಗಳು ಸಕಾಲದಲ್ಲಿ ಪ್ರವೇಶಿಸಿ – ಕಾಲೋಚಿತವಾಗಿ ನಿಷ್ಕ್ರಮಿಸದಿದ್ದರೆ ರೂಪಕ ಕೆಟ್ಟುಹೋಗುತ್ತದೆ.*

"ಗುರುಗಳೇ – ನಾನು —"

ಎಂದು ಶ್ರೀಕಂಠ ಉತ್ಕಂಠಿತನಾಗಿ ಕೇಳಿದ.

"ಗೀರ್ವಾಣ ವಿದ್ಯಾಪೀಠಕ್ಕೆ ನಿನ್ನ ಜೀವ ಮೀಸಲು ಶ್ರೀಕಂಠ. ಮಹಾಪ್ರಭು, ತಾವು ಚಿಂತಿಸಬೇಕಾಗಿಲ್ಲ. ನಮ್ಮ ಪೂರ್ವಾಶ್ರಮದ ಸೋದ

ರಳಿಯ ಲಕ್ಷ್ಮೀಧರನನ್ನು ತಮ್ಮ ಸೇವೆಗೆ ಬಿಟ್ಟುಹೋಗುತ್ತೇವೆ. ಲಕ್ಷ್ಮೀಧರ ರಾಜಕಾರಣ ನಿಪುಣನಾಗಿದ್ದಾನೆ. ಸಾಮ್ರಾಜ್ಯಸೇವೆಯನ್ನು ನಿರ್ವ್ಯಾಜ ಅಂತಃಕರಣದಿಂದ ಕೈಗೊಳ್ಳಲು ಆತುರನಾಗಿದ್ದಾನೆ. ತಮ್ಮ ಮಡಿಲೊಳಗೆ ಅವನನ್ನು ಹಾಕಲು ನಾವು ಉತ್ಸುಕರಾಗಿದ್ದೇವೆ."

"ತಮ್ಮ ಸ್ಥಾನಕ್ಕೆ ಯಾರನ್ನು ನೇಮಿಸುತ್ತೀರಿ ?"

"ಜ್ಞಾನವೃದ್ಧರೂ, ವಯೋವೃದ್ಧರೂ, ಸಾಮ್ರಾಜ್ಯಸೇವಾ ನಿಷ್ಠಾಗರಿಷ್ಠರೂ ಆದ ಶ್ರೀ ಮುದ್ದಪ್ಪದಂಡನಾಯಕರಿಗಿಂತ ದಕ್ಷರು ಬೇಕೆ ?"

"ತಾವು ಎಂದು ಪ್ರಯಾಣ ಬೆಳಸಬೇಕು ?"

"ಆದಷ್ಟು ಬೇಗ – ನಾಳೆ ನಾಡಿದ್ದರಲ್ಲಿ ! "

"ಉಚಿತ ರೀತಿಯಲ್ಲಿ ತಮ್ಮನ್ನು ಬೀಳ್ಕೊಡಲು ಅವಕಾಶ ಕೊಡಿ."

"ಮಹಾಪ್ರಭು, ಹಿಂದೊಮ್ಮೆ ಇಂತಹದೇ ಆದ ಸನ್ನಿವೇಶ ಒದಗಿದಾಗ ನಮ್ಮ ಪೂಜ್ಯ ಅಣ್ಣಂದಿರು ಶ್ರೀಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳು ಅಪ್ಪಣೆ ಕೊಡಿಸಿದ ದಿವ್ಯನುಡಿ ನೆನಪಾಗುತ್ತಿದೆ."

"ಅವರು ಏನು ಅಪ್ಪಣೆ ಕೊಡಿಸಿದರು ?"

"'ನಾನು ಸನ್ಯಾಸಿ – ಸನ್ಯಾಸಿಗೇಕೆ ರಾಜಮರ್ಯಾದೆ. ಸನ್ಯಾಸಿ ಸನ್ಯಾಸಿ ಯಂತೆಯೇ ಇರಬೇಕಾದುದು ಚೆನ್ನು' ಎಂದು ಹೇಳಿದರು."

ಮಹಾಪ್ರಭುಗಳು ಭಕ್ತಿಪುರಸ್ಸರವಾಗಿ ಶ್ರೀ ಸಾಯಣರಿಗೆ ನಮಿಸಿ,

"ಹೋಗಿ ಬನ್ನಿ ಗುರುಸ್ವಾಮಿ, ನಮ್ಮಿಂದ ತಮ್ಮ ತಪೋಭಂಗವಾಗದಿರಲಿ. ತಮ್ಮನ್ನಿಲ್ಲಿ ಉಳಿಸಿಕೊಳ್ಳಲು ನಾವೆಷ್ಟು ಕಾತರರಾಗಿದ್ದೇವೆಯೋ, ಅಷ್ಟೇ ಶ್ರೀ ಚಂದ್ರಮೌಳೀಶ್ವರ ಶ್ರೀ ಶಾರದಾಂಬೆ ತಮ್ಮನ್ನು ಸ್ವಾಗತಿಸಲು ಕಾತರರಾಗಿದ್ದಾರೆ — ಹೋಗಿಬನ್ನಿ — ತಮ್ಮ ಆಶೀರ್ವಾದ ಸದಾಸರ್ವದಾ ನಮ್ಮ ಸಾಮ್ರಾಜ್ಯವನ್ನು ರಕ್ಷಿಸಲಿ."

ರಾಜರ್ಷಿಯನ್ನು ಮಹರ್ಷಿ ಬಿಗಿದಪ್ಪಿದರು.

೨೮

ಎರಡು ವರ್ಷಗಳು ಕಳೆದವು.

ಒಂದು ದಿನ, ಮಂತ್ರಿಮಂಡಲದ ಕಾರ್ಯಕಲಾಪಗಳನ್ನೀಕ್ಷಿಸುತ್ತಿದ್ದ ಮಹಾಪ್ರಭುಗಳಿಗೆ ದಣಿವು ತಲೆದೋರಿತು. ಚಿಂತಾಕುಲರಾದ ಮುದ್ದಪ್ಪ ನಾಯಕರು, ಪ್ರಭುಗಳ ಬಳಿಗೆ ಬಂದು

"ಮಹಾಪ್ರಭುಗಳಿಗೆ ದಣಿವಾದಂತಿದೆ." ಎಂದರು.

"ದೇಹ ಸೋತಿದೆ ಮುದ್ದಪ್ಪನವರೆ – ದಯೆಯಿಟ್ಟು ಕೂಡಲೇ ರಾಜ ಕುಮಾರರೆಲ್ಲರನ್ನೂ ರಾಜಧಾನಿಗೆ ಬರಮಾಡಿ."

ಮುದ್ದಪ್ಪ ದಣ್ಣಾಯಕರು ಕಣ್ಣೀರು ಸುರಿಸುತ್ತ ನಿಂತರು.

"ಹಿರಿಯರೂ, ಲೋಕಾನುಭಾವಿಗಳೂ ಆದ ನೀವು ದುಃಖಪಡುವುದೇ. ಶ್ರೀಗುರು ಸಾಯಣರು ಹೇಳಿದ ಮಾತು ನೆನಪಾಗುತ್ತಿದೆ. ಜಗನ್ನಾಟಕದಲ್ಲಿ ನಮ್ಮ ಪ್ರವೇಶ ಮುಗಿಯಿತು – ನಿಷ್ಕ್ರಮಣದ ವೇಳೆ ಸನ್ನಿಹಿತವಾಗಿದೆ."

ಎಂದು ಅಂತಃಪುರ ಪ್ರವೇಶಿಸಿದರು.

ಪ್ರಭುಗಳು ಅಸ್ವಸ್ಥರಾಗಿರುವ ಸುದ್ದಿ ರಾಜಧಾನಿಯಲ್ಲಿ ಕಾಳ್ಗಿಚ್ಚಿನಂತೆ ವ್ಯಾಪಿಸಿತು.

ರಾಜಕುಮಾರರು ಬರುವ ವೇಳೆಗೆ ಪ್ರಭುಗಳು ತೀರ ನಿಶ್ಯಕ್ತರಾಗಿದ್ದರು.

ಐದನೆಯ ದಿನ ಆಗಮಿಸಿದ ರಾಜಕುಮಾರರನ್ನು ಮುದ್ದಪ್ಪನಾಯಕರು ನೇರವಾಗಿ ಪ್ರಭುಗಳ ಶಯ್ಯಾಗೃಹಕ್ಕೆ ಕರೆದೊಯ್ದರು.

ಮಕ್ಕಳನ್ನೆಲ್ಲಾ ಕಣ್ತುಂಬ ನೋಡಿದ ಪ್ರಭುಗಳು,

"ನಮ್ಮ ಕಾಲ ಮುಗಿದಿದೆ. ಇಂದೋ ನಾಳೆಯೋ ನಾವು ನಮ್ಮ ಸಾಮ್ರಾಜ್ಯಕ್ಕೆ ಕೊನೆಯ ನಮನ ಸಲ್ಲಿಸಿ, ಮುಂದಿನ ಯಾತ್ರೆ ಕೈಗೊಳ್ಳುತ್ತೇವೆ. ನಿಮ್ಮ ಅಣ್ಣಂದಿರಾದ ಇಮ್ಮಡಿ ಬುಕ್ಕರಾಯರನ್ನು ನಾವು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದೇವೆ. ನೀವು ನಾಲ್ವರೂ ರಾಮ, ಲಕ್ಷ್ಮಣ, ಭರತ, ಶತ್ರುಘ್ನರಂತಿರಬೇಕು. ರಾಜ್ಯದ ಕೀರ್ತಿಯನ್ನು ವಿಸ್ತರಿಸಬೇಕು. ಲೋಭದಿಂದಾಗಲಿ, ರಾಜ್ಯದಾಹದಿಂದಾಗಲಿ, ಸ್ವಯೂಥಕಲಹಗಳಿಗೆ ಮನ ತೆತ್ತು ಸಾಮ್ರಾಜ್ಯದ ಹಿತಕ್ಕೆ ಕುಠಾರಪ್ರಾಯರಾಗಬೇಡಿ. ನಿಮ್ಮ ಹಿತ –

ಸಂತೋಷ – ಅಭ್ಯುದಯ ದೊಡ್ಡದಲ್ಲ. ಸಾಮ್ರಾಜ್ಯದ ಅಸ್ತಿತ್ವ ದೊಡ್ಡದು."

ಎಂದು ಯುವರಾಜ ಬುಕ್ಕರಾಯರ ಕಡೆ ತಿರುಗಿ,

"ಯುವರಾಜಕುಮಾರರೇ, ನಿಮ್ಮ ಮೂವರು ಸೋದರರನ್ನೂ, ಸಮಸ್ತ ಪ್ರಜೆಗಳನ್ನೂ ಸಮಾನದೃಷ್ಟಿಯಿಂದ ನೋಡಿ. ರಾಜ ನಿಮಿತ್ತ ಮಾತ್ರದವನು. ಪ್ರಜಾಬಲ, ಪ್ರಜಾನುರಾಗವೇ ಅವನ ಶಕ್ತಿಭಂಡಾರ. ರಾಜ ದೊಡ್ಡವನಾಗುವುದೂ, ಸಣ್ಣವನಾಗುವುದೂ ಪ್ರಜೆಗಳನ್ನೇ ಅವಲಂಬಿಸಿದೆ. ರಾಜ್ಯವ್ಯವಹಾರದಲ್ಲಿ ತಮ್ಮಂದಿರಿಗೂ ಯಥಾಯೋಗ್ಯ ಸ್ಥಾನಗಳನ್ನು ಕೊಡಿ. ನೀವು ನಾಲ್ವರೂ ಕೂಡಿ ಸೌಹಾರ್ದದಿಂದ ಬಾಳಿ, ಈ ಸಾಮ್ರಾಜ್ಯವನ್ನು ಅಮರಗೊಳಿಸಬೇಕು."

ಎಂದು ಹೇಳಿ ಶ್ರೀ ವಿರೂಪಾಕ್ಷ, ಶ್ರೀ ಭುವನೇಶ್ವರಿಯರ ನಾಮ ಜಪಿಸುತ್ತ ನಿಶ್ಚಲಚಿತ್ತರಾಗಿ ತಮ್ಮ ಇಹಲೋಕ ವ್ಯಾಪಾರ ಮುಗಿಸಿಬಿಟ್ಟರು.

ನಾಡಗುಡಿ ಕೆಳಕ್ಕಿಳಿದಿರುವುದನ್ನು ಕಂಡ ಪ್ರಜಾಸಮೂಹ ಶೋಕತಪ್ತವಾಯಿತು.

ಬುಕ್ಕರಾಯರು ರಾಜ್ಯಾಧಿಕಾರ ವಹಿಸಿಕೊಂಡು ಸೋದರರೊಂದಿಗೆ ಸಂಸ್ಕಾರವಿಧಿಯನ್ನು ಯಥೋಚಿತವಾಗಿ ನೆರವೇರಿಸಿದರು.

ಹನ್ನೆರಡನೆಯ ದಿನದ ಪ್ರಕ್ರಿಯೆಗಳು ಮುಗಿದ ಕೂಡಲೆ, ದೇವರಾಯ, ವಿರೂಪಾಕ್ಷ, ಚಿಕ್ಕರಾಯರು, ಬೇರೆ ಬೇರೆ ರಾಜಸದನಗಳಿಗೆ ಹೊರಟು ಹೋದರು.

೨೯

ಪಟ್ಟಾಭಿಷೇಕ ಮಹೋತ್ಸವ ಮುಗಿದು ಒಂದು ತಿಂಗಳಾಗಿದ್ದರೂ ದೇವರಾಯರು, ವಿರೂಪಾಕ್ಷರು, ಚಿಕ್ಕರಾಯರು ರಾಜಧಾನಿ ಬಿಟ್ಟು ಕದಲದಿದ್ದುದು ಬುಕ್ಕರಾಯರಿಗೆ ಆತಂಕಕ್ಕೆ ಕಾರಣವಾಗಿತ್ತು.

ದೇವರಾಯ, ವಿರೂಪಾಕ್ಷರ ಸದನಗಳಲ್ಲಿ ನಡೆಯುತ್ತಿದ್ದ ಸಂಧಾನು ಸಂಧಾನಗಳ ಸ ಬುಕ್ಕರಾಯರ ಕಿವಿ ಮುಟ್ಟಿ ಅವರನ್ನು ಮತ್ತಷ್ಟು ಅಸ್ತವ್ಯಸ್ತಗೊಳಿಸಿತ್ತು.

ಅಣ್ಣ ತಮ್ಮಂದಿರ ಜಗಳದಲ್ಲಿ ಕೈಹಾಕಲಿಚ್ಛಿಸದ ಮುದ್ದಣ ದಂಡ ನಾಯಕರೂ, ವಯಸ್ಸಿನ ನೆಪಮಾಡಿಕೊಂಡು ಮಹಾಮಂತ್ರಿತ್ವವನ್ನು ಬಿಟ್ಟು ಕೊಟ್ಟರು. ಅವರ ಸ್ಥಾನಕ್ಕೆ ಬರಲು ಇರುಗನಾಯಕರೂ, ಗುಂಡನಾಯಕರೂ ನಿರಾಕರಿಸಿ ತಾಟಸ್ಥ್ಯಘೋಷಣೆ ತಳೆದರು. ನಿರ್ವಾಹವಿಲ್ಲದೆ ಬುಕ್ಕರಾಯರು ತಮ್ಮ ಸೋದರಮಾವ ಪಂಪಣ್ಣನನ್ನೇ ಮಹಾಮಂತ್ರಿಯಾಗಿ ನೇಮಿಸಿದರು.

ದುರ್ಬಲನೂ, ಕ್ರೂರಿಯೂ, ಕೃಪಣನೂ ಆಗಿದ್ದ ಪಂಪಣ್ಣನನ್ನು ಊರಿಗೆ ಊರೇ ದ್ವೇಷಿಸುತ್ತಿತ್ತು. ನೀತಿ ನಿಯಮಗಳನ್ನರಿಯದ ಪಂಪಣ್ಣ ಪ್ರಜರನ್ನು ಸುಲಿದು ತಿನ್ನುತ್ತಿದ್ದುದಲ್ಲದೆ, ಅಲ್ಪಸ್ವಲ್ಪ ಕಾರಣಕ್ಕೂ ಪ್ರಜರನ್ನು ಕ್ರೂರ ಶಿಕ್ಷೆಗೆ ಒಳಪಡಿಸುತ್ತಿದ್ದ.

ಪಂಪಣ್ಣನ ದರ್ಪ ದಬ್ಬಾಳಿಕೆಯಿಂದ ನೊಂದು ಬೇಸತ್ತಿದ್ದ ಕೆಲವು ಸೈನ್ಯಾಧಿಕಾರಿಗಳೂ, ಪುರಪ್ರಮುಖರೂ ಪ್ರಬಲರಾಗಿದ್ದ ವಿರೂಪಾಕ್ಷರ ಪಕ್ಷ ಸೇರಿ, ಬುಕ್ಕರಾಯರ ವಿರುದ್ಧ ಸಂಚುಮಾಡಲಾರಂಭಿಸಿದರು. ಕೆಲವೇ ದಿನ ಗಳಲ್ಲಿ ದೊರೆಯ ಸಮೀಪವರ್ತಿಗಳಾಗಿದ್ದ ಕೆಲವರೂ ಒಳಸಂಚಿಗೆ ಸೇರಿ ಕೊಂಡರು.

ಒಂದು ದಿನ ದೊರೆ ಏಕಾಂಗಿಯಾಗಿದ್ದ ಸಮಯ ಸಾಧಿಸಿ ವಿರೂಪಾಕ್ಷರು ಸಶಸ್ತ್ರ ಸೈನಿಕರೊಂದಿಗೆ ಅರಮನೆ ಮುತ್ತಿ ಬುಕ್ಕರಾಯರನ್ನು ಸೆರೆಹಿಡಿದರು.

ಮಗನ ಚೀತ್ಕಾರ ಕೇಳಿದ ಪಂಪಾದೇವಿ ಒಳಗಿನಿಂದ ಬಂದು, ಮಗ ಬಂಧಿತನಾಗಿದ್ದುದನ್ನು ಕಂಡು,

" ಏನಿದು ವಿರೂಪಾಕ್ಷಣ್ಣಾ" ಎಂದರು.

" ನಿಮ್ಮ ಕುಮಾರರ ಆಳ್ವಿಕೆ ಕಂಡು ಜನ ಬೇಸತ್ತಿದ್ದಾರೆ ಚಿಕ್ಕಮ್ಮಾಜಿ. ಹೆಚ್ಚುಕಾಲ ಅವರು ಸಿಂಹಾಸನದ ಮೇಲೆ ಕುಳಿತಿದ್ದರೆ ವಿಜಯನಗರ ಬಹ ಮನಿಯ ಕೈವಶವಾಗುತ್ತದೆ. ಬುಕ್ಕರಾಯರು, ಪಂಪಣ್ಣ – ಇಬ್ಬರೂ ಕೂಡಲೆ ರಾಜ್ಯಬಿಟ್ಟು ಹೋಗುವುದಾದರೆ ಅವರ ಪ್ರಾಣ ಉಳಿಸಲು ಸಿದ್ಧನಾಗಿದ್ದೇನೆ."

" ನಾವು ರಾಜ್ಯ ಬಿಟ್ಟು ಹೋಗುವುದಿಲ್ಲ. ನಿಮಗೆ ಧೈರ್ಯವಿದ್ದರೆ ನಮ್ಮ ಪ್ರಾಣ ತೆಗೆಯಬಹುದು."

ಎಂದು ಬುಕ್ಕರಾಯರು ನುಡಿದರು.

ಪಂಪಾದೇವಿ, ಮಗನ ಬಳಿಗೆ ಬಂದು,

" ಅಪ್ಪಾಜಿ, ನಮ್ಮ ಮಾತು ಕೇಳಿ – ಹಟ ಮಾಡಬೇಡಿ. ವಿರೂ

ಪಾಕ್ಷರು ನಮಗೆ ಬಗೆಯುತ್ತಿರುವ ದ್ರೋಹದ ಕಲ್ಪನೆ ಒಂದಲ್ಲ ಒಂದು ದಿನ ರಾಜ್ಯದ ಪ್ರಜರಿಗೇ ಬರುತ್ತದೆ. ಅವರೇ ವಿರೂಪಾಕ್ಷರನ್ನು ಸಿಂಹಾಸನದಿಂದಿಳಿಸಿ, ನಿಮ್ಮನ್ನು ಬರಮಾಡಿಕೊಳ್ಳುತ್ತಾರೆ. ಅಲ್ಲಿಯವರೆಗೆ ನಾವು ಅಜ್ಞಾತ ಅನುಭವಿಸೋಣ" ಎಂದರು.

ತಾಯಿಯ ಸಲಹೆಯನ್ನಂಗೀಕರಿಸುವುದು ಬುಕ್ಕರಾಯರಿಗೆ ಅನಿವಾರ್ಯವಾಯಿತು.

ಬುಕ್ಕರಾಯರ ನಿಷ್ಕ್ರಮಣವಾದಕೂಡಲೆ ವಿರೂಪಾಕ್ಷರೇ ಸಿಂಹಾಸನವನ್ನೇರಿ ಚಕ್ರವರ್ತಿಗಳೆಂದುಸಾರಿಕೊಂಡರು.

ವಿರೂಪಾಕ್ಷರ ದಬ್ಬಾಳಿಕೆ ನಾಗರಿಕರನ್ನು ಅಸಂತಪ್ತರನ್ನಾಗಿಸಿದುದಲ್ಲದೆ, ಅವರ ಅಣ್ಣ ದೇವರಾಯರನ್ನೂ ಕೆರಳಿಸಿತು.

"ಇದೇನನ್ಯಾಯ – ಬುಕ್ಕರಾಯರು ನಿವೃತ್ತರಾದಮೇಲೆ ಹಿರಿಯರಾದ ನಮಗೆ ರಾಜ್ಯ ಲಭಿಸಬೇಕಾಗಿತ್ತು. ನಾವು ಬದುಕಿರುವಾಗಲೇ ನಮ್ಮ ತಮ್ಮಂದಿರು ಸಿಂಹಾಸನವೇರುವುದು ನಾಚಿಗೆಗೇಡು"

ಎಂದು ಆರ್ಭಟಿಸಿದರು.

ವಿರೂಪಾಕ್ಷರ ಆಳ್ವಿಕೆ ಕೆಲವು ತಿಂಗಳು ಸಾಗಿತು.

ಅವರನ್ನು ಸಿಂಹಾಸನಚ್ಯುತರನ್ನಾಗಿ ಮಾಡಲು ದೇವರಾಯರು ಹವಣಿಸುತ್ತಿರುವಲ್ಲಿ, ಸೈನ್ಯ ಕಟ್ಟಿಕೊಂಡು ಬಂದ ಬುಕ್ಕರಾಯರು ವಿರೂಪಾಕ್ಷರನ್ನು ಸಿಂಹಾಸದಿಂದ ತಳ್ಳಿ, ತಾವು ಮತ್ತೆ ಪ್ರತಿಷ್ಠಿತರಾದರು.

ಪಂಪಣ್ಣನ ಮಹಾಮಂತ್ರಿತ್ವ ಮತ್ತೆ ಆರಂಭವಾಯಿತು.

ಒಂದೇ ವರ್ಷ ಕಳೆಯುವಲ್ಲಿ ಜನ ದಂಗೆಯೇಳಲು ಸಿದ್ಧರಾಗಿ ದೇವರಾಯರ ಮರೆ ಹೊಕ್ಕು,

"ನೀವು ರಾಜ್ಯಾಧಿಕಾರ ವಹಿಸಿಕೊಳ್ಳದಿದ್ದರೆ, ವಿಜಯನಗರದ ಕೀರ್ತಿ ನಾಮಾವಶೇಷವಾಗುತ್ತದೆ."

ಎಂದು ಪ್ರಾರ್ಥಿಸಿಕೊಂಡರು.

ಜನಬಲ, ಸೈನ್ಯಬಲ, ಕಟ್ಟಿಕೊಂಡು ಅರಮನೆ ಪ್ರವೇಶಿಸಿದ ದೇವರಾಯರು ಬುಕ್ಕರಾಯರನ್ನೂ ಪಂಪಣ್ಣನನ್ನೂ ಸೆರೆಹಿಡಿದು ಹಾಸನ ಪ್ರಾಂತ್ಯಕ್ಕೆ ಸಾಗಿಸಿಬಿಟ್ಟು ತಾವೇ ರಾಜ್ಯಸೂತ್ರಗಳನ್ನು ವಹಿಸಿಕೊಂಡರು.

೨೦

ಪ್ರತಾಪದೇವರಾಯ, ಪ್ರೌಢದೇವರಾಯ ಎಂಬ ಅಭಿದಾನಗಳನ್ನು ತಳೆದ ದೇವರಾಯರು ೧೪೦೬ ರಲ್ಲಿ ಪಟ್ಟಾಭಿಷಿಕ್ತರಾದರು.

ತಮಗೆ ಪೂರ್ವಪರಿಚಿತರಾದ ಲಕ್ಷ್ಮೀಧರರನ್ನೂ, ಮಲ್ಲಪ್ಪ ಒಡೆಯರನ್ನೂ, ತಿಪ್ಪರಾಜರನ್ನೂ ಪ್ರಭುಗಳು ಮಂತ್ರಿಗಳನ್ನಾಗಿ ನೇಮಿಸಿದರು.

ಶ್ರೀ ಸಾಯಣರಿಂದ ಶಿಕ್ಷಣ ಪಡೆದಿದ್ದ ಲಕ್ಷ್ಮೀಧರ ಅಮಾತ್ಯರು ಮೈಯೆಲ್ಲ ಕಣ್ಣಾಗಿ ರಾಜ್ಯಾಡಳಿತ ನಡೆಸುತ್ತಿದ್ದುದು ಪ್ರಭುಗಳಿಗೆ ಲೇಸೇ ಆಯಿತು.

ಸುಖಲೋಲುಪರಾದ ಪ್ರಭುಗಳು ಸದಾ ವಾರಂಗನೆಯರು, ಪೀಠಮರ್ಧನರು, ನೃತ್ಯ, ಗೀತ, ವಾದ್ಯ ಪ್ರವೀಣರೊಂದಿಗೆ ಕಾಲಹರಣ ಮಾಡಲಾರಂಭಿಸಿದರು.

ಕುಶೀಲ ವಿದ್ಯಾಪಾರಂಗತನಾದ ಸಂಗಣ್ಣ ಪ್ರಭುಗಳ ನರ್ಮಸಚಿವನಾದ. ಅವನ ಮಾತೇ ಪ್ರಭುಗಳಿಗೆ ವೇದವಾಕ್ಯವಾಯಿತು.

'ವಸಂತ ವಿಹಾರ' ಮಂದಿರ ಬಿಟ್ಟು ಪ್ರಭುಗಳು ಹೊರಗೆ ಬರುವುದೇ ದುರ್ಲಭವಾಯಿತು. ಮದಿರಾ, ಮಾನಿನಿಯರನ್ನುಳಿದು ಅವರಿಗೆ ಯಾವುದೂ ಬೇಡವಾಯಿತು.

ಪ್ರಭುಗಳ ಮೂವರು ಮಡದಿಯರು – ಮಲ್ಲಿಯವ್ವೆ, ಹೇಮಾಂಬಿಕೆ, ಭೀಮಾದೇವಿಯವರು, ಅವರ ಸ್ವೈರಾಚರಣೆ ನೋಡಲಾಗದೆ ಹಗಲಿರುಳು ಗೋಳಿಡುತ್ತಿದ್ದರು.

ಪ್ರಭುಗಳ ರೀತಿನೀತಿಗಳನ್ನು ಕಂಡು ಬೇಸತ್ತಿದ್ದ ಶ್ರೀಕಂಠ ಶರ್ಮ ಒಂದು ದಿನ ಲಕ್ಷ್ಮೀಧರ ಅಮಾತ್ಯರನ್ನು ಕಂಡು,

"ರಾಜರ್ಷಿ ಇಮ್ಮಡಿ ಹರಿಹರರಾಯರು ಪರಲೋಕವಾಸಿಗಳಾಗಿ ಒಂದೆರಡು ವರ್ಷಗಳೂ ಆಗಿಲ್ಲ. ಅಣ್ಣತಮ್ಮಂದಿರ ಸ್ವಯೂಥ ಕಲಹದಿಂದ ರಾಜ್ಯದ ಬಿಕ್ಕಟ್ಟೇ ಸಡಿಲವಾಗಿದೆ, ಇಂದಿಗೂ ಬುಕ್ಕರಾಯರ ಹಾಗೂ

ವಿರೂಪಾಕ್ಷರ ಪಕ್ಷಪಾತಿಗಳು ಪ್ರಭುಗಳಿಗೆ ಕೇಡನ್ನೇ ಬಯಸುತ್ತಿದ್ದಾರೆ. ಕೃಷ್ಣಾನದಿಯ ಬಳಿ ಬಹಮನಿ ಸುಲ್ತಾನರು ಅನುಭವಿಸಿದ ಪರಾಭವವನ್ನು ಅವರು ಮರೆತಿದ್ದಾರೆಂದು ಭಾವಿಸಿರುವಿರಾ ? ವಿಜಯನಗರ ಅರಾಜಕ ವಾಯಿತೇ ? ನೀವು ಅಮಾತ್ಯರಾಗಿದ್ದುಕೊಂಡು ಈ ನಡತೆಯನ್ನು ಹೇಗೆ ಸಹಿಸುವಿರಿ ? – ಪ್ರಭುಗಳ ದುರ್ನಡತೆ, ದುರಾಡಳಿತ ಮಹಾಕ್ರಾಂತಿಗೆ ಹಾದಿ ಹಸನು ಮಾಡುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?" ಎಂದ.

"ನೀವು ಹೇಳುತ್ತಿರುವುದು ಅಕ್ಷರಶಃ ದಿಟ ಶರ್ಮರೇ. ನಾನು ನಿರು ಪಾಯನಾಗಿದ್ದೇನೆ. ಪ್ರಭುಗಳನ್ನು ಪ್ರತಿಭಟಿಸಿದರೆ ಅವರ ವಿರೋಧಿಗಳಿಗೆ ನಾನೇ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ರಾಣೀವಾಸದ ಗೋಳು ಕಲ್ಲನ್ನು ಕರಗಿಸುತ್ತದೆ. ಒಂದೆರಡು ಬಾರಿ ನಾನು ಪ್ರಭುಗಳೊಂದಿಗೆ ಮಾತನಾಡ ಲೆತ್ನಿಸಿದೆ – ಅವರು ನನ್ನನ್ನು ನೋಡುವುದೇ ಬಿಟ್ಟುಬಿಟ್ಟರು. ಮಂತ್ರಿಗಳಾದ ನಾವು ಪ್ರಭುಗಳ ಹತ್ತಿರ ಪತ್ರ ಸಂಬಂಧವಿಟ್ಟುಕೊಂಡು ವ್ಯವಹಾರ ಮಾಡ ಬೇಕಾಗಿದೆ."

"ಮಂತ್ರಿತ್ವಕ್ಕೆ ಎಲ್ಲಿ ಚ್ಯುತಿ ಬರುವುದೋ ಎಂದು ಪ್ರಭುಗಳ ವರ್ತನೆ ಯನ್ನು ಸಹಿಸುತ್ತಿರುವಿರಾ ಲಕ್ಷ್ಮೀಧರ ಅಮಾತ್ಯರೇ ?"

ಮ್ಲಾನವದನರಾದ ಲಕ್ಷ್ಮೀಧರರು,

"ಈ ಮಾತು ನೀವು ಆಡಬಾರದಾಗಿತ್ತು. ಯಾರ ಶ್ರೀಚರಣಗಳನ್ನು ಪೂಜಿಸಿ, ನೀವು ವೇದಾಂತಾಚಾರ್ಯರಾದಿರೋ, ಅದೇ ಶ್ರೀಚರಣಗಳ ಪವಿತ್ರ ಧೂಳಿ ಮುಡಿದು ನಾನು ಮಂತ್ರಿಯಾಗಿದ್ದೇನೆ. ಮಂತ್ರಿತ್ವ ಕ್ಷಣಭಂಗುರ ವಾದುದೆಂದು ನಾನು ಬಲ್ಲೆ. ಅದನ್ನು ಬಿಟ್ಟುಕೊಡುವುದಕ್ಕೆ ನಾನು ಯೋಚಿ ಸುತ್ತಲೂ ಇಲ್ಲ. ಹುಚ್ಚುದೊರೆಗೆ ಕಡಿವಾಣವೇ ಇಲ್ಲದಂತಾಗುತ್ತದಲ್ಲ ಎಂದು ಯೋಚಿಸುತ್ತಿದ್ದೇನೆ."

"ಸರಿ – ಪ್ರಭುಗಳು ತಮ್ಮ ಜೀವಿತಕ್ರಮ ಸುಧಾರಿಸಿಕೊಳ್ಳದಿದ್ದರೆ, ನಾನೇ ಕ್ರಾಂತಿ ಎಬ್ಬಿಸುತ್ತೇನೆಂದು ತಿಳಿಸಿಬಿಡಿ. ಪ್ರಭುಗಳ ಸ್ವೈರಾಚಾರ ಸಹಿಸುವ ಶಕ್ತಿ ನಿಮಗಿರಬಹುದು – ನಮಗಿಲ್ಲ."

ಎಂದು ಹೇಳಿದವನೇ ಹೊರಟು ಹೋದ.

ರಾಜಧಾನಿಯಲ್ಲಿ ಸರ್ವರ ಸಂಪ್ರೀತಿಗೆ ಪಾತ್ರನಾಗಿದ್ದ ಶ್ರೀಕಂಠಶರ್ಮ

ನಿಂದಲೇ ಪ್ರತಿಭಟನೆ ಎಂಬುದನ್ನು ಕಂಡು ಅಮಾತ್ಯರು ಅವಾಕ್ಕಾದರು.

'ವಿಳಂಬ ನೀತಿ'ಯಿಂದ ಅನರ್ಥಗಳು ಸಂಭವಿಸಬಹುದೆಂದು ಹೆದರಿದ ಅಮಾತ್ಯರು ಕೂಡಲೆ ಅಶ್ವವೇರಿ, ಪ್ರಭುಗಳ ದರ್ಶನಾಕಾಂಕ್ಷಿಗಳಾಗಿ 'ವಸಂತ ವಿಹಾರ'ಕ್ಕೆ ಬಂದರು.

ಕೋಪಾವಿಷ್ಟರಾಗಿ ಬಂದಿದ್ದ ಅಮಾತ್ಯರನ್ನು ತಡೆಯಲು ದ್ವಾರಪಾಲಕನಿಗಾಗಲಿ ಸಂಗಣ್ಣನಿಗಾಗಲಿ ಧೈರ್ಯವಾಗಲಿಲ್ಲ.

ನೇರವಾಗಿ ಪ್ರಭುಗಳ ಶಯ್ಯಾಗೃಹ ಪ್ರವೇಶಿಸಿದ ಅಮಾತ್ಯರನ್ನು ಕಂಡ ಕೂಡಲೆ ವೇಶ್ಯೆಯರು, ಅವರ ದಾಸದಾಸೀ ಜನರು ಗಾಬರಿಗೊಂಡು ನಿಷ್ಕ್ರಮಿಸಿದರು.

ಎಚ್ಚರವಿಲ್ಲದೆ ಮೃದುತಲ್ಪದ ಮೇಲೆ ಮಲಗಿದ್ದ ಪ್ರಭುಗಳನ್ನು ಅಮಾತ್ಯರು ಎಬ್ಬಿಸಿ ಕೂಡಿಸಲು, ಮೆಲ್ಲನೆ ಕಣ್ದೆರೆಯುತ್ತಾ,

"ಯಾರು – ನನ್ನನ್ನು ಎಬ್ಬಿಸಿದವರು" ಎಂದರು.

"ನಾನು ಪ್ರಭು – ಲಕ್ಷ್ಮೀಧರ ಅಮಾತ್ಯ."

"ಇಲ್ಲಿಗೆ ನೀವು ಬರಲು ನಾವು ಅಪ್ಪಣೆ ಕೊಟ್ಟಿರಲಿಲ್ಲ."

"ತಾವು ಕೊಟ್ಟಿರಲಿಲ್ಲ – ನಾನೇ ತೆಗೆದುಕೊಂಡೆ."

"ಏಕೆ ?"

"ಮಹತ್ತ್ವದ ವಿಷಯಗಳನ್ನು ಅರಿಕೆಮಾಡಿಕೊಳ್ಳಬೇಕಾಗಿದೆ."

"ಪತ್ರ ಬರೆಯಬೇಕಾಗಿತ್ತು."

"ಪತ್ರದಲ್ಲಿ ತಿಳಿಸುವ ವಿಷಯವಲ್ಲ."

"ಏನದು ?"

"ರಾಜ್ಯದಲ್ಲಿ ಕ್ರಾಂತಿಯಾಗುವ ಸಂಭವವಿದೆ."

"ಏಕೆ ?"

"ತಮ್ಮ................"

"ಕ್ರಾಂತಿ ಎಬ್ಬಿಸುವವರು ಯಾರು ?"

"ಪುರಜನರು."

"ಅವರ ನಾಯಕ ?"

"ಗೀರ್ವಾಣ ವಿದ್ಯಾಪೀಠದ ಶ್ರೀಕಂಠಶರ್ಮರು."

ಪ್ರಭುಗಳ ಮತ್ತು ಇಳಿದು ಹೋಯಿತು.

ಅವರು ಗಹಗಹಿಸಿ ನಗುತ್ತಾ,

" ವೈದಿಕ ಬ್ರಾಹ್ಮಣ ಕ್ರಾಂತಿನಾಯಕನಾಗುವನೇ ?"

" ವೈದಿಕ ಬ್ರಾಹ್ಮಣರೊಬ್ಬರು ಸಾಮ್ರಾಜ್ಯ ಸ್ಥಾಪನೆ ಮಾಡಿದರು ಎಂಬ ವಿಷಯ ಚಿತ್ತಕ್ಕೆ ವೇದ್ಯವಾಗಿರಬೇಕು."

" ಅವರು ಮಹಾತಪಸ್ವಿಗಳು."

" ಈ ಬ್ರಾಹ್ಮಣ ಅವರ ಶಿಷ್ಯ – ಇವನೂ ಮಹಾ ವರ್ಚಸ್ವಿ."

" ನಮ್ಮಿಂದೇನಾಗಬೇಕಂತೆ ?"

" ಸ್ಪಷ್ಟವಾಗಿ ಹೇಳಲೇ ?"

" ಹೇಳಿ – ನೀವು ನಮ್ಮ ಮಿತ್ರರು."

" ತಾವು ' ವಸಂತವಿಹಾರ ' ಬಿಟ್ಟು ಅರಮನೆ ಸೇರಬೇಕು. ಪ್ರಜರಿಗೆ ಹೆಚ್ಚು ಕಾಣಿಸಿಕೊಳ್ಳಬೇಕು. ರಾಜ್ಯ ವ್ಯವಹಾರದಲ್ಲಿ ಆಸಕ್ತಿ ವಹಿಸಬೇಕು. ವಿಜಯನಗರದ ಮೇಲೆ ಬಹಮನಿಯವರು ಯಾವಾಗ ದಂಡೆತ್ತಿ ಬರುವರೋ ಹೇಳಲು ಬರುವಂತಿಲ್ಲ. ಸ್ಥದ್ಯಕ್ಕಂತೂ ನಾವು ಯುದ್ಧಮಾಡುವ ಸ್ಥಿತಿಯಲ್ಲಿಲ್ಲ. ಒಳಾಡಳಿತದಲ್ಲಿಯೂ ಬಿಕ್ಕಟ್ಟು ತಲೆದೋರಿದೆ. ತಮಗೆ ಆಗದವರು ಬಹಮನಿ ಸುಲ್ತಾನರ ಸಖ್ಯ ಬೆಳಸಿದರೆ ಸಾಮಾಜ್ಯದ ಸ್ಥಿತಿ ಶೋಚನೀಯವಾಗುತ್ತದೆ."

ನೆಟ್ಟಗೆ ಕುಳಿತ ಪ್ರಭುಗಳು,

" ನಿಜ – ನಿಜ. ಪ್ರಕೃತ ಸ್ಥಿತಿಯಲ್ಲಿ ನಾವು ಬಹಮನಿಯವರ ಧಾಳಿ ಸಹಿಸಲು ಸಾಧ್ಯವಿಲ್ಲ. ಅವರೊಂದಿಗೆ ನಾವು ಸಂಧಿಮಾಡಿಕೊಳ್ಳುವುದೇ ವಿಹಿತವಾಗಿ ಕಾಣುತ್ತದೆ."

" ಗೆದ್ದವರು ಸೋತವರೊಂದಿಗೆ ಸಂಧಿಮಾಡಿಕೊಳ್ಳುವುದು ಹೀನಾಯ. ಇದಕ್ಕೊಂದು ಉಪಾಯ ಮಾಡೋಣ."

" ಹೇಳಿ."

"ನಾಳೆ ಚೈತ್ರಕ್ಕೆ ತಾವು ಪಟ್ಟಾಭಿಷಕ್ತರಾಗಿ ಎರಡು ವರ್ಷಗಳಾಗುತ್ತವೆ. ಮೂರನೆಯ ಪಟ್ಟಾಭಿಷೇಕ ಮಹೋತ್ಸವಕ್ಕೆ ಬರಬೇಕೆಂದು ಬಹಮನಿ ಸುಲ್ತಾನರಿಗೆ ಆಮಂತ್ರಣ ಕಳಿಸೋಣ. ಅವರು ಇಲ್ಲಿಗೆ ಬಂದಾಗ, ಪರ್ಯಾಯ ವಾಗಿ ಸಂಧಿಪ್ರಸ್ತಾಪಮಾಡಿ, ನಮ್ಮ ಉದ್ದೇಶ ಸಾಧಿಸಬಹುದು."

ಪ್ರಭುಗಳು ಹರ್ಷಚಿತ್ತರಾಗಿ,

"ನಿಮ್ಮ ಸಲಹೆ ಚೆನ್ನಾಗಿದೆ – ಆಮಂತ್ರಣ ಪತ್ರ ಕಳುಹಿಸಿ. ಉತ್ಸವಕ್ಕೆ ಬೇಕಾದ ವ್ಯವಸ್ಥೆಮಾಡಿ. ವಿಜಯನಗರದ ಆತಿಥ್ಯ ಕಂಡು ಸುಲ್ತಾನರು ಬೆಕ್ಕಸ ಬೆರಗಾಗಬೇಕು."

"ಅಪ್ಪಣೆ – ತಾವು ಅರಮನೆಗೆ..........."

"ಇಂದೇ ಬರುತ್ತೇನೆ ಅಮಾತ್ಯರೇ – ನಿಶ್ಚಿಂತರಾಗಿರಿ"

ಎಂದು ಪ್ರಭುಗಳು ಆಶ್ವಾಸನವಿತ್ತರು.

೩೧

ಬಹಮನಿ ಸುಲ್ತಾನ್ ಫಿರೋಜ್ ಷಾ ಅವರು ವಿಜಯನಗರದ ಚಕ್ರವರ್ತಿಗಳ ಆಹ್ವಾನ ಅಂಗೀಕರಿಸಿದರು.

ಜನಾನುರಾಗ ಕಳೆದುಕೊಂಡಿದ್ದ ದೇವರಾಯರು. ಸುಲ್ತಾನರು ಬಂದ ಕಾಲದಲ್ಲಿ ಜನ ವಿರೋಧ ಪ್ರದರ್ಶನಮಾಡಿದರೇನು ಗತಿ ಎಂದು ಭಯ ಗ್ರಸ್ತರಾದರು.

ಲಕ್ಷ್ಮೀಧರ ಅಮಾತ್ಯರು ಅವರಿಗೆ ಧೈರ್ಯ ಹೇಳಿ ಒಂದು ದಿನ ವೈಹಾಳಿ ಕರೆದೊಯ್ದರು. ಪ್ರಭುಗಳು ಹೋದೆಡೆಯಲ್ಲೆಲ್ಲಾ ಜನ ತಂಡೋಪ ತಂಡವಾಗಿ ನೆರೆದು ಅವರಿಗೆ ಜಯಜಯಕಾರ ಘೋಷಿಸಿದರು.

ಜನತೆಯ ಸರಳ ವರ್ತನೆ ದೇವರಾಯರ ಮನಸ್ಸಿನ ಮೇಲೆ ಪರಿಣಾಮ ವನ್ನುಂಟುಮಾಡಿತು.

"ಪ್ರಭುವೇ ಪ್ರತ್ಯಕ್ಷ ಪರಮೇಶ್ವರ ಎಂದು ನಮ್ಮ ಜನ ಭಾವಿಸಿದ್ದಾರೆ. ಆ ಭಾವನೆಗೆ ತಕ್ಕಂತೆ ವರ್ತಿಸಬೇಕಾದುದು ಪ್ರಭುಗಳ ಕರ್ತವ್ಯ"

ಎಂದು ಅಮಾತ್ಯ ಲಕ್ಷ್ಮೀಧರರು ಎಚ್ಚರಿಕೆಯಿತ್ತರು.

ಮಾರನೆಯ ದಿನ ಬೆಳಿಗ್ಗೆ ದೇವರಾಯರು ತಮ್ಮ ಮೂವರು ಪತ್ನಿಯ ರೊಡಗೂಡಿ, ಶ್ರೀ ವಿರೂಪಾಕ್ಷ ಶ್ರೀಭುವನೇಶ್ವರಿಯರ ದೇವಾಲಯಕ್ಕೆ ಹೋಗಿ ಪೂಜೆ ಪುರಸ್ಕಾರಗಳನ್ನು ಸಲ್ಲಿಸಿದರು.

ಆನಂದತುಂದಿಲರಾದ ಪ್ರಜರು ದೇವರಾಯರ ಸಮಸ್ತ ಅಪರಾಧಗಳನ್ನು ಮರೆತು, ರಾಜಭಕ್ತಿ ಪ್ರದರ್ಶಿಸಿದರು.

ಸುಲ್ತಾನರು, 'ಅವರ ಪರಿವಾರ ಇಳಿದುಕೊಳ್ಳುವುದಕ್ಕೆ 'ವಸಂತ ವಿಹಾರ' ಸಜ್ಜುಗೊಳಿಸಲಾಯಿತು. ಊರಿಗೆ ಊರೇ ವಿಶೇಷ ರೀತಿಯಲ್ಲಿ ಅಲಂಕೃತವಾಯಿತು.

ಪ್ರಭುಗಳ ಬಗ್ಗೆ ಜನರ ಮನಸ್ಸಿನಲ್ಲಿದ್ದ ಕಿನಿಸು ಮಾಯವಾಗಿದ್ದುದರಿಂದ, ಎಲ್ಲರೂ ಸಹಕರಿಸಿದರು. ಪ್ರತಿ ಮನೆಯೂ ಸುಣ್ಣ ಬಣ್ಣಗಳಿಂದಲೂ, ದೀಪ ಸಾಲುಗಳಿಂದಲೂ, ಚಿತ್ರ ವಿಚಿತ್ರ ರಂಗವಲ್ಲಿಗಳಿಂದಲೂ ಅಲಂಕೃತವಾಯಿತು.

'ವಸಂತ ವಿಹಾರ'ಕ್ಕೆ ಆರು ಮೈಲಿಗಳ ದೂರದಲ್ಲಿದ್ದ ಊರಿನ ಹೆಬ್ಬಾಗಿಲ ಬಳಿ, ಸುಲ್ತಾನರು ಬರುವ ವೇಳೆಗೆ ಪ್ರಭುಗಳು, ಅಮಾತ್ಯರು, ನಗರ ಪ್ರತಿನಿಧಿಗಳು ಕಾದಿದ್ದು ಸುಲ್ತಾನರನ್ನು ಸ್ವಾಗತಿಸಿದರು.

ದಾರಿಯುದ್ದಕ್ಕೂ ಕಿನಕಾಪ್, ರೇಶ್ಮೆ, ಪೀತಾಂಬರ, ಚೀನಾಂಬರಗಳು ಹಾಸಲ್ಪಟ್ಟಿದ್ದವು.

ಪ್ರಭುಗಳು, ಸುಲ್ತಾನರು ದಿವ್ಯಾಶ್ವಗಳನ್ನೇರಿ ಹೊರಟರು. ಅವರ ಇಕ್ಕೆಲಗಳಲ್ಲಿ ಸುಂದರ ಬಾಲಕ, ಬಾಲಿಕೆಯರು ಮಂಗಳ ಗೀತೆಗಳನ್ನು ಹಾಡುತ್ತಾ ಚಿನ್ನ, ಬೆಳ್ಳಿಯ ಹೂಗಳನ್ನೆರಚುತ್ತ ಹೊರಟರು.

ಹೆಜ್ಜೆಹೆಜ್ಜೆಗೂ ನಾಗರಿಕರು ಫಲಪುಷ್ಪಗಳನ್ನು ಒಪ್ಪಿಸುತ್ತಿದ್ದರು.

ಮೆರವಣಿಗೆ ನಗರ ಮಧ್ಯಕ್ಕೆ ಬರಲು ಪ್ರಭುಗಳ ಬಂಧುವರ್ಗದವರು, ಊರಿನ ವಣಿಕಶ್ರೇಷ್ಠರು ಗೌರವ ಕಾಣಿಕೆಗಳನ್ನರ್ಪಿಸಿ, ಮೆರವಣಿಗೆಯ ಜತೆ ಹೊರಟರು.

ಅರಮನೆಯ ಮಹಾದ್ವಾರದಲ್ಲಿ ಪ್ರಭುಗಳು, ಸುಲ್ತಾನರು ಇಳಿದು, ಸಿದ್ಧವಾಗಿದ್ದ ಮೇನೆಗಳಲ್ಲಿ 'ವಸಂತ ವಿಹಾರ' ಸೇರಿದರು.

ಅಲ್ಲಿ ಸುಲ್ತಾನರ ಜತೆ ಸ್ವಲ್ಪಹೊತ್ತು ಕುಶಲ ಸಂಭಾಷಣೆ ಮಾಡಿ, ತಮ್ಮ ಪರಿವಾರದೊಂದಿಗೆ ಪ್ರಭುಗಳು ಅರಮನೆಗೆ ಹಿಂದಿರುಗಿದರು.

ಮೂರು ದಿನಗಳು ಅಭೂತಪೂರ್ವವಾದ ಔತಣಗಳ ಏರ್ಪಾಡಾಯಿತು.

ವಿಜಯನಗರದವರ ಆದರಾತಿಥ್ಯ, ಔದಾರ್ಯ ಕಂಡ ಸುಲ್ತಾನರು ಬೆರಗಾದರು.

ನಾಲ್ಕನೆಯ ದಿನ ಸುಲ್ತಾನರು ಪ್ರಯಾಣ ಸನ್ನದ್ಧರಾಗಲು ಪ್ರಭುಗಳು ಅವರಿಗೆ ಅನರ್ಘ್ಯ ಜವಾಹಿರಿ, ವಜ್ರ, ವೈಢೂರ್ಯಗಳ ಉಡುಗೊರೆಯನ್ನೂ, ಅವರೊಂದಿಗೆ ಬಂದಿದ್ದ ಅಹಮದ್ ಖಾನ್, ಖಾನ್ ಖಾನ್, ಮೀರ ಫಜಲುಲ್ಲಾ ಅವರಿಗೆ ಬೆಲೆಬಾಳುವ ಆಭರಣ ವಸ್ತ್ರಗಳನ್ನೂ ಇತ್ತರು.

ಹೊರಡುವ ಮುನ್ನ ಸುಲ್ತಾನರು ಪ್ರಭುಗಳನ್ನಪ್ಪಿಕೊಂಡು,

"ತಾವೂ, ತಮ್ಮ ಪರಿವಾರ ನಮ್ಮ ಬಹಮನಿರಾಜ್ಯಕ್ಕೆ ಬಂದು ಅಲ್ಪಾತಿಥ್ಯ ಸ್ವೀಕರಿಸಬೇಕು. ನಿಮ್ಮ ಘನ ಔದಾರ್ಯ ಕಂಡು ನಾವು ಅರೆಮೂಕರಾಗಿದ್ದೇವೆ. ಪರಂಪರಾಗತವಾಗಿ ಬಂದಿರುವ ವೈಷಮ್ಯವನ್ನು ಮರೆತು ನಾವು ಸ್ನೇಹ, ಸೌಹಾರ್ದದಿಂದಿದ್ದುಕೊಂಡು ಉಭಯ ರಾಜ್ಯಗಳ ಪ್ರಗತಿ ಸಾಧಿಸೋಣ."

ಎಂದರು. ಮಹಾಪ್ರಭುಗಳು ಅವರ ಸಲಹೆಗೆ ಒಪ್ಪಿಗೆಯನ್ನಿತ್ತು,

"ಇನ್ನು ಯಾವ ಕಾರಣಕ್ಕೂ ನಾವು ಸೆಣಸುವುದು ಬೇಡ. ನಮ್ಮ ನಮ್ಮಲ್ಲಿ ವೈಮನಸ್ಯ ಹುಟ್ಟಿದರೆ ಸಂಧಿವಿಗ್ರಹಿಗಳ ಮೂಲಕ ಪರಿಹರಿಸಿಕೊಳ್ಳೋಣ." ಎಂದರು.

ಸುಲ್ತಾನರು, ಅವರ ಪರಿವಾರ ಹೊರಡಲು ಪ್ರಭುಗಳು ನಾಲ್ಕು ಮೈಲಿಗಳವರೆಗೆ ಅವರ ಜತೆ ಹೋಗಿ, ತಮ್ಮ ಆಪ್ತಪರಿವಾರದೊಂದಿಗೆ ಹಿಂದಿರುಗಿದರು.

ಶೀಘ್ರ ಕೋಪಿಗಳಾದ ಸುಲ್ತಾನರು ಮೀರ್ ಫಜಲುಲ್ಲಾ ಕಡೆ ತಿರುಗಿ,

"ನೋಡಿದಿರಾ ಫಜಲುಲ್ಲಾ. ನಗರದ ಮಹಾದ್ವಾರದವರೆಗೆ ಬಂದು ನಮ್ಮನ್ನು ಬೀಳ್ಕೊಡದೆ ದೇವರಾಯರು ಹಿಂದಿರುಗಿದುದನ್ನು!" ಎಂದರು.

"ಈ ಹಿಂದುಗಳೇ ಹೀಗೆ ಹುಜೂರ್. ಮಹಾ ಅಹಂಕಾರಿಗಳು! ಬಹಮನಿ ಸುಲ್ತಾನರನ್ನು ಕಸಕ್ಕಿಂತ ಕಡೆಯಾಗಿ ಕಂಡೆ ಎಂದು ತಮ್ಮ ಪ್ರಜೆಗಳಿಗೆ ತೋರಿಸಿಕೊಳ್ಳಲು ದೇವರಾಯರು ಉದ್ದೇಶಪೂರ್ವಕವಾಗಿಯೇ ತಮಗೆ ಅಪಮಾನವೆಸಗಿದ್ದಾರೆ"

ಎಂದು ಫಜಲುಲ್ಲಾ ಉರಿಯುವ ಬೆಂಕಿಗೆ ಆಜ್ಯಹುಯ್ದ. ಸುಲ್ತಾನರು ಕೆರಳಿ

"ಹಾಗೇನು! ಸುಲ್ತಾನರ ಶಕ್ತಿ ಎಷ್ಟೆಂಬುದನ್ನು ಈ ಕಾಫಿರ್ ರಾಜನಿಗೆ ತೋರಿಸುತ್ತೇನೆ" ಎಂದರು.

ನಗರದ ಮಹಾದ್ವಾರದವರೆಗೆ ಸುಲ್ತಾನರ ಜತೆ ಹೋಗಿ, ಅವರನ್ನು ಬೀಳ್ಕೊಡಲು ಹಿಂಬಾಲಿಸುತ್ತಿದ್ದ ಪ್ರಭುಗಳ ಪರಿವಾರದವರ ಕಿವಿಗಳ ಮೇಲೆ ಸುಲ್ತಾನರ ಮಾತುಗಳು ಬೀಳಲು, ಅವರು ಹಿಂದಿರುಗಿದ ಮೇಲೆ ಪ್ರಭುಗಳಿಗೆ ವಿಷಯ ನಿವೇದಿಸಿ,

" ಕೊನೆಗೂ ಮ್ಲೇಚ್ಛನಾಗಿಯೇ ವರ್ತಿಸಿದ ಮಹಾಪ್ರಭೂ. ತಮ್ಮನ್ನು ' ಕಾಫಿರ್ ರಾಜಾ ' ಎಂದು ಕರೆದ" ಎಂದರು.

ಹೆಡೆತುಳಿಸಿಕೊಂಡ ಹಾವಿನಂತೆ ರೊಚ್ಚಿಗೆದ್ದ ಪ್ರಭುಗಳು,

" ಕುಲವನ್ನು ನಾಲಿಗೆ ಹೇಳಿತು ! ನಾಯಿಯನ್ನು ಕರೆತಂದು ನಾವು ಸಿಂಹಾಸನದ ಮೇಲೆ ಕೂಡಿಸಿದ ಹಾಗಾಯಿತು." ಎಂದರು.

ತಮ್ಮ ಸಂಧಿಪ್ರಯತ್ನ ಇಂತು ಕುಸಿದು ಬಿದ್ದುದನ್ನು ಕಂಡು ಲಕ್ಷ್ಮೀಧರ ಅಮಾತ್ಯರು ದುಃಖಿತರಾದರು.

೩೨

ಪಾಠದ ಮೇಲೆ ಸ್ವಲ್ಪವೂ ಮನಸ್ಸಿಲ್ಲದೆ ಅಡಿಗಡಿಗೆ ಬಾಗಿಲನ್ನೇ ನೋಡುತ್ತಿದ್ದ ಛಾಯೆಯ ಚಲನವಲನವನ್ನೇ ಈಕ್ಷಿಸುತ್ತಿದ್ದ ಗುರುಗಳಾದ ಶಿವಶಂಕರ ಶಾಸ್ತ್ರಿಗಳು,

"ಏಕೆ ಛಾಯಾ, ಇವತ್ತು ಪಾಠ ಬೇಕಿಲ್ಲವೇನು ?" ಎಂದು ಕೇಳಿದರು.

" ನಾನು ಪಾರ್ವತಿಯ ಮನೆಗೆ ಹೋಗಬೇಕಾಗಿತ್ತು ಗುರುಗಳೇ."

" ಏಕೆ ?"

ಛಾಯ ಹೇಳಲು ನಾಚಿದಳು.

" ಹೇಳು – ಪರವಾಗಿಲ್ಲ."

" ಇವತ್ತು ಅವರ ಮನೆಯಲ್ಲಿ ನಿಶ್ಚಯಪ್ರಸ್ತ."

ಗುರುಗಳು ನಕ್ಕು,

" ಈ ಮಾತು ಮೊದಲೇ ಹೇಳಬಾರದಾಗಿತ್ತು – ಹೋಗು" ಎಂದರು.

ಹರಿಣಿಯಂತೆ ಚಂಗನೆ ನೆಗೆದು ಹಾರಿಹೋದ ಛಾಯೆಯನ್ನೇ ನೋಡುತ್ತ ಕುಳಿತಿದ್ದ ಶಿವಶಂಕರಶಾಸ್ತ್ರಿಗಳು ಮೆಲ್ಲನೆದ್ದು ಹೊರಡಲನುವಾದರು.

ಅದೇ ಒಳಗೆ ಬಂದ ಎರೆಯಪ್ಪಗೌಡ,

"ಏಕೆ ಸ್ವಾಮಿ, ಇಷ್ಟು ಬೇಗ ಹೊರಟುಬಿಟ್ಟಿರಿ. ಪಾಠ ಮುಗಿಯಿತೇ–ಛಾಯೆ ಎಲ್ಲಿ" ಎಂದ.

"ತನ್ನ ಗೆಳತಿ ಪಾರ್ವತಿ ಮನೆಯಲ್ಲಿ ನಿಶ್ಚಯಪ್ರಸ್ತವೆಂದು ಛಾಯೆ ಹೋದಳು ಗೌಡ. ಇವತ್ತು ಪಾಠ ಮಾಡಲಿಲ್ಲ."

"ತಾಂಬೂಲ ಹಾಕಿಕೊಂಡು ಹೋಗಿ ಸ್ವಾಮಿ."

ಎಂದು ಗೌಡ ಎಲಡಿಕೆ ಸುಣ್ಣದ ತಟ್ಟೆ ತಂದು ಶಾಸ್ತ್ರಿಗಳ ಮುಂದಿಟ್ಟ.

ತಾಂಬೂಲಪ್ರಿಯರಾದ ಶಾಸ್ತ್ರಿಗಳು ಸಾವಕಾಶ ಕುಳಿತು ತಾಂಬೂಲ ಸವಿಯಲಾರಂಭಿಸಿದರು.

ಗೌಡನೂ ಎಲಡಿಕೆ ಹಾಕಿಕೊಳ್ಳಲಾರಂಭಿಸಿದ.

"ಛಾಯಾ ಹೇಗಾಗಿದ್ದಾಳೆ ನೋಡಿದೆಯಾ ಗೌಡ."

"ಎರಡು ವರ್ಷದಲ್ಲಿ ಭೋ ಬೆಳೆದುಬಿಟ್ಟಳು ಬುದ್ಧಿ."

"ಇವಳ ವಿಷಯ ಏನು ಯೋಚಿಸಿದ್ದೀ?"

"ನನಗೆ ಒಂದೂ ತಿಳಿಯದ ಹಾಗಾಗಿದೆ. ಲಗ್ನ ಮಾಡಬೇಕು – ಇವಳಿಗೆ ತಕ್ಕ ಗಂಡನನ್ನು ಹುಡುಕುವುದೇ ಒಂದು ಸಮಸ್ಯೆಯಾಗಿದೆ."

"ಕೆನ್ನೈದಿಲೆ ಹೂವಿನಂತಿರುವ ಮಗುವನ್ನು ಯಾವನೋ ಗಾಂಪನಿಗೆ ಕೊಟ್ಟು ಬಿಡಬೇಡ ಗೌಡ."

"ಇನ್ನೇನು ಮಾಡಲಿ ಬುದ್ಧಿ."

"ನನಗೊಂದು ಯೋಚನೆ ಹೊಳೆದಿದೆ"

"ಅಪ್ಪಣೆಯಾಗಲಿ."

"ಛಾಯೆಯ ಸೌಂದರ್ಯ, ವಿದ್ಯಾಬುದ್ಧಿ ವ್ಯರ್ಥವಾಗಬಾರದು. ಯಾವನೋ ರೈತನ ಕೈಹಿಡಿದು, ನಿತ್ಯ ಅವನಿಗೆ ರೊಟ್ಟಿ, ಬುತ್ತಿಯನ್ನು ಹೊತ್ತುಕೊಂಡು ಹೋಗುವುದಲ್ಲ ಅವಳ ಜಾಯಮಾನ."

"ನಾವು ಬಡವರು – ನಮ್ಮ ಹಾಗೇ ಬಡವರಾಗಿರುವವರ ಮನೆಗೆ

ತಾನೆ ನಮ್ಮ ಮಗುವನ್ನು ಕೊಡಬೇಕು."

"ಅಗತ್ಯವಿಲ್ಲ. ಛಾಯೆಯನ್ನು ಲಗ್ನವಾಗಲು ರಾಜಾಧಿರಾಜರು, ನಾನ ತಾನೆಂದು ಬರುತ್ತಾರೆ. ಒಬ್ಬ ದೊರೆ ನಿನ್ನ ಅಳಿಯನಾದರೆ ಹೇಗಿರುತ್ತ ಗೌಡ.

"ಹಾಸ್ಯಮಾಡುತ್ತೀರಾ ಬುದ್ಧಿ."

"ಹಾಸ್ಯವಲ್ಲಯ್ಯಾ. ನೀನು ಹೂ ಅನ್ನು – ನಾನು ಕುದುರಿಸುತ್ತೇನೊ ಇಲ್ಲವೋ, ನೋಡುವೆಯಂತೆ."

"ದೊರೆಯನ್ನೇ ?"

"ದೊರೆಯನ್ನಲ್ಲ – ಚಕ್ರವರ್ತಿಯನ್ನು ! ವಿಜಯನಗರದ ಮಹಾ ಪ್ರಭುಗಳು ಶ್ರೀಶ್ರೀ ದೇವರಾಯರ ಹೆಸರು ಕೇಳಿರುವೆಯಲ್ಲವೇ ?"

"ಅಟ್ಟಕ್ಕೆ ಹಾರದ ಬಡ್ಡಿ ಬೆಟ್ಟಕ್ಕೆ ಹಾರುವುದೇ ನನ್ನೊಡೆಯಾ ?"

"ನೀನು ಹೂ ಅನ್ನು – ನಾನು ವಿಜಯನಗರಕ್ಕೆ ಹೋಗ ಬರುತ್ತೇನೆ."

"ಮಹಾಸ್ವಾಮಿಯವರಿಗೆ ಈಗಲೇ ಮೂರು ಹೆಂಡಿರಿದ್ದಾರಂತಲ್ಲಾ ಬುದ್ಧಿ."

"ಇದ್ದಾರೆ. ಇರಲಿ ಅದಕ್ಕೇನು – ರಾಜಾ ಬಹುವಲ್ಲಭಾ ಎಂದು ದೊಡ್ಡವರು ಹೇಳಿಯೇ ಇದ್ದಾರೆ. ದೊರೆಯ ಹೆಂಡಂದಿರು ಒಂದೇ ಮನೆ ಯಲ್ಲಿದ್ದುಕೊಂಡು ಕಿತ್ತಾಡಬೇಕಾಗಿದೆಯೇ ಗೌಡ. ಛಾಯೆಯನ್ನು ವಿಜಯ ನಗರದ ಮಹಾಪ್ರಭುಗಳು ಲಗ್ನವಾದರೆ, ಅವಳಿಗೆ ಪ್ರತ್ಯೇಕ ಅರಮನೆ, ಸಲ್ತ ಪತ್ತು, ಸಿಬ್ಬಂದಿ ಕೊಡುತ್ತಾರೆ."

"ಛಾಯಾ ಒಪ್ಪಬೇಕಲ್ಲ !"

"ಅಯ್ಯೋ ಹುಚ್ಚ ! ದೊರೆಯ ಲಗ್ನವಾಗಲು ಯಾವ ಹೆಣ್ಣು ಮಗಳು ಒಲ್ಲೆಯೆನ್ನುತ್ತಾಳಯ್ಯ."

"ಲಗ್ನ ಕುದುರಿಸುತ್ತೀರಾ ಬುದ್ಧಿ."

"ಕುದುರಿಸದಿದ್ದರೆ ನನ್ನ ಶಿವಶಂಕರಶಾಸ್ತ್ರಿ ಎಂದು ಕರೆಯಬೇಡ."

"ನಿಮ್ಮ ಸಂತೋಷವಿದ್ದ ಹಾಗೆ ಮಾಡಿ ನನ್ನೊಡೆಯಾ. ಹೊಟ್ಟೆಯಲ್ಲಿ ಹುಟ್ಟಿದ ಮಗಳಿಗಿಂತಲೂ ಹೆಚ್ಚಾಗಿ ಅವಳನ್ನು ಕಂಡು ಅವಳಿಗೆ ವಿದ್ಯಾಬುದ್ಧಿ

ಕಲಿಸಿದ್ದೀರಿ. ನಿಮ್ಮ ಮಾತಿಗೆ ನಾನು ಪ್ರತಿ ಹೇಳುವುದಿಲ್ಲ."

ಕನ್ಯಾಪಿತೃವಿನ ಅಪ್ಪಣೆ ಪಡೆದು ಹೊರಟ ಶಿವಶಂಕರ ಶಾಸ್ತ್ರಿಗಳು ನೇರವಾಗಿ ರಾಜಧಾನಿಗೆ ಬಂದು, ಮಹಾಪ್ರಭುಗಳ ಸಂದರ್ಶನ ಬಯಸಿದರು.

ಶಾಸ್ತ್ರಿಗಳು ಮುದಕಲ್ಲುಗ್ರಾಮದವರೆಂದು ತಿಳಿದ ಕೂಡಲೆ ಅವರನ್ನು ಮಂತ್ರಿ ಮಲ್ಲಪ್ಪ ಒಡೆಯರು, ಮಹಾಪ್ರಭುಗಳ ಸನ್ನಿಧಿಗೆ ಕರೆದೊಯ್ದರು.

"ನೀವು ಮುದಕಲ್ಲು ಗ್ರಾಮದವರೇ ಶಾಸ್ತ್ರಿಗಳೇ ?"

"ಹೌದು ಮಹಾಪ್ರಭು. ಒಂದು ರಹಸ್ಯ ವಿಷಯ ಪ್ರಸ್ತಾಪಿಸಲು ಬಂದಿದ್ದೇನೆ."

ಮಹಾಪ್ರಭುಗಳು ಎಲ್ಲರನ್ನೂ ಆಲೋಚನ ಮಂದಿರದಿಂದ ಹೊರಗೆ ಕಳುಹಿಸಿ,

"ಇನ್ನು ನಿಸ್ಸಂಕೋಚದಿಂದ ಮಾತನಾಡಿ" ಎಂದರು.

ಪ್ರಭುಗಳ ಸಮೀಪಕ್ಕೆ ಬಂದು ಶಾಸ್ತ್ರಿಗಳು ಪಿಸುದನಿಯಲ್ಲಿ,

"ಮುದಕಲ್ಲಿನಲ್ಲಿ ಎರೆಯಪ್ಪಗೌಡ ಎನ್ನುವ ಗ್ರಾಮೀಣನಿದ್ದಾನೆ. ಅವನ ಹೆಂಡತಿ ಸುಗ್ಗವ್ವೆ. ದಂಪತಿಗಳು ಬಡವರಾದರೂ ಸಂಭಾವಿತರು. ಉದಾರ ಚಿತ್ತರು. ಅವರಿಗೆ ಛಾಯಾ ಎನ್ನುವ ಮಗಳಿದ್ದಾಳೆ. ಚಿಕ್ಕಂದಿನಿಂದ ನಾನೇ ಪಾಠಪ್ರವಚನ ಹೇಳಿಕೊಡುತ್ತಿದ್ದೇನೆ. ಈಗ ಛಾಯಾ ವಿವಾಹವಯಸ್ಕಳಾಗಿ ರುತ್ತಾಳೆ."

"ಅವಳಿಗೆ ವಿವಾಹ ಮಾಡಿಸಲು ಹಣಬೇಕಾಗಿತ್ತೇ ?"

"ಇಲ್ಲ ಮಹಾಪ್ರಭು, ದಿವ್ಯ ಸುಂದರಿಯೊಬ್ಬಳನ್ನು ಸೃಷ್ಟಿಸಬೇಕೆಂದು ಈ ವರೆಗೆ ಪ್ರಯತ್ನಿಸಿ ವಿಫಲನಾದ ಬ್ರಹ್ಮ ಈಗ ಕೃತಾರ್ಥನಾಗಿದ್ದಾನೆ. ಛಾಯೆ ಅಪೂರ್ವಸುಂದರಿ. ಶಕುಂತಲೆಯ ರೂಪಲಾವಣ್ಯವನ್ನೇ ಅತ್ಯಮೋಘವಾಗಿ ಚಿತ್ರಿಸಿರುವ ಮಹಾಕವಿ ಕಾಳಿದಾಸ, ಛಾಯೆಯನ್ನು ಕಂಡಿದ್ದರೆ ಏನು ಹೇಳು ತ್ತಿದ್ದನೋ ? ಈ ಸೌಂದರ್ಯನಿಧಿ ಬಡರೈತನ ಗುಡಿಸಲು ಸೇರಿ ನಾಶವಾಗ ಬಾರದು. ಚಿನ್ನಕ್ಕೂ ಕುಂದಣ ಬೇಕಲ್ಲವೇ ?"

" ಈ ಕನ್ಯೆಯ ವಯಸ್ಸೆಷ್ಟು ?"

" ಹದಿನೆಂಟು."

" ಈ ಹಳ್ಳಿಯ ಹುಡುಗಿ ನೀವು ಹೇಳುವಷ್ಟು ಸೌಂದರ್ಯವತಿಯೇ ?"

" ಅವಳ ಸೌಂದರ್ಯ ವರ್ಣಿಸುವುದಕ್ಕೆ ಕಾಳಿದಾಸನ ಪ್ರತಿಭೆ ಬೇಕು, ಮಹಾಪ್ರಭು. ನಾನೊಬ್ಬ ಬಡ ಹಳ್ಳಿಯ ಉಪಾಧ್ಯಾಯ."

" ಹುಡುಗಿಯ ತಾಯಿತಂದೆಯ ಜತೆ ಮಾತನಾಡಿರುವಿರಾ ?"

" ಮಾತನಾಡಿ, ಅವರನ್ನು ಒಪ್ಪಿಸಿಕೊಂಡು ಬಂದಿದ್ದೇನೆ."

ಕ್ಷಣಕಾಲ ಯೋಚಿಸಿದ ಪ್ರಭುಗಳು,

" ಒಳ್ಳೆಯದು. ನೀವಿಂದೇ ಮುದಕಲ್ಲಿಗೆ ಪ್ರಯಾಣ ಮಾಡಿ ಕನ್ಯೆಯನ್ನೂ ಆವಳ ಮಾತಾಪಿತೃಗಳನ್ನೂ ಇಲ್ಲಿಗೆ ಕರೆತರುವಿರಾ ?"

" ಅಗತ್ಯವಾಗಿ."

ಪ್ರಭುಗಳು ಮಲ್ಲಪ್ಪ ಒಡೆಯರನ್ನು ಕರೆದು,

" ಶಾಸ್ತ್ರಿಗಳ ಜತೆ ಮೇನೆ, ವಸ್ತ್ರಾಭರಣಗಳು, ಮಿತ ಪರಿವಾರ ಕಳಿಸಿ ಕೊಡಿ. ಅವರಿಗೆ ದಿವ್ಯ ಪೀತಾಂಬರ, ನೂರು ಸುವರ್ಣ ವರಹಗಳನ್ನೂ, ವಜ್ರಖಚಿತ ಉಂಗುರವನ್ನೂ ಉಡುಗೊರೆಯಾಗಿ ಕೊಡಿ. ಸಂಗಣ್ಣ ಜತೆಯಲ್ಲಿ ಹೋಗಲಿ."

ಎಂದು ಹೇಳಿ,

" ಶಾಸ್ತ್ರಿಗಳೇ – ನೀವು ಈ ಕೆಲಸ ಸಾಧಿಸಿಕೊಂಡು ಬನ್ನಿ – ನೀವು ಹೇಳಿರುವುದು ನಿಜವಾದರೆ ಸುವರ್ಣದಲ್ಲಿ ನಿಮ್ಮ ತುಲಾಭಾರ ತೂಗಿಸುತ್ತೇನೆ."

ಎಂದು ಅಪ್ಪಣೆ ಕೊಡಿಸಿದರು.

ವಿಜಯನಗರದ ಪರಿವಾರದವರು, ಮೇನೆಯೊಂದಿಗೆ ಮುದಕಲ್ಲಿಗೆ ಬಂದ ಶಾಸ್ತ್ರಿಗಳು, ಕೂಡಲೇಎರೆಯಪ್ಪಗೌಡನ ಮನೆಗೆ ಹೋಗಿ

" ಕೂಡಲೆ ಹೊರಡಿ " ಎಂದರು.

ವಿಜಯನಗರದಿಂದ ಬಂದಿದ್ದ ಉಡುಗೊರೆ ಕಂಡು ಎರೆಯಪ್ಪನ ಕಣ್ಣುಗಳು ಕೋರೈಸಿದವು. ವಸ್ತ್ರಾಭರಣಗಳಿಂದ ಆಕರ್ಷಿತಳಾದ ಛಾಯೆ ಬಂದು ಅವುಗಳನ್ನೆತ್ತಿಕೊಂಡು ನೋಡುತ್ತಾ

" ಇವುಗಳು ಯಾರವು ಅಪ್ಪಾಜಿ " ಎಂದು ಕೇಳಿದಳು.

" ನಿನ್ನದು ಛಾಯಾ."

" ನನ್ನದು ! "

" ಹೌದು, ನಿನ್ನ ಕೈಹಿಡಿಯುವ ಧಣಿಗಳು ಕಳಿಸಿದ್ದಾರೆ ? "

" ಯಾರವರು ? "

" ವಿಜಯನಗರದ ಮಹಾಪ್ರಭುಗಳಾದ ಶ್ರೀ ಶ್ರೀ ದೇವರಾಯರು."

ಕೈಯಲ್ಲಿ ಹಿಡಿದಿದ್ದ ರತ್ನಾಹಾರವನ್ನು ತಟ್ಟೆಯಲ್ಲಿ ಬಿಸುಟು ಒಳಗೆ ಓಡಿ ಹೋದ ಛಾಯಾ ತಾಯಿಯ ಕುತ್ತಿಗೆಯಪ್ಪಿಕೊಂಡು ಬಿಕ್ಕಿಬಿಕ್ಕಿ ಅಳುತ್ತಾ

" ನಾನು ದೊರೆಯನ್ನು ಮದುವೆಯಾಗಲ್ಲ ಅಮ್ಮಾಜಿ " ಎಂದಳು.

ಸುಗ್ಗವ್ವೆ ಮಗಳನ್ನು ಸಂತೈಸುತ್ತಾ

" ಹಟ ಮಾಡಬಾರದು ಛಾಯಾ, ವಿಜಯನಗರದ ಮಹಾರಾಣಿ ಯಾಗುವ ಸೌಭಾಗ್ಯ ಅಲ್ಪವಾದದ್ದೇ–ನಿನ್ನಿಂದ ನಮ್ಮ ಕಷ್ಟಗಳು ಪರಿಹಾರ ವಾಗುತ್ತವೆ. "

" ನನ್ನನ್ನು ಮಾರಲು ಇಷ್ಟಪಡುತ್ತೀರಾ ? "

" ಮಾರುವ ಪ್ರಶ್ನೆ ಎಲ್ಲಿಂದ ಬಂತು. ಒಂದಲ್ಲ ಒಂದು ದಿನ ನಿನ್ನ ಲಗ್ನ ವಾಗಬೇಕಾಲ್ಲವೇ ? "

" ನಾನು ಲಗ್ನವಾಗುವುದಿಲ್ಲ "

" ಏಕೆ ?"

" ನಿಮ್ಮನ್ನು ಬಿಟ್ಟು ಹೋಗಲಾರೆ."

" ಲಗ್ನಕ್ಕೆ ಮುಂಚೆ ಎಲ್ಲ ಹೆಣ್ಣು ಮಕ್ಕಳೂ ಇದೇ ಮಾತಾಡುತ್ತಾರೆ."

" ನಾನು ಎಲ್ಲರಂತಲ್ಲ ಅಮ್ಮಾಜಿ, ಬಲವಂತದಿಂದ ನೀವು ವಿಜಯ ನಗರ ದೊರೆಗೆ ನನ್ನ ಲಗ್ನ ಮಾಡಿಕೊಟ್ಟರೆ ನಾನು ವಿಷಕುಡಿದು ಪ್ರಾಣ ಬಿಡುತ್ತೇನೆ."

ಎರೆಯಪ್ಪ ಗೌಡ, ಶಿವಶಂಕರ ಶಾಸ್ತ್ರಿಗಳು ಛಾಯೆಯನ್ನು ಒಪ್ಪಿಸಲು ವಿಶ್ವಪ್ರಯತ್ನ ಮಾಡಿದರು. ಕಲಿತ ಬುದ್ಧಿಯನ್ನೆಲ್ಲಾ ವ್ಯಯ ಮಾಡಿದರು.

ಎಲ್ಲರಿಗೂ ಛಾಯೆಯದು ಒಂದೇ ಉತ್ತರ.

" ನಾನು ಲಗ್ನವಾಗುವುದಿಲ್ಲ."

ಶಾಸ್ತ್ರಿಗಳ ಸಿಟ್ಟು ನೆತ್ತಿಗೇರಿತು.

" ಅವಿಧೇಯಳಾದ ಶಿಷ್ಯಳು ಇರುವುದಕ್ಕಿಂತ ಸಾಯುವುದು ಲೇಸು. ನಿನಗೆ ವಿದ್ಯಾಬುದ್ಧಿ ಕಲಿಸಿ ನಾನು ಆಯುಷ್ಯವನ್ನೇ ವ್ಯರ್ಥ ಮಾಡಿಕೊಂಡೆ. ಇದೇ ಕೊನೆ. ಇನ್ನು ನಾನು ನಿನ್ನ ಮುಖಾವಲೋಕದ ಮಾಡುವುದಿಲ್ಲ."

ಎಂದು ಆರ್ಭಟಿಸಿ, ವಿಜಯನಗರದಿಂದ ಬಂದಿದ್ದ ಸೇನೆ ಪರಿವಾರ, ಉಡುಗೊರೆಗಳನ್ನು ಹಿಂದಕ್ಕೆ ಕಳಿಸಿಬಿಟ್ಟರು."

'**ಬಂದದಾರಿಗೆ ಸುಂಕವಿಲ್ಲ**' ಎಂದು ವಿಷಣ್ಣವದನನಾಗಿ ಸಂಗಣ್ಣ ರಾಜಧಾನಿಗೆ ಹಿಂದಿರುಗಿದ.

೩೩

ಮುದಕಲ್ ಸುಂದರಿಯ ತೋಳ್ತೆಕ್ಕೆಯಲ್ಲಿ ನಲಿಯುವ ಕನಸಿನ ಲೋಕದಲ್ಲಿ ವಿಹರಿಸುತ್ತಿದ್ದ ದೇವರಾಯರಿಗೆ ಶಿವಶಂಕರ ಶಾಸ್ತ್ರಿಗಳಿಂದ ಬಂದಿದ್ದ ಪತ್ರ ಶಲ್ಯಪ್ರಾಯವಾಯಿತು. ಆಹಾರ, ನಿದ್ರೆ ಬೇಡವಾಯಿತು. ರಾಣಿಯ ರಾಗಲಿ, ಮಂತ್ರಿಗಳಾಗಲಿ ಪ್ರಭುಗಳ ಬಳಿಗೆ ಸುಳಿಯುವಂತಿರಲಿಲ್ಲ.

ಹಗಲಿರುಳು ಕಂಠಪೂರ್ತಿ ಮದ್ಯ ಸೇವಿಸಿ, ಛಾಯೆಯ ನಾಮೋಚ್ಚಾರಣೆ ಮಾಡುತ್ತಾ ಪ್ರಭುಗಳು ಕುಳಿತುಬಿಟ್ಟರು.

ಒಂದು ದಿನ, ಸಂಗಣ್ಣ ಧೈರ್ಯ ಮಾಡಿಕೊಂಡು ಪ್ರಭುಗಳ ಬಳಿಗೆ ಬಂದು,

"ಒಂದು ಹುಲುಹೆಣ್ಣಿಗಾಗಿ ತಾವಿಷ್ಟು ಪರಿತಪಿಸಬೇಕೇ ಮಹಾಪ್ರಭು. ಅಪ್ಪಣೆಯಾದರೆ ನಾನು ಮುದಕಲ್ಲನ್ನು ಮುತ್ತಿ ಛಾಯೆಯನ್ನು ಹೊತ್ತು ತಂದು ತಮ್ಮ ವಶಕ್ಕೆ ಒಪ್ಪಿಸುತ್ತೇನೆ." ಎಂದ.

ಅವನ ಮಾತಿನಿಂದ ಉತ್ತೇಜಿತರಾದ ದೇವರಾಯರು,

"ನಮ್ಮ ಜತೆ ಕೂಡಲೆ ಹೊರಡಲು ಸೈನ್ಯ ಸಿದ್ಧವಾಗಬೇಕೆಂದು ಮಲ್ಲಪ್ಪ ಒಡೆಯರಿಗೂ, ತಿಪ್ಪರಾಜರಿಗೂ ತಿಳಿಸು ಸಂಗಣ್ಣ."

"ಎಲ್ಲ ಸೈನ್ಯವೇ ?"

"ಅರ್ಧಭಾಗ"

"ಏತಕ್ಕೆಂದರೆ ಏನು ಹೇಳುವುದು ?"

"ಸಾಮ್ರಾಜ್ಯ ಪ್ರವಾಸ ಕೈಗೊಳುತ್ತೇವೆಂದು ಹೇಳು"

ಅಂದೇ ರಾತ್ರಿ ಮಹಾಪ್ರಭುಗಳು ಹತ್ತುಸಾವಿರ ಸೈನ್ಯದೊಂದಿಗೆ ರಾಜಧಾನಿ ಬಿಟ್ಟು ತೆರಳಿ ತುಂಗಭದ್ರಾ ನದಿಯ ದಡದಲ್ಲಿ ಸೈನ್ಯವನ್ನು ನಿಲ್ಲಿಸಿ, ಐದು ಸಾವಿರ ರಾಹುತರೊಂದಿಗೆ ಮುದಕಲ್ಲಿನತ್ತ ಸಾಗಿದರು.

ವಿಜಯನಗರದ ಸೈನ್ಯ ಮುದಕಲ್ಲಿನತ್ತ ಸಾಗುತ್ತಿದ್ದ ಸುದ್ದಿ ಮುದಕಲ್ಲಿಗೂ ಕಲ್ಬುರ್ಗಿಗೂ ಮುಟ್ಟಲು ವಿಳಂಬವಾಗಲಿಲ್ಲ.

ಭಯಗ್ರಸ್ತರಾದ ಮುದಕಲ್ಲಿನ ಪ್ರಜೆಗಳು ಉಟ್ಟ ಬಟ್ಟೆಯಲ್ಲಿ ಮುದಕಲ್ಲು ಗ್ರಾಮ ಬಿಟ್ಟು ಓಡಿದರು.

ಜನಶೂನ್ಯವಾಗಿದ್ದ ಮುದಕಲ್ಲಿನಲ್ಲಿ ಛಾಯೆಗಾಗಿ ಪ್ರಭುಗಳು ಹುಡುಕಿದರು. ಎಲ್ಲಿಯೂ ಅವಳ ಸುಳುಹು ಕಾಣಬರಲಿಲ್ಲ.

ರೋಷಕಷಾಯಿತರಾದ ಮಹಾಪ್ರಭುಗಳು ಮುದಕಲ್ಲಿನ ಲೂಟಿಗೆ ಅಪ್ಪಣೆಯಿತ್ತರು.

ಲೂಟಿ ಸಾಗಿದ್ದಂತೆ ಬಹಮನಿಯ ಮಹಾಸೈನ್ಯ ಮುದಕಲ್ಲಿಗೆ ಧಾವಿಸಿ ಬಂದು, ವಿಜಯನಗರದ ಸೈನ್ಯವನ್ನೆದುರಿಸಿತು.

ಅನಿರೀಕ್ಷಿತವಾದ ಈ ಆಘಾತ ತಾಳಲಾರದೆ ದೇವರಾಯರು ಹಿಂದಕ್ಕೆ ಸರಿದರು. ಸುಲ್ತಾನರ ಸೈನ್ಯ ಅವರನ್ನಟ್ಟಿಸಿಕೊಂಡು ರಾಜಧಾನಿಯ ಹೆಬ್ಬಾಗಿಲಿಗೇ ಬಂದಿತು.

ಮಹಾಪ್ರಭುಗಳು ರಾಜಧಾನಿ ಸೇರಿ, ಕೋಟೆಯ ಮಹಾದ್ವಾರಗಳನ್ನು ಮುಚ್ಚಿಸಿದರು.

ವಿಜಯನಗರದ ಸೈನಿಕರು ಕೋಟೆಯೊಳಗಣ ಬತೇರಿಗಳನ್ನೇರಿ ಬಹಮನಿಯ ಸೈನ್ಯವನ್ನು ಘಾತಿಸಲಾರಂಭಿಸಿದರು.

ವಿಜಯನಗರದ ಬೆಟ್ಟಗುಡ್ಡಗಳ ಅನುಭವವಿಲ್ಲದ ಬಹಮನಿ ಸೈನಿಕರು ಹೆಣ್ಣಾದರು. ಅವರ ಕುದುರೆಗಳು ಕಾಲು ಜಾರಿ ಬೀಳುತ್ತಿದ್ದವು.

ತಮ್ಮ ಸೈನ್ಯ ನಡೆಸುತ್ತಿದ್ದ ಸುಲ್ತಾನ್ ಫಿರೋಜ್ ಷಾ ಅವರ ತೋಳಿಗೆ ಒಂದು ಬಾಣ ಬಂದು ನೆಟ್ಟುಕೊಂಡಿತು.

ಸುಲ್ತಾನರು ಕೂಡಲೇ ತಮ್ಮ ಸೈನ್ಯವನ್ನು ಹಿಂದಿರುಗಿಸಿ ನಾಲ್ಕು ಮೈಲಿಗಳಾಚೆ ಬೀಡುಬಿಟ್ಟರು.

ನಾಲ್ಕು ತಿಂಗಳು ಮುತ್ತಿಗೆ ಸಾಗಿತು.

ದೇವರಾಯರು ಕೋಟೆಬಿಟ್ಟು ಹೊರಗೆ ಬರಲಾಗಲಿಲ್ಲ.

ಬಹಮನಿಯ ಸೈನಿಕರು ಸುತ್ತಮುತ್ತಣ ಪ್ರದೇಶಗಳಲ್ಲಿ ಮಾಡಬಾರದ ಅತ್ಯಾಚಾರ ಮಾಡಲಾರಂಭಿಸಿದರು.

ಸುಲ್ತಾನರು ವಿಜಯನಗರದ ಮುತ್ತಿಗೆ ಮುಂದುವರಿಸಲು ಖಾನ್ ಖಾನನಿಗೆ ಆಜ್ಞಾಪಿಸಿ, ಬಂಕಾಪುರದ ಕೋಟೆಯನ್ನು ಮುತ್ತಿ, ಕೈವಶಪಡಿಸಿಕೊಂಡು ಅರವತ್ತು ಸಾವಿರ ಹಿಂದುಗಳನ್ನು ಸೆರೆಹಿಡಿದು, ಆದವಾನಿ ಕೋಟೆಯತ್ತ ಸಾಗಿದರು.

ಸುಲ್ತಾನರೊಂದಿಗೆ ಒಡಂಬಡಿಕೆ ಮಾಡಿಕೊಳ್ಳದೆ ದೇವರಾಯರಿಗೆ ಗತ್ಯಂತರವೇ ಇಲ್ಲವಾಯಿತು.

ಸುಲ್ತಾನರು ಸೂಚಿಸಿದ ಕಪ್ಪಕಾಣಿಕೆಗಳನ್ನು ಕೊಡಲು ಸಮ್ಮತಿಸಿ, ಸೆರೆಸಿಕ್ಕಿದ್ದ ಅರವತ್ತು ಸಾವಿರ ಹಿಂದುಗಳನ್ನು ಬಿಡಿಸಿ ದೇವರಾಯರು ಕುತ್ತಿನಿಂದ ಪಾರಾದರು.

ಶಾಂತಿ ಒಪ್ಪಂದವಾದುದದ್ದು ತಿಳಿದ ಮುದಕಲ್ಲಿನ ಪ್ರಜರು ಸ್ವಗ್ರಾಮಕ್ಕೆ ಹಿಂದಿರುಗಿದರು.

ಇಷ್ಟೆಲ್ಲ ಅನಾಹುತಕ್ಕೆ ಕಾರಣಳಾದ ಛಾಯೆಯನ್ನೂ ಅವಳ ತಾಯಿ ತಂದೆಗಳನ್ನೂ ಹಿಡಿದು ರಾಜಧಾನಿಗೆ ತರಿಸಿದ ಸುಲ್ತಾನರು, ಅವಳನ್ನು ತಮ್ಮ ಹಿರಿಯ ಮಗ ಹರ್ಸ ಖಾನನಿಗೆ ‘ ನಿಕಾ ’ ಮಾಡಿಕೊಟ್ಟರು.

ರಾತ್ರಿ ಪರಮೋತ್ಸಾಹದಿಂದ ಶಯ್ಯಾಗೃಹಕ್ಕೆ ಬಂದ ಹರ್ಸ ಖಾನ್, ಛಾಯೆಯನ್ನು ಕಾಣದೆ ವಿಭ್ರಾಂತನಾದ.

ದಾಸಿಯರು ಅರಮನೆಯಲ್ಲೆಲ್ಲಾ ಹುಡುಕಿ ಷಹಜಾದನ ಒಳಮಂದಿರದ ಒಂದು ಕೋಣೆಯನ್ನು ಪತ್ತೆಹಚ್ಚಿ, ಅದರ ಬಾಗಿಲನ್ನು ಮುರಿದು ಒಳ ಪ್ರವೇಶಿಸಿದರು.

ಛಾಯೆ, ಮೈಮೇಲೆ ಎಚ್ಚರವಿಲ್ಲದೆ ನೆಲದ ಮೇಲೆ ಬಿದ್ದಿದ್ದಳು. ಅವಳ ಬಳಿ ಒಂದು ವಜ್ರದ ನತ್ತು.

ಭಯಗ್ರಸ್ತರಾದ ದಾಸಿಯರು ಓಡಿಹೋಗಿ ದರ್ಬಾರಿನ ಹಕೀಮನನ್ನು ಕರೆತಂದರು.

ನಾಡಿ, ಉಚ್ಛ್ವಾಸನಿಶ್ವಾಸ, ಹೃದಯ ರವ ಪರೀಕ್ಷಿಸಿ ನೋಡಿದ ಹಕೀಮ

ಫಯ್ಯಾಜ್ ಖಾನರು,

“ಪ್ರಾಣ ಹೋಗಿ ಬಹಳ ಹೊತ್ತಾಗಿದೆ. ಈಗ ಏನು ಮಾಡಲೂ ಸಾಧ್ಯವಿಲ್ಲ.” ಎಂದರು.

ನಿರ್ಭಾಗ್ಯ ಹರ್ಸಖಾನರು ತಮ್ಮ ‘ಬೇನಸೀಬನ್ನು’ ಶಪಿಸುತ್ತಾ, ಛಾಯೆಯ ‘ದರ್ಫ’ಗೆ ಆಜ್ಞೆ ಮಾಡಿದರು.

೩೪

ತಾತ್ಕಾಲಿಕ ಶಾಂತಿಯ ಸದುಪಯೋಗ ಪಡಿಸಿಕೊಳ್ಳಲಿಚ್ಛಿಸಿದ ದೇವರಾಯರು, ರಾಜಧಾನಿಯನ್ನು ವಿಸ್ತಾರಗೊಳಿಸಿ, ಬೀದಿಗಳನ್ನು ದೊಡ್ಡದು ಮಾಡಿಸಿದರು. ಹದಿನೈದು ಮೈಲಿಗಳ ವರೆಗೆ ತುಂಗಭದ್ರೆಗೆ ಅಣೆಕಟ್ಟು ಹಾಕಿಸಿ ಸಾವಿರಾರು ಎಕರೆ ಭೂಮಿ ಕೃಷಿಗೆ ಒದಗುವಂತೆ ಮಾಡಿದರು. ಹರಿದ್ರಾ ಹೊಳೆಗೆ ಅವರು ಕಟ್ಟಿಸಿದ ಅಣೆಕಟ್ಟಿನಿಂದ ನೀರಿನ ಕ್ಷಾಮ ಪರಿಹಾರವಾಯಿತು. ರಾಜಧಾನಿಯಲ್ಲಿ ಅನೇಕ ಉಪವನಗಳು, ಉದ್ಯಾನಗಳು, ದಿವ್ಯ ಸೌಧಗಳು ನಿರ್ಮಿಸಲ್ಪಟ್ಟು/ಅದರ ಸೌಂದರ್ಯ ಇಮ್ಮಡಿಯಾಯಿತು.

ದೊರೆಗೆ ಐವರು ಮಕ್ಕಳಿದ್ದರು—ವೀರಮಲ್ಲಪ್ಪ, ವೀರ ವಿಜಯರಾಯ, ಭಾಸ್ಕರರಾಯ, ಇಮ್ಮಡಿ ಹರಿಹರ, ರಾಮಚಂದ್ರರಾಯ.

ವೀರಮಲ್ಲಪ್ಪ ಬಾಲಾರಿಷ್ಟ ಪೀಡಿತನಾಗಿ ದುರ್ಬಲನಾಗಿದ್ದುದರಿಂದ ವೀರ ವಿಜಯರಾಯನೇ ಯುವರಾಜನಾಗಿದ್ದ. ಮುಳಬಾಗಲು ಪ್ರಾಂತ್ಯಾಧಿಕಾರವೂ ಇವನಿಗೆ ಸೇರಿತ್ತು. ಅರಗ, ಗುತ್ತಿ, ಬಾರಕೂರ ಪ್ರದೇಶಕ್ಕೆ ಭಾಸ್ಕರರಾಯ ಅಧಿಪತಿಯಾಗಿದ್ದ. ಹರಿಹರ ತೆರಕಣಾಂಬೆಯಲ್ಲೂ ರಾಮಚಂದ್ರ ಉದಯಗಿರಿಯಲ್ಲೂ ರಾಜಪ್ರತಿನಿಧಿಗಳಾಗಿದ್ದರು.

ವಿಜಯನಗರದವರನ್ನು ಕೆಣಕಿ ಕಾದಾಡದಿದ್ದರೆ ಬಹಮನಿಯರಿಗೆ ನಿದ್ರಾಹಾರಗಳು ಸೇರುತ್ತಿರಲಿಲ್ಲ. ಬಹಮನಿಯವರು ಪಾನಗಲ್ ಕೋಟೆಯನ್ನು

ಮುತ್ತಿದರು. ಎರಡು ವರ್ಷಗಳು ಅವರು ಹೆಣಗಾಡಿದರೂ ಕೋಟೆ ಕೈವಶ ವಾಗಲಿಲ್ಲ. ಬಹಮನಿ ಸೈನ್ಯದಲ್ಲಿ ಭಯಂಕರ ಸಾಂಕ್ರಾಮಿಕ ಜಾಡ್ಯ ತಲೆ ದೋರಿ ಸೈನಿಕರು ಕುದುರೆಗಳು ಹುಳುಹುಪ್ಪಟೆಗಳಂತೆ ಸಾಯಲಾರಂಭಿಸಿದರು. ಬಹಮನಿಯುವರು ಮುತ್ತಿಗೆಗೆ 'ಭರತವಾಕ್ಯ' ಹೇಳಿ ಹೊರಡಲಣಿಯಾಗಲು, ಓರುಗಲ್ಲಿನ ದೊರೆಯು ನೆರವು ಪಡೆದುಕೊಂಡು ದೇವರಾಯರು ಬಹಮನಿ ಸೈನ್ಯವನ್ನೆದುರಿಸಿದರು.

ಬಹಮನಿ ಸೈನ್ಯ ನಿಪಾತಗೊಂಡಿತು.

ವಿಜಯೋನ್ಮಾದಗೊಂಡಿದ್ದ ವಿಜಯನಗರದ ಸೈನ್ಯ ವಿಜಾಪುರ ಪ್ರಾಂತ್ಯ ಪ್ರವೇಶಿಸಿ, ಅದನ್ನು ಧ್ವಂಸಮಾಡಿಬಿಟ್ಟಿತು.

ಸೋಲಿನ ಮೇಲೆ ಸೋಲು ಸಂಭವಿಸಿದುದನ್ನು ಕಂಡು ಸುಲ್ತಾನ್ ಫಿರೋಜ್‌ಷಹರು ಅಧೀರರಾದರು. ವಿಜಾಪುರದ ಪತನ ಅವರ ಕೆಚ್ಚನ್ನು ಸಂಪೂರ್ಣವಾಗಿ ಉಡುಗಿಸಿಬಿಟ್ಟಿತು.

ಸೋಲಿನ ಮುಖ ಹೊತ್ತು ರಾಜಧಾನಿ ಪ್ರವೇಶಿಸಲಿಚ್ಛಿಸದ ಸುಲ್ತಾನರು ದುಃಖ ಸಹಿಸದಾದರು.

ತಮ್ಮ ಅವಸಾನಕಾಲ ಪ್ರಾಪ್ತವಾಯಿತೆಂದು ತಿಳಿದ ಸುಲ್ತಾನರು ಅಹಮದ್ ಖಾನ್, ಖಾನ್‌ಖಾನ್, ಮೀರ್ ಫಜುಲುಲ್ಲಾ ಇತರ ಸರ್ದಾರರನ್ನೆಲ್ಲಾ ಬರಮಾಡಿಕೊಂಡು,

"ನಾವು ಅಲ್ಲಾನ ಪಾದ ಸೇರುವಕಾಲ ಸಮೀಪಿಸಿದೆ. ನಮ್ಮ ಉತ್ತರಾಧಿಕಾರಿಗಳ ನೇಮಕಮಾತ್ರ ಬಾಕಿ ಉಳಿದಿದೆ"

"ಷಹಜಾದಾ ಹಸನ್ ಖಾನರೇ ಉತ್ತರಾಧಿಕಾರಿಗಳು. ಈ ಬಗ್ಗೆ ಜಹಾಪನಾ ಅವರು ಯೋಚಿಸಬೇಕಾದುದಿಲ್ಲ"

ಎಂದು ಫಜುಲುಲ್ಲಾ ನಿವೇದಿಸಿದ.

"ಷಹಜಾದ ಹಸನ್ ಖಾನ್ ಸುಲ್ತಾನನಾಗುವುದೇ ಕ್ರಮ. ಆದರೆ ಬಹಮನಿಯ ರಾಜ್ಯದ ಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡರೆ ಹಸನ್ ಖಾನ್ ಈ ಜವಾಬ್ದಾರಿ ನಿರ್ವಹಿಸಲು ಸಮರ್ಥನಾಗಿಲ್ಲ ಎಂದು ನಮಗನಿಸುತ್ತದೆ. ಹಸನ್ ಖಾನ್ ವಿಷಯಾಸಕ್ತ; ದುರ್ಬಲ. ವಿಜಯನಗರವನ್ನು ನುಚ್ಚುನೂರುಮಾಡಿ ಅದರ ಮೇಲೆ ಇಸ್ಲಾಮಿನ ಝಾಂಢಾ ನೆಡಬಲ್ಲ ವೀರನಿಗೆ ಸುಲ್ತಾನಗಿರಿ ಸೇರ

ತಕ್ಕದ್ದು."

"ಅಂಥವರು ಯಾರೆಂಬುದನ್ನು ತಾವೇ ಸೂಚಿಸಬೇಕು."

"ಸೂಚಿಸುತ್ತೇವೆ. ಹೊಸಸುಲ್ತಾನರ ಬಗ್ಗೆ ಭಕ್ತಿಯಿಂದ ನಡೆದುಕೊಳ್ಳುತ್ತೇವೆಂದು ಪ್ರಮಾಣ ಮಾಡಿ."

ಎಲ್ಲರೂ ಕತ್ತಿ ಹಿರಿದು

"ಹೊಸ ಸುಲ್ತಾನರ ಬಗ್ಗೆ ಭಕ್ತಿಯಿಂದ ನಡೆದುಕೊಳ್ಳುತ್ತೇವೆಂದು ಖುದಾಮೇಲೆ ಆಣೆಯಿಟ್ಟು ಹೇಳುತ್ತೇವೆ."

ಪ್ರಭುಗಳು ತಮ್ಮ ರಾಜಖಡ್ಗವನ್ನು ಒರೆಯಿಂದೆಳೆದು

"ಇಲ್ಲಿ ಬಾ ಅಹಮದ್ ಖಾನ್" ಎಂದರು.

ಅಹಮದ್ ಖಾನ್ ಸುಲ್ತಾನರ ಬಳಿ ಬಂದು, ಮೊಣಕಾಲೂರಿ ವಿನಮ್ರವಾಗಿ ಕುಳಿತ

ಸುಲ್ತಾನರು ಅವನ ತಲೆಯಮೇಲೆ ಕತ್ತಿಯನ್ನಿಟ್ಟು,

"ಬಹಮನಿಸುಲ್ತಾನ್ ಅಹಮದ್ ಖಾನ್ ಜಿಂದಾಬಾದ್" ಎಂದರು.

ಸರ್ದಾರರೆಲ್ಲರೂ ದನಿಗೂಡಿಸಿ

"ಸುಲ್ತಾನ್ ಅಹಮದ್ ಖಾನ್ ಜಿಂದಾಬಾದ್"

ಎಂದು ಘೋಷಿಸಿದರು. ಅದೇ ದಿನ ರಾತ್ರಿ ಸುಲ್ತಾನರ ಹೃದಯ ಗ್ರಂಥಿಗಳು ಒಡೆದು ರಕ್ತಸ್ರಾವವಾಯಿತು. ಬೆಳಗಾಗುವ ವೇಳೆಗೆ ಬಹಮನಿ ರಾಜ್ಯದ ಸುಲ್ತಾನರು 'ಅಲ್ಲಾ' ನ ಪಾದಗಳಲ್ಲಿ ಆಶ್ರಯ ಪಡೆದಿದ್ದರು.

೨೫

ವಿಜಯ ಪತಾಕೆ ಮೆರಸುತ್ತ ರಾಜಧಾನಿಗೆ ಹಿಂದಿರುಗಿದ ಪ್ರಭುಗಳನ್ನು ಪುರಜನರು ಪರಮಾನಂದದಿಂದ ಸ್ವಾಗತಿಸಿದರು.

'ಸುಖಲೋಲುಪರಾಗಿದ್ದ ತಮ್ಮ ಪ್ರಭುಗಳು, ಇಂಥ ವೀರರಾದರಲ್ಲಾ' ಎಂದು ಜನ ಆನಂದಗೊಂಡಿದ್ದರು.

ತಮ್ಮ ವಿಜಯದ ಗುರುತಿಗಾಗಿ ಮಹಾಪ್ರಭುಗಳು ಶೃಂಗೇರಿ ಚಂದ್ರಮೌಳೀಶ್ವರ, ಶಾರದಾದೇವಿ ದೇವಾಲಯಗಳಿಗೂ, ವಿಜಯನಗರದ ವಿರೂಪಾಕ್ಷ, ಭುವನೇಶ್ವರಿ ದೇವಾಲಯಗಳಿಗೂ, ಬೇಲೂರಿನ ಚೆನ್ನಕೇಶವಸ್ವಾಮಿ ದೇವಾಲಯಕ್ಕೂ ಉದಾರ ದತ್ತಿಗಳನ್ನು ಅನುಗ್ರಹಿಸಿದರು.

ಒಂದು ವಾರ ರಾಜಧಾನಿ ವಿಜಯೋತ್ಸವ ನೆರವೇರಿಸಿ ಸಂತೋಷಿಸಿತು.

ಸೋಮವಾರ ಬೆಳಿಗ್ಗೆ ಪತ್ನೀಪುತ್ರರೊಡಗೂಡಿ, ವಿರೂಪಾಕ್ಷ, ಭುವನೇಶ್ವರಿಯ ದರ್ಶನ ಪಡೆದು, ಶ್ರೀಗುರು ವಿದ್ಯಾರಣ್ಯರ ಸಮಾಧಿ ಪೂಜೆ ಮುಗಿಸಿಕೊಂಡು ಅರಮನೆಗೆ ಹಿಂದಿರುಗಿದ ಮಹಾಪ್ರಭುಗಳು ಕೂಡಲೇ ಲಕ್ಷ್ಮೀಧರ, ಮಲ್ಲಪ್ಪ ಒಡೆಯರು, ತಿಪ್ಪರಾಜರನ್ನು ಬರಮಾಡಿಕೊಂಡು,

" ವೀರ ವಿಜಯರಾಯರು ನಮ್ಮ ಉತ್ತರಾಧಿಕಾರಿಗಳು. ಅವರಿಗೆ ನೀವು ಯೋಗ್ಯರೀತಿಯಲ್ಲಿ ಮಾರ್ಗದರ್ಶನ ಮಾಡಿ, ವಿಜಯನಗರದ ಕೀರ್ತಿ, ಪ್ರಭಾವ ಹೆಚ್ಚಿಸಲು ಬದ್ಧಕಂಕಣರಾಗಿ. ಈಗ ಬಹಮನಿ ರಾಜ್ಯದ ಸುಲ್ತಾನರಾದ ಅಹಮದ್ ಷಹಾರವರನ್ನು ನಾವು ಬಹಳ ವರ್ಷಗಳಿಂದಲೂ ಬಲ್ಲೆವು. ಸುಲ್ತಾನ್ ಫಿರೋಜ್ ಷಹರು ಸ್ವಭಾವತಃ ಕ್ರೂರಿಗಳಲ್ಲ. ಧರ್ಮಾಂಧರಷ್ಟೆ ! ಇಸ್ಲಾಂಶಾಹಿ ಸ್ಥಾಪನೆಯ ಹಟಕ್ಕೆ ಬಿದ್ದು ನಮ್ಮ ಮೇಲೆ ಸೆಣಸಿದರು. ಮಹಮದ್ ಷಾ ಸ್ವಭಾವತಃ ಕ್ರೂರಿ – ರಕ್ತ ಪಿಪಾಸು. ಹಿಂದುಗಳು ಸಿಕ್ಕದಿದ್ದರೆ ಅವನು ಮುಸ್ಲಿಮರ ರಕ್ತವನ್ನೇ ಕುಡಿಯಲು ಹೇಸುವುದಿಲ್ಲ. ಸದಾ ಎಚ್ಚರವಾಗಿರಿ – ಅಹಮದ್ ಖಾನ್ ನಮ್ಮ ಮೇಲೆ ಬೀಳುವುದಕ್ಕೆ ಕಾಯಲೇ ಬೇಡಿ. ನಮ್ಮ ಸೈನ್ಯಗಳು ಚೇತರಿಸಿಕೊಂಡು, ಬಲಿಷ್ಠವಾದ ಕೂಡಲೇ ನೀವೇ ಕಲ್ಬುರ್ಗಿಯನ್ನು ಮುತ್ತಿ ಇಸ್ಲಾಂಶಾಹಿಯನ್ನು ಕೊನೆಗಾಣಿಸಿಬಿಡಿ. ವಿರೂಪಾಕ್ಷ, ಭುವನೇಶ್ವರಿಯರು ಸದಾ ನಿಮ್ಮನ್ನು ಸಂರಕ್ಷಿಸಲಿ" ಎಂದು ಹರಸಿ, ಕಣ್ಣು ಮುಚ್ಚಿದರು.

ಪುಣ್ಯಪ್ರಭಾವ

ಅ. ನ. ಕೃ ಅವರು ಬರೆಯುತ್ತಿರುವ 'ವಿಜಯನಗರ ಸಾಮ್ರಾಜ್ಯ ಕಾದಂಬರಿಮಾಲೆ' ಯಲ್ಲಿ 'ಪುಣ್ಯಪ್ರಭಾವ' ಮೂರನೆಯ ಕಾದಂಬರಿಯಾಗಿದೆ. ಇಮ್ಮಡಿ ಹರಿಹರರಾಯನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೇರಿದ ವಿಜಯನಗರದ ವೀರೇತಿಹಾಸ ಈ ಕಾದಂಬರಿಯಲ್ಲಿ ನಿರೂಪಿತವಾಗಿದೆ. ಶ್ರೀ ವಿದ್ಯಾರಣ್ಯರ ಪುಣ್ಯ ಪ್ರಭಾವದಿಂದ ಜನ್ಮತಳೆದ ಈ ಮಹಾಸಾಮ್ರಾಜ್ಯ ಶ್ರೀ ಸಾಯಣರ ಧೀರ ಪ್ರಯತ್ನದ ಫಲವಾಗಿ ಧರ್ಮಸಾಮ್ರಾಜ್ಯವಾಗಿ ಅಳವಟ್ಟ ಬಗೆ, ಈ ಕಾದಂಬರಿಯಲ್ಲಿ ವಿಸ್ತೃತವಾಗಿ ವರ್ಣಿಸಲ್ಪಟ್ಟಿದೆ. ಜಲ ಯಂತ್ರ ವಿಶಾರದ ರಾಮಭಟ್ಟನ ಮಾನಸಿಕ ಪರಿವರ್ತನೆ, ಅವನ ಧರ್ಮಪತ್ನಿ ವಿಜಯಲಕ್ಷ್ಮಿಯ ಅತುಲ ದೇಶಾಭಿಮಾನ ಶ್ರೀಗುರು ವಿದ್ಯಾರಣ್ಯರ ತಪಃಪ್ರಭಾವದ ದೃಷ್ಟಾಂತಗಳಾಗಿವೆ. ಮೊದಲನೆಯ ಹರಿಹರರಾಯನಿಂದ ಆರಂಭವಾದ ರಾಜ್ಯಪ್ರಗತಿ, ಇಮ್ಮಡಿ ಹರಿಹರ ರಾಯನ ಕಾಲದಲ್ಲಿ ಇತೋಪ್ಯತಿಶಯವಾಗಿ ಬೆಳದುದನ್ನು ಓದುಗರು ಗಮನಿಸಬಹುದು.

ವೀರರಸ ಪರಿಪ್ಲುತವಾದ ಈ ಕಾದಂಬರಿ, ಹಿಂದೂತ್ವದ ರಕ್ಷಣೆಗಾಗಿ ವಿಜಯನಗರದರಸರು ಪ್ರಜರು ಮಾಡಿದ ಮಹಾ ಪ್ರಯತ್ನದ ಅವರ ಕಥೆಯಾಗಿದೆ.

ಸ್ಟ್ಯಾಂಡರ್ಡ್ ಬುಕ್ ಡಿಪೋ,
ಅವೆನ್ಯೂ ರೋಡ್ ಬೆಂಗಳೂರು–೨

THE EASTERN PRESS BANGALORE 2.